ಗುರುವಾರ, ಏಪ್ರಿಲ್ 20, 2023 | ₹ 6.00 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಿಸ್ ಇಂಡಿಯಾ

ಫೆಮಿನಾ ಮಿಸ್ ಇಂಡಿಯಾ ವರ್ಲ್ಡ್ 2023 ಆಗಿ ಆಯ್ಕೆಯಾದ ನಂದಿನಿ ಗುಪ್ತ ಅವರು ಮುಂಬೈನಲ್ಲಿ ಬುಧವಾರ ಕ್ಯಾಮೆರಾಗೆ ಪೋಸ್ ನೀಡಿದರು







1.ಪದ್ಮನಾಭನಗರ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ರಘುನಾಥ್ ನಾಯ್ಡು ಅವರು ಬುಧವಾರ ನಾಮಪತ್ರ ಸಲ್ಲಿಸಲು ಮೆರವಣಿಗೆಯಲ್ಲಿ ಸಾಗಿದರು. 2. ಚಾಮರಾಜಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭಾಸ್ಕರ ರಾವ್ ಅವರು ನಾಮಪತ್ರ ಸಲ್ಲಿಕೆಗೂ ಮುನ್ನ ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು. ಸಂಸದ ಪಿ.ಸಿ.ಮೋಹನ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಇದ್ದರು. 3. ಗೋವಿಂದರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಕೃಷ್ಣ ಬೆಂಬಲಿಗರೊಂದಿಗೆ ತೆರೆದ ವಾಹನದಲ್ಲಿ ತೆರಳಿ ನಾಮಪತ್ರ ಸಲ್ಲಿಸಿದರು — ಪ್ರಜಾವಾಣಿ ಚಿತ್ರಗಳು

ನಾಮಪತ್ರ: ರೋಡ್ ಶೋ ಭರಾಟೆ

28 ಕ್ಷೇತ್ರಗಳಿಗೆ ಒಂದೇ ದಿನ 110 ಉಮೇದುವಾರಿಕೆ ಸಲ್ಲಿಕೆ: ನಾಮಪತ್ರ ಸಲ್ಲಿಸಲು ಇಂದು ಕೊನೆಯ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಮಪತ್ರ ಸಲ್ಲಿಕೆಗೆ ಒಂದು ದಿನ ಬಾಕಿ ಇದ್ದು, ಬುಧವಾರ ಅಭ್ಯರ್ಥಿಗಳು ಭರಾಟೆಯಿಂದ ಉಮೇದುವಾರಿಕೆ ಸಲ್ಲಿಸಿದರು.

ನಗರದ 28 ವಿಧಾನಸಭಾ ಕ್ಷೇತ್ರಗಳಿಗೆ ಬುಧವಾರ ಒಂದೇ ದಿನ 110 ಮಂದಿ ನಾಮಪತ್ರ ಸಲ್ಲಿಸಿದ್ದು, ಈ ಪೈಕಿ 10 ಮಹಿಳೆಯರು ಸೇರಿದ್ದಾರೆ.

ಯಲಹಂಕ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಆರ್.ವಿಶ್ವನಾಥ್, ಪದ್ಮನಾಭನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಘುನಾಥನಾಯ್ಡು, ಚಾಮರಾಜಪೇಟೆ ಬಿಜೆಪಿ ಅಭ್ಯರ್ಥಿ ಭಾಸ್ಕರ ರಾವ್, ಗೋವಿಂದರಾನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಕೃಷ್ಣ, ಗಾಂಧಿನಗರ ಕ್ಷೇತ್ರದ ಬಿಜೆಪಿ ಬಂಡಾಯ ಅಭ್ಯರ್ಥಿ ಕೃಷ್ಣಯ್ಯ ಶೆಟ್ಟಿ ಸೇರಿ ಹಲವು ಪ್ರಮುಖರು ಉಮೇದುವಾರಿಕೆ ಸಲ್ಲಿಸಿದರು.

ಬಹುತೇಕ ಎಲ್ಲಾ ಅಭ್ಯರ್ಥಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಅಲ್ಲಿಂದ ಮೆರವಣಿಗೆಯಲ್ಲಿ ಸಾಗಿದರು. ತೆರೆದ ವಾಹನಗಳಲ್ಲಿ ಕಾರ್ಯಕರ್ತರು ಮತ್ತು ಬೆಂಬಲಿಗರೊಂದಿಗೆ ಸಾಗಿ ಶಕ್ತಿ ಪ್ರದರ್ಶಿಸಿದರು. ಕೆಲವರು ಪಾದಯಾತ್ರೆ ಮೂಲಕ ತೆರಳಿದರೆ, ಹಲವರು ಬೈಕ್ ಯಾತ್ರೆಯಲ್ಲಿ ಸಾಗಿದರು.

ರ್‍ಯಾಲಿಗಳ ಸಂದರ್ಭದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಯಲಹಂಕದಲ್ಲಿ ವಿಶ್ವನಾಥ್ ನಾಮಪತ್ರ ಸಲ್ಲಿಸುವ ವೇಳೆ 3 ಕಿಲೋ ಮೀಟರ್ ತನಕ ವಾಹನಗಳು ಸಾಲುಗಟ್ಟಿ ನಿಂತಿದ್ದವು. ದಟ್ಟಣೆಯಲ್ಲಿ ಸಿಲುಕಿ ಜನ ಪರದಾಡಿದರು.

ಎಐಎಡಿಎಂಕೆ ಅಭ್ಯರ್ಥಿ ಕಣಕ್ಕೆ

ಚೆನ್ನೈ (ಪಿಟಿಐ): ಮೇ 10ರಂದು ನಡೆಯುವ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರಿನ ಪುಲಕೇಶಿನಗರ (ಎಸ್‌ಸಿ) ಮೀಸಲು ಕ್ಷೇತ್ರದಿಂದ ಡಿ.ಅನ್ಬರಸನ್ ಅವರು ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ ಎಂದು ತಮಿಳುನಾಡಿನ ಎಐಎಡಿಎಂಕೆ ಬುಧವಾರ ಹೇಳಿದೆ.

‘ಪಕ್ಷದ ಸಂಸದೀಯ ಮಂಡಳಿಯು ಪುಲಕೇಶಿನಗರ ಕ್ಷೇತ್ರಕ್ಕೆ ಅನ್ಬರಸನ್ ಅವರ ಹೆಸರನ್ನು ಅಂತಿಮಗೊಳಿಸಿದೆ’ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಕೆ.ಪಳನಿಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮಿಳುನಾಡಿನಲ್ಲಿ ಎಐಎಡಿಎಂಕೆಯ ಮಿತ್ರ ಪಕ್ಷವಾಗಿರುವ ಬಿಜೆಪಿಯು ಈ ಕ್ಷೇತ್ರದಿಂದ ಮುರಳಿ ಎಂಬುವರನ್ನು ಕಣಕ್ಕಿಳಿಸಿದೆ.

₹ 204 ಕೋಟಿ ಮೌಲ್ಯ ದಾಟಿದ ಜಪ್ತಿ ಸ್ವತ್ತು

ಬೆಂಗಳೂರು: ಚುನಾವಣಾ ಅಕ್ರಮ ತಡೆ ಸಂಬಂಧ ಆದಾಯ ತೆರಿಗೆ ಇಲಾಖೆ ಸೇರಿದಂತೆ ಜಾಗೃತ ದಳಗಳು ಹಾಗೂ ತನಿಖಾ ಠಾಣೆಗಳಲ್ಲಿ ಇದುವರೆಗೂ ವಶಪಡಿಸಿಕೊಂಡ ನಗದು ಮತ್ತು ಇತರ ಸ್ವತ್ತುಗಳ ಮೌಲ್ಯ ₹ 204 ಕೋಟಿ ದಾಟಿದೆ.

ಇದುವರೆಗೂ ₹ 76.70 ಕೋಟಿ ನಗದು, ₹ 19.59 ಕೋಟಿ ಮೌಲ್ಯದ ಉಚಿತ ಕೊಡುಗೆಗಳು, ₹ 42.82 ಕೋಟಿ ಮೌಲ್ಯದ ಮದ್ಯ, ₹ 15.25 ಕೋಟಿ ಮೌಲ್ಯದ ಮಾದಕ ದ್ರವ್ಯಗಳನ್ನು ವಶಕ್ಕೆ ಪಡೆಯಲಾಗಿದೆ.

ಬುಧವಾರ ಒಂದೇ ದಿನ ₹ 1.53 ಕೋಟಿ ನಗದು ಸೇರಿ ₹ 16.92 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ₹ 55.27 ಲಕ್ಷ ಮೌಲ್ಯದ ಉಚಿತ ಕೊಡುಗೆ, ₹ 1.89 ಕೋಟಿ ಮೌಲ್ಯದ 90,011 ಲೀಟರ್ ಮದ್ಯ, ₹ 5.85 ಲಕ್ಷ ಮೌಲ್ಯದ 7.04 ಕೆ.ಜಿ. ಮಾದಕ ವಸ್ತುಗಳು, ₹ 12.89 ಕೋಟಿ ಮೌಲ್ಯದ 20.47 ಕೆ.ಜಿ ಚಿನ್ನ, 106 ಕೆ.ಜಿ. ಬೆಳ್ಳಿ ವಶಕ್ಕೆ ಪಡೆಯಲಾಗಿದೆ. ಈವರೆಗೆ 1,629 ಎಫ್‌ಐಆರ್ ದಾಖಲಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.



ಯಶವಂತಪುರ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಶಶಿಧರ್ ಸಿ. ಆರಾಧ್ಯ ಅವರು ತೆರೆದ ವಾಹನದಲ್ಲಿ ತೆರಳಿ ನಾಮಪತ್ರ ಸಲ್ಲಿಸಿದರು

ಧನಂಜಯಗೌಡ ನಾಮಪತ್ರ ಸಲ್ಲಿಕೆ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಿ. ಧನಂಜಯಗೌಡ ಅವರು ಬೆಂಬಲಿಗರೊಂದಿಗೆ ತೆರಳಿ ಉಮೇದುವಾರಿಕೆ ಸಲ್ಲಿಸಿದರು.

ಇದಕ್ಕೂ ಮುನ್ನ ಸಾಗಿದ ಮೆರವಣಿಗೆಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ‘ದಾಸರಹಳ್ಳಿ ಕ್ಷೇತ್ರಕ್ಕೆ ಅಭ್ಯರ್ಥಿ ಧನಂಜಯ್ ಅಲ್ಲ, ಅದು ಡಿ.ಕೆ. ಶಿವಕುಮಾರ್ ಎಂಬುದನ್ನು ಕಾರ್ಯಕರ್ತರು ಮನಸಿನಲ್ಲಿಟ್ಟುಕೊಳ್ಳಬೇಕು’ ಎಂದು ಹೇಳಿದರು.

ಅಭ್ಯರ್ಥಿ ಜಿ. ಧನಂಜಯಗೌಡ ಮಾತನಾಡಿ, ‘ಕ್ಷೇತ್ರಕ್ಕೆ ಸಾಕಷ್ಟು ಅನುದಾನ ಬಂದಿದ್ದರೂ ಶಾಸಕರು ನೆಪ ಹೇಳಿಕೊಂಡು ಅಭಿವೃದ್ಧಿ ಮಾಡಿಲ್ಲ. ಆದ್ದರಿಂದ ಕಾಂಗ್ರೆಸ್‌ನತ್ತ ಜನ ಒಲವು ತೋರಿಸುತ್ತಿದ್ದಾರೆ’ ಎಂದರು.

ಅದಕ್ಕೂ ಮುನ್ನ ಸುಂಕದಕಟ್ಟೆಯ ಆಂಜನೇಯ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿದರು.

ಕಾಂಗ್ರೆಸ್ ಬೆಂಬಲಿಗರ ಮೇಲೆ ಐ.ಟಿ ದಾಳಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸಿದವರ ಮೇಲೆ ಐಟಿ ಅಧಿಕಾರಿಗಳಿಂದ ದಾಳಿ ಆಗುತ್ತಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಭಾರತ್ ಜೋಡೊ ಯಾತ್ರೆಗೆ ಕೋಟಿಗಟ್ಟಲೆ ಹಣ ನೀಡಿದ್ದೀಯಾ ಎಂದು ಐಟಿ ಅಧಿಕಾರಿಗಳು ನನ್ನನ್ನು ಹೆದರಿಸುತ್ತಿದ್ದಾರೆ. ಎಷ್ಟೇ ದಾಳಿ ನಡೆಸಿದರೂ ರಾಜ್ಯದ ಜನರಿಗೆ ನೀಡಿರುವ ಗ್ಯಾರಂಟಿ ಯೋಜನೆಗಳನ್ನು ಈಡೇರಿಸಿ ಉತ್ತಮ ಆಡಳಿತ ನೀಡುತ್ತೇವೆ’ ಎಂದು ಅವರು ಹೇಳಿದರು.

‘ಜನರು ಬಿಜೆಪಿ ಆಡಳಿತಕ್ಕೆ ಬೇಸತ್ತಿದ್ದು, ಬದಲಾವಣೆ ತರುವುದು ಖಚಿತ. ಈ ಚುನಾವಣೆಯಲ್ಲಿ 141ರಿಂದ 150 ಕ್ಷೇತ್ರಗಳಲ್ಲಿ ಪಕ್ಷ ಗೆಲುವು ಸಾಧಿಸಲಿದೆ’ ಎಂದರು.

ಎಸ್.ಆರ್. ಪಾಟೀಲ ಅವರನ್ನು ಬಿಜೆಪಿ ಸೆಳೆಯಲು ಪ್ರಯತ್ನಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಮೂರು ತಿಂಗಳಿನಿಂದ ಅವರು ಪ್ರಯತ್ನಿಸುತ್ತಲೇ ಇದ್ದಾರೆ. ಎಸ್.ಆರ್. ಪಾಟೀಲ ಅವರು ಹಿರಿಯ ನಾಯಕರು. ನಾವು ಅವರ ಜತೆ ಮಾತನಾಡಿದ್ದೇವೆ’ ಎಂದರು.

ಯಡಿಯೂರಪ್ಪ ಅವರ ನಿವಾಸದಲ್ಲಿ ಲಿಂಗಾಯತ ನಾಯಕರ ಸಭೆಯ ಕುರಿತು ಕೇಳಿದ ಪ್ರಶ್ನೆಗೆ, ‘ಯಡಿಯೂರಪ್ಪ ಅವರ ನೇತೃತ್ವದಲ್ಲಿ ಚುನಾವಣೆ ಮಾಡಿ ಬಿಜೆಪಿ ಅವರಿಂದ ಅಧಿಕಾರ ಕಸಿದುಕೊಂಡಿತು. ಯಡಿಯೂರಪ್ಪ ಅವರ ಕಣ್ಣೀರು ಒರೆಸಲು ಆ ಪಕ್ಷದ ನಾಯಕರಿಂದ ಸಾಧ್ಯವಾಗಿಲ್ಲ. ಅವರ ಆಪ್ತರೆಲ್ಲರೂ ಪಕ್ಷ ತೊರೆದಿದ್ದಾರೆ. ಹೀಗಾಗಿ ಲಿಂಗಾಯತ ಸಮುದಾಯಕ್ಕೆ ಶಕ್ತಿ ತುಂಬುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ’ ಎಂದರು.

ವಿಶ್ವನಾಥ ಶಕ್ತಿ ಪ್ರದರ್ಶನ

ಯಲಹಂಕ: ಯಲಹಂಕ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಆರ್.ವಿಶ್ವನಾಥ ಅವರು ಸಾವಿರಾರು ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸುವ ಮೂಲಕ ತಮ್ಮ ಶಕ್ತಿ ಪ್ರದರ್ಶಿಸಿದರು.

ಸ್ವಗ್ರಾಮ ಸಿಂಗನಾಯಕನಹಳ್ಳಿ ಗ್ರಾಮದಲ್ಲಿ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿದರು. ಬಳಿಕ ಯಲಹಂಕ ಸಂತೆ ವೃತ್ತದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಹಳೇನಗರದ ಕೊಂಡಪ್ಪ ಬಡಾವಣೆಯಲ್ಲಿನ ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿದರು.

ಈ ಸಂದರ್ಭದಲ್ಲಿ ಮಾತನಾಡಿ ಅವರು, ‘ಮೂರೂ ಬಾರಿ ಶಾಸಕನಾಗಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆಯಾಗಲಿವೆ. ಜನ ನಿರೀಕ್ಷಿಸುವ ಕೆಲಸಗಳನ್ನು ಮುಂದೆಯೂ ಮಾಡಲು ಸಿದ್ಧನಿದ್ದೇನೆ’ ಎಂದರು.

‘ಕಾಂಗ್ರೆಸ್ ಹಾಗೂ ಜೆಡಿಎಸ್ ಅಭ್ಯರ್ಥಿಗಳು ಹೊರಗಿನವರಾಗಿದ್ದು, ಅವರ ಬಗ್ಗೆ ಯೋಚಿಸುವ ಅಗತ್ಯವಿಲ್ಲ. ನನ್ನ ಕ್ಷೇತ್ರದ ಕಾರ್ಯಕರ್ತರೇ ನನಗೆ ಸ್ಟಾರ್ ಪ್ರಚಾರಕರು. ಈ ಬಾರಿ ಒಂದು ಲಕ್ಷ ಮತಗಳ ಅಂತರದಿಂದ ಜಯಗಳಿಸಬೇಕೆಂಬ ಗುರಿ ಹೊಂದಿದ್ದೇನೆ’ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ಎಸ್.ಎನ್. ರಾಜಣ್ಣ, ದಿಬ್ಬೂರು ಜಯಣ್ಣ ಮುಂತಾದವರು ಇದ್ದರು.



ಯಲಹಂಕ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್‌ಆರ್‌ವಿಶ್ವನಾಥ್ ಅವರು ನಾಮಪತ್ರ ಸಲ್ಲಿಸುವ ಮುನ್ನ ನಡೆಸಿದ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಜನ



ಗಾಂಧಿನಗರ ಕ್ಷೇತ್ರದ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಎಸ್‌ ಎನ್‌ ಕೃಷ್ಣಯ್ಯಶೆಟ್ಟಿ ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು

‘ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಭ್ರಾತೃತ್ವ ಮತ್ತು ಸೌಹಾರ್ದ ಎಂಬ ಸಾಂವಿಧಾನಿಕ ಮೌಲ್ಯಗಳಿಗೆ ಧಕ್ಕೆ ತರುವ ಕೆಲಸಗಳಾಗುತ್ತಿವೆ’ ಎಂದು ಸಿಟಿಜನ್ ಫಾರ್ ಡೆಮಾಕ್ರಸಿ, ಜನಾಂದೋಲನಗಳ ಮಹಾಮೈತ್ರಿ ಕಳವಳ ವ್ಯಕ್ತಪಡಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಜನತಾ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಸಿಟಿಜನ್ ಫಾರ್ ಡೆಮಾಕ್ರಸಿಯ ರಾಷ್ಟ್ರೀಯ ಅಧ್ಯಕ್ಷ ಎಸ್.ಆರ್. ಹಿರೇಮಠ, ‘ಮುಂಬರುವ ವಿಧಾನಸಭೆ ಚುನಾವಣೆ ಮತ್ತು 2024ರ ಲೋಕಸಭೆ ಚುನಾವಣೆಯಲ್ಲಿ ಸಂಘ ಪರಿವಾರ ಮತ್ತು ಬಿಜೆಪಿಯ ಕೋಮುವಾದಿ, ಸಂವಿಧಾನ ವಿರೋಧಿ ಸರ್ಕಾರವನ್ನು ಕಿತ್ತೊಗೆಯಬೇಕು. 1977ರಲ್ಲಿ ಘೋಷಿತ ತುರ್ತು ಪರಿಸ್ಥಿತಿಗಿಂತ ಇಂದಿನ ಅಘೋಷಿತ ತುರ್ತು ಪರಿಸ್ಥಿತಿ ಶೇ 20 ಪಟ್ಟು ಹೆಚ್ಚು ಮತ್ತು ಭಯಾನಕವಾಗಿದೆ. ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮರುಸ್ಥಾಪಿಸಬೇಕು’ ಎಂದು ಕರೆ ನೀಡಿದರು.

’ಜಾಗತಿಕವಾಗಿ ಹಸಿವು ಸೂಚ್ಯಂಕ ಪ್ರಮಾಣದಲ್ಲಿ ಭಾರತದ 107 ಸ್ಥಾನದಲ್ಲಿದೆ. ರಾಜ್ಯದಲ್ಲಿ ಮಕ್ಕಳು ಮತ್ತು ಮಹಿಳೆಯರಲ್ಲಿನ ಅಪೌಷ್ಟಿಕತೆ ಸಮಸ್ಯೆ ಹೆಚ್ಚಾಗಿದ್ದು, ನೀತಿ ಆಯೋಗದ ವರದಿ ಪ್ರಕಾರ ರಾಜ್ಯದಲ್ಲಿ 94 ಲಕ್ಷ (ಶೇ 13.16) ನಾಗರಿಕರು ಹಸಿವಿನಿಂದ ಬಳಲುತ್ತಿದ್ದಾರೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಯುವಕರಿಗೆ ಉದ್ಯೋಗ, ಕೂಲಿ ಮತ್ತು ಆಹಾರ ಭದ್ರತೆಯನ್ನು ಒದಗಿಸಬೇಕು. ರಾಜ್ಯದ ಅಸ್ಮಿತೆಯಾಗಿರುವ ನಂದಿನಿಯನ್ನು ರಕ್ಷಿಸಬೇಕು. ಅಭಿವೃದ್ಧಿ ಜನರ ಹಕ್ಕು, ಅದು ದತ್ತಿ–ದಾನವಲ್ಲ. ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವ, ಅದಕ್ಕೆ ಕಾಣಿಕೆ ನೀಡುವ ವ್ಯಕ್ತಿ, ಪಕ್ಷವನ್ನು ಬೆಂಬಲಿಸಬೇಕು. ನಿರುದ್ಯೋಗ ಹೆಚ್ಚಾಗುತ್ತಿದ್ದು, ಕೊಟ್ಟ ಮಾತಿನಂತೆ ಸರ್ಕಾರಗಳು ನಡೆಯುತ್ತಿಲ್ಲ. ಕೋಮುವಾದಿ ಶಕ್ತಿಗಳು ಅಲ್ಪಸಂಖ್ಯಾತರನ್ನು ವಂಚಿಸುತ್ತಿವೆ. ಜನರನ್ನು ಕೇಂದ್ರವಾಗಿಟ್ಟುಕೊಂಡು ಅಭಿವೃದ್ಧಿ ಪ್ರಣಾಳಿಕೆಯನ್ನು ರಚಿಸಬೇಕು’ ಎಂದು ಆಗ್ರಹಿಸಿದರು.

ಸಿಟಿಜನ್ ಫಾರ್ ಡೆಮಾಕ್ರಸಿಯ ಅಧ್ಯಕ್ಷ ಟಿ.ಆರ್. ಚಂದ್ರಶೇಖರ, ಜನಾಂದೋಲನ ಮಹಾಮೈತ್ರಿಯ ಸಹ ಸಂಚಾಲಕ ಕೆ. ವೇಣುಗೋಪಾಲ್ ಭಟ್, ಜನತಂತ್ರ ಪ್ರಯೋಗ ಶಾಲೆಯ ಸಯ್ಯದ್ ಹೈದರ್ ಇದ್ದರು.

ಚುನಾವಣಾ ಸಮರಕ್ಕೆ ಸಂಪೂರ್ಣ ಸಿದ್ಧ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಅಂತಿಮ ಹಂತ ತಲುಪುತ್ತಿದ್ದಂತೆ, ಇತ್ತ ಪಕ್ಷವನ್ನು ಗೆಲ್ಲಿಸಿಕೊಳ್ಳಲು ಬೇಕಾದ ರಣತಂತ್ರಗಳನ್ನು ರೂಪಿಸಿಕೊಳ್ಳಲು ಎಐಸಿಸಿ ವೀಕ್ಷಕರ ಸಭೆ ಬುಧವಾರ ನಡೆಯಿತು.

ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾಗವಹಿಸಿದರು.

ಸಭೆಯ ಬಳಿಕ ಟ್ವೀಟ್ ಮಾಡಿರುವ ಮಲ್ಲಿಕಾರ್ಜುನ ಖರ್ಗೆ, ‘ಎಐಸಿಸಿ ವೀಕ್ಷಕರ ಸಭೆ ನಡೆಸಿದ್ದೇವೆ. ನಾವು ಚುನಾವಣಾ ಸಮರಕ್ಕೆ ಸಂಪೂರ್ಣ ಸಿದ್ಧರಿದ್ದೇವೆ ಮತ್ತು ನಮ್ಮ ಕರ್ನಾಟಕದ ಭವಿಷ್ಯಕ್ಕಾಗಿ ಹೋರಾಡುತ್ತೇವೆ’ ಎಂದಿದ್ದಾರೆ.

ಸಭೆಯ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಪಕ್ಷವನ್ನು ಗೆಲ್ಲಿಸಿಕೊಳ್ಳಲು ಏನೇನು ಮಾಡುತ್ತೇವೆಂದು ಹೇಳುವುದಿಲ್ಲ. ಆದರೆ, ಅಧಿಕಾರಕ್ಕೆ ಬಂದ ಬಳಿಕ ಜನರಿಗೆ ಕೊಟ್ಟಿರುವ ಗ್ಯಾರಂಟಿ ಭರವಸೆಗಳನ್ನು ಈಡೇರಿಸುವ ಮಾತು ಕೊಡುತ್ತೇವೆ’ ಎಂದರು.


‘ಡಬಲ್ ಎಂಜಿನ್ ಸರ್ಕಾರ ಕರ್ನಾಟಕದಲ್ಲಿ ವಿಫಲವಾಗಿವೆ. ಇಲ್ಲಿನ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು ಬಿಜೆಪಿ ಸರ್ಕಾರಗಳಿಂದ ಸಾಧ್ಯವಾಗಿಲ್ಲ. ಮೋದಿಯಾಗಲಿ, ಅಮಿತ್ ಶಾ ಆಗಲಿ ರಾಜ್ಯಕ್ಕೆ ಬಂದು ಆಡಳಿತ ನಡೆಸುವುದಿಲ್ಲ. ರಾಜ್ಯದ ಜನ ವಿದ್ಯಾವಂತರು, ಪ್ರಗತಿಶೀಲರು. ರಾಜ್ಯವನ್ನು ಭ್ರಷ್ಟಾಚಾರ ಮುಕ್ತಗೊಳಿಸಬೇಕಿದೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನರನ್ನು ಕಾಪಾಡಬೇಕಿದೆ. ಹೀಗಾಗಿ, ಕಾಂಗ್ರೆಸ್ ಸಿದ್ಧಾಂತ ಒಪ್ಪಿ ಬರುವ ಎಲ್ಲರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳುತ್ತೇವೆ’ ಎಂದರು.

‘ರಾಜ್ಯದಲ್ಲಿ ಪ್ರಚಾರಕ್ಕೆ ಮೋದಿ ಸುನಾಮಿ ಬರಲಿದೆ’ ಎಂಬ ಜೆ.ಪಿ. ನಡ್ಡಾ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಚುನಾವಣೆ ಮುಗಿಯುವವರೆಗೂ ಮೋದಿ ಅವರು ಇಲ್ಲೇ ಇರಲಿ. ಇಲ್ಲಿನ ಹವಾಮಾನ, ಆತಿಥ್ಯ, ಸಂಸ್ಕೃತಿ ಎಲ್ಲವೂ ಉತ್ತಮವಾಗಿವೆ’ ಎಂದು ವ್ಯಂಗ್ಯವಾಡಿದರು.



ಎಐಸಿಸಿ ವೀಕ್ಷಕರ ಸಭೆಯಲ್ಲಿ ರಣದೀಪ್ ಸಿಂಗ್ ಸುರ್ಜೇವಾಲಾ, ಮಲ್ಲಿಕಾರ್ಜುನ ಖರ್ಗೆ ಪಾಲ್ಗೊಂಡಿದ್ದರು

ಕ್ಷೇತ್ರ	ಆನೇಕಲ್
ಅಭ್ಯರ್ಥಿ	ಬಿ.ಶಿವಣ್ಣ
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹35.25 ಕೋಟಿ
ಕುಟುಂಬದ ಒಟ್ಟು ಸಾಲ	₹3.89 ಕೋಟಿ
ಅಪರಾಧ ಪ್ರಕರಣ	1
ಶಿಕ್ಷಣ	ಬಿಎಸ್‌ಸಿ, ಎಲ್‌ಎಲ್‌ಬಿ
ಚರಾಸ್ತಿ	₹5.07 ಕೋಟಿ
ಸ್ಥಿರಾಸ್ತಿ	₹30.17 ಕೋಟಿ
ವಾಹನಗಳು	ಎರಡು ಕಾರು
ಎಷ್ಟು ಹೆಚ್ಚಳ	₹14.24 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹33.70 ಕೋಟಿ
ಅಭ್ಯರ್ಥಿಯ ಸಾಲ	₹3.68 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹1.40 ಕೋಟಿ
ಪತ್ನಿಯ ಸಾಲ	₹20.54 ಲಕ್ಷ



ಕ್ಷೇತ್ರ	ಪದ್ಮನಾಭನಗರ
ಅಭ್ಯರ್ಥಿ ಹೆಸರು	ಮಂಜುನಾಥ್ (54)
ಪಕ್ಷ	ಜೆಡಿಎಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹62.1 ಕೋಟಿ
ಅಪರಾಧ ಪ್ರಕರಣ	-
ಶಿಕ್ಷಣ	ಎಸ್ಸೆಸ್ಸೆಲ್ಸಿ
ಚರಾಸ್ತಿ	₹2.95 ಕೋಟಿ
ಸ್ಥಿರಾಸ್ತಿ	₹59.15 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹32.64 ಕೋಟಿ
ಅಭ್ಯರ್ಥಿಯ ಸಾಲ	₹1.67 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹24.12 ಕೋಟಿ
ಪತ್ನಿಯ ಸಾಲ	₹1.10 ಕೋಟಿ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	₹5.34 ಕೋಟಿ



ಕ್ಷೇತ್ರ	ಪದ್ಮನಾಭನಗರ
ಅಭ್ಯರ್ಥಿ ಹೆಸರು	ವಿ. ರಘುನಾಥ ನಾಯ್ಡು (59)
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹51.99 ಕೋಟಿ
ಅಪರಾಧ ಪ್ರಕರಣ	-
ಶಿಕ್ಷಣ	7ನೇ ತರಗತಿ
ಚರಾಸ್ತಿ	₹21.88 ಕೋಟಿ
ಸ್ಥಿರಾಸ್ತಿ	₹30.11 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹36.42 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹15.57 ಕೋಟಿ
ಪತ್ನಿಯ ಸಾಲ	₹1.02 ಕೋಟಿ



ಕ್ಷೇತ್ರ	ಯಲಹಂಕ
ಅಭ್ಯರ್ಥಿ ಹೆಸರು	ಎಸ್.ಆರ್. ವಿಶ್ವನಾಥ್ (60)
ಪಕ್ಷ	ಬಿಜೆಪಿ
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹63.55 ಕೋಟಿ
ಅಪರಾಧ ಪ್ರಕರಣ	ಯಾವುದೂ ಇಲ್ಲ
ಶಿಕ್ಷಣ	ಬಿಎ, ಐಟಿಐ
ಚರಾಸ್ತಿ	₹10.42 ಕೋಟಿ
ಸ್ಥಿರಾಸ್ತಿ	₹53.13 ಕೋಟಿ
ಎಷ್ಟು ಹೆಚ್ಚಳ	₹23.15 ಕೋಟಿ
ಅಭ್ಯರ್ಥಿಯ ಸಾಲ	₹42.5 ಲಕ್ಷ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹22.04 ಕೋಟಿ
ಪತ್ನಿಯ ಸಾಲ	₹35.15 ಲಕ್ಷ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	₹6.90 ಕೋಟಿ



ಸೆಲೆಬ್ರಿಟಿ ಮಾತು



ಪ್ರತಿಯೊಂದು ಮತ ಬಹುಮುಖ್ಯ

ಶುಭಾ ಪೂಂಜಾ, ನಟಿ

‘ಅಯ್ಯೋ, ಒಂದು ಮತದಿಂದ ಏನಾಗುತ್ತೆ’ ಎನ್ನುವವರೇ ಹೆಚ್ಚು. ಆದರೆ ಪ್ರತಿಯೊಂದು ಮತವೂ ಮುಖ್ಯ. ಯುವಜನತೆ ಸಂಖ್ಯೆ ರಾಜ್ಯದಲ್ಲಿ ಹೆಚ್ಚಿದ್ದು, ಮೊದಲ ಬಾರಿ ಮತ ಮಾಡುವವರೂ ಸಾವಿರಾರು ಜನರಿದ್ದಾರೆ. ಇಂದಿನ ಯುವಜನತೆ ಸ್ಮಾರ್ಟ್ ಆಗಿದೆ. ಅವರಿಗೆ ರಾಜಕೀಯ ಜ್ಞಾನವೂ ಇದೆ. ಹೀಗಾಗಿ ತಪ್ಪದೇ ಮತದಾನ ಮಾಡಿ. ಮೊದಲ ಬಾರಿ ಮತದಾನ ಮಾಡುವವರಿಗೆ ಇದೊಂದು ಅವಕಾಶ. ಮತದಾನ ಪ್ರಕ್ರಿಯೆ ಹೇಗೆ ನಡೆಯುತ್ತದೆ? ತಮ್ಮ ಮತ ಎಷ್ಟು ಮುಖ್ಯ ಎನ್ನುವುದನ್ನೂ ಅವರು ಅರಿಯಲು ಸಾಧ್ಯ. ನೀವು ಮತದಾನ ಮಾಡಿ, ನಿಮ್ಮ ಸುತ್ತಲಿರುವವರನ್ನೂ ಮತದಾನಕ್ಕೆ ಪ್ರೋತ್ಸಾಹಿಸಿ.

ಮತದಾನ: ಉದ್ಯಮಿಗಳಿಗೆ ಮನವಿ

ಬೆಂಗಳೂರು: ಎಲ್ಲ ಕೈಗಾರಿಕೆಗಳಲ್ಲಿ ಕಾರ್ಮಿಕರಿಗೆ ಮತದಾನದ ಅರಿವು ಮೂಡಿಸಬೇಕು ಎಂದು ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರೀಸ್ ಮತ್ತು ಕಾಮರ್ಸ್ (ಬಿಸಿಐಸಿ) ಸದಸ್ಯರಿಗೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮನವಿ ಮಾಡಿಕೊಂಡರು.

ಬಿಸಿಐಸಿ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ಮತದಾನ ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು. ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಮತದಾನದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಬೆಂಗಳೂರಿನ ಎಲ್ಲಾ ವಲಯಗಳಲ್ಲೂ ಮತದಾನದ ಕುರಿತು ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು. ಬಿಸಿಐಸಿಯಲ್ಲಿ ನೋಂದಣಿಯಾಗಿರುವ ಹಲವು ಕೈಗಾರಿಕೆ, ಐಟಿ-ಬಿಟಿ ಹಾಗೂ ಇತರೆ ಮಲ್ಟಿನ್ಯಾಷನಲ್ ಕಂಪನಿಗಳಿಗೆ ತಮ್ಮ ಸಂಸ್ಥೆ ವತಿಯಿಂದ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಅಭಿಯಾನ ಕೈಗೊಳ್ಳಲಾಗಿದೆ ಎಂದರು.

ಬಿಸಿಐಸಿ ಅಧ್ಯಕ್ಷ ಎಲ್. ರವೀಂದ್ರನ್, ವಲಯ ಆಯುಕ್ತ ಪಿ.ಎನ್.ರವೀಂದ್ರ, ಸ್ವೀಪ್ ಸಮಿತಿ ಅಧ್ಯಕ್ಷ ಸಂಗಪ್ಪ, ವಲಯ ಜಂಟಿ ಆಯುಕ್ತ ಪಲ್ಲವಿ, ಸ್ವೀಪ್ ನೋಡಲ್ ಅಧಿಕಾರಿಯಾದ ಸಿದ್ದೇಶ್ವರ್ ಉಪಸ್ಥಿತರಿದ್ದರು. ಅಲ್ಲದೆ ವಿಡಿಯೊ ಕಾನ್ಫರೆನ್ಸ್ ಮೂಲಕವೂ ಹಲವು ಉದ್ಯಮಿಗಳು ಪಾಲ್ಗೊಂಡಿದ್ದರು.

ಗುರುವಾರ, ಏಪ್ರಿಲ್ 20, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 109 | ಪುಟ 16

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ | 'ಗುಂಪು ಚರ್ಚೆ'ಯ ಯಶಸ್ಸಿಗೆ ತಂತ್ರಗಳು



ಸಂಖ್ಯೆ-ಸುದ್ದಿ ಯುವ ಭಾರತ

ಅಖಾಡಕ್ಕೆ ಬರಲಿದ್ದಾರೆ ತಾರಾ ಪ್ರಚಾರಕರು 6

ಸುಡಾನ್: ಕುಡಿವ ನೀರು, ಆಹಾರಕ್ಕೆ ತತ್ವಾರ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,568	17,619	₹62,500 (ಬೆಂಗಳೂರು)	₹77,000 (ಬೆಂಗಳೂರು)	82.25

ಬುಧವಾರ ನಾಮಪತ್ರ ಸಲ್ಲಿಸಿದ ಪ್ರಮುಖರು



ಬಸವರಾಜ ಬೊಮ್ಮಾಯಿ | ಸಿದ್ದರಾಮಯ್ಯ | ಜಗದೀಶ ಶೆಟ್ಟರ್ | ವಿ. ಸೋಮಣ್ಣ | ಡಾ.ಜಿ.ಪರಮೇಶ್ವರ | ಬಿ.ವೈ.ವಿಜಯೇಂದ್ರ | ಸುನಿಲ್ ಕುಮಾರ್ | ಹಾಲಪ್ಪ ಆಚಾರ್

ಮತ ಕಣ: ಬದಲಾದ ಚಿತ್ರಣ

ಶಿಗ್ಗಾವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ದಿಢೀರ್ ಬದಲು • ಇನ್ನೂ ಐದು ಕ್ಷೇತ್ರಗಳಲ್ಲಿ 'ಕೈ' ಪಟ್ಟಿ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇ 10ರಂದು ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಗುರುವಾರ ಕೊನೆದಿನವಾಗಿದ್ದು, ಬುಧವಾರ 1,110 ನಾಮಪತ್ರಗಳು ಸಲ್ಲಿಕೆಯಾಗಿವೆ. 935 ಅಭ್ಯರ್ಥಿಗಳು ತಮ್ಮ ಶಕ್ತಿಪ್ರದರ್ಶನಕ್ಕೆ ಸಾವಿರಾರು ಜನರನ್ನು ಸೇರಿಸಿದ್ದರಿಂದಾಗಿ ರಾಜ್ಯದ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿತ್ತು.

ಚುನಾವಣೆಯಲ್ಲಿ ಗೆಲ್ಲುವುದೊಂದನ್ನೇ ಎಲ್ಲ ರಾಜಕೀಯ ಪಕ್ಷಗಳು ಮಾನದಂಡವಾಗಿ ಇಟ್ಟುಕೊಂಡಿದ್ದರಿಂದಾಗಿ ನಾಮಪತ್ರ ಸಲ್ಲಿಕೆಗೆ ಒಂದು ದಿನ ಬಾಕಿ ಇರುವವರೆಗೂ ಆಕಾಂಕ್ಷಿಗಳು ಅಲ್ಲಿಂದಿಲ್ಲಿಗೆ ಜಿಗಿತವನ್ನು ನಡೆಸುತ್ತಲೇ ಇದ್ದರು. ಕೊನೆವರೆಗೂ ಟಿಕೆಟ್‌ಗಾಗಿ ಚೌಕಾಶಿ ನಡೆಸಿದವರು, ಒಂದು ಕಡೆ ಟಿಕೆಟ್ ಸಿಗದೇ ಇದ್ದಾಗ ಮತ್ತೊಂದು, ಮಗುದೊಂದು ಪಕ್ಷವನ್ನು ಆರಿಸಿಕೊಂಡರು. ಜಿಗಿ ನೆಗೆದಾಟ ಬಹುತೇಕ ತಾರ್ಕಿಕ ಅಂತ್ಯ ಕಂಡಂತಾಗಿದ್ದು, ಚುನಾವಣೆ ಘೋಷಣೆಗೆ ಮುನ್ನ ಇದ್ದ ಕಣ ಚಿತ್ರಣವೇ ತಲೆ ಕೆಳಗಾದಂತಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿಯಲ್ಲಿ ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಚಿತ್ರನಟ ಸುದೀಪ್ ಜತೆಯಲ್ಲಿ ಭರ್ಜರಿ ರೋಡ್ ಶೋ ನಡೆಸಿ, 2ನೇ ಬಾರಿ ತಮ್ಮ ನಾಮಪತ್ರ ಸಲ್ಲಿಸಿದರು. ಈ ಬಾರಿ ವರುಣಕ್ಕೆ ಮರಳಿರುವ ಸಿದ್ದರಾಮಯ್ಯ ದೇಗುಲಗಳಿಗೆ ಭೇಟಿ ಕೊಟ್ಟು, ಶಕ್ತಿ ಪ್ರದರ್ಶನದ ನಡೆಸಿಯೇ ನಾಮಪತ್ರ ಸಲ್ಲಿಸಿದರು. ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಕಾಲಿಟ್ಟ ಜಗದೀಶ ಶೆಟ್ಟರ್, ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸಚಿವರಾದ ವಿ. ಸೋಮಣ್ಣ, ಬಿ.ಸಿ. ನಾಗೇಶ, ಹಾಲಪ್ಪ ಆಚಾರ್, ವಿ. ಸುನಿಲ್ ಕುಮಾರ್ ಹಾಗೂ ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ನಾಮಪತ್ರ ಸಲ್ಲಿಸಿದ ಪ್ರಮುಖರು.

ಬದಲಾದ ಚಿತ್ರಣ: ವಿಧಾನಸಭೆ ಚುನಾವಣೆ ಘೋಷಣೆಯಾಗುವ ಮುನ್ನ ವರುಣ, ಕನಕಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ನಾಯಕರನ್ನು ಕಟ್ಟಿ ಹಾಕುವವರಿಲ್ಲ ಎಂಬ ಚರ್ಚೆ ನಡೆದಿತ್ತು. ಹೊಸ ದಾಳ ಉರುಳಿಸಿದ ಬಿಜೆಪಿ ವರಿಷ್ಠರು ಸಿದ್ದರಾಮಯ್ಯ ಎದುರು ವಿ. ಸೋಮಣ್ಣ, ಡಿ.ಕೆ. ಶಿವಕುಮಾರ್ ಎದುರು ಆರ್. ಅಶೋಕ ಅವರನ್ನು ಕಣಕ್ಕೆ ಇಳಿಸಿ, ಪೈಪೋಟಿಗೆ ಸಿದ್ಧ ಎಂಬ ಸಂದೇಶ ರವಾನಿಸಿದರು.

ಕಾಂಗ್ರೆಸ್ ವಿರುದ್ಧ ರಾಜಕಾರಣ ಮಾಡುತ್ತಾ ಬಂದಿದ್ದ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಬಿಜೆಪಿ ನಾಯಕರ ವಿರುದ್ಧ ಬಂಡೆದ್ದು, 'ಕೈ' ಹಿಡಿದಿದ್ದು ರಾಜಕಾರಣದ ತರ್ಕಗಳನ್ನೇ ಬುಡಮೇಲು ಮಾಡಿತು. ಬಿಜೆಪಿಯ ಕೋಮು ರಾಜಕಾರಣದ ಬಗ್ಗೆ ಗಟ್ಟಿಯಾಗಿ ಧ್ವನಿ ಎತ್ತಿದ್ದ ಶಿವಮೊಗ್ಗದ ಆಯನೂರು ಮಂಜುನಾಥ್, ನಾಮಪತ್ರ ಸಲ್ಲಿಕೆಯ ಮುನ್ನಾದಿನ ಜೆಡಿಎಸ್ ಸೇರಿ, ಅಚ್ಚರಿ ಅಭ್ಯರ್ಥಿಯಾಗಿ ಹೊರಹೊಮ್ಮಿದರು. ಬಿಜೆಪಿಯಿಂದ ಟಿಕೆಟ್ ಕೈತಪ್ಪಿದ ಅನೇಕರು ಕಾಂಗ್ರೆಸ್, ಜೆಡಿಎಸ್ ಸೇರಿ, ಚುನಾವಣಾ ಕಣದ ಚಿತ್ರಣವನ್ನೇ ಬದಲಾಯಿಸಿದ್ದಾರೆ. ಒಂದು ನೆಲೆಯಿಂದ ಮತ್ತೊಂದು ನೆಲೆಗೆ ಜಿಗಿದ ಇವರ ಕಲೆಗಾರಿಕೆಯಿಂದಾಗಿ, ಪೈಪೋಟಿ ಇಲ್ಲದ ಕಡೆ ಸ್ಪರ್ಧೆ ಉಂಟಾದಂತಾಗಿದೆ.

ಬಂಡಾಯ ಶಮನಕ್ಕೆ ಸಂತೋಷ್ ಅಖಾಡಕ್ಕೆ

ಬೆಳಗಾವಿ: ಬಿಜೆಪಿ ಟಿಕೆಟ್ ಸಿಗದ ಕಾರಣ ಜಿಲ್ಲೆಯ 8 ಕ್ಷೇತ್ರಗಳಲ್ಲಿ ಉಂಟಾಗಿರುವ ಬಂಡಾಯ ಶಮನ ಮಾಡಲು, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬುಧವಾರ ಕೊನೆಯ ಕಸರತ್ತು ನಡೆಸಿದರು.

ನಗರದ ಸಂಕಮ್ ಹೋಟೆಲ್‌ನಲ್ಲಿ ಬೆಳಿಗ್ಗೆಯಿಂದಲೇ ಅತೃಪ್ತರು ಹಾಗೂ ಬಂಡಾಯ ಎದ್ದಿರುವ ಮುಖಂಡರ ಸಭೆಯಲ್ಲಿ ಅವರು ಪಾಲ್ಗೊಂಡರು.

ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಅನಿಲ ಬೆನಕೆ ಹಾಗೂ ರಾಮದುರ್ಗ ಶಾಸಕ ಮಹಾದೇವಪ್ಪ ಯಾದವಾಡ ಅವರು ಬಂಡಾಯದಿಂದ ಹಿಂದಕ್ಕೆ ಸರಿಯುವುದು ಬಹುತೇಕ ಖಚಿತವಾಗಿದೆ. ಅನಿಲ ಬೆನಕೆ ಅವರು ಬಿಜೆಪಿ ಅಭ್ಯರ್ಥಿಗೆ ಬೆಂಬಲ ಸೂಚಿಸಿದ್ದಾರೆ. ಮಹಾದೇವಪ್ಪ ಯಾದವಾಡ ಬಂಡಾಯ ಅಭ್ಯರ್ಥಿ ಆಗಿ ನಾಮಪತ್ರ ಸಲ್ಲಿಸಿದ್ದರೂ, ಇನ್ನೊಂದು ಸುತ್ತು ನಾಯಕರೊಂದಿಗೆ ಮಾತನಾಡುವ ನಿರ್ಧಾರಕ್ಕೆ ಬಂದಿದ್ದಾರೆ.

ಬೆಳಗಾವಿ ಗ್ರಾಮೀಣ, ಖಾನಾಪುರ, ಸವದತ್ತಿ ಕ್ಷೇತ್ರಗಳಲ್ಲಿ ಬಂಡಾಯ ಶಮನವಾಗಿದೆ. ಬೈಲಹೊಂಗಲದಲ್ಲಿ ಮಾಜಿ ಶಾಸಕ ಡಾ.ವಿಶ್ವನಾಥ ಪಾಟೀಲ ಬಂಡಾಯ ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಿದ್ದಾರೆ. ಅವರೊಂದಿಗೂ ಸಂತೋಷ್ ವೈಯಕ್ತಿಕವಾಗಿ ಚರ್ಚೆ ಮಾಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿವಮೊಗ್ಗಕ್ಕೆ ಚನ್ನಬಸಪ್ಪ, ಮಾನ್ವಿಗೆ ನಾಯಕ

ನವದೆಹಲಿ: ಬಿಜೆಪಿಯ ಕೊನೆಯ ಎರಡು ಕ್ಷೇತ್ರಗಳ ಅಭ್ಯರ್ಥಿಗಳು ಘೋಷಣೆಯಾಗಿದ್ದು, ತೀವ್ರ ಕುತೂಹಲ ಮೂಡಿಸಿದ್ದ ಶಿವಮೊಗ್ಗ ನಗರ ಕ್ಷೇತ್ರಕ್ಕೆ ಚನ್ನಬಸಪ್ಪ ಮತ್ತು ಮಾನ್ವಿ (ಎಸ್‌ಸಿ) ಕ್ಷೇತ್ರಕ್ಕೆ ಬಿ.ವಿ.ನಾಯಕ ಅವರು ಉಮೇದುವಾರರಾಗಿದ್ದಾರೆ. ಶಿವಮೊಗ್ಗ ಕ್ಷೇತ್ರವನ್ನು ಇದುವರೆಗೆ ಪ್ರತಿನಿಧಿಸುತ್ತಿದ್ದ ಕೆ.ಎಸ್.ಈಶ್ವರಪ್ಪ ಅವರ ಪುತ್ರ ಕಾಂತೇಶ್ ಅವರಿಗೆ ಟಿಕೆಟ್ ಸಿಗಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ.

ಲಾಡ್, ಆಯನೂರ್‌ಗೆ ಜೆಡಿಎಸ್ ಟಿಕೆಟ್

ಅಭ್ಯರ್ಥಿಗಳ ಮೂರನೇ ಪಟ್ಟಿ ಪ್ರಕಟಿಸಿರುವ ಜೆಡಿಎಸ್, ಕೊನೆಯ ಕ್ಷಣಗಳಲ್ಲಿ ಪಕ್ಷಾಂತರ ಮಾಡಿದ ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್, ಮಾಜಿ ಶಾಸಕರಾದ ಅನಿಲ್ ಲಾಡ್, ನೇಮಿರಾಜ ನಾಯ್ಕ್ ಅವರಿಗೆ ಟಿಕೆಟ್ ನೀಡಿದೆ.

ಶಾಸಕ ಕೆ.ಎಸ್. ಈಶ್ವರಪ್ಪ ವಿರುದ್ಧ ಬಂಡಾಯ ಎದ್ದಿದ್ದ ಆಯನೂರು, ಶಿವಮೊಗ್ಗ ನಗರ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದರು. ಬುಧವಾರ ಚಿತ್ರದುರ್ಗದಲ್ಲಿ ಜೆಡಿಎಸ್ ಸೇರಿದರು. ಅಲ್ಲಿಯೇ ಅವರಿಗೆ ಶಿವಮೊಗ್ಗ ನಗರ ಕ್ಷೇತ್ರದ ಬಿ ಫಾರಂ ನೀಡಲಾಗಿದೆ. 12 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಜೆಡಿಎಸ್ ಬದಲಿಸಿದೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಣಕ್ಕಿಳಿದಿರುವ ವರುಣ ಕ್ಷೇತ್ರದಲ್ಲಿ ಅಭಿಷೇಕ್ ಬದಲಿಗೆ ಮಾಜಿ ಶಾಸಕ ಭಾರತೀ ಶಂಕರ್ ಅವರಿಗೆ ಟಿಕೆಟ್ ನೀಡಲಾಗಿದೆ. ಬಳ್ಳಾರಿ ನಗರದಲ್ಲಿ ಅಲ್ಲಾಭಕ್ಷಾ ಬದಲಿಗೆ ಅನಿಲ್ ಲಾಡ್, ಹಗರಿಬೊಮ್ಮನಹಳ್ಳಿಯಲ್ಲಿ ನೇಮಿರಾಜ ನಾಯ್ಕ್ ಅವರಿಗೆ ಟಿಕೆಟ್ ನೀಡಲಾಗಿದೆ. ಮೂಡಿಗೆರೆ ಕ್ಷೇತ್ರದಲ್ಲಿ ಮಾಜಿ ಶಾಸಕ ಬಿ.ಬಿ. ನಿಂಗಯ್ಯ ಅವರ ಬದಲಿಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಯಿಂದ ಜೆಡಿಎಸ್ ಸೇರಿದ್ದ ಎಂ.ಪಿ. ಕುಮಾರಸ್ವಾಮಿ ಅವರಿಗೆ ಅವಕಾಶ ನೀಡಲಾಗಿದೆ.


11ನೇ ಪುಟ ನೋಡಿ

ವಿಶ್ವಸಂಸ್ಥೆ ಜನಸಂಖ್ಯೆ ಅಂದಾಜು

ಚೀನಾ ಹಿಂದಿಕ್ಕಿದ ಭಾರತ ನಂ.1

ಭಾರತವು ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆ ಇರುವ ದೇಶ ಎನಿಸಿದೆ ಎಂದು ವಿಶ್ವ ಸಂಸ್ಥೆಯ ಜಾಗತಿಕ ಜನಸಂಖ್ಯಾ ಅಂದಾಜು ವರದಿ ಹೇಳಿದೆ. ಈವರೆಗೆ ಅತಿಹೆಚ್ಚು ಜನಸಂಖ್ಯೆ ಇರುವ ದೇಶ ಎನಿಸಿದ್ದ ಚೀನಾವನ್ನು ಭಾರತ ಹಿಂದಿಕ್ಕಿದೆ. ವಿಶ್ವಸಂಸ್ಥೆಯ ಅಂದಾಜಿನ ಪ್ರಕಾರ ಈಗ ಭಾರತದಲ್ಲಿ ಚೀನಾಕ್ಕಿಂತ 30 ಲಕ್ಷದಷ್ಟು ಹೆಚ್ಚು ಜನರಿದ್ದಾರೆ. ಭಾರತದಲ್ಲಿ 142.8 ಕೋಟಿ ಜನರು ಇದ್ದರೆ, ಚೀನಾದಲ್ಲಿ 142.5 ಕೋಟಿ ಜನರು ಇದ್ದಾರೆ ಎಂದು ಅಂದಾಜು ವರದಿಯಲ್ಲಿ ಹೇಳಲಾಗಿದೆ

ಆಧಾರ: ವಿಶ್ವಸಂಸ್ಥೆಯ ಜಾಗತಿಕ ಜನಸಂಖ್ಯಾ ಅಂದಾಜು–2022 ವರದಿ



ವಿಶ್ವ ಜನಸಂಖ್ಯೆಯಲ್ಲಿ ಭಾರತದ ಪಾಲು ಶೇ 17.75

ವಿಶ್ವದ ಒಟ್ಟು ಜನಸಂಖ್ಯೆಯು 804 ಕೋಟಿಯನ್ನು ದಾಟಿದೆ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಭಾರತದ ಜನಸಂಖ್ಯೆಯ ಪಾಲು ಶೇ 17.75ರಷ್ಟಾಗಿದೆ. ಇನ್ನು ಚೀನಾದ ಪಾಲು ಶೇ 17.71ಕ್ಕೆ ಕುಸಿದಿದೆ

804.5 ಕೋಟಿ ವಿಶ್ವದ ಒಟ್ಟು ಜನಸಂಖ್ಯೆ

142.8 ಕೋಟಿ ಭಾರತದ ಜನಸಂಖ್ಯೆ

142.5 ಕೋಟಿ ಚೀನಾದ ಜನಸಂಖ್ಯೆ

34 ಕೋಟಿ ಅಮೆರಿಕದ ಜನಸಂಖ್ಯೆ

485.2 ಕೋಟಿ ವಿಶ್ವದ ಉಳಿದ ಎಲ್ಲಾ ದೇಶಗಳ ಒಟ್ಟು ಜನಸಂಖ್ಯೆ

ಪ್ರಜಾವಾಣಿ ಗ್ರಾಫಿಕ್ಸ್

ಪಠ್ಯದ ಅನುವಾದವನ್ನೂ ಮಾಡಿ: ವಿ.ವಿಗಳಿಗೆ ಯುಜಿಸಿ ಸಲಹೆ

ಸ್ಥಳೀಯ ಭಾಷೆಯಲ್ಲೂ ಪರೀಕ್ಷೆಗೆ ಅವಕಾಶ

ನವದೆಹಲಿ (ಪಿಟಿಐ): ಯಾವುದೇ ಕೋರ್ಸ್‌ನ ಬೋಧನಾ ಮಾಧ್ಯಮ ಇಂಗ್ಲಿಷ್ ಆಗಿದ್ದರೂ ವಿದ್ಯಾರ್ಥಿಗಳಿಗೆ ಸ್ಥಳೀಯ ಭಾಷೆಯಲ್ಲೂ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕೆಂದು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಿದೆ.

'ಬೋಧನೆಯಲ್ಲಿ ಮಾತೃಭಾಷೆ ಅಥವಾ ಸ್ಥಳೀಯ ಭಾಷೆಯ ಬಳಕೆ ಉತ್ತೇಜಿಸಲು ಪಠ್ಯಪುಸ್ತಕಗಳನ್ನು ಆಯಾ ಭಾಷೆಯಲ್ಲೂ ರಚಿಸುವ ಮತ್ತು ಇತರ ಭಾಷೆಗಳಲ್ಲಿರುವ ಪಠ್ಯವನ್ನು ಆ ಭಾಷೆಗೂ ಅನುವಾದಿಸುವಂತಹ ಉತ್ತೇಜನಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಬೋಧನೆ ಮತ್ತು ಕಲಿಕೆಯಲ್ಲಿ ಸ್ಥಳೀಯ ಭಾಷೆಯ ಬಳಕೆ ಉತ್ತೇಜಿಸುವಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದು' ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ತಿಳಿಸಿದ್ದಾರೆ.

'ಯಾವುದೇ ಕೋರ್ಸ್‌ನ ಬೋಧನೆ ಇಂಗ್ಲಿಷ್ ಮಾಧ್ಯಮದಲ್ಲಿದ್ದರೂ ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಗಳು ಸ್ಥಳೀಯ ಭಾಷೆಯಲ್ಲೇ ಉತ್ತರ ಬರೆಯಲು ನಿಮ್ಮ ವಿಶ್ವವಿದ್ಯಾಲಯಗಳಲ್ಲಿ ಅವಕಾಶ ನೀಡಬೇಕು. ವಿದ್ಯಾರ್ಥಿಗಳು ಉತ್ತರಗಳನ್ನು ಸುಲಭವಾಗಿ ಬರೆಯಲು ಅವಕಾಶ ನೀಡುವುದು ಇದರ ಹಿಂದಿರುವ ಉದ್ದೇಶ' ಎಂದೂ ಅವರು ಹೇಳಿದ್ದಾರೆ.

ಎನ್‌ಇಪಿಯು ಶಿಕ್ಷಣದಲ್ಲಿ ಭಾರತೀಯ ಭಾಷೆಗಳ ಬಳಕೆಯನ್ನು ಹೆಚ್ಚಿಸುವ ಪ್ರಮುಖ ಅಂಶವನ್ನೂ ಒಳಗೊಂಡಿದೆ. ಅರಿವು ಮೂಡಿಸುವಲ್ಲಿ ಮತ್ತು ಕಲಿಯುವವರ ಸಮಗ್ರ ವ್ಯಕ್ತಿತ್ವ ರೂಪಿಸುವಲ್ಲಿ ಸ್ಥಳೀಯ ಭಾಷೆಗಳಲ್ಲಿ ಸಂವಹನ ನಡೆಸುವುದು ಅತ್ಯಗತ್ಯವಾಗಿದೆ' ಎಂದು ಪ್ರತಿಪಾದಿಸಿದ್ದಾರೆ.

'ಶೈಕ್ಷಣಿಕ ಪರಿಸರ ವ್ಯವಸ್ಥೆಯು ಇಂಗ್ಲಿಷ್ ಮಾಧ್ಯಮ ಕೇಂದ್ರಿತವಾಗಿ ಮುಂದುವರಿಯುತ್ತದೆ. ಬೋಧನೆ, ಕಲಿಕೆ, ಮೌಲ್ಯಮಾಪನ ಪ್ರಕ್ರಿಯೆಯು ಸ್ಥಳೀಯ ಭಾಷೆಗಳಲ್ಲಿ ನಡೆದರೆ ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಯ ಪ್ರಮಾಣ ಕ್ರಮೇಣ ಹೆಚ್ಚಾಗುತ್ತದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆರಗ ಆಸ್ತಿಯಲ್ಲಿ ಬಿಡಿಎ ನಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಹಂಚಿಕೆ ರದ್ದುಪಡಿಸಿ, ಬಿಡಿಎ ವಶಕ್ಕೆ ಸ್ವತ್ತನ್ನು ಹಿಂಪಡೆಯಲು ಪ್ರಕ್ರಿಯೆ ಆರಂಭಿಸಿರುವ ವಿವಾದಿತ ನಿವೇಶನವನ್ನೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಮ್ಮ ಆಸ್ತಿ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಸಚಿವರಿಗೆ 2006ರಲ್ಲಿ 40x60 ಚದರ ಅಡಿ ವಿಸ್ತೀರ್ಣದ ನಿವೇಶನ ಹಂಚಿಕೆ ಮಾಡಲಾಗಿತ್ತು. ಜ್ಞಾನೇಂದ್ರ ಅವರ ಕೋರಿಕೆಯಂತೆ ಆ ಹಂಚಿಕೆಯನ್ನು ರದ್ದು ಮಾಡಿ, 2009ರಲ್ಲಿ ಅದೇ ಬಡಾವಣೆಯಲ್ಲಿ 50x80 ಚ. ಅಡಿ ವಿಸ್ತೀರ್ಣದ ನಿವೇಶನ ಹಂಚಿಕೆ ಮಾಡಲಾಗಿತ್ತು.

ಕಾನೂನು ತೊಡಕಿನ ಕಾರಣದಿಂದ 2021ರಲ್ಲಿ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ 50x80 ಚ. ಅಡಿ ವಿಸ್ತೀರ್ಣದ ಬದಲಿ ನಿವೇಶನ ಹಂಚಿಕೆ ಮಾಡಲಾಗಿತ್ತು.

ಬಿಡಿಎ ನಿವೇಶನ ಹಂಚಿಕೆ ನಿಯಮಗಳ ಸೆಕ್ಷನ್ 11–ಎ ಉಲ್ಲಂಘನೆಯಾಗಿರುವ ಕಾರಣದಿಂದ ಈ ಬದಲಿ ನಿವೇಶನ ಹಂಚಿಕೆಯನ್ನು ರದ್ದುಮಾಡಿ, ಸ್ವತ್ತನ್ನು ಪ್ರಾಧಿಕಾರದ ವಶಕ್ಕೆ ಪಡೆಯುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.



ಆರಗ ಜ್ಞಾನೇಂದ್ರ

ಗೃಹ ಸಚಿವರಿಗೆ ನೋಟಿಸ್ ಜಾರಿ ಮಾಡಿದ್ದ ಬಿಡಿಎ, ಸ್ವತ್ತನ್ನು ಪ್ರಾಧಿಕಾರದ ವಶಕ್ಕೆ ಮರಳಿಸುವಂತೆ ಸೂಚಿಸಿತ್ತು. ಬಳಿಕ ಮನವಿಯೊಂದನ್ನು ಸಲ್ಲಿಸಿದ್ದ ಸಚಿವರು, 'ಬಿಡಿಎ ತಪ್ಪಿನಿಂದಲೇ ಸಮಸ್ಯೆ ಉದ್ಭವಿಸಿದೆ. ನನಗೆ ಬೇರೊಂದು ನಿವೇಶನ ಮಂಜೂರು ಮಾಡಿ' ಎಂದು ಕೋರಿದ್ದರು.

5ನೇ ಪುಟ ನೋಡಿ

49 ಕೆ.ಜಿ ಚಿನ್ನ, 66 ಕೆ.ಜಿ ಬೆಳ್ಳಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲೆಯಿಲ್ಲದೆ ಸಾಗಾಟ ಮಾಡಲಾಗುತ್ತಿದ್ದ 49 ಕೆ.ಜಿ. ಚಿನ್ನಾಭರಣ ಹಾಗೂ 66 ಕೆ.ಜಿ ಬೆಳ್ಳಿ ಸಾಮಗ್ರಿಯನ್ನು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಬೆಂಗಳೂರು ಮತ್ತು ಹಿರಿಯೂರು ಬಳಿ ಜಪ್ತಿ ಮಾಡಲಾಗಿದೆ.

ಬೆಂಗಳೂರಿನ ವಿವೇಕನಗರ ಪೊಲೀಸ್ ಠಾಣೆ ವ್ಯಾಪ್ತಿಯ ಒಆರ್‌ಸಿ ರಸ್ತೆಯ ಅಂಬೇಡ್ಕರ್ ಪ್ರತಿಮೆ ಬಳಿ ಸ್ಥಾಪಿಸಿದ್ದ ಚೆಕ್‌ಪೋಸ್ಟ್‌ನಲ್ಲಿ ವಾಹನ ತಪಾಸಣೆ ವೇಳೆ ದಾಖಲೆಯಿಲ್ಲದೆ ಸಾಗಣೆ ಮಾಡುತ್ತಿದ್ದ ಚಿನ್ನದ ಆಭರಣ, ಬೆಳ್ಳಿ ಸಾಮಗ್ರಿಯನ್ನು ಪೊಲೀಸರು ಬುಧವಾರ ಜಪ್ತಿ ಮಾಡಿದ್ದಾರೆ.

₹ 4.79 ಕೋಟಿ ಮೌಲ್ಯದ 8 ಕೆ.ಜಿ ಚಿನ್ನಾಭರಣ, ₹ 38 ಲಕ್ಷದ 46 ಕೆ.ಜಿ ಬೆಳ್ಳಿ ಸಾಮಗ್ರಿ, ₹ 80 ಸಾವಿರ ಮೌಲ್ಯದ ಎರಡು ಗ್ರಾಂ ವಜ್ರದ ಹರಳನ್ನು ಸಾಗಣೆ ಮಾಡಲಾಗುತ್ತಿತ್ತು. 'ಸಿಕ್ವೆಲ್ ಪ್ರೀಷಿಯಸ್ ಲಾಜಿಸ್ಟಿಕ್ ಕಂಪನಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಚಿಕ್ಕಮಗಳೂರು ವರದಿ: ತರೀಕೆರೆ ಸಮೀಪದ ಎಂ.ಸಿ. ಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ಬಿವಿಸಿ ಲಾಜಿಸ್ಟಿಕ್ ವಾಹನದಲ್ಲಿ ಸಾಗಿಸುತ್ತಿದ್ದ 40.5 ಕೆ.ಜಿ ಚಿನ್ನ (ಮೌಲ್ಯ ₹ 23.08 ಕೋಟಿ), 20 ಕೆ.ಜಿ ಬೆಳ್ಳಿ (ಮೌಲ್ಯ ₹ 17.22 ಲಕ್ಷ) ಒಡವೆಗಳನ್ನು ಮಂಗಳವಾರ ರಾತ್ರಿ ವಶಪಡಿಸಿಕೊಳ್ಳಲಾಗಿದೆ.

ಹಿರಿಯೂರು ವರದಿ: ಹಿರಿಯೂರು ಬಳಿ ದಾಖಲೆ ಇಲ್ಲದೆ ಸಾಗಿಸಲಾಗುತ್ತಿದ್ದ ₹ 62 ಲಕ್ಷ ಮೌಲ್ಯದ 1 ಕೆ.ಜಿ. ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ. ಈ ಸಂಬಂಧ ಪಟ್ಟಣದ ವಾಸವಿ ಜ್ಯುವೆಲರ್ಸ್ ಮಾಲೀಕ ಎಚ್.ಆರ್. ಶ್ರೀನಾಥ್ ಅವರ ಪುತ್ರ ಶ್ರೇಯಸ್ ಅವರನ್ನು ವಿಚಾರಣೆ ನಡೆಸಲಾಗಿದೆ.

ತಲಾ ₹ 5 ಸಾವಿರ ಬೆಲೆಯ 5,000 ರೇಷ್ಮೆ ಸೀರೆ, 2,000 ಡಿ.ಡಿ ವಶ

ಕೆಜಿಎಫ್ ಬಾಬು ಮನೆ ಮೇಲೆ ಐ.ಟಿ ದಾಳಿ

ಪ್ರಜಾವಾಣಿ ವಾರ್ತೆ



ಕೆಜಿಎಫ್ ಬಾಬು

ಬೆಂಗಳೂರು: ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಶಾಝಿಯಾ ತರನ್ನುಮ್ ಅವರ ಪತಿ, ಉದ್ಯಮಿ ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಮನೆ ಮೇಲೆ ಬುಧವಾರ ದಾಳಿ ನಡೆಸಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ತಲಾ ₹ 5 ಸಾವಿರ ಬೆಲೆಯ ಐದು ಸಾವಿರ ರೇಷ್ಮೆ ಸೀರೆಗಳು ಹಾಗೂ ತಲಾ ₹ 1,105 ಮೌಲ್ಯದ ಎರಡು ಸಾವಿರ ಡಿಮಾಂಡ್ ಡ್ರಾಫ್ಟ್‌ಗಳನ್ನು (ಡಿ.ಡಿ) ವಶಪಡಿಸಿಕೊಂಡಿದ್ದಾರೆ.

ಹೈಗ್ರೌಂಡ್ಸ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಮಿಲ್ಲರ್ಸ್ ರಸ್ತೆಯಲ್ಲಿರುವ ಬಾಬು ಅವರ ಮನೆ 'ರುಕ್ಸಾನಾ ಪ್ಯಾಲೇಸ್' ಮೇಲೆ ಬುಧವಾರ ಬೆಳಿಗ್ಗೆಯೇ ದಾಳಿಮಾಡಿದ ಐ.ಟಿ ಅಧಿಕಾರಿಗಳ ತಂಡ, ರಾತ್ರಿಯವರೆಗೂ ಶೋಧ ನಡೆಸಿತು. ಮನೆಯ ಕೋಣೆಯೊಂದರಲ್ಲಿ ರೇಷ್ಮೆ ಸೀರೆಗಳು ಹಾಗೂ ಬಾಬು ನೇತೃತ್ವದ ಉಮ್ರಾಹ್ ಫೌಂಡೇಷನ್‌ನಿಂದ ಚಿಕ್ಕಪೇಟೆ ಕ್ಷೇತ್ರದ ಮತದಾರರ ಹೆಸರಿಗೆ ಪಡೆದಿದ್ದ ತಲಾ ₹ 1,105 ಮೊತ್ತದ 2,000 ಡಿ.ಡಿಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಸೀರೆ ಮತ್ತು ಡಿ.ಡಿಗಳ ಜತೆಗೆ ಬಾಬು ಭಾವಚಿತ್ರವುಳ್ಳ ಚುನಾವಣಾ ಪ್ರಚಾರ ಸಾಮಗ್ರಿಗಳನ್ನೂ ದಾಸ್ತಾನು ಮಾಡಲಾಗಿತ್ತು. ಮತದಾರರಿಗೆ ಆಮಿಷ ಒಡ್ಡಲು ಸೀರೆ ಹಾಗೂ ಡಿ.ಡಿಗಳನ್ನು ದಾಸ್ತಾನು ಮಾಡಿರುವ ಆರೋಪದ ಮೇಲೆ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಸೀರೆಗಳ ದಾಸ್ತಾನಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಧಿಕಾರಿಗಳೂ ಬಾಬು ಮನೆಗೆ ಭೇಟಿ ನೀಡಿ ತನಿಖೆ ಆರಂಭಿಸಿದ್ದಾರೆ. ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಜಿಎಸ್‌ಟಿ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ಚಿಕ್ಕಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಬಾಬು ಸಿದ್ಧತೆ ನಡೆಸಿದ್ದರು.

ಕಾಂಗ್ರೆಸ್ ಟಿಕೆಟ್ ದೊರೆಯದು ಎಂಬುದು ಖಾತರಿಯಾಗುತ್ತಿದ್ದಂತೆ ಜೆಡಿಎಸ್ ವರಿಷ್ಠರನ್ನು ಸಂಪರ್ಕಿಸಿ, ಆ ಪಕ್ಷದ ಟಿಕೆಟ್‌ಗಾಗಿ ಪ್ರಯತ್ನಿಸಿದ್ದರು. ಅಲ್ಲಿಯೂ ಸಕಾರಾತ್ಮಕ ಪ್ರತಿಕ್ರಿಯೆ ಬಾರದಿದ್ದರಿಂದ ಪತ್ನಿಯನ್ನು ಪಕ್ಷೇತರ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದರು.

ಪತಿ ₹ 1,600 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಹೊಂದಿದ್ದಾರೆ ಎಂದು ಶಾಝಿಯಾ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಘೋಷಿಸಿದ್ದರು.

ಚಿಕ್ಕಪೇಟೆ ಕ್ಷೇತ್ರದ ಮತದಾರರಿಗೆ ಹಲವು ದಿನಗಳಿಂದ ಉಡುಗೊರೆಗಳನ್ನು ನೀಡುತ್ತಿದ್ದರು. ಮತದಾರರಿಗೆ ಅಂಚೆ ಮೂಲಕ ಡಿ.ಡಿಗಳನ್ನು ಕಳುಹಿಸುತ್ತಿರುವ ಮಾಹಿತಿ ಆದಾಯ ತೆರಿಗೆ ಅಧಿಕಾರಿಗಳಿಗೆ ಲಭಿಸಿತ್ತು. ಅದನ್ನು ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಮುಖಂಡನ ಮನೆ ತಪಾಸಣೆ

ಚಾಮರಾಜನಗರ: ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರಿಕಲ್ಲು ಉದ್ಯಮಿ ವೃಷಭೇಂದ್ರಪ್ಪ ಅವರ ಬೈಕ್ ಶೋ ರೂಂ ಹಾಗೂ ಮನೆಯಲ್ಲಿ ಆದಾಯ ತೆರಿಗೆ ಇಲಾಖೆ ಹಾಗೂ ಚುನಾವಣಾ ಅಧಿಕಾರಿಗಳು ಬುಧವಾರ ಬೆಳಿಗ್ಗೆ ತಪಾಸಣೆ ನಡೆಸಿದರು.

ಮಂಗಳೂರು ಮತ್ತು ಮೈಸೂರು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಮತ್ತು ಚುನಾವಣಾ ಅಧಿಕಾರಿಗಳ ತಂಡ ಚಾಮರಾಜನಗರದ ಜೋಡಿ ರಸ್ತೆಯಲ್ಲಿರುವ ಶೋ ರೂಂ ಹಾಗೂ ಭ್ರಮರಾಂಬ ಬಡಾವಣೆಯಲ್ಲಿರುವ ನಿವಾಸದಲ್ಲಿ ತಪಾಸಣೆ ನಡೆಸಿದರು.

ವಿಮಾನ ನಿಲ್ದಾಣ ಮಾದರಿಯಲ್ಲಿ ಅಭಿವೃದ್ಧಿ • ಏರ್ ಕನ್‌ಕೋರ್ಸ್ ನಿರ್ಮಾಣ • ದಿನಕ್ಕೆ ಒಂದು ಲಕ್ಷ ಪ್ರಯಾಣಿಕರು ಪ್ರಯಾಣಿಸುವ ಸಾಮರ್ಥ್ಯ

ಯಶವಂತಪುರ ರೈಲು ನಿಲ್ದಾಣ ಪುನರ್ ಅಭಿವೃದ್ಧಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣ ಇನ್ನು ಎರಡು ವರ್ಷಗಳಲ್ಲಿ ವಿಮಾನ ನಿಲ್ದಾಣದ ಮಾದರಿಯಲ್ಲಿ ಹೈಟೆಕ್ ಆಗಲಿದ್ದು, ಪುನರ್ ಅಭಿವೃದ್ಧಿ ಕಾಮಗಾರಿ ಆರಂಭವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2022ರ ಜೂನ್ 20ರಂದು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲು ನಿಲ್ದಾಣಗಳ ಅಭಿವೃದ್ಧಿಗೆ ಅಡಿಗಲ್ಲು ಹಾಕಿದ್ದರು. ಈಗ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಗೂ ಚಾಲನೆ ನೀಡಲಾಗಿದೆ. ಗಿರ್ಧಾರಿ ಲಾಲ್ ಕನ್‌ಸ್ಟ್ರಕ್ಷನ್ ಕಂಪನಿಯು ಯಶವಂತಪುರ ನಿಲ್ದಾಣದ ಕಾಮಗಾರಿಯ ಗುತ್ತಿಗೆ ಪಡೆದುಕೊಂಡಿದೆ. ಯೋಜನೆಯನ್ನು ವಿನ್ಯಾಸಗೊಳಿಸಿ, ಕಾಮಗಾರಿ ನಿರ್ವಹಿಸಿ ಹಸ್ತಾಂತರಿಸುವ ಜವಾಬ್ದಾರಿಯನ್ನು ಈ ಕಂಪನಿಗೆ ವಹಿಸಲಾಗಿದೆ.

₹380 ಕೋಟಿ ಮೊತ್ತದ ಯೋಜನೆ ಇದಾಗಿದೆ. ಪ್ರಯಾಣಿಕರ ದಟ್ಟಣೆ ತಗ್ಗಿಸಲು ಪ್ರವೇಶ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ದ್ವಾರಗಳನ್ನು ನಿರ್ಮಿಸಲಾಗುತ್ತದೆ. 216 ಮೀಟರ್ ಅಗಲದ ಏರ್ ಕನ್‌ಕೋರ್ಸ್ ಇರಲಿದೆ. ಪ್ಲಾಟ್‌ಫಾರಂ ಮೇಲ್ಛಾವಣಿಯ ಮೇಲಿನ ಪ್ಲಾಜಾದಲ್ಲಿ ಚಿಲ್ಲರೆ ಅಂಗಡಿಗಳು, ಹೋಟೆಲ್‌ಗಳು, ಮನರಂಜನಾ ಕೇಂದ್ರಗಳು ಬರಲಿವೆ. ಪ್ರಯಾಣಿಕರ ಮಾರ್ಗದರ್ಶನಕ್ಕೆ ಎಲ್‌ಇಡಿ ಫಲಕಗಳನ್ನು ಅಳವಡಿಸುವುದು ಯೋಜನೆಯಲ್ಲಿ ಒಳಗೊಂಡಿದೆ.



ಯಶವಂತಪುರ ರೈಲು ನಿಲ್ದಾಣದ ವಿನ್ಯಾಸ

₹380 ಕೋಟಿ ರೈಲು ನಿಲ್ದಾಣ ಅಭಿವೃದ್ಧಿಗೆ ಯೋಜನಾ ಮೊತ್ತ

ಜೂನ್ 2025 ಕಾಮಗಾರಿ ಪೂರ್ಣಗೊಳಿಸಲು ನಿಗದಿ ಮಾಡಿರುವ ಅವಧಿ

ಮೆಟ್ರೊ ನಿಲ್ದಾಣಕ್ಕೆ ನೇರ ಸಂಪರ್ಕ

ಯಶವಂತಪುರ ರೈಲು ನಿಲ್ದಾಣಕ್ಕೂ ಮೆಟ್ರೊ ರೈಲು ನಿಲ್ದಾಣಕ್ಕೂ ಹೊಸ ಯೋಜನೆಯಲ್ಲಿ ನೇರ ಸಂಪರ್ಕ ಕಲ್ಪಿಸಲಾಗಿದೆ. ಮೆಟ್ರೊ ರೈಲಿನಲ್ಲಿ ಇಳಿಯುವ ಪ್ರಯಾಣಿಕರು ಎತ್ತರಿಸಿದ ಪಾದಚಾರಿ ಮಾರ್ಗದ ಮೂಲಕವೇ ರೈಲು ನಿಲ್ದಾಣದ ಪ್ಲಾಟ್‌ಫಾರಂ -6ಕ್ಕೆ ಪ್ರವೇಶ ಪಡೆಯಬಹುದಾಗಿದೆ.

ಅದಲ್ಲದೇ ನಿಲ್ದಾಣಕ್ಕೆ ಬಸ್, ಟ್ಯಾಕ್ಸಿ, ಆಟೊರಿಕ್ಷಾ ಸೇರಿ ಎಲ್ಲಾ ಸಾರ್ವಜನಿಕ ಸಾರಿಗೆ ಸಂಪರ್ಕಿಸುವ ಉದ್ದೇಶವನ್ನೂ ಯೋಜನೆ ಹೊಂದಿದೆ.

ಮೆಟ್ರೊ ನಿಲ್ದಾಣದ ಕಡೆಗೆ (ಪಶ್ಚಿಮ ಭಾಗ) ನಾಲ್ಕು ಅಂತಸ್ತಿನ ಕಟ್ಟಡ ನಿರ್ಮಾಣವಾಗಲಿದೆ. ಯಶವಂತಪುರ ಮಾರುಕಟ್ಟೆ ಭಾಗದಲ್ಲಿ(ಪ್ಲಾಟ್ ಫಾರಂ–1 ಕಡೆಗೆ) ಬಹುಮಹಡಿ ವಾಹನ ನಿಲುಗಡೆ ತಾಣ ನಿರ್ಮಾಣವಾಗಲಿದೆ. ಪಾಟ್‌ಫಾರಂ -1 ಮೇಲ್ಭಾಗದಲ್ಲಿ ವಿಮಾನ ನಿಲ್ದಾಣದಲ್ಲಿ ಇರುವಂತೆ ಏರ್ ಕನ್‌ಕೋರ್ಸ್ ನಿರ್ಮಾಣವಾಗಲಿದೆ. ಈ ಕಟ್ಟಡಕ್ಕೆ ಸೂರ್ಯನ ಬೆಳಕು ನೇರವಾಗಿ ತಲುಪುವಂತೆ ವಿನ್ಯಾಸ ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಹೇಳುತ್ತಾರೆ.

ಪ್ರಯಾಣಿಕರನ್ನು ವಾಹನಗಳಿಂದ ಇಳಿಸುವ ಮತ್ತು ಕರೆದೊಯ್ಯುವ ತಾಣಗಳನ್ನು ಪ್ರತ್ಯೇಕವಾಗಿ ನಿರ್ಮಿಸಲಾಗುವುದು. ಪುನರ್ ಅಭಿವೃದ್ಧಿಗೊಂಡ ಬಳಿಕ ಈ ನಿಲ್ದಾಣವು ಪ್ರಯಾಣಿಕರು ಮತ್ತು ಸಾರ್ವಜನಿಕರನ್ನು ಆಕರ್ಷಿಸುವ ಕೇಂದ್ರವಾಗಲಿದೆ. ರೈಲು ಪ್ರಯಾಣಿಕರಿಗೆ ವಿಶೇಷ ಅನುಭವವನ್ನು ಈ ನಿಲ್ದಾಣ ನೀಡಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ಎಸ್ಕಲೇಟರ್‌ಗಳು, ಲಿಫ್ಟ್‌ಗಳು ಮತ್ತು ಹೈಟೆಕ್ ಶೌಚಾಲಯಗಳು ನಿರ್ಮಾಣವಾಗಲಿವೆ. ಇಂಧನ ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಗೂ ಆದ್ಯತೆ ನೀಡಲಾಗಿದ್ದು, ಪರಿಸರಸ್ನೇಹಿ ಕಟ್ಟಡವಾಗಿ ವಿನ್ಯಾಸಗೊಳಿಸಲಾಗಿದೆ. ಘನತ್ಯಾಜ್ಯವನ್ನು ಪರಿಣಾಮಕಾರಿಯಾಗಿ ವಿಲೇವಾರಿ ಮಾಡಲು ಪ್ರತ್ಯೇಕ ಘಟಕ, ಮಳೆ ನೀರು ಸಂಗ್ರಹಕ್ಕೂ ಯೋಜನೆ ಸಿದ್ಧಪಡಿಸಲಾಗಿದೆ ಎಂದು ವಿವರಿಸಿದ್ದಾರೆ.

ಪುನರ್ ಅಭಿವೃದ್ಧಿಗೊಂಡ ಬಳಿಕ ಈ ನಿಲ್ದಾಣವು ದಿನಕ್ಕೆ 1 ಲಕ್ಷ ಪ್ರಯಾಣಿಕರು ಸಂಚರಿಸುವ ಸಾಮರ್ಥ್ಯ ಹೊಂದಲಿದೆ. ಸದ್ಯ ಈ ನಿಲ್ದಾಣಕ್ಕೆ ನಿತ್ಯ 60 ಸಾವಿರ ಪ್ರಯಾಣಿಕರು ಬಂದು ಹೋಗುತ್ತಿದ್ದಾರೆ. ಈ ಯೋಜನೆ ಪೂರ್ಣಗೊಳ್ಳಲು ಇನ್ನೂ ಎರಡು ವರ್ಷ ಬೇಕಾಗಲಿದೆ. 2025ರ ಜೂನ್‌ನಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂಬ ಗಡುವನ್ನು ಗುತ್ತಿಗೆದಾರರಿಗೆ ರೈಲ್ವೆ ಇಲಾಖೆ ನೀಡಿದೆ.

ಯಶವಂತಪುರ ರೈಲು ನಿಲ್ದಾಣದ ಹೊರ ಭಾಗವನ್ನು ಇತ್ತೀಚೆಗೆ (ಕೋವಿಡ್ ಪೂರ್ವದಲ್ಲಿ) ಮರು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಈ ವಿನ್ಯಾಸದಲ್ಲಿ ಅಗತ್ಯ ಇರುವುದನ್ನು ಹೊಸ ಕಾಮಗಾರಿಯಲ್ಲಿ ಉಳಿಸಿಕೊಳ್ಳಲಾಗುತ್ತದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಹೇಳುತ್ತಾರೆ.

ಮುಖ್ಯಾಂಶಗಳು

- ಸದ್ಯ ನಿತ್ಯ ಸಂಚರಿಸುವ ಪ್ರಯಾಣಿಕರ ಸಂಖ್ಯೆ 60 ಸಾವಿರ
- ಹೋಟೆಲ್, ಮನರಂಜನಾ ಕೇಂದ್ರ ನಿರ್ಮಾಣ
- ಎಲ್‌ಇಡಿ ಫಲಕ ಅಳವಡಿಕೆ

ಸುಧಾ, ಮಯೂರ ಓದಿರಿ

ಗಾಂಜಾ ಮಾರಾಟ: ನಾಲ್ವರ ಬಂಧನ

ಬೆಂಗಳೂರು: ಗಾಂಜಾ ಮಾರಾಟ ದಂಧೆಯಲ್ಲಿ ತೊಡಗಿದ್ದ ನಾಲ್ವರು ಆರೋಪಿಗಳನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

'ಗಾಂಜಾ ಮಾರುತ್ತಿದ್ದ ತಿಂಡ್ಲು ಗ್ರಾಮದ ಮಂಜುನಾಥ್‌ನನ್ನು ಮೊದಲು ಬಂಧಿಸಲಾಗಿತ್ತು. ಆತನೀಡಿದ ಸುಳಿವು ಆಧರಿಸಿ ಹೊಸಕೋಟೆಯ ಮುನಿಯಪ್ಪ, ಒಡಿಶಾದ ನಿರಂಜನ್ ಪ್ರಧಾನ್, ಪಕೀರ್ ದಳಪತಿ ಎಂಬುವವರನ್ನು ಬಂಧಿಸಲಾಗಿದೆ. ಒಟ್ಟು ಐದೂವರೆ ಕೆ.ಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಫ.ಗು.ಹಳಕಟ್ಟಿ ಸ್ಮರಣಾರ್ಥ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ವಚನ ಪಿತಾಮಹ ಫ.ಗು. ಹಳಕಟ್ಟಿ ಅವರ ಸ್ಮರಣಾರ್ಥ ಡಾ.ಪಿ. ಜಿ.ಹಳಕಟ್ಟಿ ಪ್ರತಿಷ್ಠಾನವು ₹ 1 ಲಕ್ಷ ನಗದು ಒಳಗೊಂಡ ರಾಷ್ಟ್ರೀಯ ಪ್ರಶಸ್ತಿ ಸ್ಥಾಪಿಸಿದೆ.

ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟಿ ಪ್ರಶಸ್ತಿ ಸ್ಥಾಪಿಸಿರುವುದಾಗಿ ಶೀಲಾ ಹರ ಹಳಕಟ್ಟಿ ಘೋಷಿಸಿದರು. ಸಾಹಿತ್ಯ, ಶೈಕ್ಷಣಿಕ ಮತ್ತು ಸಮಾಜ ಸೇವೆ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಲಾಗುತ್ತದೆ. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ, ಪವಿತ್ರಾ ಹಳಕಟ್ಟಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಇದ್ದರು.

ಮನು ಬಳಿಗಾರ್ ಹಾಗೂ ಪ್ರತಿಷ್ಠಾನದ ಸದಸ್ಯರು ಸಾಧಕರನ್ನು ಆಯ್ಕೆ ಮಾಡಲಿದ್ದಾರೆ. ಜುಲೈ 2ರಂದು ಸಾಧಕರ ಹೆಸರನ್ನು ಘೋಷಿಸಲಾಗುತ್ತದೆ ಎಂದು ಶೀಲಾ ಹೇಳಿದ್ದಾರೆ.

'ಸಂಶೋಧನೆಗಳು ಜಗತ್ತಿನ ವಿನಾಶಕ್ಕೆ ಎಡೆ ಮಾಡಿಕೊಡದಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನವನ ಕಲ್ಯಾಣಕ್ಕಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಮುಂದುವರಿಸಬೇಕು' ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ರಾಜ್ಯ ಒಕ್ಕಲಿಗರ ಸಂಘದ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯವು ಬುಧವಾರ ಆಯೋಜಿಸಿದ್ದ 'ಅಡ್ವಾನ್ಸ್ ಇನ್ ಎಲೆಕ್ಟ್ರಾನಿಕ್ಸ್,ಕಮ್ಯೂನಿಕೇಷನ್, ಕಂಪ್ಯೂಟಿಂಗ್ ಆ್ಯಂಡ್ ಇಂಟ್ಲಿಜೆಂಟ್ ಇನ್‌ಫಾರ್ಮೇಷನ್ ಸಿಸ್ಟಮ್' ಎನ್ನುವ ವಿಷಯದ ಕುರಿತು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಸಂಶೋಧನೆಯ ಫಲಿತಾಂಶಗಳು ಜಗತ್ತಿನ ವಿನಾಶಕ್ಕೆ ಎಡೆ ಮಾಡಿಕೊಡಬಾರದು ಎನ್ನುವ ಎಚ್ಚರ ವಹಿಸಬೇಕು' ಎಂದು ಸಲಹೆ ನೀಡಿದರು.

'ನಿರಂತರ ಸಂಶೋಧನೆ ಯಾವುದೇ ರಾಷ್ಟ್ರದ ಅಭಿವೃದ್ಧಿಗೆ ಜೀವಾಳವಾಗಿದ್ದು, ಸಂಶೋಧಕರ ತ್ಯಾಗ ಎಂದಿಗೂ ವ್ಯರ್ಥವಾಗುವುದಿಲ್ಲ. ಆ ರೀತಿಯಾಗಲು ಯಾವ ಕಾರಣಕ್ಕೂ ಅವಕಾಶ ಕೊಡಬಾರದು' ಎಂದರು.

ಒಕ್ಕಲಿಗರ ಸಂಘದ ಉಪಾಧ್ಯಕ್ಷ ಕೆ.ವಿ. ರೇಣುಕಾ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಟಿ. ಕೋನಪ್ಪರೆಡ್ಡಿ, ನಿರ್ದೇಶಕ ಜೆ. ರಾಜು, ಬಿಐಟಿ ಅಧ್ಯಕ್ಷ ಎಂ. ಪುಟ್ಟಸ್ವಾಮಿ, ಬೆಂಗಳೂರು ಐಐಎಸ್‌ಸಿಯ ಪ್ರೊ. ತಲಬಟ್ಟುಲ ಶ್ರೀನಿವಾಸ್, ವಿಜ್ಞಾನಿ ಎಲ್. ಎಂ. ಪಟ್ನಾಯಕ್, ಇಸ್ರೊದ ರೂಪಾ ವೆಂಕಟೇಶ್, ಬಿಐಟಿ ಕಾಲೇಜಿನ ಪ್ರಾಂಶುಪಾಲ ಅಶ್ವತ್ಥ್ ಎಂ.ಯು., ಇದ್ದರು.



ನಗರದಲ್ಲಿ ಬುಧವಾರ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯವು ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಲಾಯಿತು. ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಹಾಂಕಾಂಗ್‌ನ ಬೆಂಜಮಿನ್ ವಾನ್ ಸಾಂಗ್ ವಾಹ್, ಸಿಂಗಾಪುರದ ಪ್ರೊ.ಜಿನ್ ಸಾಂಗ್ ಡಾಂಗ್ ಇದ್ದರು.

ವಾರ್ಡ್ ಸಮಿತಿ ಬಲಪಡಿಸಲು ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ವಾರ್ಡ್ ಸಮಿತಿಗಳ ರಚನೆ ಮತ್ತು ಬಲಪಡಿಸುವ ಬೇಡಿಕೆಯನ್ನು ಎಲ್ಲ ರಾಜಕೀಯ ಪಕ್ಷಗಳ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳಬೇಕು ಎಂದು ಕರ್ನಾಟಕ ವಾರ್ಡ್ ಸಮಿತಿ ಬಳಗ ಆಗ್ರಹಿಸಿದೆ.

'ವಾರ್ಡ್ ಸಮಿತಿಗಳ ಮೂಲಕ ಪಾಲಿಕೆ ಸದಸ್ಯರ ಮುಂದಾಳತ್ವದಲ್ಲಿ ನಾಗರಿಕರ ಕುಂದು ಕೊರತೆಗಳನ್ನು ಪರಿಹರಿಸಲು ಸಾಧ್ಯ' ಎಂದು ಜನಾಗ್ರಹ ಸಂಸ್ಥೆಯ ಮುಖ್ಯಸ್ಥ ಸಂತೋಷ್ ನರಗುಂದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬರುವ ಪಕ್ಷ ಬಿಬಿಎಂಪಿ ಚುನಾವಣೆ ನಡೆಸಬೇಕು. ಫಲಿತಾಂಶ ಬಂದ ತಿಂಗಳೊಳಗೆ ಕೌನ್ಸಿಲ್ ರಚಿಸಬೇಕು. ವಾರ್ಡ್ ಸಮಿತಿಯ ಸದಸ್ಯರನ್ನು ಪಾರದರ್ಶಕವಾಗಿ ಆಯ್ಕೆ ಮಾಡಬೇಕು. ವಾರ್ಷಿಕ ಬಜೆಟ್‌ನಲ್ಲಿ ಅನುದಾನ ಒದಗಿಸಬೇಕು' ಎಂದರು. ವಾರ್ಡ್ ಸಮಿತಿಯ ಸದಸ್ಯರಾದ ಗೌರಿ ಗಜ್‌ಬರ್, ವಿದ್ಯಾ ಗೊಗ್ಗಿ, ಕಿಶೋರ್ ಅತ್ತಾವರ, ಶಿವಸಾಗರ್ ಪಿ.ಎ., ದಾನೇಶ್ ಆವತಿ, ಕೆ.ಎಸ್.ವಾಲಿ ಇದ್ದರು.

ಬಿಸಿಗಾಳಿ: ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳ, ಬಿಸಿಗಾಳಿಯ ಕಾರಣ ಆರೋಗ್ಯ ರಕ್ಷಣೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವಂತೆ ಆರೋಗ್ಯ ಇಲಾಖೆ ತಿಳಿಸಿದೆ.

ಬಿಸಿಲಿನಿಂದ ಸುಸ್ತಾದಾಗ ಅತಿ ತಣ್ಣನೆ ನೀರಿನಿಂದ ಮೈ ಒರಸಿಕೊಳ್ಳಬಾರದು. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಹಾನಿಕಾರಕ ತಂಪು ಪಾನೀಯಗಳನ್ನು ಸೇವಿಸಬಾರದು. ಮಕ್ಕಳು ಹಾಗೂ ಸಾಕು ಪ್ರಾಣಿಗಳನ್ನು ಬಿಸಿಲಿನಲ್ಲಿ ನಿಲ್ಲಿಸಿದ ವಾಹನಗಳ ಬಳಿ ಬಿಡಬಾರದು. ಬಿಸಿಲಿನ ಸಮಯದಲ್ಲಿ ಅಡುಗೆ ಮಾಡುವುದನ್ನು ತಪ್ಪಿಸಬೇಕು. ಬಿಸಿಯಾದ ಮಸಾಲೆಯುಕ್ತ ಆಹಾರವನ್ನು ಸೇವಿಸಬಾರದು. ಬೂಟುಗಳು ಅಥವಾ ಚಪ್ಪಲಿ ಗಳನ್ನು ಬಳಸದೆ ಹೊರಗಡೆ ಹೋಗಬಾರದು ಎಂದು ಇಲಾಖೆ ಸಲಹೆ ನೀಡಿದೆ.

ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕ, ಟೋಪಿ ಅಥವಾ ಛತ್ರಿಯನ್ನು ಬಳಸಬೇಕು. ಹಗುರವಾದ, ತಿಳಿ ಬಣ್ಣದ ಬಟ್ಟೆಗಳನ್ನು ಧರಿಸಬೇಕು. ಮನೆಯಲ್ಲಿ ತಯಾರಿಸಿದ ಲಸ್ಸಿ, ಶರಬತ್, ನಿಂಬೆ ರಸದ ನೀರು ಹಾಗೂ ಮಜ್ಜಿಗೆಯನ್ನು ಸೇವಿಸಬೇಕು. ಬಾಯಾರಿಕೆ ಇಲ್ಲದಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಕುಡಿಯಬೇಕು. ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಬಿಸಿಲಿನಲ್ಲಿ ಕೆಲಸ ಮಾಡುವುದನ್ನು ತಪ್ಪಿಸಬೇಕು ಎಂದು ಹೇಳಿದೆ.

ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಬೇಸಿಗೆಯಲ್ಲಿ ಬರಬಹುದಾದ ರೋಗಗಳ ನಿರ್ವಹಣೆಗೆ ಓಆರ್‌ಎಸ್ ಪ್ಯಾಕೇಟ್, ಐ.ವಿ. ಫ್ಲೂಯಿಡ್ ಮತ್ತು ಜೀವ ರಕ್ಷಕ ಔಷಧಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲಾಗುವುದು. ಅನಾರೋಗ್ಯ ಸಮಸ್ಯೆ ಕಾಣಿಸಿಕೊಂಡಲ್ಲಿ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು. ಸ್ಥಳೀಯ ನೀರಿನ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷೆ ಮಾಡಬೇಕು ಎಂದು ತಿಳಿಸಿದೆ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ 'ಬೇಸಿಗೆ ಶಾಲೆ'

ಬೆಂಗಳೂರು: ಬೆಂಗಳೂರು ವಿಜ್ಞಾನ ವೇದಿಕೆ ವತಿಯಿಂದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬೇಸಿಗೆ ಶಾಲೆಯನ್ನು ಆಯೋಜಿಸಲಾಗಿದೆ.

ನ್ಯಾಷನಲ್ ಎಜ್ಯುಕೇಷನ್ ಸೊಸೈಟಿ ಆಫ್ ಕರ್ನಾಟಕ ಸಹಯೋಗದಲ್ಲಿ ಹಮ್ಮಿಕೊಂಡಿರುವ ಈ ಬೇಸಿಗೆ ಶಾಲೆಯಲ್ಲಿ ಪ್ರಮುಖವಾಗಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಉಪನ್ಯಾಸ ಹಾಗೂ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಏ.24ರಿಂದ ಮೇ 6ರವರೆಗೆ ಬೇಸಿಗೆ ಶಾಲೆ ನಡೆಯಲಿದೆ.

ಕಳೆದ 52 ವರ್ಷಗಳಿಂದ ವಿಜ್ಞಾನ ವಿಷಯದ ಬಗ್ಗೆ ವಿದ್ಯಾರ್ಥಿಗಳಲ್ಲಿ ಕುತೂಹಲ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಈ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಐಐಎಸ್ಸಿ ಸೇರಿದಂತೆ ಪ್ರತಿಷ್ಠಿತ ಸಂಸ್ಥೆಗಳ ತಜ್ಞರು ಈ ಬೇಸಿಗೆ ಶಾಲೆಯಲ್ಲಿ ಉಪನ್ಯಾಸ ನೀಡಲಿದ್ದಾರೆ. ಜತೆಗೆ ರಾಮನ್ ಸಂಶೋಧನಾ ಸಂಸ್ಥೆ ಸೇರಿದಂತೆ ವಿವಿಧ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಬಸವನಗುಡಿಯ ನ್ಯಾಷನಲ್ ಕಾಲೇಜಿನ ಡಾ.ಎಚ್.ಎನ್. ಮಲ್ಟಿಮಿಡಿಯಾ ಹಾಲ್‌ನಲ್ಲಿ ಪ್ರತಿ ದಿನ ಬೆಳಿಗ್ಗೆ 9.30ರಿಂದ 12.30ರವರೆಗೆ ಶಾಲೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗಾಗಿ ಅಜಿತ್ (8762895802), ಎಂ.ಎನ್. ಸುಂದರ್ (9590923452), ಲಕ್ಷ್ಮಿ (9900703902) ಸಂಪರ್ಕಿಸಬಹುದು. Email: bsfsummerschool@gmail.com, ncbaudi@gmail.com

ಹೈಕೋರ್ಟ್ ವೆಬ್ ಪೇಜ್: ತೀರ್ಪುಗಳು ಕನ್ನಡದಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್‌ನ ಅಧಿಕೃತ ವೆಬ್ ಪೇಜ್‌ನಲ್ಲಿ ಸುಪ್ರೀಂ ಕೋರ್ಟ್‌ನ 28 ತೀರ್ಪುಗಳೂ ಸೇರಿದಂತೆ ಒಟ್ಟು 197 ತೀರ್ಪುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಪ್ರಕಟಿಸಲಾಗಿದ್ದು, ಅತಿ ಹೆಚ್ಚು ತೀರ್ಪುಗಳನ್ನು ಕನ್ನಡದಲ್ಲಿ ಪ್ರಕಟಿಸಿರುವ ಹೆಗ್ಗಳಿಕೆಗೆ ರಾಜ್ಯ ಹೈಕೋರ್ಟ್ ಪಾತ್ರವಾಗಿದೆ.

ಶ್ರೀಸಾಮಾನ್ಯರು ಮತ್ತು ದಾವೆದಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಮತ್ತು ರಾಜ್ಯ ಹೈಕೋರ್ಟ್‌ನ ಒಟ್ಟು 197 ಪ್ರಮುಖ ತೀರ್ಪುಗಳನ್ನು ಕನ್ನಡೀಕರಿಸಿ, ಪ್ರಕಟಿಸಿರುವ ವೆಬ್‌ಪೇಜ್ ಅನ್ನು ಕರ್ನಾಟಕ ಹೈಕೋರ್ಟ್ ಮಂಗಳವಾರ ಆರಂಭಿಸಿದೆ.

ಕೇರಳ, ಗುಜರಾತ್ ಮತ್ತು ಮಹಾರಾಷ್ಟ್ರ ಹೈಕೋರ್ಟ್‌ಗಳು ಈಗಾಗಲೇ ಸ್ಥಳೀಯ ಭಾಷೆಯಲ್ಲಿ ತೀರ್ಪುಗಳನ್ನು ಪ್ರಕಟಿಸಲು ಆರಂಭಿಸಿದ್ದು, ಮೊದಲ ಹಂತದಲ್ಲಿ ಕರ್ನಾಟಕ ಹೈಕೋರ್ಟ್ ವೆಬ್ ಪೇಜ್‌ನಲ್ಲಿ 169 (https://karnatakajudiciary.kar.nic.in/hck_judgments.php) ಮತ್ತು ಸುಪ್ರೀಂ ಕೋರ್ಟ್‌ನ 28 (https://karnatakajudiciary.kar.nic.in/hck_judgments.php) ಕನ್ನಡೀಕರಿಸಿದ ತೀರ್ಪುಗಳನ್ನು ಪ್ರಕಟಿಸಲಾಗಿದೆ.

ವಾಸವಿ ಜಯಂತಿ ಮಹೋತ್ಸವ 30ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಸವಿ ಜಯಂತಿ ಮಹೋತ್ಸವವನ್ನು ಏಪ್ರಿಲ್ 30ರಂದು ಗಿರಿನಗರದ ವಾಸವಿ ಕ್ಷೇತ್ರದ ದೇವಸ್ಥಾನದಲ್ಲಿ ನಡೆಯಲಿದೆ.

ಏಪ್ರಿಲ್ 30ರಂದು ಬೆಳಿಗ್ಗೆ 6.30ಕ್ಕೆ ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ, ದೇವನಾಂದಿ, ನವಗ್ರಹ ಪೂಜೆ, ಕಲಶ ಸ್ಥಾಪನೆ, ಬೆಳಿಗ್ಗೆ 10ಕ್ಕೆ ಕನ್ನಿಕಾ ಪೂಜೆ, 10.30ಕ್ಕೆ ಪೂರ್ಣಾಹುತಿ, 11ಕ್ಕೆ ಮಹಾಮಂಗಳಾರತಿ ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗವಿದೆ.

ವಾಸವಿ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸಲಾದ ಎಲ್ಲ ದೇವರುಗಳಿಗೆ ಅಭಿಷೇಕ, ಪೂಜೆ ಮತ್ತು ಹೋಮಗಳನ್ನು ಮಾಡಲಾಗುತ್ತದೆ. ಸಂಜೆ 7ಗಂಟೆಗೆ ಗಿರಿನಗರದ ರಾಜಬೀದಿಗಳಲ್ಲಿ ವಾಸವಿದೇವಿಯ ಮೆರವಣಿಗೆ ನಡೆಯಲಿದೆ.

ಮೊಟ್ಟಮೊದಲ ಬಾರಿಗೆ ಸಿಲಿಕಾನ್‌ನಲ್ಲಿ ಮಾಡಿದ ಸುಂದರ ಚತುರ್ಭುಜ ಕನ್ನಿಕಾ ಪರಮೇಶ್ವರಿ ಅಮ್ಮನ ದರ್ಶನವನ್ನು ಏಪ್ರಿಲ್ 30ರಿಂದ ಮೇ 11ರವರೆಗೆ ಪಡೆದುಕೊಳ್ಳಬಹುದು. ಪ್ರತಿದಿನ ಬೆಳಿಗ್ಗೆ 7.30ರಿಂದ ಮಧ್ಯಾಹ್ನ 12 ಮತ್ತು ಸಂಜೆ 4.30ರಿಂದ ರಾತ್ರಿ 8.30ರವರೆಗೆ ದರ್ಶನವನ್ನು ಪಡೆದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 08035846129-9845350873ಗೆ ಸಂಪರ್ಕಿಸಿ.

ಅವಧಿಪೂರ್ವ ಜನನ: ಯಶಸ್ವಿ ಚಿಕಿತ್ಸೆ

ಬೆಂಗಳೂರು: ಅವಧಿಪೂರ್ವ ಜನಿಸಿ, ಉಸಿರಾಟ ಸೇರಿ ವಿವಿಧ ಸಂಕೀರ್ಣ ಸಮಸ್ಯೆ ಎದುರಿಸುತ್ತಿದ್ದ 500 ಗ್ರಾಂ ತೂಕದ ಮಗುವಿಗೆ ಸಕ್ರಾ ವರ್ಲ್ಡ್ ಆಸ್ಪತ್ರೆ ವೈದ್ಯರು ಚಿಕಿತ್ಸೆ ಒದಗಿಸಿದ್ದು, ಮಗು ಪ್ರಾಣಾಪಾಯದಿಂದ ಪಾರಾಗಿದೆ.

ಕಳೆದ ಆಗಸ್ಟ್‌ನಲ್ಲಿ ಜನಿಸಿದ ಗಂಡು ಮಗು ರಕ್ತಹೀನತೆ ಸಮಸ್ಯೆಯನ್ನೂ ಎದುರಿಸುತ್ತಿತ್ತು. ಡಾ. ರವಿಕಿರಣ್ ಎಸ್. ನೇತೃತ್ವದಲ್ಲಿ ಚಿಕಿತ್ಸೆ ಒದಗಿಸಲಾಯಿತು. ಶಿಶುವನ್ನು 3 ತಿಂಗಳು ಎನ್‌ಐಸಿಯುನಲ್ಲಿ ಇರಿಸಿ, ಆರೈಕೆ ಮಾಡಲಾಯಿತು. ತೂಕ 1.8 ಕೆ.ಜಿ.ಗೆ ಹೆಚ್ಚಳವಾದ ಬಳಿಕ ಮನೆಗೆ ಕಳುಹಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ. ‘28 ವಾರಗಳಲ್ಲಿ ಜನಿಸಿದ ಮಗು ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿರಲಿಲ್ಲ. ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಚಿಕಿತ್ಸೆ ಒದಗಿಸಲಾಯಿತು. ಉತ್ತಮವಾಗಿ ಮಗು ಸ್ಪಂದಿಸಿದ್ದರಿಂದ ತೂಕ ಹೆಚ್ಚಳವಾಗಿ, ಆರೋಗ್ಯದಲ್ಲಿ ಚೇತರಿಕೆ ಕಂಡಿತು’ ಎಂದು ಡಾ. ರವಿಕಿರಣ್ ಎಸ್. ಹೇಳಿದ್ದಾರೆ.

ದೆಹಲಿ: ಕೋವಿಡ್‌ಗೆ 6 ಮಂದಿ ಸಾವು

ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬುಧವಾರ ಕೋವಿಡ್‌ನಿಂದಾಗಿ 6 ಮಂದಿ ಸಾವಿಗೀಡಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

‘ಬುಧವಾರವೊಂದೇ ದಿನ ದೆಹಲಿಯಲ್ಲಿ ಒಟ್ಟು 1,757 ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಪಾಸಿಟಿವಿಟಿ ದರ ಶೇ 28.63 ಇದೆ ಎಂದೂ ಇಲಾಖೆಯ ಅಂಕಿಅಂಶಗಳು ತಿಳಿಸಿವೆ.




ಬೆಂಗಳೂರಿನ ಫ್ರೇಜರ್ ಟೌನ್‌ನಲ್ಲಿ ಗುರುವಾರ ಪವಿತ್ರ ರಂಜಾನ್ ತಿಂಗಳು ನಿಮಿತ್ತ ಮಸೀದಿ ರಸ್ತೆಯ ಬೀದಿಗಳಲ್ಲಿ ನಡೆಯುತ್ತಿರುವ ಆಹಾರ ಮೇಳದಲ್ಲಿ ಮಾಂಸ ಹಾಗೂ ಮೀನು ಖಾದ್ಯ ಸವಿಯಲು ಸೇರಿದ್ದ ಗ್ರಾಹಕರು (ಎಡ ಚಿತ್ರ) ಮೇಳದಲ್ಲಿ ವ್ಯಾಪಾರಿಗಳು ಮಾರಾಟಕ್ಕೆ ಇಟ್ಟಿದ್ದ ವಿವಿಧ ಬಗೆಯ ಖಾದ್ಯ ತಿಂಡಿಗಳ ರುಚಿಯನ್ನು ಜನರು ಸವಿದರು

ಫ್ರೇಜರ್ ಟೌನ್‌ನಲ್ಲಿ ಕಸದ ರಾಶಿ, ವೃದ್ಧರಿಗೆ ಉಸಿರಾಟದ ಸಮಸ್ಯೆ

‘ಆಹಾರ ಮೇಳ’: ಸ್ಥಳೀಯರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಜಾನ್ ಮಾಸದ ಅಂಗವಾಗಿ ಫ್ರೇಜರ್ ಟೌನ್‌ನಲ್ಲಿ ನಡೆಯುತ್ತಿರುವ ‘ಆಹಾರ ಮೇಳ’ವು ಸ್ಥಳೀಯ ನಿವಾಸಿಗಳಿಗೆ ಸಂಕಷ್ಟ ತಂದೊಡ್ಡಿದೆ.

ಗ್ರಾಹಕರು ಮಾಂಸದ ಖಾದ್ಯವನ್ನು ಸೇವಿಸಿ ಪ್ಲೇಟ್‌ಗಳೂ ಸೇರಿ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆದು ಹೋಗುತ್ತಿದ್ದಾರೆ. ರಸ್ತೆಗಳಲ್ಲಿ ಕಸದ ರಾಶಿಯೇ ಬಿದ್ದಿದೆ. ಈ ಆಹಾರ ಮೇಳದ ವಿರುದ್ಧ ಫ್ರೇಜರ್ ಟೌನ್ ಕ್ಷೇಮಾಭಿವೃದ್ಧಿ ಒಕ್ಕೂಟದ ನೇತೃತ್ವದಲ್ಲಿ 650 ನಿವಾಸಿಗಳು ಆನ್‌ಲೈನ್ ಅಭಿಯಾನ ಆರಂಭಿಸಿದ್ದಾರೆ.

> **ಆಹಾರ ಮೇಳ ಆರಂಭವಾದ ಮೇಲೆ ನಿವಾಸಿಗಳ ಬದುಕು ಅಸಹನೀಯವಾಗಿದೆ. ಮೇಳದ ವಿರುದ್ಧ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತೇವೆ.**
> **ಸೌದ್ ದಸ್ತಗೀರ್,** ಸದಸ್ಯ, ಫ್ರೇಜರ್ ಟೌನ್ ಕ್ಷೇಮಾಭಿವೃದ್ಧಿ ಒಕ್ಕೂಟ

‘ಇಲ್ಲಿ ಆಹಾರ ಮೇಳ ನಡೆಸುವುದು ಬೇಡ’ ಎಂದು ಪಟ್ಟು ಹಿಡಿದಿದ್ದಾರೆ.


‘ಕಳೆದ 27 ದಿನಗಳಿಂದ ಸಂಜೆ ಹಾಗೂ ರಾತ್ರಿ ಸಮಯದಲ್ಲಿ ನಗರದ ಬೇರೆ ಬೇರೆ ಪ್ರದೇಶದಿಂದ ಗ್ರಾಹಕರು, ಮೀನು, ಚಿಕ್ಕನ್ ಖಾದ್ಯ ಸವಿಯಲು ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಇದರಿಂದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ’ ಎಂದು ನೋವು ತೋಡಿಕೊಂಡಿದ್ದಾರೆ.

‘ಪ್ರತಿವರ್ಷವೂ ಆಹಾರ ಮೇಳ ನಡೆಯುತ್ತಿದ್ದರೂ ಈ ವರ್ಷ ಸಮಸ್ಯೆ ತೀವ್ರವಾಗಿದೆ’ ಎನ್ನುತ್ತಾರೆ ನಿವಾಸಿಗಳು.

‘ಆಹಾರ ಮೇಳ ನಡೆಸಲು ಯಾರು ಅನುಮತಿ ನೀಡಿದ್ದಾರೆ ಎಂಬುದೇ ತಿಳಿಯುತ್ತಿಲ್ಲ. ಇಡೀ ಬಡಾವಣೆಯೇ ತ್ಯಾಜ್ಯದಿಂದ ಕೂಡಿದೆ. ಬೆಳಿಗ್ಗೆಯೂ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿಲ್ಲ. ರಂಜಾನ್ ಮಾಸವಾದರೂ ಸ್ಥಳೀಯರಿಗೆ ನೆಮ್ಮದಿ, ಸಂತೋಷ ಇಲ್ಲವಾಗಿದೆ’ ಎಂದು ಒಕ್ಕೂಟದ ಸೌದ್ ದಸ್ತಗೀರ್ ಹೇಳಿದರು.

‘ಅನಧಿಕೃತವಾಗಿ 230 ಮಳಿಗೆ ನಿರ್ಮಿಸಲಾಗಿದೆ. ಪ್ರತಿನಿತ್ಯ ಮಾಂಸದ ಖಾದ್ಯ ತಯಾರಿಕೆಗೆ 3 ಟನ್‌ನಷ್ಟು ಸೌದೆ ಉರಿಸಲಾಗುತ್ತಿದೆ. ಮಕ್ಕಳು ಹಾಗೂ ವೃದ್ಧರಿಗೆ ಉಸಿರಾಟದ ಸಮಸ್ಯೆ ಎದುರಾಗಿದೆ. ಮಸೀದಿ ರಸ್ತೆಯ ಅರ್ಧ ಜಾಗವನ್ನು ಆಹಾರ ಮೇಳಕ್ಕೆ ಮಳಿಗೆಗಳು ಅತಿಕ್ರಮಣ ಮಾಡಿಕೊಂಡಿವೆ. ಸರ್ಕಾರಕ್ಕೂ ಆದಾಯ ಬರುತ್ತಿಲ್ಲ. ಈ ಬಡಾವಣೆಯಲ್ಲಿ ಅನಾರೋಗ್ಯಕರ ವಾತಾವರಣವಿದೆ. ಬೆಸ್ಕಾಂ ಅನುಮತಿ ಪಡೆಯದೇ ಕಳ್ಳ ಮಾರ್ಗದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಳ್ಳಲಾಗಿದೆ’ ಎಂದು ಸ್ಥಳೀಯರು ದೂರಿದರು.

‘ಇಲ್ಲಿನ ಸಮಸ್ಯೆಗಳ ಬಗ್ಗೆ ಸ್ಥಳೀಯ ಪೊಲೀಸ್ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿತ್ತು. ಬಿಬಿಎಂಪಿ ನೋಡಲ್ ಅಧಿಕಾರಿ ತಿಪ್ಪೇಸ್ವಾಮಿ ಅವರು ಸ್ಥಳಕ್ಕೆ ಬಂದು ಸಮಸ್ಯೆ ಆಲಿಸಿಲ್ಲ. ಸಮಸ್ಯೆ ಹೇಳಿಕೊಳ್ಳಲು ಪಾಲಿಕೆ ಸದಸ್ಯರೂ ಇಲ್ಲ’ ಎಂದು ಸೌದ್ ದಸ್ತಗೀರ್ ಅವರು ತಿಳಿಸಿದ್ದಾರೆ.



ಭಾರತದಲ್ಲಿ ಆ್ಯಪಲ್ ಮೊದಲ ಸ್ಟೋರ್ ಮುಂಬೈನಲ್ಲಿ ತೆರೆಯಲಿದೆ!!

ಸಿವಿಲ್ ವ್ಯಾಜ್ಯಗಳ ಮೇಲ್ಮನವಿ: ಕಾಯ್ದೆ ತಿದ್ದುಪಡಿಗೆ ಸಲಹೆ

ಬೆಂಗಳೂರು: ‘ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ರೆಗ್ಯುಲರ್ ಫಸ್ಟ್ ಅಪೀಲುಗಳ (ನಿಯಮಿತ ಪ್ರಥಮ ಮೇಲ್ಮನವಿ) ವಿಚಾರಣೆ ನಡೆಸುವ ಅಧಿಕಾರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಕಾಯ್ದೆ ಮತ್ತು ಕರ್ನಾಟಕ ಸಿವಿಲ್ ಕೋರ್ಟ್ ಕಾಯ್ದೆಯ ನಿಯಮಗಳಿಗೆ ತಿದ್ದುಪಡಿ ತರುವ ಅಗತ್ಯವಿದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತಿರುಕವ್ವ ಎಂಬುವರು 16 ವರ್ಷಗಳ ಹಿಂದೆ ಸಲ್ಲಿಸಿದ್ದ ಮೇಲ್ಮನವಿಯನ್ನು ಧಾರವಾಡ ಪೀಠದಲ್ಲಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸಲಹೆ ನೀಡಿದ್ದು, ‘ಇದರಿಂದ ನ್ಯಾಯಾಲಯಗಳ ಮೇಲಿನ ವ್ಯಾಜ್ಯಗಳ ಹೊರೆ ತಗ್ಗಿಸಬಹುದಾಗಿದೆ’ ಎಂದು ಹೇಳಿದೆ.

‘ನ್ಯಾಯ ಅರಸಿ ಕೋರ್ಟ್‌ಗೆ ಬರುವ ವ್ಯಕ್ತಿಗಳು ದಶಕಗಳ ಕಾಲ ಕಾಯಬೇಕಿಲ್ಲ. ಸಮಾಜದ ದೃಷ್ಟಿಯಿಂದಲೂ ಇದು ಒಳ್ಳೆಯದಲ್ಲ. ಜೀವನ ಅತ್ಯಂತ ಅಲ್ಪಾವಧಿಯದಾಗಿದ್ದು, ದಶಕಗಳ ಕಾಲ ಕೋರ್ಟ್‌ನಲ್ಲಿಯೇ ವ್ಯಾಜ್ಯಗಳಿಗಾಗಿ ಕಳೆಯುವುದು ಸರಿಯಲ್ಲ’ ಎಂದು ನ್ಯಾಯಪೀಠ ಹೇಳಿದೆ.

‘ಸದ್ಯ ₹ 10 ಲಕ್ಷದಿಂದ ₹ 15 ಲಕ್ಷ ಮೊತ್ತದವರೆಗಿನ ವ್ಯಾಜ್ಯಗಳನ್ನು ಕರ್ನಾಟಕ ಹೈಕೋರ್ಟ್ ಕಾಯ್ದೆ–1961ರ ಕಲಂ 5ರಡಿ ರೆಗ್ಯುಲರ್ ಫಸ್ಟ್ ಅಪೀಲುಗಳೆಂದು ಏಕಸದಸ್ಯ ನ್ಯಾಯಪೀಠದ ಮುಂದೆ ಸಲ್ಲಿಸಬೇಕಾಗುತ್ತದೆ. ₹ 15 ಲಕ್ಷಕ್ಕೆ ಮೇಲ್ಪಟ್ಟ ವ್ಯಾಜ್ಯಗಳನ್ನು ವಿಭಾಗೀಯ ನ್ಯಾಯಪೀಠದ ಮುಂದೆ ಸಲ್ಲಿಸಬೇಕಾಗುತ್ತದೆ. ಪ್ರಸ್ತುತ ರಾಜ್ಯ ಹೈಕೋರ್ಟ್‌ನಲ್ಲಿ 19,275 ರೆಗ್ಯುಲರ್ ಫಸ್ಟ್ ಅಪೀಲುಗಳು ವಿಚಾರಣೆಗೆ ಬಾಕಿ ಇವೆ. ಹೀಗಾಗಿ, ಪ್ರಕರಣಗಳ ವಿಲೇವಾರಿ ನಿಟ್ಟಿನಲ್ಲಿ ಕೆಲವು ಸುಧಾರಣೆಗಳ ಅಗತ್ಯವಿದೆ’ ಎಂದು ನ್ಯಾಯಪೀಠ ಪ್ರತಿಪಾದಿಸಿದೆ.

‘ನಿಯಮಕ್ಕೆ ತಿದ್ದುಪಡಿ ತಂದರೆ ಹೈಕೋರ್ಟ್ ಬದಲು ಪ್ರಥಮ ಮೇಲ್ಮನವಿಗಳನ್ನು ಕ್ಷಕಿದಾರರು ವಾಸಿಸುವ ಸ್ಥಳದಲ್ಲೇ ನಿರ್ಧರಿಸುವಂತಾಗಲಿದೆ. ಈಗಂತೂ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯ ನ್ಯಾಯಾಲಯಗಳು ಇರುವುದರಿಂದ ಮೇಲ್ಮನವಿಗಳನ್ನು ಸುಲಭವಾಗಿ ಬಗೆಹರಿಸಬಹುದಾಗಿದೆ’ ಎಂದು ಪೀಠ ಹೇಳಿದೆ.

22–23ರಂದು ನಡೆಯುವ ಅತಿ ದೊಡ್ಡ ಶೈಕ್ಷಣಿಕ ಮೇಳ

‘ಎಡ್ಯುವರ್ಸ್’: ವಿದ್ಯಾರ್ಥಿಗಳಿಗೆ ತಜ್ಞರ ಮಾರ್ಗದರ್ಶನ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ವತಿಯಿಂದ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ ‘ಎಡ್ಯುವರ್ಸ್: ಜ್ಞಾನ ದೇಗುಲ–2023’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ತಜ್ಞರಿಂದ ವಿವಿಧ ಕೋರ್ಸ್‌ಗಳ ಬಗ್ಗೆ ಮಾರ್ಗದರ್ಶನ ದೊರೆಯಲಿದೆ.

ಇದೇ ತಿಂಗಳು 22 ಮತ್ತು 23ರಂದು ಅರಮನೆ ಮೈದಾನದ ತ್ರಿಪುರ ವಾಸಿನಿ ಆವರಣದಲ್ಲಿ ಈ ಶೈಕ್ಷಣಿಕ ಮೇಳ ಆಯೋಜಿಸಲಾಗಿದೆ.

ಎರಡು ದಿನದ ಮೇಳ ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯವರೆಗೆ ನಡೆಯಲಿದೆ. ಚಲನಚಿತ್ರ ನಟ ರಮೇಶ್ ಅರವಿಂದ್ ಅವರು 13ನೇ ಆವೃತ್ತಿಯ ಮೇಳವನ್ನು ಶನಿವಾರ ಉದ್ಘಾಟಿಸಲಿದ್ದಾರೆ. ಕಾಮೆಡ್‌-ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಎಸ್. ಕುಮಾರ್ ಕಾಮೆಡ್–ಕೆ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಪಿಯು ಕಾಲೇಜು ಪ್ರಾಂಶುಪಾಲ ಎ.ಎಸ್. ರವಿ ಅವರು ಸಿಇಟಿ ಬಗ್ಗೆ ಭಾನುವಾರ ಮಾರ್ಗದರ್ಶನ ಮಾಡಲಿದ್ದಾರೆ. ಎಂಜಿನಿಯರಿಂಗ್ ಕೋರ್ಸ್‌ಗಳ ಬಗ್ಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ವಿದ್ಯಾಶಂಕರ್ ಅವರು ಉಪನ್ಯಾಸ ನೀಡಲಿದ್ದಾರೆ. ವೈದ್ಯಕೀಯ ಸೇರಿ ವಿವಿಧ ವಿಷಯಗಳ ಬಗ್ಗೆ ಸಂವಾದಗಳು ಇರಲಿದ್ದು, ಮಣಿಪಾಲ್ ಆಸ್ಪತ್ರೆಯ ಡಾ. ರಾಜನ್ ಶೆಟ್ಟಿ ಹಾಗೂ ಅಕ್ಷರಾ ದಾಮ್ಲೆ ಅವರು ಪಾಲ್ಗೊಳ್ಳಲಿದ್ದಾರೆ. ಪಾಲಕರಿಗೂ ವಿಷಯದ ತಜ್ಞರು ಮಾರ್ಗದರ್ಶನ, ಸಲಹೆಗಳನ್ನು ನೀಡಲಿದ್ದು, ಕೃಷ್ಣ ಗೌಡ, ರಾಘವೇಂದ್ರ ಆಚಾರ್ಯ ಅವರು ಭಾಗವಹಿಸುತ್ತಾರೆ.

ಚಲನಚಿತ್ರ ನಿರ್ಮಾಣ, ರಂಗಭೂಮಿ ಕಲೆಗಳು ಮತ್ತು ಭಾರತೀಯ ನಾಗರಿಕ ಸೇವೆಗಳ ಕುರಿತು ಚರ್ಚೆಗಳು ನಡೆಯಲಿದ್ದು, ಸಿನಿಮಾ ನಿರ್ದೇಶಕ ಟಿ.ಎಸ್. ನಾಗಾಭರಣ, ರಂಗಭೂಮಿ ಕಲಾವಿದೆ ಸುಷ್ಮಾ ಹಾಗೂ ಇನ್‌ಸೈಟ್ಸ್ ಐಎಎಸ್ ಅಕಾಡೆಮಿಯ ವಿನಯ್ ಅವರು ಪಾಲ್ಗೊಳ್ಳಲಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಹಾಗೂ ಅಂತಃಶಕ್ತಿಯ ಬಲವರ್ಧನೆಗಾಗಿ ಉತ್ತಮ ಮಾರ್ಗದರ್ಶನ ಒದಗಿಸುವುದು ಈ ಶೈಕ್ಷಣಿಕ ಮೇಳದ ಉದ್ದೇಶವಾಗಿದೆ. 50ಕ್ಕೂ ಹೆಚ್ಚು ಅಗ್ರಗಣ್ಯ ಶೈಕ್ಷಣಿಕ ಸಂಸ್ಥೆಗಳು ಈ ಮೇಳದಲ್ಲಿ ಭಾಗಿಯಾಗಲಿದ್ದು, ಪಿಯುಸಿ ಬಳಿಕ ಲಭ್ಯವಿರುವ ಕೋರ್ಸ್‌ಗಳು, ಅವಕಾಶಗಳ ಬಗ್ಗೆ ಮಾಹಿತಿ ಸಿಗಲಿದೆ.

ಶಿಕ್ಷಣ ಸಾಲ ಯೋಜನೆಯ ಜತೆಗೆ ವಿಶೇಷ ಕೋರ್ಸ್‌ಗಳ ಮಾಹಿತಿಯೂ ದೊರೆಯಲಿದೆ. ಪ್ರತಿಷ್ಠಿತ ವಿಶ್ವವಿದ್ಯಾಲಯಗಳು, ಕಾಲೇಜುಗಳ ಮಳಿಗೆಗಳು ಮೇಳದಲ್ಲಿ ಇರಲಿವೆ. ಕಾಲೇಜಿನಲ್ಲಿನ ಕೋರ್ಸ್‌ಗಳ ಮಾಹಿತಿ, ಶುಲ್ಕ ವಿವರ, ಕೋರ್ಸ್ ಅಧ್ಯಯನದಿಂದ ಭವಿಷ್ಯದಲ್ಲಿ ಸಿಗುವ ಉದ್ಯೋಗಾವಕಾಶಗಳ ಕುರಿತು ಮಾಹಿತಿ ದೊರೆಯುತ್ತದೆ.

ದಿನವಿಡೀ ಅಚ್ಚರಿ ಉಡುಗೊರೆ ಪಡೆಯುವ ಅವಕಾಶ ಇರಲಿದೆ. ಎರಡನೇ ದಿನದಂದು ಬಂಪರ್ ಲಕ್ಕಿ ಡ್ರಾ ಘೋಷಿಸಲಾಗುತ್ತದೆ. ನೀಟ್ ಮತ್ತು ಸಿಇಟಿ ಅಣಕು ಪರೀಕ್ಷೆಯನ್ನೂ ನಡೆಸಲಾಗುತ್ತದೆ. ಟಾಪರ್ಸ್‌ಗಳಿಗೆ ಒಟ್ಟು ₹ 2 ಲಕ್ಷ ನಗದು ಗೆಲ್ಲುವ ಅವಕಾಶ ಇರಲಿದೆ. ಅಣಕು ‘ನೀಟ್’ ಮತ್ತು ‘ಸಿಇಟಿ’ನಲ್ಲಿ ಮೊದಲ ಸ್ಥಾನ ಪಡೆದವರಿಗೆ ತಲಾ ₹25 ಸಾವಿರ, ಎರಡನೇ ಸ್ಥಾನ ಪಡೆದವರಿಗೆ ತಲಾ ₹15 ಸಾವಿರ, ಮೂರನೇ ಸ್ಥಾನ ಪಡೆದವರಿಗೆ ತಲಾ ₹10 ಸಾವಿರ ಬಹುಮಾನ ನೀಡಲಾಗುವುದು. ಜತೆಗೆ, ಅಧಿಕ ಅಂಕಗಳಿಸಿದ 25 ವಿದ್ಯಾರ್ಥಿಗಳಿಗೆ ತಲಾ ₹2 ಸಾವಿರ ನೀಡಲಾಗುವುದು.

ಆನ್‌ಲೈನ್‌ನಲ್ಲಿ ನೋಂದಣಿ ಪ್ರಾರಂಭವಾಗಿದ್ದು, ಆಸಕ್ತರು www.eduverse.in ಮೂಲಕ ಅಥವಾ ಮೊ. ಸಂಖ್ಯೆ 9845816919, 9743307037ಕ್ಕೆ ಕರೆ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು.

ಡಿಕೆಶಿ ವಿರುದ್ಧದ ಸಿಬಿಐ ತನಿಖೆಗೆ ತಡೆ: ಆದೇಶ ವಿಸ್ತರಣೆ

ಬೆಂಗಳೂರು: ಆದಾಯ ಮೀರಿ ಆಸ್ತಿಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ನೀಡಿರುವ ಮಧ್ಯಂತರ ತಡೆಯನ್ನು ಹೈಕೋರ್ಟ್ ಮೇ ಅಂತ್ಯದವರೆಗೆ ವಿಸ್ತರಿಸಿದೆ.

ಈ ಸಂಬಂಧ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ’ಗಳ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, ‘ಅರ್ಜಿದಾರರು ಸಿಬಿಐ ತನಿಖೆಗೆ ಶಿಫಾರಸು ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸುವಂತೆ ಕೋರಿ ಇದೇ ಹೈಕೋರ್ಟ್‌ನಲ್ಲಿ ಮತ್ತೊಂದು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಕುರಿತ ವಿಚಾರಣೆಯನ್ನು ಈಗಾಗಲೇ ಪೂರ್ಣಗೊಳಿಸಿರುವ ತಮ್ಮದೇ ನ್ಯಾಯಪೀಠ ತೀರ್ಪು ಕಾಯ್ದಿರಿಸಿದೆ. ಒಂದೊಮ್ಮೆ ತೀರ್ಪಿನಲ್ಲಿ ಸರ್ಕಾರದ ಆದೇಶವನ್ನು ರದ್ದುಪಡಿಸಿದ್ದೇ ಆದರೆ, ಈ ಅರ್ಜಿಯು ವಿಚಾರಣಾ ಮಾನ್ಯತೆ ಕಳೆದುಕೊಳ್ಳಲಿದೆ. ಆದ್ದರಿಂದ, ಆ ಅರ್ಜಿಯ ಕುರಿತಾದ ತೀರ್ಪು ಪ್ರಕಟವಾಗುವವತನಕ ಈ ಅರ್ಜಿ ವಿಚಾರಣೆ ಮುಂದೂಡಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಮೇ ಅಂತ್ಯದವರೆಗೆ ಮುಂದೂಡಿತು. ಅಲ್ಲಿಯವರೆಗೆ ಸಿಬಿಐ ತನಿಖೆಗೆ ನೀಡಿರುವ ಮಧ್ಯಂತರ ತಡೆ ಆದೇಶವನ್ನು ವಿಸ್ತರಿಸಿತು.

ಪ್ರಕರಣವೇನು?: ‘ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. ‘ಸಿಬಿಐ ದಾಖಲಿಸಿರುವ ಈ ಎಫ್‌ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು’ ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಸಿಬಿಐ ತನಿಖೆಗೆ ಹೈಕೋರ್ಟ್ 2023ರ ಫೆಬ್ರುವರಿ 10ರಂದು ಮಧ್ಯಂತರ ತಡೆ ನೀಡಿತ್ತು.

ನೀಟ್‌ಗೆ 20.87 ಲಕ್ಷ ಅರ್ಜಿ ಸಲ್ಲಿಕೆ

ನವದೆಹಲಿ (ಪಿಟಿಐ): ಮೇ 7ರಂದು ನಡೆಯಲಿರುವ ಈ ವರ್ಷದ ವೈದ್ಯಕೀಯ ಪ್ರವೇಶ ಪರೀಕ್ಷೆ ಎನ್‌ಇಇಟಿ-ಯುಜಿಗೆ 20.87 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಇದರಲ್ಲಿ 11.8 ಲಕ್ಷ ಮಹಿಳಾ ಅಭ್ಯರ್ಥಿಗಳು ಇದ್ದಾರೆ. ಇದೊಂದು ಹೊಸ ದಾಖಲೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

‘ಆರೋಹ’ ಪದವಿ ಪ್ರದಾನ ದಿನ: ಅತಿಥಿಗಳು: ಡಾ. ಎಂ. ಶ್ರೀನಿವಾಸ್, ಡಾ. ಟಿ ರಾಜೇಶ್ವರಿ, ಡಾ. ಸೌರವ್ ಮುಖರ್ಜಿ, ಡಾ. ನವಕಾಂತ್ ಭಟ್, ಅಧ್ಯಕ್ಷತೆ: ಡಾ. ರಮೇಶ್ ಕೃಷ್ಣ ಕೆ., ಎಚ್.ಎಲ್. ವಿಶ್ವನಾಥ್, ಮತ್ತು ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕೆ.ಆರ್. ರಸ್ತೆ, ಬೆಳಿಗ್ಗೆ 8

ಎಚ್.ಟಿ. ಪೋತೆ ಅವರ ‘ಎಲ್ಲರ ಅಂಬೇಡ್ಕರ್’ ಪುಸ್ತಕ ಬಿಡುಗಡೆ: ಮೂಡ್ನಾಕೂಡು ಚಿನ್ನಸ್ವಾಮಿ, ‘ಸಾಮಾಜಿಕ ನ್ಯಾಯ ಎದುರಿಸುತ್ತಿರುವ ಸಮಸ್ಯೆ ಸವಾಲುಗಳು’ ಕುರಿತು ಉಪನ್ಯಾಸ: ಎಚ್.ಎನ್. ನಾಗಮೋಹನದಾಸ್, ಅತಿಥಿಗಳು: ಇಂದಿರಾ ಕೃಷ್ಣಪ್ಪ, ಜಯದೇವಿ ಗಾಯಕವಾಡ್, ಡಿ. ಚಂದ್ರಶೇಖರಯ್ಯ, ಸತೀಶ್ ಕುಮಾರ್ ಎಸ್. ಹೊಸಮನಿ, ಕೆ.ಎಂ. ರಾಮಚಂದ್ರಪ್ಪ, ಉಪಸ್ಥಿತಿ: ಎಚ್. ಟಿ. ಪೋತೆ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಆಯೋಜನೆ: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10



ಮೂಡ್ನಾಕೂಡು ಚಿನ್ನಸ್ವಾಮಿ

ರಾಷ್ಟ್ರೀಯ ಮಟ್ಟದ ಯೋಜನಾ ಸ್ಪರ್ಧೆ: ಅತಿಥಿಗಳು: ವೈ. ನರಹರಿ, ಉಲ್ಲಾಸ್ ನಂಬಿಯಾರ್, ಎಂ.ಆರ್. ಜಯರಾಮ್, ಅಧ್ಯಕ್ಷತೆ: ಎಂ.ಆರ್. ರಾಮಯ್ಯ, ಎಂ.ಆರ್. ಸೀತಾರಾಮ್, ಬಿ.ಎಸ್. ರಾಮಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 10

ಭರತನಾಟ್ಯದ ಕುರಿತು ಉಪನ್ಯಾಸ: ಎನ್. ಪಿ. ಶೇಷಪ್ಪ ಪೂಜಾರಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ಶಂಕರ ಭಗವತ್ಪಾದರ ಸ್ತೋತ್ರ ಸಾಹಿತ್ಯ’ದ ಕುರಿತು ಉಪನ್ಯಾಸ: ಸುದರ್ಶನ ಶರ್ಮ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30


‘ಕಾಳಜಿನಗರ’ ಕಿರು ಚಿತ್ರ ಪ್ರದರ್ಶನ: ಸ್ಥಳ ಮತ್ತು ಆಯೋಜನೆ: ಮ್ಯೂಸಿಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಾಫಿ, ಕಸ್ತೂರಬಾ ರಸ್ತೆ, ಸಂಜೆ 7

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅಪ್ರಮೇಯ ಶೇಷಾದ್ರಿ ಮತ್ತು ತಂಡ, ನಾಮಸಂಕೀರ್ತನೆ: ಶಿವಶ್ರೀ ಸ್ಕಂದಪ್ರಸಾದ್ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವಾಣಿಶ್ರೀ ರಾಮಕೃಷ್ಣ, ಯುಗಳ ಗಾಯನ: ಕೃಷ್ಣವೇಣಿ ಮತ್ತು ಸರಸ್ವತಿ, ಪಿಟೀಲು: ಅದಿತಿ ಕೃಷ್ಣಪ್ರಕಾಶ್, ಮೃದಂಗ: ಬಿ.ವಿ.ಎಸ್. ಪ್ರಸಾದ್, ಘಟ: ಬಿ.ಆರ್. ರವಿಕುಮಾರ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವಿಘ್ನೇಶ್ ಈಶ್ವರ್, ಪಿಟೀಲು: ಎಚ್. ಎಂ. ಸ್ಮಿತಾ, ಮೃದಂಗ: ಅರುಣ್ ಪ್ರಕಾಶ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30



‘ಪ್ರಮೀಳಾರ್ಜುನೀಯಂ’ ನಾಟಕದ ದೃಶ್ಯ

‘ಪ್ರಮೀಳಾರ್ಜುನೀಯಂ’ ನಾಟಕ ಪ್ರದರ್ಶನ: ನಿರ್ದೇಶನ: ನವೀನ್ ಸಾಣೆಹಳ್ಳಿ, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

‘ಶಾಗೆ ಕರೆ, ಸಾಬೀತಾದರೆ ರಾಜೀನಾಮೆ’

ಕೋಲ್ಕತ್ತ (ಪಿಟಿಐ): ತೃಣಮೂಲ ಕಾಂಗ್ರೆಸ್ ರಾಷ್ಟ್ರೀಯ ಪಕ್ಷದ ಸ್ಥಾನವನ್ನು ಚುನಾವಣಾ ಆಯೋಗ ಹಿಂಪಡೆದ ನಂತರ ಈ ನಿರ್ಧಾರ ರದ್ದುಪಡಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ದೂರವಾಣಿ ಕರೆ ಮಾಡಿರುವೆ ಎನ್ನುವುದನ್ನು ಸಾಬೀತುಪಡಿಸಿದರೆ ರಾಜೀನಾಮೆ ನೀಡುವೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬುಧವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಆರೋಪ ಸುಳ್ಳಾಗಿದ್ದರೆ ಬಿಜೆಪಿ ನಾಯಕರು ರಾಜೀನಾಮೆ ನೀಡಲು ಸಿದ್ಧರಿದ್ದಾರಾ? ಎಂದರು.

₹30 ಸಾವಿರ ಲಂಚ: ಬೆಸ್ಕಾಂ ಜೆ.ಇ ಬಂಧನ

ಪ್ರಜಾವಾಣಿ ವಾರ್ತೆ


ರಾಜೇಶ್ ಟಿ.ಸಿ.

ಬೆಂಗಳೂರು: ವಸತಿ ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕಕ್ಕೆ ಮಂಜೂರಾತಿ ನೀಡಲು ₹ 30 ಸಾವಿರ ಲಂಚ ಪಡೆಯುತ್ತಿದ್ದ ಬೆಸ್ಕಾಂ ಕೊತ್ತನೂರು ಉಪ ವಿಭಾಗದ ಸಹಾಯಕ ಎಂಜಿನಿಯರ್ ರಾಜೇಶ್ ಟಿ.ಸಿ. ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕಾರ್ಯಾಚರಣೆ ವೇಳೆ ಕಚೇರಿ ಶೋಧ ನಡೆಸಿದಾಗ ₹ 2.77 ಲಕ್ಷ ನಗದು ಪತ್ತೆಯಾಗಿದೆ. ಕಚೇರಿ ಆವರಣದಲ್ಲಿದ್ದ ಮಾರುತಿ ಆಲ್ಟೊ ಕಾರೊಂದನ್ನೂ ವಶಕ್ಕೆ ಪಡೆಯಲಾಗಿದೆ. ಆರೋಪಿಯ ಮನೆ ಮೇಲೂ ಲೋಕಾಯುಕ್ತ ಪೊಲೀಸರು ದಾಳಿಮಾಡಿದ್ದು, ಶೋಧ ನಡೆಸುತ್ತಿದ್ದಾರೆ.

ಜಿ. ಗಂಗಾಧರಯ್ಯ ಎಂಬ ಎಲೆಕ್ಟ್ರಿಕ್ ಗುತ್ತಿಗೆದಾರರು ವಸತಿ ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕಕ್ಕೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರು. ಪ್ರಕ್ರಿಯೆ ಪೂರ್ಣಗೊಳಿಸಲು ₹ 30 ಸಾವಿರ ಲಂಚ ನೀಡುವಂತೆ ಸಹಾಯಕ ಎಂಜಿನಿಯರ್ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

ಆರೋಪಿಯ ಸೂಚನೆಯಂತೆ ಕೊತ್ತನೂರು ಬೆಸ್ಕಾಂ ಕಚೇರಿಗೆ ಹೋದ ಗಂಗಾಧರಯ್ಯ ಲಂಚದ ಹಣ ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ನಗರ ಘಟಕದ ಎಸ್‌ಪಿ ಕೆ.ವಿ. ಅಶೋಕ್ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ವೀರೇಂದ್ರ ಕುಮಾರ್, ಇನ್‌ಸ್ಪೆಕ್ಟರ್‌ಗಳಾದ ಗಂಗರುದ್ರಯ್ಯ, ಅಂಜನ್ ಕುಮಾರ್, ಕೇಶವಮೂರ್ತಿ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಉದ್ಯೋಗ ಆಕಾಂಕ್ಷಿಗಳಿಗೆ ನಕಲಿ ನೇಮಕಾತಿ ಪತ್ರ ರವಾನೆ, ತನಿಖೆ ಚುರುಕು

ಬೆಸ್ಕಾಂ, ಕೆಪಿಟಿಸಿಎಲ್ ಹೆಸರಿನಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬೆಸ್ಕಾಂ ಲೆಟರ್‌ಹೆಡ್‌ನಲ್ಲಿ ನಕಲಿ ನೇಮಕಾತಿ ಪತ್ರ ಸೃಷ್ಟಿಸಿ ಉದ್ಯೋಗ ಆಕಾಂಕ್ಷಿಗಳಿಗೆ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿ ವಂಚಿಸುತ್ತಿರುವ ಜಾಲದ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಅವರ ಸೂಚನೆ ಮೇರೆಗೆ ಪ್ರಧಾನ ವ್ಯವಸ್ಥಾಪಕ (ಆಡಳಿತ ಮತ್ತು ಮಾನವ ಸಂಪನ್ಮೂಲ) ಸಿ.ಎನ್.ಮಂಜುನಾಥ್ ದೂರು ನೀಡಿದ್ದಾರೆ.

ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಬೆಸ್ಕಾಂನಲ್ಲಿ ಮಾಪನ ಓದುಗ ಹುದ್ದೆ, ಕಿರಿಯ ಸಹಾಯಕರ ಹುದ್ದೆಗೆ ನೇರ ಸಂದರ್ಶನಕ್ಕೆ ಹಾಜರಾಗುವಂತೆ ಈ ಜಾಲವು ನಕಲಿ ಪತ್ರ ಸೃಷ್ಟಿಸಿ ಅಭ್ಯರ್ಥಿಗಳಿಗೆ ರವಾನಿಸುತ್ತಿತ್ತು.

‘ವಿದ್ಯುತ್ ಸರಬರಾಜು ಕಂಪನಿ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಹೆಸರಿನಲ್ಲಿ ಹಲವು ಉದ್ಯೋಗ ಆಕಾಂಕ್ಷಿಗಳಿಗೆ ಅಧಿಕೃತ ಜ್ಞಾಪನ ಪತ್ರ, ಸುತ್ತೋಲೆ ಎಂಬ ನಕಲಿ ನೇಮಕ ಆದೇಶ ವಿತರಣೆ ಮಾಡಲಾಗಿದೆ. ಈ ಜಾಲವು ಇದುವರೆಗೂ ಐವರಿಗೆ ನಕಲಿ ಪತ್ರ ನೀಡಿರುವುದು ಗೊತ್ತಾಗಿದೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

ನಕಲಿ ನೇಮಕಾತಿ ಪತ್ರ ನೀಡಿ ಉದ್ಯೋಗ ಆಕಾಂಕ್ಷಿಗಳನ್ನು ವಂಚಿಸುತ್ತಿರುವ ಜಾಲವನ್ನು ಪತ್ತೆಹಚ್ಚಿ ವಂಚಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಲಾಗಿದೆ.

ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್, ಅಧೀಕ್ಷಕ ಎಂಜಿನಿಯರ್ ಅವರು ಸಹಿ ಮಾಡಿದ ರೀತಿಯಲ್ಲೇ ನಕಲಿ ನೇಮಕಾತಿ ಪತ್ರ ಸಿದ್ಧಪಡಿಸಲಾಗಿದೆ. ಅವುಗಳನ್ನು ಉದ್ಯೋಗ ಆಕಾಂಕ್ಷಿಗಳಿಗೆ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಲಾಗಿದೆ. ಮಾಪಕ ಓದುಗ, ಕಿರಿಯ ಸಹಾಯಕ ಹುದ್ದೆಗೆ ನಾಗೇಶ್ , ಆರ್.ಕೆ.ಸಿದ್ದೇಶ, ಎ.ಅನು, ಎಚ್. ಟಿ.ದಿವ್ಯಾ, ಜಿ.ಎಸ್.ಸುಹಾಸ್ ಅವರಿಗೆ ಕಳುಹಿಸಲಾಗಿತ್ತು. ಅವರು ಕಚೇರಿಗೆ ಬಂದು ವಿಚಾರಿಸಿದಾಗಿ ಪ್ರಕರಣವು ಗೊತ್ತಾಗಿದೆ.

‘ಬೆಸ್ಕಾಂ, ಕೆಪಿಟಿಸಿಎಲ್‌ನಿಂದ ಉದ್ಯೋಗ ಆಕಾಂಕ್ಷಿಗಳಿಗೆ ನೇರ ಸಂದರ್ಶನಕ್ಕೆ ಹಾಜರಾಗಲು ಸುತ್ತೋಲೆಗಳನ್ನು ಕಳುಹಿಸುವುದಿಲ್ಲ. ಇದು ವಂಚನೆ ಜಾಲ. ಬೆಸ್ಕಾಂ ಹೆಸರಿನಲ್ಲಿ ಉದ್ಯೋಗ ಆಕಾಂಕ್ಷಿಗಳನ್ನು ವಂಚಿಸಿ ಹಣ ಮಾಡಿಕೊಳ್ಳುವ ಜಾಲ ಸೃಷ್ಟಿಯಾಗಿದೆ’ ಎಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕ ಸಿ.ಎನ್.ಮಂಜುನಾಥ್ ತಿಳಿಸಿದ್ದಾರೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಮಗು ಅಪಹರಿಸಿದ್ದ ಆರೋಪಿ ಬಂಧನ

ತಾಯಿ ಮಡಿಲು ಸೇರಿದ 8 ದಿನಗಳ ಕಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿವಿಲಾಸ ಆಸ್ಪತ್ರೆಯಲ್ಲಿ ತಾಯಿ ಪಕ್ಕದಲ್ಲಿ ಮಲಗಿದ್ದ ಎಂಟು ದಿನಗಳ ಹಸುಗೂಸು ಕಳವು ಪ್ರಕರಣವು ಸುಖಾಂತ್ಯ ಕಂಡಿದ್ದು ಹಸುಗೂಸು ತಾಯಿ ಮಡಿಲು ಸೇರಿದೆ. ಮಗು ಕಳವು ಮಾಡಿದ ಆರೋಪಿಯನ್ನು ವಿವಿ ಪುರ ಪೊಲೀಸರು ಬಂಧಿಸಿದ್ದಾರೆ.

ರಾಮನಗರದ ಜಿಲ್ಲೆ ಮಾಗಡಿ ತಾಲೂಕಿನ ಐಜೂರಿನ ಆರೋಪಿ ದಿವ್ಯಾರಶ್ಮಿ(29)ಯನ್ನು ಬಂಧಿಸಲಾಗಿದೆ.

ತುಮಕೂರು ಜಿಲ್ಲೆಯ ತಿಪಟೂರಿನ ಕಾರ್ಮಿಕ ಪ್ರಸನ್ನ ಹಾಗೂ ಸುಮಾ ದಂಪತಿಯ ಮಗುವನ್ನು ಏ.15ರಂದು ದಿವ್ಯಾರಶ್ಮಿ ಕಳವು ಮಾಡಿದ್ದರು. ದಿವ್ಯಾರಶ್ಮಿ ಪತಿ ಒಂದು ವರ್ಷದ ಹಿಂದೆ ಮೃತಪಟ್ಟಿದ್ದರು. ಆಕೆಗೂ ಗರ್ಭಪಾತವಾಗಿ ಮಗು ಮೃತಪಟ್ಟಿತ್ತು. ಮಗುವಿನ ಹಂಬಲದಲ್ಲಿದ್ದ ಆಕೆಯು ಯಾವುದಾದರೂ ಆಸ್ಪತ್ರೆಗೆ ತೆರಳಿ ಮಗು ಕಳವು ಮಾಡಲು ನಿರ್ಧರಿಸಿದ್ದರು. ವಾಣಿವಿಲಾಸ ಆಸ್ಪತ್ರೆಗೆ ಬಂದು ಮಗು ಕಳವು ಮಾಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಸಿಸಿ ಟಿವಿ ಕ್ಯಾಮೆರಾ ದೃಶ್ಯಾವಳಿ


ಆರೋಪಿ ದಿವ್ಯಾರಶ್ಮಿ

ಹೇಗಿತ್ತು ಆರೋಪಿ ಸಂಚು?: ಆಸ್ಪತ್ರೆಗೆ ದಾಖಲಾಗಿದ್ದ ಸಂಬಂಧಿಕರ ಸೋಗಿನಲ್ಲಿ ಏಪ್ರಿಲ್ 14ರಂದು ರಾತ್ರಿ ಬಂದಿದ್ದ ಆರೋಪಿ, ಹೊರ ಹೋಗಿರಲಿಲ್ಲ. ಮರುದಿನ ರಾತ್ರಿ ವಾರ್ಡ್‌ವೊಂದರಲ್ಲಿ ಎಲ್ಲರೂ ನಿದ್ರಿಸುತ್ತಿದ್ದ ವೇಳೆ ಸುಮಾ ಪಕ್ಕದಲ್ಲಿದ್ದ ಮಗುವನ್ನು ತೆಗೆದುಕೊಂಡು ಬ್ಯಾಗ್‌ನಲ್ಲಿ ಇರಿಸಿಕೊಂಡು ಹೊರಹೋಗಿದ್ದರು. ಬಸ್ ಮೂಲಕ ಊರು ಸೇರಿದ್ದರು. ಪೊಲೀಸರು ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ಮಗುವನ್ನು ಬ್ಯಾಗ್‌ನಲ್ಲಿ ಕೊಂಡೊಯ್ಯುತ್ತಿರುವುದು ಪತ್ತೆಯಾಗಿತ್ತು.

‘ಆರೋಪಿಯು ತನ್ನದೇ ಮಗುವೆಂದು ಹೇಳಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ಆಸ್ಪತ್ರೆಯಲ್ಲಿ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮೆರಾದಲ್ಲಿ ಆರೋಪಿಯ ದೃಶ್ಯ ಸೆರೆಯಾಗಿತ್ತು. ಅದನ್ನು ಆಧರಿಸಿ ವಾಣಿವಿಲಾಸ, ವಿಕ್ಟೋರಿಯಾ ಆಸ್ಪತ್ರೆಗಳ ಸುತ್ತಮುತ್ತ, ಕೆ.ಆರ್. ಮಾರುಕಟ್ಟೆ ಸೇರಿ ಸುಮಾರು 600ಕ್ಕೂ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿತ್ತು. ಜತೆಗೆ ಮೊಬೈಲ್ ಲೊಕೇಷನ್ ಆಧರಿಸಿ ಆರೋಪಿ ಪತ್ತೆ ಮಾಡಿ ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಮಗುವಿನ ಎಡ ಕೈಯಲ್ಲಿ ಮಚ್ಚೆಯಿತ್ತು. ಈ ಮಚ್ಚೆಯನ್ನು ತಾಯಿ ನೋಡಿ ಮಗುವನ್ನು ಪತ್ತೆ ಮಾಡಿದರು. ಪೋಷಕರ ಮಡಿಲಿಗೆ ಮಗವನ್ನು ಒಪ್ಪಿಸಲಾಯಿತು’ ಎಂದು ತಿಳಿಸಿದ್ದಾರೆ.

ಟಾಸ್ಕ್ ಹೆಸರಿನಲ್ಲಿ ₹ 3.37 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಬಾಗೇಪಲ್ಲಿ ತಾಲ್ಲೂಕಿನ ನಲ್ಲಗುಟ್ಟಪಲ್ಲಿ ಗ್ರಾಮದ ಅಮರನಾಥರೆಡ್ಡಿ ಅವರಿಗೆ ಟಾಸ್ಕ್ ಹೆಸರಿನಲ್ಲಿ ಆನ್‌ಲೈನ್ ವಂಚಕರು ₹ 3.37 ಲಕ್ಷ ವಂಚಿಸಿದ್ದಾರೆ.

ಟೆಲಿಗ್ರಾಂನಲ್ಲಿ ಬಂದ ಲಿಂಕ್ ಸಬ್‌ಸ್ಕ್ರೈಬ್ ಮಾಡಿದೆ. ಅವರು ಟಾಸ್ಕ್‌ಗಳನ್ನು ನೀಡಿದರು. ಟಾಸ್ಕ್ ಪೂರ್ಣಗೊಳಿಸುತ್ತ ಹೂಡಿಕೆ ಮಾಡಿದೆ. ವಿವಿಧ ಬ್ಯಾಂಕ್ ಖಾತೆಗಳಿಂದ ಒಟ್ಟು ₹ 3,37,300 ಹೂಡಿಕೆ ಮಾಡಿದೆ. ನಂತರ ಅವರು ಯಾವುದೇ ಟಾಸ್ಕ್‌ಗಳನ್ನು ನೀಡಿಲ್ಲ. ಹೂಡಿಕೆಯ ಹೆಸರಿನಲ್ಲಿ ನನ್ನ ವಂಚಿಸಿರುವುದು ಗೊತ್ತಾಯಿತು. ಈ ಬಗ್ಗೆ ಕ್ರಮಕೈಗೊಂಡು ಹಣ ವಾಪಸ್ ಕೊಡಿಸಿ ಎಂದು ನಗರದ ಸಿಇಎನ್ ಠಾಣೆಗೆ ಅಮರನಾಥ ದೂರು ನೀಡಿದ್ದಾರೆ.

124 ಕೆ.ಜಿ ರಕ್ತಚಂದನ ಮರದ ತುಂಡು ಜಪ್ತಿ

ಬೆಂಗಳೂರು: ಗಿರಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ವಿದ್ಯಾನಗರದ ಬಳಿ ರಕ್ತಚಂದನ ಮರದ ತುಂಡುಗಳನ್ನು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಚಿನಕುರುಳಿ ಹೋಬಳಿ ಡಿಂಕಾ ಗ್ರಾಮದ ಕೃಷ್ಣ(35) ಬಂಧಿತ ಆರೋಪಿ.

‘ಬಂಧಿತ ಸ್ಥಳದಲ್ಲಿ ಮಾರಾಟ ಮಾಡುತ್ತಿದ್ದ 2 ಕೆಜಿ 100 ಗ್ರಾಂನಷ್ಟು ರಕ್ತಚಂದನವನ್ನು ಜಪ್ತಿ ಮಾಡಿಕೊಳ್ಳಲಾಗಿತ್ತು. ಬಳಿಕ ಆತ ಬನಶಂಕರಿ 3ನೇ ಹಂತ, ಸಪ್ತಗಿರಿಲೇಔಟ್, ಟಾಟಾ ಪ್ರಮೌಂಟ್ ಅಪಾರ್ಟ್‌ಮೆಂಟ್ ಬಳಿ ಹಾಗೂ ಹನುಮಗಿರಿ ಬೆಟ್ಟದ ನೀಲಗಿರಿ ತೋಪಿನಲ್ಲಿ ಬಚ್ಚಿಟ್ಟಿದ್ದ 124 ಕೆ.ಜಿ ತೂಕದ ಒಟ್ಟು 14 ರಕ್ತಚಂದದ ಮರದ ತುಂಡುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಜಪ್ತಿ ಮಾಡಿದ ರಕ್ತಚಂದನ ಮರದ ತುಂಡು ಹಾಗೂ ಕಾರ್ಯಾಚರಣೆ ನಡೆಸಿದ ಪೊಲೀಸ್ ತಂಡ.

‘ಬಿಟಿವಿ’ ಎಂಡಿ ಕುಮಾರ್, ಇಬ್ಬರು ಸಿಬ್ಬಂದಿಗೆ 2 ವರ್ಷ ಜೈಲು

ಉಡುಪಿ: ಕಾಂಗ್ರೆಸ್ ಮುಖಂಡ ಕಿಶನ್ ಹೆಗ್ಡೆ ಕೊಳ್ಕೆಬೈಲ್ ವಿರುದ್ಧ ಮಾನಹಾನಿಕರ ಸುದ್ದಿ ಪ್ರಕಟಿಸಿದ ಪ್ರಕರಣದಲ್ಲಿ ಬಿಟಿವಿ ಎಂಡಿ ಜಿ.ಎಂ. ಕುಮಾರ್, ವರದಿಗಾರ ಭರತ್ ರಾಜ್, ನಿರೂಪಕ ಶೇಷ ಕೃಷ್ಣಗೆ ಉಡುಪಿ ಜಿಲ್ಲಾ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ಶನಿವಾರ ಎರಡು ವರ್ಷ ಜೈಲು ಶಿಕ್ಷೆ ಹಾಗೂ ತಲಾ ₹ 10,000 ದಂಡ ವಿಧಿಸಿದೆ.

‘2017ರಲ್ಲಿ ಬಿಟಿವಿಯಲ್ಲಿ ಪ್ರಕಟವಾದ ಮಾನಹಾನಿಯಾಗುವಂತಹ ಸುಳ್ಳು ಸುದ್ದಿಯ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲು ಮಾಡಿದ್ದೆ. 6 ವರ್ಷಗಳ ವಿಚಾರಣೆ ಬಳಿಕ ತೀರ್ಪು ಪ್ರಕಟವಾಗಿದ್ದು ಆರೋಪಿಗಳಿಗೆ ತಲಾ 2 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ಕಿಶನ್ ಹೆಗ್ಡೆ ಕೊಳ್ಕೆಬೈಲ್ ಪತ್ರಿಕೆಗೆ ತಿಳಿಸಿದರು.

ಮೂವರು ಆರೋಪಿಗಳಿಗೂ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು ಮೇಲ್ಮನವಿ ಸಲ್ಲಿಕೆಗೆ 1 ತಿಂಗಳ ಗಡುವು ನೀಡಲಾಗಿದೆ.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷನ ಹತ್ಯೆ

ಪ್ರಜಾವಾಣಿ ವಾರ್ತೆ


ಪ್ರವೀಣ ಕಮ್ಮಾರ

ಧಾರವಾಡ: ತಾಲ್ಲೂಕಿನ ಕೋಟೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಹಾಗೂ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಕಾರ್ಯಕಾರಣಿ ಸದಸ್ಯ ಪ್ರವೀಣ ಕಮ್ಮಾರ (36) ಅವರನ್ನು ದುಷ್ಕರ್ಮಿಗಳು ಚಾಕು ಇರಿದು ಹತ್ಯೆ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ಗ್ರಾಮದೇವತೆ ಉಡಚಮ್ಮ ದೇವಿಯ ಜಾತ್ರಾ ಮಹೋತ್ಸವ ವೇಳೆ ಮಂಗಳವಾರ ತಡರಾತ್ರಿ ಪ್ರಸಾದ ನೀಡುವ ವಿಷಯದಲ್ಲಿ ಎರಡು ಗುಂಪುಗಳ ನಡುವೆ ಕ್ಷುಲ್ಲಕ ಕಾರಣಕ್ಕೆ ನಡೆದ ಜಗಳ ಬಿಡಿಸಲು ಮುಂದಾದ ಪ್ರವೀಣ ಅವರಿಗೆ ಚಾಕುವಿನಿಂದ ಹಲವೆಡೆ ಇರಿಯಲಾಗಿದೆ.


‘ತೀವ್ರವಾಗಿ ಗಾಯಗೊಂಡ ಪ್ರವೀಣನನ್ನು ಎಸ್‌ಡಿಎಂ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ನಸುಕಿನಲ್ಲಿ ಕೊನೆಯುಸಿರೆಳೆದರು’ ಎಂದರು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಬಿಜೆಪಿ ಜಿಲ್ಲಾ ಗ್ರಾಮಾಂತರ ಒಬಿಸಿ ಘಟಕದ ಉಪಾಧ್ಯಕ್ಷ ರಾಘವೇಂದ್ರ ಪಟಾತ್, ಯಲ್ಲಪ್ಪ ಕರಿಕಟ್ಟಿ, ಆತ್ಮಾನಂದ ಪಟಾತ, ಮಹಾಂತೇಶ ಪಟಾತ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣ ಕುರಿತು ದೂರು ನೀಡಿರುವ ಪ್ರವೀಣ ಪತ್ನಿ ಶಿಲ್ಪಾ ಕಮ್ಮಾರ ಅವರ ಹೇಳಿಕೆ ಮೇರೆಗೆ ಬಸವರಾಜ ಪಾಟೀಲ, ಶಂಕರಯ್ಯ ಮಠಪತಿ ಹಾಗೂ ಗೀತಾ ಬಾರಕೇರ ವಿರುದ್ಧವೂ ಪ್ರಕರಣ ದಾಖಲಾಗಿದೆ.

‘ಗುತ್ತಿಗೆ ಕೆಲಸ ಮಾಡುತ್ತಿದ್ದ ರಾಘವೇಂದ್ರ ಪಟಾತ್‌ನಿಗೆ ಉಪಾಧ್ಯಕ್ಷನಾಗಿದ್ದ ಪ್ರವೀಣ ಕೆಲಸ ಕೊಡುತ್ತಿರಲಿಲ್ಲ. ಇದು ಇಬ್ಬರ ನಡುವೆ ವೈಷಮ್ಯಕ್ಕೆ ಕಾರಣವಾಗಿತ್ತು. ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರನ್ನು ಕೆಲಸದಿಂದ ತೆಗೆಯಲಾಗಿತ್ತು. ಇದರಿಂದ ಕುಪಿತಗೊಂಡಿದ್ದ ಹಿಂದಿನ ಅಧ್ಯಕ್ಷ ಶಂಕರಯ್ಯ ಮಠಪತಿ ಕುಮ್ಮಕ್ಕಿನಿಂದ ಜಾತ್ರೆಯಲ್ಲಿ ಕ್ಷುಲ್ಲಕ ಕಾರಣ ತೆಗೆದು ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ’ ಎಂದು ಶಿಲ್ಪಾ ದೂರಿನಲ್ಲಿ ತಿಳಿಸಿದ್ದಾರೆ.

‘ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೂ ನಾಲ್ಕು ಜನ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ ಜಗಲಾಸರ್ ತಿಳಿಸಿದ್ದಾರೆ.

ಚಿತ್ರಾವಳಿ


ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ರಯಿಸ್ ಮತ್ತು ಹಫೀಜ್ ಬಾಲೇ ಖಾನ್ ಅವರು ಬುಧವಾರ ಸಂಗೀತ ಕಛೇರಿ ಪ್ರಸ್ತುತಪಡಿಸಿದರು.



ಅಪಘಾತ ರಹಿತ ಚಾಲನೆ ಮಾಡಿದ ಹುಣಸೂರು ಘಟಕದ ಎಜಾಜ್ ಅಹಮದ್ ಶರೀಫ್ ಅವರಿಗೆ ನವದೆಹಲಿಯಲ್ಲಿ ಎಎಸ್‌ಆರ್‌ಟಿಯು(ಅಸೋಸಿಯೇಷನ್ ಆಫ್ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್) ರಾಷ್ಟ್ರೀಯ ಪ್ರಶಸ್ತಿಯನ್ನು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ ಅಲ್ಕಾ ಉಪಾಧ್ಯಾಯ ಪ್ರದಾನ ಮಾಡಿದರು. ಎಎಸ್‌ಆರ್‌ಟಿಯು ಉಪಾಧ್ಯಕ್ಷ ಶೇಖರ್ ಚನ್ನೆ ಇದ್ದರು.


ಬನ್ನೇರುಘಟ್ಟ ರಸ್ತೆಯಲ್ಲಿರುವ ಅರಕೆರೆ ಕೆರೆಯಲ್ಲಿ ಬೆಳೆದಿರುವ ಜಲಕಳೆಯನ್ನು ಕಾರ್ಮಿಕರು ಮಂಗಳವಾರ ಸ್ವಚ್ಛಗೊಳಿಸಿದರು

– ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್ ಜಿ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TRAINED Lady TEACHERS to teach All Subjects in Lower Primary, Sanskrit, Maths, Physical Education and Computer in English Medium Primary and High Schools. Also required FRONT OFFICE ASSISTANT Walk-in Interview on 21.04.2023 between 11.00AM and 1.00PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080- 26710170/ 74833-77387

RENTAL PROPERTIES

Accommodation Available

Commercial

500 SQFT Corner office space available for Rent at Sheshadripuram 1st Main Road. 9739290396/ 9986436449.

REAL ESTATE SELLING

House

Bannerghatta Road

SALE VIJAYABANK Layout 40x60 Duplex House 4.10cr Adarsh Palace 3BHK J.P.Nagar 40x60 BTM 30x40 House 9945699813

BUSINESS

Business Offers

Finance

NRI'S INVESTMENT/FINANCE available on low-interest for properties,land& building,sites flats,converted lands also personal,educational call pengana-7204995189

Business to Business

Services

DOCUMENTATION WORKS will be done for all kinds of properties in and around Bangalore. Call 6364115555

PERSONAL

Change of Name

CHANGE OF NAME
ನಾನು, **ಗೌರಿಬಾಯಿ,** ನಂ. 6461151ರ ಶ್ರೇಣಿ: **Ex:SEP,** ನನ್ನ ಪತಿ ಪುನ್ನಾಜಿ ರಾವ್ ವೆಂಕೋಬ ರಾವ್. ಪ್ರಸ್ತುತ ವಾಸವಾಗಿರುವ ಮನೆ ನಂ.3, 2ನೇ ಮಹಡಿ, ಮೌಂಟ್ ಕಾರ್ಮೆಲ್ ಶಾಲೆಯ ಹತ್ತಿರ, ನಾಗನಾಥಪುರ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು–560100, ನನ್ನ ಹೆಸರನ್ನು **ಗೌರಿಬಾಯಿ**ಯಿಂದ **ಪ್ರೇಮಾಬಾಯಿ** ಎಂದು ಬದಲಾಯಿಸಿದ್ದೇನೆ. ಇದನ್ನು ನೋಟರಿ ಎನ್. ತುಳಸಿ, ಬೆಂಗಳೂರು ಅವರ ಮುಂದೆ 18–04–2023 ದಿನಾಂಕದಂದು ನಾನು ದೃಢೀಕರಿಸಿದ್ದೇನೆ.

I, RAMYA SUDA W/o.Subburaya Nivas.J. R/a Flat#B019, DS Max Severa, Uttarahalli, Subramanyapura Post, Bengaluru- 560061 Have Changed My Name to RAMYA UDUPA vide Affidavit Dated 19-04-2023 Before Notary B.Gopala Krishna, Bengaluru.

SMT RAJYA LAKSHMI, Wife/o JC681858L, SUB/ASH, NAKKA SRINIVASULU, Vill- Gopanpalli, Giddallur, Prakasam, Andhra Pradesh changed name SMT RAJYA LAKSHMI to NAKKA RAJYALAKSHMI, 17/04/2023, Notary K.V. Mani, Bangalore

CHANGE OF NAME
I, **M. NAGARAJ DANIEL** alias **NAGARAJ M** S/o Muniyappa R/@ No 138, 5th Main, AK Colony, Domlur Layout, Blr-71, have changed my name to **NAGARAJ M. DANIEL** vide affidavit dated 15.04.2023 before Notary Gopalakrishna, Blr. Henceforth I shall be known as **NAGARAJ M. DANIEL** only.

SAMPA GHOSH, Wife/o 14843185X HAV, PRAVAT KUMAR SAMANTA, Vill- Nasra Badalpur, Kharagpur, Paschim Medinipur, West Bengal changed name SAMPA GHOSH to SAMPA GHOSH SAMANTA, 18/04/2023, Notary K.V. Mani, Bangalore

CHANGE OF NAME
I, **TIAKABA,** residing at Nokpu, Longchem Molokchung, Nagaland-796604, presently residing at No.48, Moddanna School Road, 4th cross, Evergreen Street, B.Narayanapura, Bangalore-16, have changed my name to **SURJA RAI,** vide affidavit dated 17.04.2023 before Notary B.V.Nagabhushana, Bangalore. Henceforth I shall be known as **SURJA RAI** only.

M BANU, Mother/o 14849530W, SEP/MT, SIVA KUMAR R, Vill- Pattavarthi, Jammanahalli, Pappireddi Patti, Dharmpuri, Tamil Nadu changed name M BANU to BANU RAMACHANDRAN, 17/04/2023, Notary K.V. Mani, Bangalore

C RAMACHANDIRAN, Father/o, 14849530W, SEP/MT, SIVA KUMAR R, Vill- Pattavarthi, Jammanahalli, Pappireddi Patti, Dharmpuri, Tamil Nadu changed name C RAMACHANDIRAN to RAMACHANDRAN CHINNASAMY, 17/04/2023, Notary K.V. Mani, Bangalore

Lost

LOST & FOUND
WE NARAASIMHA SHETTY H R S/o RUDRA SHETTY, RESDING AT NO-104, 2nd MAIN ROAD, UNIVERSITY LAYOUT R R NAGAR BANGALORE-560098 WE HAVE LOST OUR ORIGINAL REGISTERED SALE DEED DOCUMENT NO-RJN-1-05439/2014-2015 CD NO, RJND275, DATED 12/12/2014 IN SUB-REGISTRAR, OFFICE RAJAJINAGAR, BANGALORE. WE HAVE FILED IN LOST COMPLAINT BANGALORE CITY POLICE ON 11-4-2023 THE LOST REPORT NO-0530116/2023
IF ANY BODY FOUND OR ANY CLAIM CONTACT MR. NARASIMHA SHETTY H R MOB- 9900277255

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ಸರ್ವಜ್ಞನಗರ

ವಿಧಾನಸಭೆ ಕ್ಷೇತ್ರದಲ್ಲಿ ಸ್ವಚ್ಛತೆಯದ್ದೇ ದೂರು. ರಸ್ತೆ ಹಾಗೂ ಉದ್ಯಾನಗಳಲ್ಲಿ ಕಸ ಇಲ್ಲದಂತೆ ನಿರ್ವಹಣೆ ಮಾಡಬೇಕು. ಉದ್ಯೋಗ ಮೇಳ ಆಯೋಜಿಸಬೇಕು. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಒದಗಿಸಬೇಕು ಎಂಬುದು ನಾಗರಿಕರ ಆಶಯ.

ಸ್ವಚ್ಛತೆಗೆ ಆದ್ಯತೆ ಕೊಡಿ



ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕು. ಉದ್ಯೋಗ ಮೇಳ ಆಯೋಜಿಸಬೇಕು. ಎಲ್ಲರಿಗೂ ಅನುಕೂಲವಾಗುವಂತೆ ಸಾರ್ವಜನಿಕ ತರಬೇತಿ ಕೇಂದ್ರಗಳನ್ನು ಆರಂಭಿಸಬೇಕು. ಸರ್ವಜ್ಞ ನಗರ ವ್ಯಾಪ್ತಿಯ ಪಾರ್ಕ್‌ಗಳನ್ನು ಉನ್ನತೀಕರಣ ಮಾಡಬೇಕು. ಇಲ್ಲಿ ಸಾಕಷ್ಟು ಕೊಳಚೆ ಇದೆ. ಸ್ವಚ್ಛತೆಗೆ ಆದ್ಯತೆ ಕೊಡಬೇಕು. ಕಸ ಎಲ್ಲೆಂದರಲ್ಲಿ ಎಸೆಯಲಾಗುತ್ತದೆ. ಉದ್ಯಾನಗಳಲ್ಲಿ ಗಿಡ, ಮರಗಳನ್ನು ಬೆಳೆಸಲು ಆದ್ಯತೆ ನೀಡಬೇಕು. ರಸ್ತೆ ಹಾಗೂ ಚರಂಡಿಗಳನ್ನು ಸುಸ್ಥಿತಿಯಲ್ಲಿಡಬೇಕು.

ಕಾರ್ತಿಕ್ ಶೆಟ್ಟಿ, ಬಾಣಸವಾಡಿ

ಹೈಟೆಕ್ ಆಸ್ಪತ್ರೆಗಳು ಬೇಕು



ರಸ್ತೆ ಅಭಿವೃದ್ಧಿ ಕ್ಷೇತ್ರದ ಹಲವು ಬಡಾವಣೆಗಳಲ್ಲಿ ಇನ್ನೂ ಆಗಬೇಕಿದೆ. ಸೌಂದರ್ಯೀಕರಣವೂ ಅಗತ್ಯ. ಬಡಾವಣೆಗಳಲ್ಲಿ ಸಾಕಷ್ಟು ಮಂದಿ ಆರ್ಥಿಕವಾಗಿ ಹಿಂದುಳಿದವರಿದ್ದು, ಗುಣಮಟ್ಟ ಚಿಕಿತ್ಸೆ ಸಿಗುವ, ಎಲ್ಲ ಸಿಬ್ಬಂದಿ ಇರುವ ಸಕಲ ಸೌಲಭ್ಯಗಳ ಹೈಟೆಕ್ ಆಸ್ಪತ್ರೆಯನ್ನು ಸ್ಥಾಪಿಸಬೇಕು. ಕೋವಿಡ್ ನಂತಹ ಮಾರಕ ಕಾಯಿಲೆಗಳು ಬಂದರೆ ಬಹಳಷ್ಟು ಬಡವರು ಸಂಕಷ್ಟಕ್ಕೆ ಸಿಲುಕುತ್ತಾರೆ. ಸರ್ಕಾರಿ ಕಚೇರಿಗಳಲ್ಲಿ ಕೆಲಸಗಳಾಗುತ್ತಿಲ್ಲ. ಬಹುತೇಕ ಕಡೆ ಹಣ ಕೇಳುತ್ತಾರೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕಿದೆ.

ಮಾಲಿನಿ ವಿಕ್ರಂ, ಸರ್ವಜ್ಞ ನಗರ

ಗುಣಮಟ್ಟದ ಶಿಕ್ಷಣ ಸಿಗುವಂತಾಗಲಿ



ಸರ್ವಜ್ಞನಗರದಲ್ಲಿರುವ ಸರ್ಕಾರಿ ಶಾಲೆಗೆ ಸಕಲ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಗೊಳಿಸಬೇಕು. ಖಾಸಗಿ ಶಾಲೆಗಳಲ್ಲಿ ₹2ರಿಂದ 3 ಲಕ್ಷ ಹಣ ಕಟ್ಟಿ, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಮಧ್ಯಮ ಮತ್ತು ಬಡ ಕುಟುಂಬಕ್ಕೆ ಸಾಧ್ಯವಿಲ್ಲ. ಹೀಗಾಗಿ ಗುಣಮಟ್ಟದ ಶಿಕ್ಷಣ ಸರ್ಕಾರಿ ಶಾಲೆಯಲ್ಲೇ ಸಿಗುವಂತಾಗಬೇಕು. ಮಹಿಳೆಯರಿಗೆ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಬೇಕು. ಇಂದು ತಂತ್ರಜ್ಞಾನ ಬಹಳ ಬೆಳೆದಿದ್ದು, ಮಹಿಳೆಯರು ಸಂಕಷ್ಟಕ್ಕೆ ಸಿಲುಕಿದ ಸಂದರ್ಭದಲ್ಲಿ ಅತಿವೇಗ ಸ್ಪಂದಿಸುವ ಕೆಲಸ ಆಗಬೇಕು. ಸ್ವಚ್ಛತೆ ಕಾಪಾಡಿ, ಪರಿಸರ ರಕ್ಷಿಸಬೇಕು.

ಪೂರ್ಣಿಮಾ, ಸರ್ವಜ್ಞ ನಗರ

ಸಿ.ವಿ. ರಾಮನ್‌ನಗರ

ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳಾಗಿದ್ದರೂ, ಚಿಕ್ಕ ರಸ್ತೆಗಳನ್ನು ವಿಸ್ತರಿಸುವ ಕೆಲಸವಾಗಿಲ್ಲ. ವಾಣಿಜ್ಯ ಪ್ರದೇಶಗಳು, ಆಸ್ಪತ್ರೆಗಳು ಹೆಚ್ಚಾಗಿರುವುದರಿಂದ ಪಾರ್ಕಿಂಗ್ ಸೌಲಭ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕೆಂಬ ನಿರೀಕ್ಷೆ ಇದೆ.

ಪಾರ್ಕಿಂಗ್ ಸೌಲಭ್ಯ ಹೆಚ್ಚಿಸಬೇಕು



ಕ್ಷೇತ್ರದಲ್ಲಿರುವ ಚಿಕ್ಕ ಚಿಕ್ಕ ರಸ್ತೆ ಅಭಿವೃದ್ಧಿ ಮಾಡಬೇಕು. ಉದ್ಯಾನಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಕೆಲ ಪ್ರದೇಶಗಳಲ್ಲಿ ಕುಡಿಯುವ ನೀರು ಅಭಾವ ಇದ್ದು ಪೂರ್ಣ ಪ್ರಮಾಣದಲ್ಲಿ ಒದಗಿಸಬೇಕು. ಅತಿ ಹೆಚ್ಚು ವಾಣಿಜ್ಯ ಪ್ರದೇಶಗಳು ಇರುವುದರಿಂದ ಪಾರ್ಕಿಂಗ್ ಸೌಲಭ್ಯವನ್ನು ಹೆಚ್ಚಾಗಿಸಬೇಕು. ಹಿರಿಯರಿಗಾಗಿ ಗ್ರಂಥಾಲಯ, ಸಾರ್ವಜನಿಕ ಶೌಚಾಲಯದ ಅಗತ್ಯವಿದೆ. ಹಿರಿಯ ನಾಗರಿಕರ ವೇದಿಕೆ ಸ್ಥಾಪನೆ ಮಾಡಬೇಕು.

ಅಶೋಕ್ ಕುಮಾರ್ ಎಸ್., ಸಿ.ವಿ. ರಾಮನ್ ನಗರ

ಸುಂದರ ಕ್ರೀಡಾಂಗಣ ನಿರ್ಮಿಸಿ



ಸಿ. ವಿ ರಾಮನ್ ನಗರ ವಿಧಾನಸಭಾ ಕ್ಷೇತ್ರದಲ್ಲಿ, ಅನೇಕ ಉತ್ತಮ ಕೆಲಸಗಳಾಗಿದ್ದರೂ, ಇನ್ನು ಅನೇಕ ಕೆಲಸಗಳು ಬಾಕಿ ಉಳಿದಿವೆ. ಇಲ್ಲಿ ಸುಂದರವಾದ ಕ್ರೀಡಾಂಗಣದ ಅವಶ್ಯಕತೆ ಇದೆ. ಕೆಲವು ಪ್ರದೇಶಗಳಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಮಾದಕ ವಸ್ತುಗಳ ಸಾಗಾಟ ಹಾಗೂ ಸೇವನೆ ಹಾವಳಿ ವ್ಯಾಪಕವಾಗಿದೆ. ಇದರಿಂದ ಯುವ ಜನಾಂಗ ಬಲಿಯಾಗುತ್ತಿದೆ. ಹೀಗಾಗಿ, ಕಾನೂನು ವ್ಯವಸ್ಥೆಯನ್ನು ಬಲಪಡಿಸಿ, ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು. ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುವ ವ್ಯವಸ್ಥೆ ಮಾಡಬೇಕು.

ಸಂತೋಷ್ ಪಿ.ಶೆಟ್ಟಿ, ಕಾಕ್ಸ್ ಟೌನ್

ಕ್ರೀಡಾಂಗಣದ ಅಗತ್ಯ ಇದೆ



ಸಿ. ವಿ. ರಾಮನ್ ನಗರ ಕ್ಷೇತ್ರ ವ್ಯಾಪ್ತಿಯ ಕೋನೇನ ಅಗ್ರಹಾರದ ವಾರ್ಡ್‌ನಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಇಲ್ಲಿ ಕ್ರೀಡಾಂಗಣ ಇಲ್ಲ. ಶುದ್ಧ ಕುಡಿಯುವ ನೀರಿನ ಘಟಕ ಇಲ್ಲ. ವಾಚನಾಲಯ ಇಲ್ಲ. ಚರಂಡಿಗಳು ಸರಿ ಇಲ್ಲ. ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ಅಧಿಕಾರಿಗಳು ಸಹ ಇಲ್ಲ. ಮುಂದೆ ಆಯ್ಕೆಯಾಗುವ ಶಾಸಕರು ಇಂತಹ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿ.

ಕೆ.ಎಂ. ನಾಗೇಂದ್ರ, ಕೋನೇನ ಅಗ್ರಹಾರ



ಮತದಾನದ ಮಹತ್ವ ಸಾರುವ ಚಿತ್ರಗಳನ್ನು ಅರವಾಣಿ ಆರ್ಟ್ ಪ್ರಾಜೆಕ್ಟ್ ತಂಡ ಗೋಡೆ ಮೇಲೆ ಚಿತ್ರಿಸಿರುವುದು

ಮತದಾರರ ಸೆಳೆಯಲು ಜಾಗೃತಿ ಕಲಾಕೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರನ್ನು ಮತಗಟ್ಟೆಯತ್ತ ಸೆಳೆಯುವ ಜಾಗೃತಿ ಕಾರ್ಯಕ್ರಮದ ಭಾಗವಾಗಿ ಲೈಂಗಿಕ ಅಲ್ಪಸಂಖ್ಯಾತ ಕಲಾವಿದರ ತಂಡದಿಂದ ಗೋಡೆ ಚಿತ್ರಗಳನ್ನು ಬಿಡಿಸುವ ಕಾರ್ಯವನ್ನು ಚುನಾವಣಾ ಆಯೋಗ ಮಾಡಿದೆ.

ಲಿಂಗತ್ವ ಅಲ್ಪಸಂಖ್ಯಾತ ಕಲಾವಿದರಾದ 'ಅರವಾಣಿ ಆರ್ಟ್ ಪ್ರಾಜೆಕ್ಟ್' ತಂಡವು ಶೇಷಾದ್ರಿ ರಸ್ತೆಯಲ್ಲಿರುವ ಮುಖ್ಯಚುನಾವಣಾಧಿಕಾರಿ ಕಚೇರಿ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ 3 ಮಹಡಿ ಕಟ್ಟಡದ ಗೋಡೆಗಳ ಮೇಲೆ ಕಣ್ಮನ ಸೆಳೆಯುವ ಚಿತ್ತಾರಗಳನ್ನು ಮೂಡಿಸಿದೆ.

ಮತದಾನದ ಮಹತ್ವ, ಯುವಕರು, ಮಹಿಳೆಯರು ಸೇರಿ ಸಮಾಜದ ಎಲ್ಲರ ಸಹಭಾಗಿತ್ವ ಸಾರುವ ವೈಶಿಷ್ಟ್ಯಪೂರ್ಣ ವರ್ಣಚಿತ್ರಗಳನ್ನು ಚಿತ್ತಾಕರ್ಷಕವಾಗಿ ಕಲಾವಿದರು ಚಿತ್ರಿಸಿದ್ದಾರೆ.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯವನ್ನು ಸಶಕ್ತಗೊಳಿಸುವ ಆಶಯದೊಂದಿಗೆ 'ಅರವಾಣಿ ಆರ್ಟ್ ಪ್ರಾಜೆಕ್ಟ್' ಸಂಸ್ಥೆ ಹುಟ್ಟಿಕೊಂಡಿದೆ. ಈ ಸಮುದಾಯದವಲ್ಲಿ ಇರುವ ಕೀಳರಿಮೆ ತೊಡೆದು ಪ್ರತಿಭೆಯನ್ನು ಪ್ರೋತ್ಸಾಹಿಸಿ ಸಮಾಜದಲ್ಲಿ ಗುರುತಿಸಿಕೊಳ್ಳಲು ನೆರವಾಗುತ್ತಿದೆ. ಈ ಸಂಸ್ಥೆಯ ಕಲಾವಿದರು ಬೆಂಗಳೂರು, ಮುಂಬೈ, ಚೆನ್ನೈ, ಹೈದರಾಬಾದ್, ಕೋಲ್ಕತ್ತ ಸೇರಿ ಪ್ರಮುಖ ನಗರಗಳಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದಾರೆ. ಮೆಟ್ರೊ ಪಿಲ್ಲರ್‌ಗಳು, ಸರ್ಕಾರಿ ಕಚೇರಿ ಗೋಡೆಗಳು ಸೇರಿ ಜನನಿಬಿಡ ಪ್ರದೇಶಗಳಲ್ಲಿ ಮತದಾನದ ಮಹತ್ವ ಸಾರುವ ಕಲಾಕೃತಿಗಳನ್ನು ರಚಿಸಲು ಈ ತಂಡಕ್ಕೆ ಮತ್ತೊಂದು ಅವಕಾಶವನ್ನು ಮುಖ್ಯ ಚುನಾವಣಾಧಿಕಾರಿ ನೀಡಿದ್ದಾರೆ.

'ಮತದಾನ ಹೆಚ್ಚಿಸಲು ಹೋಟೆಲ್‌ಗಳಲ್ಲಿ ಜಾಗೃತಿ'

ಬೆಂಗಳೂರು: 'ಬೆಂಗಳೂರು ನಗರದಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಹೋಟೆಲ್‌ಗಳಿಗೆ ಬರುವ ಗ್ರಾಹಕರಲ್ಲಿ ಮತದಾನ ನಮ್ಮ ಕರ್ತವ್ಯ ಎಂಬ ಘೋಷ ವಾಕ್ಯದಡಿ ಜಾಗೃತಿ ಮೂಡಿಸಲಾಗುವುದು' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.

'ಹೋಟೆಲ್‌ಗೆ ಬರುವ ಗ್ರಾಹಕರಲ್ಲಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುವುದು. ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಮನವರಿಕೆ ಮಾಡುತ್ತೇವೆ. ನಗರದ ಹೋಟೆಲ್‌ಗಳಲ್ಲಿ 'ಮತದಾನ ನಮ್ಮ ಹಕ್ಕು' ಎನ್ನುವ ಫಲಕಗಳನ್ನು ಅಳವಡಿಸಲಾಗುವುದು. ಬೃಹತ್ ಬೆಂಗಳೂರು ಹೋಟೆಲುಗಳ ಸಂಘದ ಸದಸ್ಯರಿಗೆ ಮತದಾನದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ವ್ಯಾಟ್ಸ್‌ಆ್ಯಪ್ ಗ್ರೂಪ್ ರಚಿಸಿ ಸಲಹೆ ಸೂಚನೆಗಳನ್ನು ನೀಡಲಾಗುವುದು' ಎಂದು ಮಾಹಿತಿ ನೀಡಿದರು. 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಪಿ.ಸಿ. ರಾವ್, '2013 ಮತ್ತು 2018ರ ವಿಧಾನಸಭೆ ಚುನಾವಣೆಯಲ್ಲಿ ಬೆಂಗಳೂರು ನಗರದ ಮತದಾನ ಪ್ರಮಾಣ ಕಡಿಮೆಯಾಗಿತ್ತು. ಆದರೆ, ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸಲು ಮತ್ತು ಪ್ರಜಾಪ್ರಭುತ್ವದ ಮಹತ್ವ ಸಾರುವ ಉದ್ದೇಶದಿಂದ ಈ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ' ಎಂದು ಹೇಳಿದರು.

'ನಗರದಲ್ಲಿರುವ ಹೋಟೆಲ್‌ಗಳಿಗೆ ಪ್ರತಿನಿತ್ಯ 1 ಸಾವಿರಕ್ಕೂ ಹೆಚ್ಚು ಗ್ರಾಹಕರು ಭೇಟಿ ನೀಡುತ್ತಾರೆ. ಹೋಟೆಲ್‌ಗಳಿಗೆ ಬೇಕಾಗುವ ಅಗತ್ಯ ವಸ್ತು ಪೂರೈಕೆ ಮಾಡುವ ಜನರಿಗೆ, ಸ್ವಿಗಿ, ಜೊಮ್ಯಾಟೊದ ಸಿಬ್ಬಂದಿಗೂ ಮತ ಹಾಕುವಂತೆ ತಿಳಿಸಲಾಗುವುದು' ಎಂದರು.

'ಕಾರ್ಮಿಕರಿಗೆ ವೇತನ ಸಹಿತ ರಜೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕರಿಗೆ ಮತದಾನದ ಅರಿವು ಮೂಡಿಸಲು ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘದಲ್ಲಿ (ಕಾಸಿಯಾ) ಬಿಬಿಎಂಪಿ ವತಿಯಿಂದ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತು ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿಗಳಲ್ಲಿ ಮತದಾನದ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮಂಗಳವಾರ ಚಾಲನೆ ನೀಡಿದರು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಎಲ್ಲಾ ವಲಯಗಳಲ್ಲಿರುವ ಐಟಿ-ಬಿಟಿ ಸಂಸ್ಥೆಗಳು, ಕಾರ್ಖಾನೆಗಳು ಮತ್ತು ಗಾರ್ಮೆಂಟ್ಸ್ ಉದ್ಯೋಗಿಗಳು ಕಾರ್ಯನಿರ್ವಹಿಸುವ ಸ್ಥಳಕ್ಕೆ ಖುದ್ದಾಗಿ ಭೇಟಿಯಾಗಿ ಮತದಾನದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಸಾಕಷ್ಟು ಮಂದಿ ಕೆಲಸ ಮಾಡುತ್ತಿದ್ದು, ಅವರೆಲ್ಲರಿಗೂ ತಪ್ಪದೆ ಮತದಾನ ಮಾಡುವಂತೆ ತಮ್ಮ ಸಂಸ್ಥೆಗಳ ವತಿಯಿಂದ ಅರಿವು ಮೂಡಿಸುವ ಕೆಲಸ ಮಾಡಬೇಕು. ಉದ್ಯಮಿಗಳು ತಮ್ಮ- ತಮ್ಮ ಕೈಗಾರಿಕೆಗಳಲ್ಲಿ ಮತದಾನ ಜಾಗೃತಿಯ ಭಿತ್ತಿಪತ್ರಗಳನ್ನು ಅಂಟಿಸಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಎಲ್ಲರೂ ಈ ಪ್ರಜಾಪ್ರಭುತ್ವದ ಹಬ್ಬದ ದಿನವಾದ ಮೇ 10ರಂದು ತಪ್ಪದೇ ಮತದಾನದ ಮಾಡುವಂತೆ ಕೋರಿದರು.

ಕಾಸಿಯಾ ಅಡಿಯಲ್ಲಿರುವ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಸುಮಾರು 5.6 ಲಕ್ಷ ಮಂದಿ ಕಾರ್ಯನಿರ್ವಹಿಸುತ್ತಿದ್ದು, ಮತದಾನದ ದಿನ ಎಲ್ಲರಿಗೂ ವೇತನ ಸಹಿತ ರಜೆ ನೀಡಿ ತಪ್ಪದೇ ಮತದಾನ ಮಾಡಲು ಉದ್ಯೋಗಿಗಳಿಗೆ ತಿಳಿಸಲಾಗುವುದೆಂದು ಸಭೆಯಲ್ಲಿ ಭಾಗವಹಿಸಿದ್ದ ಉದ್ಯಮಿಗಳು ಭರವಸೆ ನೀಡಿದರು.

ದಕ್ಷಿಣ ವಲಯ ಆಯುಕ್ತ ಜಯರಾಮ ರಾಯಪುರ, ಕಾಸಿಯಾ ಅಧ್ಯಕ್ಷ ಕೆ.ಎನ್. ನರಸಿಂಹಮೂರ್ತಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಸಂಗಪ್ಪ ಸೇರಿದಂತೆ ಕೈಗಾರಿಕೋದ್ಯಮಿಗಳು, ಮಹಿಳಾ ಉದ್ಯಮಿಗಳ ಸಂಘ ಅವೇಕ್ ನ ಪ್ರತಿನಿಧಿಗಳು ಮತ್ತು ಜಿಟಿ ಮತ್ತು ಟಿಸಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ರಾಜಾರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರದ ಎಸ್‌ಯು.ಸಿ.ಐ.(ಸಿ) ಪಕ್ಷದ ಅಭ್ಯರ್ಥಿ ವಿ. ಜ್ಞಾನಮೂರ್ತಿ ಅವರು ಕಾರ್ಯಕರ್ತರೊಂದಿಗೆ ರಾಜರಾಜೇಶ್ವರಿನಗರ ದ್ವಾರದಿಂದ ಕಾಲ್ನಡಿಗೆಯಲ್ಲಿ ಚುನಾವಣಾಧಿಕಾರಿಗಳ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು

ಭ್ರಷ್ಟರ ಪಾಲಿನ 'ಕಾಮಧೇನು' ಬಿಡಿಎ: ಬಡಾವಣೆಗಳಿಗೆ ಸಿಗದ ಮೂಲಸೌಕರ್ಯ

ಸಿಗದ ಪರಿಹಾರ: ಸಂತ್ರಸ್ತರ ಅರಣ್ಯರೋದನ

• ಆದಿತ್ಯ ಕೆ.ಎ.

ಬೆಂಗಳೂರು: ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ, ಪರಿಹಾರ ವಿತರಣೆಯಲ್ಲಿ ಲೋಪ, ವಸತಿ ಯೋಜನೆಯಲ್ಲಿ ಭ್ರಷ್ಟಾಚಾರ, ಕಾಮಗಾರಿಗಳಿಗೆ ಗುತ್ತಿಗೆಯಲ್ಲಿ ಅಕ್ರಮ, ನಿಯಮಗಳ ಉಲ್ಲಂಘನೆ...

ಇವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಿರುದ್ಧ ಪದೇ ಪದೇ ಕೇಳಿಬರುತ್ತಿರುವ ಗಂಭೀರ ಆರೋಪಗಳು.

ರಾಜಧಾನಿಯ ಜನರ ನೆಮ್ಮದಿಯ ಜೀವನಕ್ಕೆ ದಾರಿ ತೋರಬೇಕಿದ್ದ ಬಿಡಿಎ ಭ್ರಷ್ಟಾಚಾರದ ಆಗರ ಎನ್ನುವುದು ಸಾಮಾನ್ಯ ಮಾತು. ರಾಜಧಾನಿಯ ಆಡಳಿತದ ಚುಕ್ಕಾಣಿ ಹಿಡಿದಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜತೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ ಭ್ರಷ್ಟರ ಕೂಪವಾಗಿದೆ ಎಂಬುದು ನಿವೇಶನದಾರರು ಹಾಗೂ ಸಂತ್ರಸ್ತರ ಆರೋಪ.

ಭ್ರಷ್ಟರ ಪಾಲಿಗೆ ಸಮೃದ್ಧವಾಗಿ ಮೇಯುವ ಹುಲ್ಲುಗಾವಲು ಎಂಬುದು ಹಲವು ಪ್ರಕರಣಗಳಲ್ಲಿ ಸಾಬೀತಾಗಿದೆ. ಆದರೂ ಬದಾವಣೆಯಾಗಿಲ್ಲ ಎಂದು ಹೋರಾಟಗಾರರು ಹೇಳುತ್ತಾರೆ. ಈ ಕಳಂಕದಿಂದ ಹೊರಬರುವ ಪ್ರಯತ್ನಗಳೂ ನಡೆಯುತ್ತಿಲ್ಲ.

ಶಾಲೆ ನಿರ್ಮಿಸುವುದಾಗಿ ಶಾಸಕರೊಬ್ಬರು ಬಿಡಿಎನಿಂದ ನಿವೇಶನ ಪಡೆದಿದ್ದರು. ನಿಗದಿತ ಉದ್ದೇಶಕ್ಕೆ ಆ ನಿವೇಶನ ಬಳಸಿಕೊಂಡಿರಲಿಲ್ಲ. ನಿಗದಿತ ಉದ್ದೇಶಕ್ಕೆ ಬಳಸದಿದ್ದರೆ ಎರಡು ವರ್ಷಗಳ ಒಳಗೆ ಆಗ ನಿವೇಶನ ವಾಪಸ್ ಪಡೆಯಬೇಕೆಂಬ ನಿಯಮವಿದೆ. ಆದರೆ, ರಾಜಕೀಯ ಪ್ರಭಾವಕ್ಕೆ ಒಳಗಾಗಿದ್ದ ಅಧಿಕಾರಿಗಳು ಯಾವ ಕ್ರಮವನ್ನೂ ಕೈಗೊಂಡಿರಲಿಲ್ಲ.

ರಾಜಧಾನಿ ಒಡಲು ಧ್ವನಿ

ರಾಜಧಾನಿಯಲ್ಲಿ ರಿಯಲ್ ಎಸ್ಟೇಟ್‌ಗೆ ಶುಕ್ರದೆಸೆ ಬಂದ ಮೇಲೆ ಬಿಡಿಎ ಸಹ ಸಾಕಷ್ಟು ಬಡಾವಣೆ ನಿರ್ಮಿಸಿದೆ. ಅಂತಹ ಬಡಾವಣೆಗಳಿಗೆ ಹಲವು ವರ್ಷಗಳು ಕಳೆದರೂ ಮೂಲಸೌಕರ್ಯವನ್ನೇ ಕಲ್ಪಿಸಿಲ್ಲ.

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನಿವೇಶನ ಖರೀದಿಸಿ ಮನೆ ನಿರ್ಮಿಸಿದ್ದವರು ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬನಶಂಕರಿ 6ನೇ ಹಂತ, ಕೆಂಪೇಗೌಡ ಬಡಾವಣೆಗಳಲ್ಲಿ ಸೌಕರ್ಯಗಳ ಕೊರತೆ ಎದುರಾಗಿದೆ. ಬರೀ ನಿವೇಶನಗಳನ್ನಾಗಿ ಪರಿವರ್ತಿಸಿ ಬಿಡಿಎ ಸುಮ್ಮನಾಗುತ್ತಿದೆ! ಅಲ್ಲಿನ ನಿವಾಸಿಗಳಿಗೆ ಮಳೆಗಾಲ ಸಂಕಷ್ಟ ತಂದೊಡ್ಡುತ್ತಿದೆ.


'ಬನಶಂಕರಿಯ ಹಲವು ಬ್ಲಾಕ್‌ನಲ್ಲಿ ಬಡಾವಣೆ ನಿರ್ಮಾಣವಾಗಿ 23 ವರ್ಷ ಕಳೆದಿದೆ. ಇಂದಿಗೂ ಯು.ಜಿ.ಡಿ ವ್ಯವಸ್ಥೆ ಸರಿಯಿಲ್ಲ. ತ್ಯಾಜ್ಯ ವಿಲೇವಾರಿ ಘಟಕ ಇಲ್ಲ. ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ರಸ್ತೆಗಳು ಅಧ್ವಾನವಾಗಿವೆ. ಖಾಸಗಿ ಲೇಔಟ್‌ಗಿಂತ ಕಡೆಯಾಗಿದೆ. ಯಾವುದೇ ನಾಮಫಲಕಗಳು ಇಲ್ಲ' ಎಂದು ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ವಿ.ಸತೀಶ ಸಮಸ್ಯೆ ಕುರಿತು ಬೆಳಕು ಚೆಲ್ಲುತ್ತಾರೆ.

'ನಗರಾಭಿವೃದ್ಧಿ ನಿಯಮಗಳ ಪ್ರಕಾರ ಬಡಾವಣೆಯಲ್ಲಿ ನಾಗರಿಕ ಸೌಲಭ್ಯಗಳು ಮತ್ತು ಉದ್ಯಾನಕ್ಕೆ ಸಾಕಷ್ಟು ಜಾಗ ಮೀಸಲಿಡಬೇಕು. ಆದರೆ, ಬಡಾವಣೆಯಲ್ಲಿ ಮೀಸಲಿಟ್ಟ ಜಾಗವು ಅನುಪಯುಕ್ತ ವಸ್ತುಗಳ ವಿಲೇವಾರಿ ತಾಣವಾಗಿದೆ. ಅಭಿವೃದ್ಧಿ ಕಾಣದೇ ಗಿಡಗಂಟಿಗಳು ಬೆಳೆದು ಉದ್ಯಾನ ಹಾಳುಕೊಂಪೆಯಾಗಿದೆ' ಎಂದು ನಿವಾಸಿಗಳು ದೂರುತ್ತಾರೆ.

ಇನ್ನು ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಭೂಸ್ವಾಧೀನ ಮಾಡಿಕೊಂಡಿದ್ದ ಭೂಮಿಗೆ ಇದುವರೆಗೂ ಪರಿಹಾರ ವಿತರಿಸಿಲ್ಲ.

ಯಲಹಂಕ ತಾಲ್ಲೂಕಿನ 17 ಗ್ರಾಮಗಳ 3,546 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ವಶಕ್ಕೆ ಪಡೆದು ಬಿಡಿಎ ಬಡಾವಣೆ ನಿರ್ಮಿಸುತ್ತಿದೆ. 1894ರ ಬ್ರಿಟಿಷ್ ಕಾಯ್ದೆ ಅನ್ವಯ ಪರಿಹಾರ ಬೇಡ. ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯಿದೆ ಅಡಿ ಪರಿಹಾರ ನೀಡಬೇಕು ಎಂಬುದು ರೈತರ ಮನವಿ. ಆದರೆ, ಈ ಕೂಗಿಗೆ ಬಿಡಿಎ ಕಿಮ್ಮತ್ತು ನೀಡುತ್ತಿಲ್ಲ. ಇದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. 2008ರಿಂದ ಭೂಮಿ ಕಳೆದುಕೊಂಡಿದ್ದವರು ಪಂಜಿನ ಮೆರವಣಿಗೆ, ಪೊರಕೆ ಚಳವಳಿ, ಉಪವಾಸ ಸತ್ಯಾಗ್ರಹ ನಡೆಸಿದ್ದರೂ ಪರಿಹಾರ ಸಿಕ್ಕಿಲ್ಲ. ಇತ್ತು ಜಮೀನು ಇಲ್ಲ. ಅತ್ತ ಪರಿಹಾರವೂ ಇಲ್ಲ ಸ್ಥಿತಿಯಲ್ಲಿ ನೂರಾರು ಕುಟುಂಬಗಳಿವೆ.

'ನೀರಿಲ್ಲದ ಪ್ರತಿಷ್ಠಿತ ಬಡಾವಣೆ'



ಬನಶಂಕರಿ 6ನೇ ಹಂತದ ಹೊಸ ಬಡಾವಣೆ ಪಕ್ಕದಲ್ಲಿಯೇ ಕಾವೇರಿ ನೀರಿನ ಕೊಳವೆಗಳು ಹಾದು ಹೋಗಿದ್ದರೂ ನಮ್ಮ ಬಡಾವಣೆಗೆ ಮಾತ್ರ ನೀರಿನ ಭಾಗ್ಯ ದೊರೆತಿಲ್ಲ. ನೀರಿಗೆ ಕೊಳವೆಬಾವಿಗಳನ್ನೇ ಆಶ್ರಯಿಸಬೇಕಿದೆ. ಇದರಿಂದ ಅಂತರ್ಜಲಮಟ್ಟವು ಕುಸಿಯುತ್ತಿದೆ. ಕೆಲವರು ಟ್ಯಾಂಕರ್ ನೀರನ್ನು ಖರೀದಿಸುತ್ತಿದ್ದಾರೆ. ನೀರಿನ ವ್ಯವಸ್ಥೆ ಮಾಡದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರತಿಷ್ಠಿತ ಬಡಾವಣೆ ಇದು.

ಜಿ.ವಿ.ಸತೀಶ್,
ಪ್ರಧಾನ ಕಾರ್ಯದರ್ಶಿ, ಬನಶಂಕರಿ 6ನೇ ಹಂತದ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ

ಜಾನುವಾರುಗಳಿಗೆ ಸಂಕಷ್ಟ



ಭೂಸ್ವಾಧೀನ ಪಡಿಸಿಕೊಂಡಿರುವ ಗ್ರಾಮಗಳಲ್ಲಿ ಸುಮಾರು ಮೂರು ಸಾವಿರ ಜಾನುವಾರುಗಳಿವೆ. ಬಡಾವಣೆ ನಿರ್ಮಾಣಕ್ಕಾಗಿ ಜೆಸಿಬಿ ಮೂಲಕ ಫಲವತ್ತಾದ ಕೃಷಿಭೂಮಿ, ತೋಟ ಹಾಗೂ ವಿವಿಧ ಬೆಳೆಗಳನ್ನು ನಾಶಪಡಿಸಿರುವ ಪರಿಣಾಮ ಜಾನುವಾರುಗಳು ಮೇವಿಲ್ಲದೆ ನರಳುತ್ತಿವೆ. ಬಿಡಿಎ ತಕ್ಷಣ ಪಶು ಆಹಾರ ಒದಗಿಸಬೇಕು.

ಎಂ.ರಮೇಶ್, ರೈತಮುಖಂಡ, ರಾಮಗೊಂಡನಹಳ್ಳಿ

ದಾರಿ ತೋರುತ್ತಿಲ್ಲ



ಸಂತ್ರಸ್ತ ರೈತರಿಗೆ ಪರಿಹಾರ ನೀಡುವ ಅಥವಾ ಶೇ 60:40ರ ಅನುಪಾತದಡಿ ನಿವೇಶನ ಹಂಚಿಕೆ ಮಾಡುವ ವಿಚಾರದಲ್ಲಿಯೂ ಬಿಡಿಎ ಸ್ಪಷ್ಟತೆ ಇಲ್ಲ. ಹೋರಾಟಕಕ್ಕೂ ನ್ಯಾಯ ಸಿಕ್ಕಿಲ್ಲ. ಮುಂದಿನ ದಾರಿ ತೋರುತ್ತಿಲ್ಲ.

ಚಂದ್ರಿಕಾ, ರೈತ ಮಹಿಳೆ, ಬೆಟ್ಟಹಳ್ಳಿ

ಬೆಳೆಯೂ ನಾಶ



ಅರ್ಧ ಎಕರೆ ಜಮೀನಿನಲ್ಲಿ ಗುಲಾಬಿ ಹೂವು ಬೆಳೆದು ಮಾರಾಟ ಮಾಡುತ್ತಿದ್ದೆವು. ಅದೇ ಹಣದಲ್ಲಿ ಜೀವನ ನಡೆಸುತ್ತಿದ್ದೆವು. ಜಮೀನು ಸ್ವಾಧೀನಪಡಿಸಿಕೊಂಡ ಬಿಡಿಎ ಸರಿಯಾದ ಪರಿಹಾರ ನೀಡದೆ ಏಕಾಏಕಿ ಜಮೀನಿನಲ್ಲಿ ಬೆಳೆದಿದ್ದ ಬೆಳೆ ನಾಶಪಡಿಸಿದೆ. ಪರಿಹಾರದ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ಸ್ಪಷ್ಟವಾಗಿ ಯಾವುದನ್ನೂ ಹೇಳುತ್ತಿಲ್ಲ.

ರಾಧಮ್ಮ, ರೈತ ಮಹಿಳೆ, ರಾಮಗೊಂಡನಹಳ್ಳಿ

ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ: ಶಂಕರ್‌ನಾಯಕ್

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ನಮ್ಮ ತಂದೆ ಡಾ. ಎಂ. ಶಂಕರ್‌ನಾಯಕ್ ಅವರು ಹಿಂದೆ ಸಚಿವರಾಗಿದ್ದಾಗ ಮಾಡಿದ ಅಭಿವೃದ್ಧಿ ಕೆಲಸಗಳನ್ನು ಜನ ಮರೆತಿಲ್ಲ, ಇದೆ ನನಗೆ ಗೆಲುವು ತಂದುಕೊಡಲಿದೆ' ಎಂದು ಬಿಜೆಪಿ ಅಭ್ಯರ್ಥಿ ಸಪ್ತಗಿರಿ ಶಂಕರ್‌ನಾಯಕ್ ತಿಳಿಸಿದರು.

ಪಟ್ಟಣದ ಪಟೇಲ್ ಚೆನ್ನಪ್ಪ ಬಡಾವಣೆಯ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನಾಮಪತ್ರ ಸಲ್ಲಿಕೆಗೆ ಮುನ್ನ ಪೂಜೆ ಸಲ್ಲಿಸಿದ ಸಂದರ್ಭದಲ್ಲಿ ಮಾತನಾಡಿದ ಅವರು, ಕೋವಿಡ್ ಸಂದರ್ಭದಲ್ಲಿ ಸ್ವಂತ ಖರ್ಚಿನಿಂದ ಎರಡು ಉಚಿತ ಆಂಬ್ಯುಲೆನ್ ಮೂಲಕ ರೋಗಿಗಳ ಸೇವೆ ಮಾಡಿದ್ದು ಜನತೆ ನನ್ನನ್ನು ಬೆಂಬಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮತದಾರರಿಗೆ ನಡ್ಡಾ ಬೆದರಿಕೆ: ಆರೋಪ

ನವದೆಹಲಿ (ಪಿಟಿಐ): ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಕನ್ನಡಿಗ ಮತದಾರರಿಗೆ ಬೆದರಿಕೆ ಹಾಕುತ್ತಿದ್ದಾರೆ. ಇದು ಪ್ರಜಾಪ್ರಭುತ್ವದ ಮೇಲಿನ ರಾಜಾರೋಷ ದಾಳಿ ಎಂದು ಕಾಂಗ್ರೆಸ್ ಬುಧವಾರ ಆರೋಪಿಸಿದೆ.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಲು ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಜೈರಾಮ್ ರಮೇಶ್, ಕರ್ನಾಟಕದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಜೆ.ಪಿ. ನಡ್ಡಾ ಅವರು ಮಾಡಿರುವ ಭಾಷಣದ ವಿಡಿಯೊ ತುಣುಕೊಂದನ್ನು ಟ್ವಿಟ್ ಮಾಡಿದ್ದಾರೆ.

'ಕರ್ನಾಟಕದಲ್ಲಿ ಅಭಿವೃದ್ಧಿಯ ನದಿ ಹರಿಯುವುದನ್ನು ಖಚಿತಪಡಿಸಿಕೊಳ್ಳಲು ಕಮಲದ ಚಿಹ್ನೆಗೆ ಮತ ನೀಡಿ. ರಾಜ್ಯದಲ್ಲಿ ಅಭಿವೃದ್ಧಿಯು ನಿರಂತರ ಮುಂದುವರಿಯುತ್ತದೆ ಎಂಬುದು ಚುನಾವಣೆಗಳಲ್ಲಿ ಒಂದು ವಿಷಯವಾಗಿದೆ. ಆದ್ದರಿಂದ ರಾಜ್ಯವು ಮೋದಿ ಜಿ ಅವರ ಆಶೀರ್ವಾದದಿಂದ ದೂರವಿರದು. ಕಮಲದ ಚಿಹ್ನೆಗೆ ಮತ ಚಲಾಯಿಸುವಂತೆ ಮತ್ತು ಅಭಿವೃದ್ಧಿಯನ್ನು ಮುಂದೊಯ್ಯುವಂತೆ ನಾನು ನಿಮ್ಮಲ್ಲಿ ಮನವಿ ಮಾಡುವೆ' ಎಂದು ನಡ್ಡಾ ಭಾಷಣದಲ್ಲಿ ಹೇಳಿರುವುದು ಈ ವಿಡಿಯೊ ತುಣುಕಿನಲ್ಲಿದೆ.

'ಭಕ್ತಿಗೆ ಮಿತಿ ಇರಬೇಕು ನಡ್ಡಾ ಜೀ, ಕರ್ನಾಟಕದ ಜನರಿಗೆ ನೀವು ಯಾಕೆ ಬೆದರಿಕೆವೊಡ್ಡುತ್ತೀರಿ ಮತ್ತು ಹೆದರಿಸುತ್ತಿದ್ದೀರಿ? ನಡ್ಡಾ ಅವರು ಶೇ 40 ಕಮಿಷನ್ ಭ್ರಷ್ಟ ಬಿಜೆಪಿ ಸರ್ಕಾರಕ್ಕೆ ಮತ ಚಲಾಯಿಸದಿದ್ದರೆ ಕರ್ನಾಟಕದ ಜನರ ಸಾಂವಿಧಾನಿಕ ಹಕ್ಕುಗಳನ್ನು ನಿರ್ಬಂಧಿಸುವ ಬೆದರಿಕೆ ಹಾಕಿದ್ದಾರೆ. ನಾವು ರಾಜನ ಪ್ರಜೆಗಳಲ್ಲ. ಆದರೆ, ಸಂವಿಧಾನದಿಂದ ನಡೆಯುವ ಒಕ್ಕೂಟ ವ್ಯವಸ್ಥೆಯ ದೇಶದ ನಾಗರಿಕರು. ಕನ್ನಡಿಗರ ಆಶೀರ್ವಾದದೊಂದಿಗೆ ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಸರ್ಕಾರ ರಚಿಸಲಿದೆ' ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ಚುನಾವಣೆ ನೀತಿ ಸಂಹಿತೆ ಜಾರಿಯಿಂದಾಗಿ ಪೂರ್ವ ನಿಗದಿ ಕೆಲ ಕಾರ್ಯಕ್ರಮಗಳು ರದ್ದು

ಸಾಂಸ್ಕೃತಿಕ ಲೋಕಕ್ಕೂ ತಟ್ಟಿದ ಚುನಾವಣೆ ಬಿಸಿ

• ವರುಣ ಹೆಗಡೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಬಿಸಿ ಸಾಂಸ್ಕೃತಿಕ ಲೋಕಕ್ಕೂ ತಟ್ಟಿದ್ದು, ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮುಂಚಿತವಾಗಿ ನಿಗದಿಯಾಗಿದ್ದ ಕೆಲ ಸಾಂಸ್ಕೃತಿಕ ಕಾರ್ಯಕ್ರಮಗಳು ರದ್ದಾಗುತ್ತಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಂಗಮಂದಿರಗಳ ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಪೋರ್ಟಲ್ ರೂಪಿಸಿ, ಅವಕಾಶ ಕಲ್ಪಿಸಿದೆ. ಮೂರು ತಿಂಗಳು ಮುಂಚಿತವಾಗಿ ಕಾಯ್ದಿರಿಸಬಹುದಾಗಿದೆ. ಏಪ್ರಿಲ್-ಮೇ ತಿಂಗಳು ಮಕ್ಕಳಿಗೆ ಬೇಸಿಗೆ ರಜೆ ಇರುವುದರಿಂದ ಪ್ರತಿ ವರ್ಷ ಈ ಅವಧಿಯಲ್ಲಿ ತಿಂಗಳು ಪೂರ್ತಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಇದರಿಂದಾಗಿ ಇಲ್ಲಿನ ಸರ್ಕಾರಿ ರಂಗಮಂದಿರಗಳಿಗೆ ಸಹಜವಾಗಿಯೇ ಬೇಡಿಕೆ ಹೆಚ್ಚಿರಲಿದೆ. ಆದರೆ, ಈ ಬಾರಿ ಚುನಾವಣೆ ನಡೆಯುತ್ತಿರುವುದರಿಂದ ಕಾರ್ಯಕ್ರಮ ನಡೆಸುವವರು ಚುನಾವಣಾ ಆಯೋಗದಿಂದ ಅನುಮತಿ ಪತ್ರ ಪಡೆಯಬೇಕೆಂದು ಇಲಾಖೆ ಸೂಚಿಸಿದೆ. ಅದೇ ರೀತಿ, ಹೆಚ್ಚು ಜನರು ಸೇರಿಸದೆ, ರಾಜಕಾರಣಿಗಳಿಗೆ ಆಹ್ವಾನ ನೀಡದೆ ಕಾರ್ಯಕ್ರಮ ನಡೆಸುವ ಬಗ್ಗೆ ಪೊಲೀಸರು ಮುಚ್ಚಳಿಕೆ ಬರೆಸಿಕೊಳ್ಳುತ್ತಿದ್ದಾರೆ.



ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರ

ಇದರಿಂದಾಗಿ ಕೆಲವರು ಕಾರ್ಯಕ್ರಮ ರದ್ದುಗೊಳಿಸುತ್ತಿದ್ದಾರೆ.

ಇಲಾಖೆಯಡಿ ಒಟ್ಟು 32 ಮಹಾಪುರುಷರ ಜಯಂತಿಗಳನ್ನು ಆಚರಿಸಲಾಗುತ್ತಿದೆ. 2023ನೇ ಸಾಲಿನ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಆರು ಜಯಂತಿಗಳನ್ನು ಆಚರಿಸಬೇಕಿದೆ. ಜಯಂತಿ ಆಚರಿಸುವ ಸಂಬಂಧ ರವೀಂದ್ರ ಕಲಾಕ್ಷೇತ್ರವನ್ನು ಕಾಯ್ದಿರಿಸಲಾಗಿತ್ತು. ಮಾರ್ಚ್ 29ರಿಂದ ಮೇ 15ರವರೆಗೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ಜಯಂತಿಗಳನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲು ಸೂಚಿಸಲಾಗಿದೆ. ಇದರಿಂದಾಗಿ ಕಲಾಕ್ಷೇತ್ರದಲ್ಲಿ ಪೂರ್ವನಿಗದಿಯಾಗಿದ್ದ ಈ ಜಯಂತಿ ಕಾರ್ಯಕ್ರಮವೂ ರದ್ದಾಗುವ ಸಾಧ್ಯತೆಯಿದೆ.

ಗೊಂದಲದಲ್ಲಿ ಆಯೋಜಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ. ರವೀಂದ್ರ ಕಲಾಕ್ಷೇತ್ರವು ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ತಲಾ 28 ದಿನಗಳು ಕಾಯ್ದಿರಿಸಲ್ಪಟ್ಟಿದೆ. ಅದೇ ರೀತಿ, ನಯನ ಸಭಾಂಗಣ 26 ಹಾಗೂ 17 ದಿನಗಳು, ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯ 18 ಹಾಗೂ 22 ದಿನಗಳು ಮುಂಚಿತವಾಗಿ ಬುಕ್ಕಿಂಗ್ ಆಗಿವೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರಿಗೆ ಅವಕಾಶ ನೀಡದಿರುವುದರಿಂದ ಈಗಾಗಲೇ 5ಕ್ಕೂ ಅಧಿಕ ಕಾರ್ಯಕ್ರಮ ರದ್ದಾಗಿವೆ. ಇನ್ನೂ ಕೆಲ ಸಂಘ–ಸಂಸ್ಥೆಗಳು ಕಾರ್ಯಕ್ರಮ ನಡೆಸುವ ಬಗ್ಗೆ ಗೊಂದಲಕ್ಕೆ ಒಳಗಾಗಿವೆ.

ಸರ್ಕಾರಿ ರಂಗಮಂದಿರಗಳ ಕಾಯ್ದಿರಿಸುವಿಕೆಯಲ್ಲಿ ಪಾರದರ್ಶಕತೆ ತರಲು 2022ರ ಏ.1ರಿಂದ ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಸರ್ಕಾರಿ ನಿಯಮಗಳ ಅನುಸಾರ ನಿಗದಿಯಾದ ಕಾರ್ಯಕ್ರಮ ನಿಂತಲ್ಲಿ, ಈಗ ಹಣ ಹಿಂತಿರುಗಿಸುವ ಬದಲು, ಮತ್ತೊಂದು ದಿನಾಂಕ ಆಯ್ಕೆಗೆ ಅವಕಾಶ ನೀಡಲಾಗುತ್ತಿದೆ. ಮೂರು ದಿನಗಳಿಗಿಂತಲೂ ಹೆಚ್ಚಿನ ಅವಧಿ ಸತತವಾಗಿ ಸಭಾಂಗಣ ಕಾಯ್ದಿರಿಸಲು ಅವಕಾಶವಿಲ್ಲ.

'ಠೇವಣಿ ಮಾತ್ರ ವಾಪಸ್'

'ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಕಾರ್ಯಕ್ರಮ ನಡೆಸಲು ಚುನಾವಣಾ ಆಯೋಗದಿಂದ ಅನುಮತಿ ಪತ್ರ ಪಡೆಯುವಂತೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಸೂಚಿಸಲಾಗಿದೆ. ಈಗ ಕಾರ್ಯಕ್ರಮಗಳಿಗೆ ಅಷ್ಟಾಗಿ ಜನ ಬರುತ್ತಿಲ್ಲ. ಕೆಲವರು ಕಾರ್ಯಕ್ರಮ ರದ್ದುಪಡಿಸುತ್ತಿದ್ದಾರೆ. ಮುಂಗಡವಾಗಿ ಕಾಯ್ದಿರಿಸಿದ ಕಾರ್ಯಕ್ರಮ ರದ್ದುಪಡಿಸಿದಲ್ಲಿ ಠೇವಣಿ ಹಣ ಮಾತ್ರ ವಾಪಸ್ ನೀಡಲಾಗುತ್ತದೆ' ಎಂದು ಸಂಸ್ಕೃತಿ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ರಂಗಮಂದಿರ ಕಾಯ್ದಿರಿಸುವಿಕೆಗೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಹಣವನ್ನು ಪಾವತಿಸಿಕೊಳ್ಳಲಾಗುತ್ತದೆ. ಆ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗುತ್ತದೆ. ಇಲಾಖೆ ವತಿಯಿಂದಲೇ ಕಾರ್ಯಕ್ರಮ ರದ್ದುಗೊಳಿಸಿದರೆ ಠೇವಣಿ ಜತೆಗೆ ಬಾಡಿಗೆ ಹಣ, ಜಿಎಸ್‌ಟಿ ಮೊತ್ತವನ್ನೂ ಮರಳಿಸುತ್ತೇವೆ' ಎಂದು ಹೇಳಿದರು.

ಪದ್ಮನಾಭ ನಗರದಲ್ಲಿ ಯಾರೇ ನಿಂತರೂ ಚಿಂತೆಯಿಲ್ಲ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ರಾಮನಗರ: ಪದ್ಮನಾಭ ನಗರ ಕ್ಷೇತ್ರದಲ್ಲಿ ಬಿಜೆಪಿ ವಿರುದ್ಧ ಡಿ.ಕೆ. ಸುರೇಶ್ ಸೇರಿದಂತೆ ಯಾರು ಬೇಕಾದರೂ ಸ್ಪರ್ಧೆ ಮಾಡಬಹುದು. ಆದರೆ ಅದರಲ್ಲಿ ಯಶಸ್ಸು ಕಾಣಲಾರರು ಎಂದು ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ರಾಮನಗರದಲ್ಲಿ ಬುಧವಾರ ಬಿಜೆಪಿ ಅಭ್ಯರ್ಥಿ ಗೌತಮ್ ಗೌಡ ನಾಮಪತ್ರ ಸಲ್ಲಿಕೆ ಸಂದರ್ಭ ಪತ್ರಕರ್ತರ ಜೊತೆ ಅವರು ಮಾತನಾಡಿದರು. ಪ್ರಜಾಪ್ರಭುತ್ವ ಉಳಿಸಲು ಪದ್ಮನಾಭ ನಗರದಲ್ಲಿ ಸ್ಪರ್ಧೆಗೆ ಸಿದ್ಧ ಎಂಬ ಡಿ.ಕೆ. ಸುರೇಶ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು 'ಮೊದಲು ಕನಕಪುರದಲ್ಲಿ ಪ್ರಜಾಪ್ರಭುತ್ವ ಉಳಿಸಲು ಅವರು ಕೆಲಸ ಮಾಡಲಿ. ಘಟಾನುಘಟಿ ನಾಯಕರಿದ್ದರೂ ರಾಮನಗರವು ಹಿಂದುಳಿದ ಜಿಲ್ಲೆಗಳ ಪಟ್ಟಿಯಲ್ಲಿ ಇದೆ. ಕನಕಪುರ ರಿಪಬ್ಲಿಕ್‌ನಲ್ಲಿ ಜನರು ಡಿ.ಕೆ. ಸಹೋದರರ ವರ್ತನೆಯಿಂದ ಬೇಸತ್ತಿದ್ದಾರೆ. ಅಲ್ಲಿ ಪ್ರಜಾಪ್ರಭುತ್ವ ಉಳಿಸಲೆಂದೇ ಪಕ್ಷವು ಹಿರಿಯ ನಾಯಕರಾದ ಆರ್. ಅಶೋಕ್ ಅವರನ್ನು ಕಣಕ್ಕೆ ಇಳಿಸಿದೆ. ಚುನಾವಣೆಯಲ್ಲಿ ಜನರೇ ಉತ್ತರ ನೀಡಲಿದ್ದಾರೆ' ಎಂದರು.

ಮುಸ್ಲಿಮರ ಮೀಸಲಾತಿ ರದ್ದು ವಿಚಾರವಾಗಿ ಪ್ರತಿಕ್ರಿಯಿಸಿದ ಅವರು ' ಧರ್ಮ ಆಧಾರಿತ ಮೀಸಲಾತಿಗೆ ಅವಕಾಶ ಇಲ್ಲ. ಆರ್ಥಿಕವಾಗಿ ಹಿಂದುಳಿದ ವರ್ಗದವರಲ್ಲಿ ಅವರಿಗೂ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಆದರೆ ಕಾಂಗ್ರೆಸ್ ಇದೆಲ್ಲವನ್ನೂ ಕಿತ್ತೊಗೆಯುವುದಾಗಿ ಹೇಳುತ್ತಿದೆ. ಅವರಿಂದ ಏನನ್ನೂ ಕಿತ್ತು ಹಾಕಲು ಆಗದು' ಎಂದು ವ್ಯಂಗ್ಯವಾಡಿದರು.

ಸುದೀಪ್‌ರಂತಹ ಜನಪ್ರಿಯ ನಟ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರವಾಗಿ ಬಂದು ಪ್ರಚಾರ ಮಾಡುತ್ತಿರುವುದಕ್ಕೆ ಹೆಮ್ಮೆಯ ಸಂಗತಿ. ಅವರ ಅಭಿಮಾನಿಗಳೂ ಬೆಂಬಲ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬ್ಯಾಂಕ್, ಕಂಪನಿಗಳು,ಸರ್ಕಾರಿ ಸಂಸ್ಥೆಗಳಲ್ಲಿ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿ ಗುಂಪು ಚರ್ಚೆಯೂ ಒಂದು. ಗುಂಪು ಚರ್ಚೆಯಲ್ಲಿ ಯಶಸ್ಸು ಗಳಿಸಲು ಒಂದಷ್ಟು ಸಿದ್ಧತೆಗಳು ಅಗತ್ಯ. ಅಭ್ಯರ್ಥಿಗಳು ಯಾವ ರೀತಿ ತಯಾರಿ ನಡೆಸಬೇಕು? – ಈ ಕುರಿತ ಮಾಹಿತಿ ಇಲ್ಲಿದೆ.

‘ಗುಂಪು ಚರ್ಚೆ’ ಯಶಸ್ಸಿಗೆ ತಂತ್ರಗಳು

ನಾಗೇಶ ಜಿ. ವೈದ್ಯ



ಸೂಕ್ತ ಕೌಶಲ ಮತ್ತು ಸಾಮರ್ಥ್ಯ ಹೊಂದಿದ ಅಭ್ಯರ್ಥಿಗಳನ್ನು ಉದ್ಯೋಗಕ್ಕೆ ನೇಮಕ ಮಾಡಿಕೊಳ್ಳುವಾಗ ಹಲವು ಕಂಪನಿಗಳು ವಿವಿಧ ಪರಿಕರಗಳನ್ನು ಬಳಸುತ್ತವೆ. ಅದರಲ್ಲಿ ಗುಂಪು ಚರ್ಚೆಯೂ ಒಂದು. ವೈಯಕ್ತಿಕ ಸಂದರ್ಶನಕ್ಕಿಂತ ಹೆಚ್ಚು ನಿಖರವಾಗಿ ಅಭ್ಯರ್ಥಿಯ ಸಂವಹನ, ಬುದ್ಧಿವಂತಿಕೆ, ಸಮಸ್ಯೆಗಳ ನಿರ್ವಹಣೆಯ ಚಾಕಚಕ್ಯತೆ, ಹಾಗೂ ನಾಯಕತ್ವದ ಗುಣಗಳನ್ನು ಮೌಲ್ಯಮಾಪನ ಮಾಡಲು ಗುಂಪು ಚರ್ಚೆ(Group Discussion) ಸಹಕಾರಿ. ಹಾಗಾಗಿ, ಈ ಪರಿಕರವನ್ನು ವ್ಯಾಪಕವಾಗಿ ಬಳಸಲಾಗುತ್ತದೆ.

ಬ್ಯಾಂಕ್‌ಗಳು ಸಿಬ್ಬಂದಿ ನೇಮಕಾತಿಯ ವೇಳೆ ಅಭ್ಯರ್ಥಿಗಳಿಗೆ ಗುಂಪು ಚರ್ಚೆ ಏರ್ಪಡಿಸುತ್ತವೆ. ಸರ್ಕಾರಿ ಸಂಸ್ಥೆಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಸಹ ಉದ್ಯೋಗಕ್ಕೆ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವಾಗ, ಸಂದರ್ಶನಕ್ಕೆ ಪೂರ್ವಭಾವಿಯಾಗಿ ಗುಂಪು ಚರ್ಚೆಗೆ ಆಹ್ವಾನಿಸುತ್ತವೆ. ಕ್ಯಾಟ್ (CAT)ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎಂಬಿಎ ಕಾಲೇಜುಗಳಲ್ಲಿ ಪ್ರವೇಶ ಪಡೆಯಲಿಕ್ಕೂ ಗುಂಪು ಚರ್ಚೆಯಲ್ಲಿ ಆಯ್ಕೆಯಾಗುವುದು ಅನಿವಾರ್ಯ.

ಸುಮಾರು ಅರ್ಧ ಗಂಟೆ ಅವಧಿಯಲ್ಲಿ ನಡೆಯುವ ಗುಂಪು ಚರ್ಚೆಯಲ್ಲಿ, ನೀಡಲಾದ ವಿಷಯ ಅಥವಾ ಸಮಸ್ಯೆಯನ್ನು ಪರಿಹರಿಸಲು ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ. ಕಂಪನಿಗೆ ಇದು ಸಮಯ ಮತ್ತು ಸಂಪನ್ಮೂಲಗಳನ್ನು ಉಳಿಸಿದರೆ, ಅಭ್ಯರ್ಥಿಗೆ ತನ್ನ ವಿಭಿನ್ನ ದೃಷ್ಟಿಕೋನ, ಇತರರೊಂದಿಗೆ ಹೊಂದಾಣಿಕೆ, ಗುಂಪಿನಲ್ಲಿ ಕಾರ್ಯ ನಿರ್ವಹಣೆಯ ವೈಖರಿ ಹಾಗೂ ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ಅನುವು ಮಾಡಿಕೊಡುತ್ತದೆ.

ಏಕಕಾಲದಲ್ಲಿ ಅಭ್ಯರ್ಥಿಗಳ ಸಂವಹನ ವಿಧಾನ, ಸೃಜನಶೀಲತೆ, ಇತರರನ್ನು ಆಲಿಸುವ ಮತ್ತು ಪ್ರೋತ್ಸಾಹಿಸುವ ರೀತಿ, ತಂಡದೊಡನೆ ಸಹಕರಿಸುವ ಹಾಗೂ ಅದನ್ನು ಮುನ್ನಡೆಸುವ ನಾಯಕತ್ವ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಅಳೆಯುವಲ್ಲಿ ಆಯ್ಕೆ ಸಮಿತಿಯ ಗಮನವಿರುತ್ತದೆ. ಈ ಗುಣಲಕ್ಷಣಗಳಿಂದ ಅಭ್ಯರ್ಥಿಯು ಆಯ್ಕೆ ಸಮಿತಿಯ ಗಮನ ಸೆಳೆಯಬೇಕಾಗುತ್ತದೆ. ಇದರಲ್ಲಿ ಯಶಸ್ವಿಯಾಗಲು ಕೆಲವು ತಂತ್ರಗಳಿವೆ. ಅವುಗಳು ಹೀಗಿವೆ.

ಸೂಕ್ತ ತಯಾರಿ: ಗುಂಪು ಚರ್ಚೆಗೆ ಹಾಜರಾಗುವಾಗ ಅಭ್ಯರ್ಥಿಗಳು (ಕಂಪನಿಯ ಉದ್ಯೋಗಕ್ಕೆ ಅಥವಾ ಸರ್ಕಾರಿ ಸಂಸ್ಥೆಗೆ ಸೇರುವವರು) ಕಂಪನಿ ಅಥವಾ ಸರ್ಕಾರಿ ಸಂಸ್ಥೆಗಳ ವಿವರ ಹಾಗೂ ಹುದ್ದೆಯ ಜವಾಬ್ದಾರಿಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯವಶ್ಯಕ. ಇಂಥ ವಿವರಗಳು ಸಂಬಂಧಿಸಿದ ಸರ್ಕಾರಿ ಸಂಸ್ಥೆ ಅಥವಾ ಕಂಪನಿಯ ಜಾಲತಾಣಗಳಲ್ಲಿ ಲಭ್ಯವಿರುತ್ತವೆ. ಗುಂಪು ಚರ್ಚೆಯಲ್ಲಿ ಕೊಡುವ ವಿಷಯವೂ, ಆ ಇಲಾಖೆ ಅಥವಾ ಕಂಪನಿಗೆ ಸಂಬಂಧಿಸಿದ್ದೇ ಆಗಿರುವ ಸಾಧ್ಯತೆಯೂ ಹೆಚ್ಚು. ಹಾಗಾಗಿ, ಈ ಮಾಹಿತಿಯ ಜೊತೆಗೆ, ನಿಮ್ಮ ವೈಯಕ್ತಿಕ ವಿವರಗಳನ್ನೂ ಮನನ ಮಾಡಿಕೊಳ್ಳಿ.

ಧ್ಯಾನವಿರಲಿ: ಗುಂಪು ಚರ್ಚೆಯ ಆರಂಭದಲ್ಲಿ ನಿಯಮಾವಳಿ ತಿಳಿಸಲಾಗುತ್ತದೆ. ವಿಷಯ ನೀಡಲಾಗುತ್ತದೆ. ಆಯ್ಕೆ ಸಮಿತಿ ನೀಡುವ ನಿರ್ದೇಶನದತ್ತ ಸಂಪೂರ್ಣ ಧ್ಯಾನವಿರಲಿ. ಯಾವುದೇ ಸಂದೇಹವಿದ್ದರೆ, ಮುಕ್ತವಾಗಿ ಪ್ರಶ್ನಿಸಿ ತಿಳಿದುಕೊಳ್ಳಿ. ಕೊಟ್ಟ ವಿಷಯವನ್ನು ಮನನ ಮಾಡಲು ಐದು ನಿಮಿಷ ಸಮಯ ನೀಡಲಾಗುತ್ತದೆ. ನಿಮಗೆ ಹೊಳೆದ ವಿಚಾರಗಳನ್ನು ಹಾಳೆಯಲ್ಲಿ ಬರೆದುಕೊಳ್ಳಿ. ಎಲ್ಲಿಂದ ಆರಂಭಿಸಬೇಕು ಹಾಗೂ ಏನನ್ನು ಹೇಳಬೇಕು ಎನ್ನುವುದನ್ನು ನಿರ್ಧರಿಸಿಕೊಳ್ಳಿ. ಕೊಟ್ಟಿರುವ ವಿಷಯದ ಬಗ್ಗೆ ಮಾಹಿತಿ ಇಲ್ಲದಿದ್ದರೆ ಒತ್ತಡಕ್ಕೆ ಒಳಗಾಗಬೇಡಿ. ಇತರರು ಹೇಳುವುದನ್ನು ಕೇಳಿಸಿಕೊಳ್ಳಿ. ಕೆಲವು ಅಂಶಗಳು ದೊರೆಯುತ್ತವೆ. ಅದನ್ನು ಮುಂದುವರಿಸಿ.

ಅವಕಾಶಕ್ಕೆ ಕಾಯಿರಿ: ಗುಂಪು ಚರ್ಚೆಯಲ್ಲಿ ಎಲ್ಲರಿಗೂ ಅವಕಾಶ ಸಿಗುತ್ತದೆ. ಅದರಲ್ಲಿ ಆಸಕ್ತಿಯಿಂದ ಭಾಗವಹಿಸುವುದು ಮುಖ್ಯ. ಕೆಲವು ಕಂಪನಿಗಳು ಸರದಿಯಲ್ಲಿ ಮಾತನಾಡಲು ಅವಕಾಶ ನೀಡಿದರೆ, ಕೆಲವೆಡೆ ಮುಕ್ತ ಅವಕಾಶವನ್ನು ನೀಡಲಾಗುತ್ತದೆ. ಸರದಿಯ ಪದ್ಧತಿ ಇದ್ದಲ್ಲಿ, ನಿಮ್ಮ ಸರದಿಗಾಗಿ ಕಾಯಿರಿ. ಚರ್ಚೆಯ ನಡುವೆ ಇತರರು ಮಾತನಾಡಲು ಹಿಂಜರಿದರೆ, ಆ ಅವಕಾಶವನ್ನು ಉಪಯೋಗಿಸಿಕೊಳ್ಳಿ. ಅಂತರ್ಮುಖಿಯಾಗಿರುವುದನ್ನು ಆಯ್ಕೆ ಸಮಿತಿಯವರು ಇಷ್ಟಪಡುವುದಿಲ್ಲ. ಆದರೆ, ಇತರರ ಅವಕಾಶವನ್ನು ಕಿತ್ತುಕೊಳ್ಳುವುದು ಮತ್ತು ನೀಡಲಾದ ಸಮಯಕ್ಕಿಂತ ಹೆಚ್ಚು ಮಾತನಾಡುವುದನ್ನು ದಾರ್ಷ್ಟ್ಯವೆಂದು ಪರಿಗಣಿಸಲಾಗುತ್ತದೆ.

ಸಂವಹನದ ರೀತಿ: ನಿಮ್ಮ ಮಾತುಗಳು ಸ್ಪಷ್ಟ ಹಾಗೂ ಸಂಕ್ಷಿಪ್ತವಾಗಿರಲಿ. ಆತ್ಮವಿಶ್ವಾಸದಿಂದ ಕೂಡಿರಲಿ. ನಿಮ್ಮ ಮಾತಿನಲ್ಲಿ ಹೊಸತನ ಹಾಗೂ ಸೃಜನಶೀಲತೆಯಿರಲಿ. ನಿಮ್ಮ ಆಲೋಚನೆಗಳನ್ನು ಬಲವಾಗಿ ಸಮರ್ಥಿಸಿಕೊಳ್ಳಿ. ಮಾತನಾಡುವಾಗ ನಿಮ್ಮ ಭಂಗಿಯ ಬಗ್ಗೆಯೂ ಲಕ್ಷ್ಯವಿರಲಿ.

ಇತರನ್ನು ಆಲಿಸಿ: ಇತರರು ಮಾತನಾಡುವಾಗ ಎಚ್ಚರಿಕೆಯಿಂದ ಆಲಿಸಿ. ಬೇರೆ ಅಭ್ಯರ್ಥಿಗಳು ಮಾತನಾಡುವಾಗ, ಮಧ್ಯ ಪ್ರವೇಶಿಸಬೇಡಿ. ಇತರರು ಬಳಸಿದ ಸಂಗತಿಗಳನ್ನು ಅನಗತ್ಯವಾಗಿ ಪುನರಾವರ್ತಿಸಬೇಡಿ.

ಪ್ರೋತ್ಸಾಹಿಸಿ: ಚರ್ಚೆಯುದ್ದಕ್ಕೂ ಇತರರೊಂದಿಗೆ ಗೌರವಯುತವಾಗಿ ವರ್ತಿಸಿ. ಯಾರೊಬ್ಬರ ವಾದ, ಪ್ರತಿವಾದ ನಿಮಗೆ ಇಷ್ಟವಾಗದಿದ್ದರೆ, ಅದು ಚರ್ಚೆಗೆ ಮಾತ್ರ ಸೀಮಿತವಾಗಿರಲಿ. ವೈಯಕ್ತಿಕವಾಗಿ ಯಾರ ವಿರುದ್ಧವೂ ಮಾತನಾಡದಿರಿ. ನಿಮ್ಮ ನಡೆಯಲ್ಲಿ ಸ್ನೇಹಪರತೆ ಎದ್ದು ಕಾಣಲಿ. ಉಳಿದವರನ್ನೂ ಅಭಿವ್ಯಕ್ತಿಸಲು ಪ್ರೋತ್ಸಾಹಿಸಿ. ಪ್ರತಿಯೊಬ್ಬ ಅಭ್ಯರ್ಥಿಯನ್ನೂ ಹೆಸರಿಂದ ಕರೆಯಿರಿ.

ಮಾತನಾಡಲು ಹಿಂಜರಿಯುವವರಿಗೆ, ಮಾತನಾಡುವಂತೆ ಪ್ರೋತ್ಸಾಹಿಸಿ. ಸಮಯ ಮೀರಿ ಮಾತನಾಡುವವರಿಗೆ ಅದನ್ನು ನೆನಪಿಸಿ, ಸಮಯಪ್ರಜ್ಞೆಯನ್ನು ತೋರಿಸಿ. ಒಳ್ಳೆಯ ರೀತಿಯಲ್ಲಿ ಚರ್ಚೆ ಮಾಡುತ್ತಿರುವವರನ್ನು ಅಭಿನಂದಿಸಿ. ಚರ್ಚೆ ಮುಕ್ತಾಯವಾಗುವಾಗ, ಇಡೀ ಚರ್ಚೆಯನ್ನು ವಿಶ್ಲೇಷಿಸಿ, ತಿರುಳನ್ನು ಸಂಕ್ಷಿಪ್ತವಾಗಿ ಹೇಳಿ, ಭಾಗವಹಿಸಿದ ಎಲ್ಲರಿಗೆ ಹಾಗೂ ಆಯ್ಕೆ ಸಮಿತಿಗೆ ವಂದನೆ ತಿಳಿಸಿ. ಹಾಗೆ ಮಾಡುವುದರಿಂದ ನೀವು ಸಂಸ್ಥೆಯನ್ನು ಮುನ್ನಡೆಸುವ ಸಾಮರ್ಥ್ಯವನ್ನು ಪ್ರದರ್ಶಿಸುತ್ತೀರಿ ಹಾಗೂ ಚರ್ಚೆಯಲ್ಲಿ ನಾಯಕರಾಗಿ ಹೊರಹೊಮ್ಮುತ್ತೀರಿ.

ಕೇಂದ್ರ ಬಿಂದುವಾಗಿ: ಚರ್ಚೆಯಲ್ಲಿ ನಿಮ್ಮ ಉಪಸ್ಥಿತಿಯು ಎದ್ದು ಕಾಣುವಂತೆ ನೋಡಿಕೊಳ್ಳುವುದು ಮತ್ತು ನಿಮ್ಮ ಕಡೆಗೆ ಗಮನವನ್ನು ಸೆಳೆಯುವುದು ಬಹಳ ಮುಖ್ಯ. ಆದರೂ, ಇತರ ಅಭ್ಯರ್ಥಿಗಳ ಮೇಲೆ ನಿಮ್ಮ ವಾದವನ್ನು ಹೇರಲು ಹೋಗಬೇಡಿ.

ನೀವು ನೀವಾಗಿರಿ: ಚರ್ಚೆಯುದ್ದಕ್ಕೂ ಗುಂಪಿನಲ್ಲಿ ಸಹಜವಾಗಿರಿ. ನಿಮ್ಮ ಸಂವಹನ ಪ್ರಾಮಾಣಿಕವಾಗಿರಲಿ. ಸಭ್ಯ, ಸೌಹಾರ್ದಯುತವಾದ ವರ್ತನೆಯಿರಲಿ. ಆಯ್ಕೆ ಸಮಿತಿಯ ಗಮನ ಸೆಳೆಯಲು, ನಿಮ್ಮದಲ್ಲದ ನಡವಳಿಕೆಯನ್ನು ಪ್ರದರ್ಶಿಸುವುದು ಹಾನಿಯನ್ನುಂಟುಮಾಡುತ್ತದೆ ಎನ್ನುವುದು ನೆನಪಿರಲಿ.

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ‘ಸಾಮಾನ್ಯ ಜ್ಞಾನ’ ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಮಾದರಿ ಪ್ರಶ್ನೋತ್ತರ

ಸಾಮಾನ್ಯ ಜ್ಞಾನ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) 1972ರಲ್ಲಿ ಹುಲಿ ಕಾರ್ಯಪಡೆ ಸಿದ್ಧಪಡಿಸಿದ ವರದಿಯಲ್ಲಿ ‘ದೇಶದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಹುಲಿಗಳ ಸಂರಕ್ಷಣೆಗೆ ತಕ್ಷಣವೇ ಅಗತ್ಯ ಕ್ರಮ ತೆಗೆದುಕೊಳ್ಳದಿದ್ದರೆ, ಅವು ಅಳಿದು ಹೋಗುತ್ತವೆ’ ಎಂದು ಹೇಳಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರ್ಕಾರ 1973ರ ಏಪ್ರಿಲ್‌ನಲ್ಲಿ ಹುಲಿಯೋಜನೆ ಆರಂಭಿಸಿತು. ಈಗ ದೇಶದಲ್ಲಿ ಹುಲಿಯೋಜನೆ ಆರಂಭವಾಗಿ 50 ವರ್ಷಗಳಾಗಿವೆ. 2022ರ ಹುಲಿ ಗಣತಿಯ ಪ್ರಕಾರ ದೇಶದಾದ್ಯಂತ 3167 ಹುಲಿಗಳು ಇವೆ.

2) ಹುಲಿ ಯೋಜನೆ ಆರಂಭಿಸುವ ಮೊದಲೇ, ಅಂದರೆ 1973ರಲ್ಲಿ ಬಂಡಿಪುರ ಪ್ರದೇಶದಲ್ಲಿ ಹುಲಿ ಸಂರಕ್ಷಣೆಗೆ ಕ್ರಮ ತೆಗೆದುಕೊಳ್ಳಲಾಗಿತ್ತು. 1900ರಲ್ಲೇ ಮೈಸೂರಿನ ಅರಸರು ‘ಮೈಸೂರು ಅರಣ್ಯ ಕಾಯ್ದೆ’ಜಾರಿಗೆ ತಂದಿದ್ದರು. ಬಂಡಿಪುರದ ಕೆಲವು ಭಾಗಗಳನ್ನು ಗುರುತಿಸಿ ಅಲ್ಲಿ ಬೇಟೆಯಾಡುವುದನ್ನು ನಿಷೇಧಿಸಲಾಗಿತ್ತು.

3) ಹುಲಿ ಯೋಜನೆಯ ಸುವರ್ಣ ಸಂಭ್ರಮ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಧಾನಿಯವರು ಬಂಡಿಪುರದಲ್ಲಿ ಸಫಾರಿ ನಡೆಸಿದರು.

4) ಹುಲಿ ಯೋಜನೆ ಆರಂಭವಾದಾಗ ದೇಶದಲ್ಲಿ 1827 ಹುಲಿಗಳಿದ್ದವು. ಪ್ರಸ್ತುತ ಜಗತ್ತಿನಲ್ಲಿರುವ ಶೇ 75ರಷ್ಟು ಹುಲಿಗಳು ನಮ್ಮ ದೇಶದಲ್ಲಿಯೇ ಇವೆ.

ಉತ್ತರ ಸಂಕೇತ:-

ಎ) ಮೊದಲ ಎರಡು ಹೇಳಿಕೆಗಳು ಮಾತ್ರ ಸರಿ
ಬಿ) ಕೊನೆಯ ಎರಡು ಹೇಳಿಕೆಗಳು ಮಾತ್ರ ಸರಿ
ಸಿ) ಎಲ್ಲಾ ಹೇಳಿಕೆಗಳು ಸರಿ ಡಿ) ಎಲ್ಲಾ ಹೇಳಿಕೆಗಳು ತಪ್ಪು

ಉತ್ತರ: ಸಿ

2) ಯಾವ ನಗರಗಳನ್ನು ಛತ್ರಪತಿ ಸಂಭಾಜಿ ನಗರ ಮತ್ತು ಧಾರಾಶಿವ ನಗರ ಎಂದು ಮರು ನಾಮಕರಣ ಮಾಡಲಾಗಿದೆ.

ಎ) ಔರಂಗಾಬಾದ್ ಮತ್ತು ಒಸ್ಮಾನಾಬಾದ್
ಬಿ) ಹೈದರಾಬಾದ್ ಮತ್ತು ಕಲಬುರ್ಗಿ
ಸಿ) ಔರಂಗಾಬಾದ್ ಮತ್ತು ವಡೋದರಾ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

3) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ‘ಆರ್ಟಮಿಸ್ 1, 2, 3’ ಎಂಬ ಯೋಜನೆಯ ಮೂಲಕ ಚಂದ್ರನ ಅಂಗಳಕ್ಕೆ ಮಾನವರನ್ನು ಕಳುಹಿಸುವ ಗುರಿಯನ್ನು ನಾಸಾ ಹೊಂದಿದೆ.

2) ಚಂದ್ರನ ಅಂಗಳದಲ್ಲಿ ಸದ್ಯದಲ್ಲಿಯೇ ಸಂಪರ್ಕ ಸಾಧನಗಳ ಸಹಾಯದಿಂದ 4ಜಿ ಕೆಲಸ ಮಾಡಲಿವೆ, ಅವು 2025ರಲ್ಲಿ ಗಗನಯಾತ್ರಿಗಳು ಚಂದ್ರನ ಅಂಗಳದಲ್ಲಿ ಕಾಲಿಟ್ಟ ಸಂದರ್ಭದಲ್ಲಿ ಸಹಾಯ ಮಾಡಲಿವೆ

3) ಚಂದ್ರನಲ್ಲಿ ಹೈಸ್ಪೀಡ್ ವೈರ್‌ಲೆಸ್ ಸಂಪರ್ಕದ ಮೂಲ ಸೌಕರ್ಯಗಳ ನಿರ್ಮಾಣಕ್ಕೆ ಅಗತ್ಯ ಉಪಕರಣಗಳನ್ನು ಸ್ಪೇಸ್-ಎಕ್ಸ್ ಗಗನ ನೌಕೆಯ ಮೂಲಕ ಕಳುಹಿಸಲಾಗುತ್ತದೆ.

4) ಚಂದ್ರನ ಮೇಲೆ ಹೈಸ್ಪೀಡ್ ವೈರ್‌ಲೆಸ್ ಸಂಪರ್ಕದ ಮೂಲಸೌಕರ್ಯಗಳನ್ನು ಸ್ಥಾಪಿಸಲು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಹಾಗೂ ಟೆಲಿಕಾಂ ದಿಗ್ಗಜ ನೊಕಿಯಾ ನಡುವೆ ಒಪ್ಪಂದ ಮಾಡಿಕೊಂಡಿವೆ.

5) ನಾಸಾ ಹೊಸದಾಗಿ ಆರಂಭಿಸಿದ ‘ಚಂದ್ರನಿಂದ ಮಂಗಳಕ್ಕೆ ಯೋಜನೆ’ ಮುಖ್ಯಸ್ಥರಾಗಿ ಭಾರತೀಯ ಮೂಲದ ಅಮಿತ್ ಕ್ಷತ್ರಿಯ ನೇಮಕ ಮಾಡಲಾಗಿದೆ.

ಉತ್ತರ ಸಂಕೇತಗಳು:

ಎ) 1,4 ಮತ್ತು 5 ಹೇಳಿಕೆಗಳು ಮಾತ್ರ ಸರಿಯಾಗಿವೆ
ಬಿ) 2, 3 ಮತ್ತು 5 ಹೇಳಿಗಳು ಮಾತ್ರ ಸರಿಯಾಗಿವೆ
ಸಿ) 1 ರಿಂದ 5ರವರೆಗಿನ ಎಲ್ಲ ಹೇಳಿಕೆಗಳೂ ಸರಿಯಾಗಿವೆ
ಡಿ) 1,4 ಮತ್ತು 5 ಹೇಳಿಕೆಗಳು ಮಾತ್ರ ಸರಿಯಾಗಿವೆ

ಉತ್ತರ:ಸಿ

4) ಇತ್ತೀಚೆಗೆ ‘ಇಂಡಿಯಾ ಜಸ್ಟಿಸ್ ರಿಪೋರ್ಟ್-2022’ ಬಿಡುಗಡೆಯಾಗಿದೆ ಆ ಹಿನ್ನೆಲೆಯಲ್ಲಿ ನೀಡಲಾದ ಹೇಳಿಕೆಗಳನ್ನು ಗಮನಿಸಿ

1) ಈ ವರದಿಯು ಪೊಲೀಸ್, ಕಾರಾಗೃಹಗಳು, ನ್ಯಾಯಾಂಗ ಮತ್ತು ಕಾನೂನು ಸಹಾಯ ಈ ಮೊದಲಾದ ವಿಷಯಗಳಲ್ಲಿ ಸಮಗ್ರ ಮೌಲ್ಯಮಾಪನ ಮಾಡಿದೆ. ಅದರಲ್ಲಿ ಕರ್ನಾಟಕ ರಾಜ್ಯವು ಅಗ್ರ ಸ್ಥಾನದಲ್ಲಿದೆ.

2) ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರುವ 18 ದೊಡ್ಡ, ಮಧ್ಯಮ ಗಾತ್ರದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ನಂತರದ ಸ್ಥಾನಗಳನ್ನು ತಮಿಳುನಾಡು, ತೆಲಂಗಾಣ, ಗುಜರಾತ್ ಮತ್ತು ಆಂಧ್ರಪ್ರದೇಶ ರಾಜ್ಯಗಳು ಪಡೆದಿವೆ.

3) ಭಾರತವು 20,076 ನ್ಯಾಯಾಧೀಶರನ್ನು ಹೊಂದಿದ್ದು, ಸುಮಾರು ಶೇ 22 ಮಂಜೂರಾದ ಹುದ್ದೆಗಳು ನೇಮಕವಾಗದೇ ಖಾಲಿ ಇವೆ.

4) ಜೈಲುಗಳಲ್ಲಿ ಜಾಗವೇ ಇಲ್ಲ! 100 ಜನ ಕೈದಿಗಳನ್ನು ತುಂಬುವ ಸಾಮರ್ಥ್ಯ ಜೈಲುಗಳದ್ದು ಎಂದಾದರೆ ಅವುಗಳಲ್ಲಿ ತುಂಬಿರುವ ಕೈದಿಗಳ ಸಂಖ್ಯೆ 130ರಷ್ಟಿದೆ. ಆ ಕೈದಿಗಳ ಪೈಕಿ ಮೂರನೇ ಎರಡರಷ್ಟು ಕೈದಿಗಳು ತನಿಖೆ ಅಥವಾ ವಿಚಾರಣೆಯ ಪೂರ್ಣಗೊಳ್ಳುವಿಕೆಗಾಗಿ ಕಾಯುತ್ತಿದ್ದಾರೆ.

ಉತ್ತರ ಸಂಕೇತಗಳು

ಎ) 1, 2, ಮತ್ತು 4ಮಾತ್ರ ಸರಿಯಾಗಿದೆ
ಬಿ) 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ) 2, 3 ಮತ್ತು 4 ಮಾತ್ರ ಸರಿಯಾಗಿದೆ
ಡಿ) 1 ರಿಂದ 4ರ ತನಕದ ಎಲ್ಲಾ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net/education-career ಜಾಲತಾಣ ನೋಡಬಹುದು

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

CHEMISTRY

78) Iodoform can be prepared from all, except

(a) butan-2-one (b) acetophenone
(c) propan-2-ol (d) propan-1-ol

Ans: (D) propan-1-ol

Iodoform reaction requires a $H_3C-\underset{\underset{O}{\|}}{C}-$ group, which is not present in propan-1-ol even after oxidation.


79) Which of the following halides show the highest reactivity towards S_N1 reactions?

a). CH_3-CH_2-CH_2-CH_2 I b) C_6H_5Cl
c) $C_6H_5CH_2Cl$ d) CH_3CH_2Cl

Answer: (c)

Expln:- The rate of an S_N1 reaction is determined by the stability of the intermediate formed. In this case, the most stable intermediate formed would be for $C_6H_5CH_2Cl$ and the intermediate formed would be $C_6H_5CH_2^+$. This intermediate is stabilised via resonance.

80) The IUPAC name of



a) 4-Hydroxy-2-pentanone
b) 2-Hydroxy-4-pentanone
c) 2-Oxo-4-pentanol d) 4-Keto-2-pentanol

Ans:- a;

81) The statement that is NOT correct is

a) Compressibility factor measures the deviation of real gas from ideal behavior
b) van der Waals constant ‘a’ measures extent of intermolecular attractive forces for real gases
c) Critical temperature is the lowest temperature at which liquefaction of a gas first occurs
d) Boyle point depends on the nature of real gas.

Ans:-(c) Critical temperature is the temperature above which a gas cannot be liquefied irrespective of the pressure applied.

82) One dm^3 solution containing 10^{-5} moles each of Cl^- ions and CrO_4^{-2} ions is treated with 10^{-4} mole of silver nitrate. Which one of the following observations is made?

$$[K_{SP}\ Ag_2CrO_4 = 4\times10^{-12}]$$
$$[K_{SP}\ AgCl = 1\times10^{-10}]$$


a) Silver chromate gets precipitated first
b) Precipitation does not occur
c) Both silver chromate and silver chloride starts precipitating simultaneously
d) Silver chloride gets precipitated first

Ans:- d;

83) The correct statement is

a) cyclohexadiene and cyclohexene cannot be isolated with ease during controlled hydrogenation of benzene
b) One mole each of benzene and hydrogen when reacted gives 1/3 mole of cyclohexene and 2/3 mole unreacted hydrogen
c) Hydrogenation of benzene to cyclohexene is an endothermic process
d) It is essier to hydrogenate benzene when compared to cyclohexene to cyclohexene.

Ans:- a; during the hydrogenation of benzene, only cyclohexene can be isolated.



Benzene Cyclohexane

84) Which one of the following statements is FALSE?

a) The ore is freed from almost all nonmetallic impurities
b) During roasting, moisture is removed from the ore
c) The concentrated zinz blende is subjected to calcinations during its extraction by pyrometallurgy
d) Calcination of ore is carried out in the absence of any blast of air.

Ans:- c;

85) Cryolite is..................

(a) Na_3A/F_6 and is used in the electrolysis of alumina for lowering the melting point of alumina only
(b) Na_3A/F_6 and is used in the electrolytic refining of alumina
(c) Na_3A/F_6 and is used in the electrolysis of alumina for decreasing electrical conductivity
(d) Na_3A/F_6 and is used in the electrolysis of alumina for lowering the melting point and increasing the conductivity of alumina.

Ans: (D) Na_3A/F_6 and is used in the electrolysis of alumina for lowering the melting point and increasing the conductivity of alumina.

86) Terylene is NOT a ....

a) Copolymer b) Polyester fiber
c) Chain growth polymer d) Step growth polymer

Ans:- c; Chain growth polymer.

87) What amount of dioxygen (in gram) contains 1.8×10^{22} molecules?

(a) 0.960 (b) 96.0
(c) 0.0960 (d) 9.60

Ans: (a) 0.960

Expln:-6.022×10^{23} molecules are present in 32g.

$\therefore$ 1.8×10^{22} molecules are present in

$$\frac{1.8\times10^{22}\times32}{6.022\times10^{23}} = 0.960.$$

BIOLOGY

65) Identify the incorrect statement from the following.

(a) The reservoir pool for phosphorus cycle is earth's crust, whereas atmosphere is the reservoir pool for carbon cycle.
(b) During carbon cycle and phosphorus cycle, there is very little respiratory release of carbon and phosphorus respectively.
(c) Atmospheric inputs of phosphorus throughout rainfall are much smaller than carbon inputs.
(d) Gaseous exchanges of phosphorus between organism and environment are negligible

Ans: b

Expl:- All the statements given in the questions are correct except the one that there is very little respiratory release of carbon and phosphorus during each carbon and phosphorus cycle. In carbon cycle a considerable amount or large amount of carbon is returned to the atmosphere in the form of CO_2 through numerous respiratory activities of producers and consumers.

Decomposers also contribute substantially to CO_2 pool by their processing of waste materials and dead organic matter of land or oceans. Some amount of carbon is lost to sediments and removed from circulation. Additional human activities are also responsible for releasing CO_2 to the atmosphere. Whereas, in phosphorus cycle there is no respiratory release of phosphorus into the atmosphere.

66) The result of the following reaction/ experiment carried out by *Avery et. al.* on *Streptococcus pneumoniae* has proved conclusively that DNA is the genetic material

(a) Live ‘R’ strain + DNA from ‘S’ strain + DNAase
(b) Heat killed ‘R’ strain + DNA from ‘S’ strain + DNAase
(c) Live ‘R’ strain + DNA from ‘S’ strain + RNAase
(d) Live ‘R’ strain + Denatured DNA of ‘S’ strain+protease

Ans:a

Expl:- In 1944, *Avery et. al.* purified biochemical's from the heat killed *S*-type bacteria into three components, i.e., DNA, carbonydrate and protein. DNA fraction was further divided into two parts (i.e., one with DNase and one without DNase). It was observed that only DNA of *S*-type can change *R*-type of bacteria in to *S*-type.

Therefore, the character or gene of virulence is located in DNA. Protease and hormone RNases also did not cause this transformation. This shows that Protein and RNA was not the transforming substance. Hence, they came to the conclusion that the chemical to be inherited was DNA.

67) Match the storage products listed under column I with the organisms given under column II; choose the appropriate option from the given choices.

Column I	Column II
A) Glycogen	1) Sargassum
B) Pyrenoids	2) Nostoc
C) Laminarian and mannitol	3) Polysiphonia
	4) spirogyra
D) Floridean strach	5) agaricus

	A	B	C	D
(a)	3	4	1	5
(b)	4	3	5	2
(c)	5	4	1	3
(d)	2	1	4	3

Ans:C

Expl:- Agaricus is a type of fungi belonging to class- Basidiomycetes. The reserve food material is glycogen or oil droplets in fungi. Spirogyra is an algae belonging to the Group-Chlorophyta (green algae). The chloroplasts of Spirogyra have 2-20 thylakoid lamellae which are usually associated with pyrenoids. Each pyrenoid has a central protein called ‘pyreno crystal’ and a surrounding starch sheath.

They serve the purpose of storing starch. Sargassum belongs to the group Pheophyta (brown algae). The accumulation product of photosynthesis in this is D-mannitol and the reserve food material is Laminarin.

And Polysiphonia belongs to the group-Rhodophyta (red algae) which has the reserve food material in the form of floridean starch (much more similar to the glycogen).

68) Identify the desirable charecteristics for a plasmid used in rDNA technology from the following

(a) Ability to multiply and express outside the host in a bioreactor.
(b) A highly active promoter.
(C) A site at which replication can be initiated.
(D) One or more identifiable marker genes.
(E) One or more unique restriction sites.

(a) A, C and E (b) B, C, and E
(c) A, C, D and E (d) B, C, D, and E

Ans:d

(Contd…….)

ಅಧಿಕಾರಕ್ಕಾಗಿ ಸೇನೆ– ಅರೆಸೇನಾ ಪಡೆ ಸಂಘರ್ಷ: ಜನರ ಲೂಟಿ– ಸಾವಿನ ಸಂಖ್ಯೆ 270ಕ್ಕೆ ಏರಿಕೆ

ಸುಡಾನ್: ಕುಡಿವ ನೀರು, ಆಹಾರಕ್ಕೆ ತತ್ವಾರ

ಖಾರ್ಟೂಮ್ (ರಾಯಿಟರ್ಸ್): ಸುಡಾನ್‌ನಲ್ಲಿ ಕದನ ವಿರಾಮ ಒಪ್ಪಂದ ಬುಧವಾರ ಮುರಿದು ಬಿದ್ದಿದ್ದು ಮಿಲಿಟರಿ ಪಡೆಗಳ ನಡುವಿನ ಬಿಕ್ಕಟ್ಟು ಮತ್ತಷ್ಟು ತಾರಕಕ್ಕೆ ಏರಿದೆ. ಸೇನಾ ಸಂಘರ್ಷ ಐದನೇ ದಿನಕ್ಕೆ ಕಾಲಿಟ್ಟಿದ್ದು ಮೃತಪಟ್ಟವರ ಸಂಖ್ಯೆ 270ಕ್ಕೆ ತಲುಪಿದ್ದು, 2,600 ಮಂದಿ ಗಾಯಗೊಂಡಿದ್ದಾರೆ.

ದೇಶದಲ್ಲಿ ವಿದ್ಯುತ್ ಹಾಗೂ ಕುಡಿಯುವ ನೀರು ಪೂರೈಕೆ ಸ್ಥಗಿತಗೊಂಡಿದೆ. ತೀವ್ರ ಆಹಾರದ ಕೊರತೆ ತಲೆದೋರಿದ್ದು ನಾಗರಿಕರು ಹಸಿವಿನಿಂದ ಬಳಲುವಂತಾಗಿದೆ. ಇದರ ಲಾಭ ಪಡೆದಿರುವ ದುಷ್ಕರ್ಮಿಗಳು ಜನರ ಮೇಲೆ ಹಲ್ಲೆ ಹಾಗೂ ಲೂಟಿಗೆ ಇಳಿದಿದ್ದಾರೆ.

ರಾಜಧಾನಿ ಖಾರ್ಟೂಮ್ ಪ್ರದೇಶದಲ್ಲಿರುವ ಬೇಕರಿಗಳ ಮುಂಭಾಗ ಬ್ರೆಡ್ ಸೇರಿದಂತೆ ಇತರೆ ತಿನಿಸು ಪಡೆಯಲು ನಾಗರಿಕರು ಉದ್ದನೆಯ ಸಾಲುಗಳು ಸಾಮಾನ್ಯವಾಗಿದೆ. ಆಹಾರ ಪದಾರ್ಥಗಳ ಕೊರತೆಯಿಂದ ಪರಿತಪಿಸುವಂತಾಗಿದೆ. ಬಹುತೇಕ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆ ವ್ಯತ್ಯಯಗೊಂಡಿದ್ದು, ಮಹಿಳೆಯರು, ಮಕ್ಕಳು ತತ್ತರಿಸಿದ್ದಾರೆ. ಮುಸ್ಲಿಂ ಬಾಂಧವರ ರಂಜಾನ್ ಉಪವಾಸ ವ್ರತದ ಮೇಲೂ ಸಂಘರ್ಷ ಪರಿಣಾಮ ಬೀರಿದೆ.

ವಿಶ್ವಸಂಸ್ಥೆ ಸೇರಿದಂತೆ ಜಾಗತಿಕ ಒತ್ತಡ ಹೆಚ್ಚಿದ್ದರಿಂದ 24 ಗಂಟೆಯ ಕದನ ವಿರಾಮಕ್ಕೆ ಸುಡಾನ್ ಸೇನೆ ಮತ್ತು ಅರೆಸೇನಾ ಪಡೆ ಒಪ್ಪಿದ್ದವು. ಆದರೆ, ಬೆಳಿಗ್ಗೆ ಖಾರ್ಟೂಮ್‌ನಲ್ಲಿ ವೈಮಾನಿಕ ದಾಳಿ ಹಾಗೂ ಗುಂಡಿನ ಮೊರೆತ ಕೇಳಿಬಂದಿತು. ಈ ಮಧ್ಯೆ ಸಂಘರ್ಷ ಪೀಡಿತ ನೆಲದಲ್ಲಿ ಸಿಲುಕಿರುವ ತನ್ನ ದೇಶದ 60 ಪ್ರಜೆಗಳನ್ನು ವಿಮಾನದ ಮೂಲಕ ಸ್ಥಳಾಂತರಿಸಲು ಜಪಾನ್ ಮುಂದಾಗಿದೆ.

ಖಾರ್ಟೂಮ್ ಕೇಂದ್ರ ಸ್ಥಾನ ಹಾಗೂ ರಕ್ಷಣಾ ಪಡೆಯ ಕಚೇರಿ ಬಳಿ ಬಾಂಬ್ ದಾಳಿ ನಡೆದಿದೆ. ಈ ಪ್ರದೇಶದಲ್ಲಿ ಆವರಿಸಿದ್ದ ಮದ್ದುಗುಂಡುಗಳ ಸಿಡಿತದಿಂದ ಉಂಟಾದ ದಟ್ಟ ಹೊಗೆ ಸಂಘರ್ಷದ ಚಿತ್ರಣಕ್ಕೆ ಕನ್ನಡಿ ಹಿಡಿದಿತ್ತು. ಒಪ್ಪಂದ ಉಲ್ಲಂಘಿಸಿದ್ದರಿಂದ ದಾಳಿ ನಡೆದಿದೆ ಎಂದು ಎರಡೂ ಪಡೆಗಳು ನೀಡಿರುವ ಹೇಳಿಕೆಯಲ್ಲಿ ಸಮರ್ಥಿಸಿಕೊಂಡಿವೆ.

ರಾತ್ರಿ 3ರಿಂದ 5 ಗಂಟೆವರೆಗೆ ಅಷ್ಟೇ ನಾವು ನಿದ್ದೆಗೆ ಜಾರಿದ್ದೆವು. ಆ ಬಳಿಕ ಗುಂಡಿನ ಮೊರೆತಕ್ಕೆ ಭಯಗೊಂಡಿದ್ದೇವೆ ಎಂದು ನಿವಾಸಿಗಳು ಅಳಲು ತೋಡಿಕೊಂಡಿದ್ದಾರೆ.

ದಶಕದ ಬಳಿಕ ಮೊದಲ ಬಾರಿಗೆ ಖಾರ್ಟೂಮ್ ಪ್ರದೇಶದ ಸುತ್ತಮುತ್ತ ದೊಡ್ಡಮಟ್ಟದ ಸಂಘರ್ಷ ನಡೆಯುತ್ತಿದೆ. ಇದರಿಂದ ರಾಜಧಾನಿಗೆ ಹೊಂದಿಕೊಂಡಿರುವ ಒಂಡರ್ಮನ್, ಬಹ್ರಿ ಪ್ರದೇಶದಲ್ಲಿ ನೆಲೆಸಿರುವ 55 ಲಕ್ಷ ಜನರು ನಿದ್ದೆಗೆಡುವಂತಾಗಿದೆ.



ಸುಡಾನ್‌ನ ಖಾರ್ಟೂಮ್ ನಗರದ ಬೇಕರಿಯೊಂದರ ಮುಂದೆ ಬ್ರೆಡ್ ಪಡೆಯುವುದಕ್ಕಾಗಿ ಸಾಲುಗಟ್ಟಿ ನಿಂತಿರುವ ನಾಗರಿಕರು —ಎಎಫ್‌ಪಿ ಚಿತ್ರ

ಯುಎಇ, ಸೌದಿಯ ಜೊತೆ ಜೈಶಂಕರ್ ಚರ್ಚೆ

ನವದೆಹಲಿ (ಪಿಟಿಐ): ಸುಡಾನ್ ಬಿಕ್ಕಟ್ಟಿನ ಮೇಲೆ ನಿಗಾವಹಿಸಿರುವ ಕೇಂದ್ರ ಸರ್ಕಾರ ಅಲ್ಲಿ ಸಿಲುಕಿರುವ ಭಾರತೀಯರ ಸುರಕ್ಷತೆಗಾಗಿ ಅಗತ್ಯ ಕ್ರಮಕ್ಕೆ ಮುಂದಾಗಿದೆ. ಇದರ ಭಾಗವಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅವರು ಸೌದಿ ಅರೇಬಿಯಾ, ಯುಎಇ ವಿದೇಶಾಂಗ ಸಚಿವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು.

ಯುಎಇ ವಿದೇಶಾಂಗ ಸಚಿವ ಶೇಖ್ ಅಬ್ದುಲ್ ಮತ್ತು ಸೌದಿ ಅರೇಬಿಯದ ವಿದೇಶಾಂಗ ಸಚಿವ ಫೈಸಲ್ ಜೊತೆಗೆ ಸುಡಾನ್‌ನಲ್ಲಿನ ಸದ್ಯದ ಸ್ಥಿತಿಗತಿ ಬಗ್ಗೆ ಚರ್ಚಿಸಲಾಗಿದೆ. ಭಾರತೀಯರ ಸುರಕ್ಷತೆಗೆ ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ. ಅಮೆರಿಕ, ಇಂಗ್ಲೆಂಡ್ ರಾಯಭಾರ ಕಚೇರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗಿದೆ ಎಂದು ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಕೇಂದ್ರ ಸರ್ಕಾರ ಸಂತ್ರಸ್ತರ ನೆರವಿಗೆ ನವದೆಹಲಿಯಲ್ಲಿ ಕಂಟ್ರೋಲ್ ರೂಂ ಆರಂಭಿಸಿದೆ. ಖಾರ್ಟೂಮ್‌ನ ಭಾರತೀಯ ರಾಯಭಾರ ಕಚೇರಿಯೊಂದಿಗೆ ಇದು ನಿರಂತರ ಸಂಪರ್ಕದಲ್ಲಿದೆ. ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ಕುಟುಂಬಸ್ಥರಿಗೆ ಅಲ್ಲಿನ ವಿದ್ಯಮಾನ ಬಗ್ಗೆ ಮಾಹಿತಿ ನೀಡುತ್ತಿದೆ.

ಸಂಘರ್ಷಕ್ಕೆ ಕಾರಣವೇನು?

ಸುಡಾನ್‌ನ ರಾಜಕೀಯ ಸ್ಥಿತ್ಯಂತರಗಳಲ್ಲಿ ಸೇನೆಯ ಪಾತ್ರ ಕಂಡುಬರುತ್ತಿರುವುದು ಇದೇ ಮೊದಲೇನಲ್ಲ. ಪ್ರಜಾಸತ್ತಾತ್ಮಕ ಆಡಳಿತ ಸ್ಥಾಪಿಸಬೇಕೆಂಬ ಅಲ್ಲಿನ ನಾಗರಿಕರ ಆಸೆ ಇಂದಿಗೂ ಕೈಗೂಡಿಲ್ಲ.

2021ರ ಅಕ್ಟೋಬರ್‌ನಲ್ಲಿ ಕ್ಷಿಪ್ರ ಕ್ರಾಂತಿ ಮೂಲಕ ಅಲ್ಲಿನ ದೀರ್ಘಕಾಲದ ಸರ್ವಾಧಿಕಾರಿ ಒಮರ್ ಅಲ್ ಬಶೀರ್ ಅವರ ಪತನವಾಯಿತು. ಸುಡಾನ್ ಮಿಲಿಟರಿ ಮುಖ್ಯಸ್ಥ ಜನರಲ್ ಅಬ್ದೆಲ್ ಫತ್ತಾಹ್ ಅಲ್ ಬುಹ್ರಾನ್ ಹಾಗೂ ಅರೆಸೇನಾ ಪಡೆ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ಈ ದಂಗೆಯ ನೇತೃತ್ವವಹಿಸಿದ್ದರು.

ಸೇನೆಯು ಅಧಿಕಾರದ ಚುಕ್ಕಾಣಿ ಹಿಡಿಯಿತು. ಅಬ್ದೆಲ್ ಕೂಡ ಶೀಘ್ರವೇ ನಾಗರಿಕ ಜನತಂತ್ರ ವ್ಯವಸ್ಥೆಯನ್ನು ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಇಬ್ಬರಿಗೂ ಅಧಿಕಾರ ತ್ಯಜಿಸುವ ಉದ್ದೇಶವಿಲ್ಲ. ಮತ್ತೊಂದೆಡೆ ದೇಶದ ಸೇನಾ ಪಡೆಯೊಂದಿಗೆ ಅರೆಸೇನಾ ಪಡೆಯನ್ನು ಏಕೀಕರಣಗೊಳಿಸಬೇಕು ಎಂಬುದು ಮೊಹಮ್ಮದ್ ಹಮದಾನ್ ದಾಗಲೊ ಬೇಡಿಕೆ. ಇದಕ್ಕೆ ಅಬ್ದೆಲ್ ಒಪ್ಪುತ್ತಿಲ್ಲ. ಅಧಿಕಾರಕ್ಕಾಗಿನ ಇಬ್ಬರ ಕಿತ್ತಾಟದಿಂದ ಭಿನ್ನಾಭಿಪ್ರಾಯ ಭುಗಿಲೆದ್ದಿದೆ.

ಅಲ್ಲದೇ, ಅರೆಸೇನಾ ಪಡೆಯು ಖಾರ್ಟೂಮ್‌ನಲ್ಲಿ ಸೇನಾ ಪಡೆಯ ಅನುಮತಿ ಇಲ್ಲದೆಯೇ ತನ್ನ ಸದಸ್ಯರನ್ನು ನಿಯೋಜಿಸಿದ್ದು, ಬಿಕ್ಕಟ್ಟು ಉಲ್ಬಣಿಸಲು ಕಾರಣವಾಗಿದೆ. ಮತ್ತೊಂಡೆದೆ ಅಮೆರಿಕ ಮತ್ತು ರಷ್ಯಾ ಸುಡಾನ್ ಮೇಲೆ ಹಿಡಿತ ಸಾಧಿಸಲು ಸ್ಪರ್ಧೆಗಿಳಿದಿರುವುದು ಕೂಡ ಅಲ್ಲಿ ಅರಾಜಕತೆ ಸೃಷ್ಟಿಗೆ ಕಾರಣವಾಗಿದೆ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಸಂಕಷ್ಟದಲ್ಲಿ 4 ಸಾವಿರ ಭಾರತೀಯರು

ದುಬೈ (ಪಿಟಿಐ): ಆಂತರಿಕ ಸಂಘರ್ಷ ನಡೆಯುತ್ತಿರುವ ಸುಡಾನ್‌ನಲ್ಲಿ ಸುಮಾರು ನಾಲ್ಕು ಸಾವಿರ ಭಾರತೀಯರಿದ್ದಾರೆ. ಅವರ ಸುರಕ್ಷತೆ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಕುಟುಂಬಸ್ಥರು ಕೂಡಲೇ ಅವರನ್ನು ಭಾರತಕ್ಕೆ ಕರೆತರಲು ಕೇಂದ್ರ ಸರ್ಕಾರ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ನಾಲ್ಕು ಸಾವಿರ ಜನರ ಪೈಕಿ 1,200ಕ್ಕೂ ಹೆಚ್ಚು ಜನರು ಒಂದೂವರೆ ಶತಮಾನದಿಂದಲೂ ಅಲ್ಲಿಯೇ ನೆಲೆಸಿದ್ದಾರೆ. ಅಲ್ಲಿನ ಆರ್ಥಿಕತೆಯಲ್ಲಿ ಇವರ ಪಾಲು ದೊಡ್ಡದಿದೆ.

‘ನನ್ನ ತಂದೆ ಮುಂಬೈನಿಂದ ವ್ಯವಹಾರ ನಿಮಿತ್ತ ಸುಡಾನ್‌ಗೆ ತೆರಳಿದ್ದರು. ವಾಪಸ್ ಮರಳುವಾಗ ವಿಮಾನ ರದ್ದಾಗಿರುವುದಾಗಿ ತಿಳಿಸಿದ್ದರು. ಕೆಲಕಾಲ ನನ್ನ ಅಪ್ಪ ಸೇರಿದಂತೆ ಅಲ್ಲಿದ್ದ ಪ್ರಯಾಣಿಕರನ್ನು ವಿಮಾನ ನಿಲ್ದಾಣದಿಂದ ಹೊರಹೋಗದಂತೆ ನಿರ್ಬಂಧಿಸಲಾಗಿತ್ತು ಎಂದು ಹೇಳಿದ್ದರು. ಬಳಿಕ ಅವರು ಉಳಿದುಕೊಂಡಿದ್ದ ಹೋಟೆಲ್‌ಗೆ ತೆರಳಿದ್ದಾರೆ. ಅದಾದ ನಂತರ ಅವರು ಸಂಪರ್ಕಕ್ಕೆ ಸಿಕ್ಕಿಲ್ಲ’ ಎಂದು ಪುತ್ರಿ ಮಾನ್ಸಿ ಸೇಟ್ ತಿಳಿಸಿದ್ದಾರೆ.

‘ಅಪ್ಪನಿಗೆ ಈಗ 63 ವರ್ಷ. ಅವರ ಆರೋಗ್ಯ ಸ್ಥಿತಿ ನನ್ನಲ್ಲಿ ಭಯ ಹುಟ್ಟಿಸಿದೆ. ಅವರೊಂದಿಗೆ ಬೆಳಿಗ್ಗೆ ದೂರವಾಣಿ ಮೂಲಕ ಮಾತನಾಡಲು ಪ್ರಯತ್ನಿಸಿದೆ. ಆದರೆ, ಸಂಪರ್ಕಕ್ಕೆ ಸಿಗಲಿಲ್ಲ’ ಎಂದು ತಿಳಿಸಿದ್ದಾರೆ.

‘ಅಲ್ಲಿರುವ ನನ್ನ ಸಂಬಂಧಿಕರೊಂದಿಗೆ ಮಾತನಾಡಿದ್ದು, ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ ತಿಳಿಸಿದ್ದಾರೆ. ಅಲ್ಲಿನ ಅರೆಸೇನಾ ಪಡೆ ಲೂಟಿಗೆ ಇಳಿದಿದೆ. ನಿವಾಸಿಗಳ ಕಾರುಗಳನ್ನು ಕದ್ದೊಯ್ಯುತ್ತಿದ್ದಾರೆ. ಹೋಟೆಲ್‌ನಲ್ಲಿ ಉಳಿದುಕೊಂಡಿರುವವರಿಗೂ ಸುರಕ್ಷತೆ ಇಲ್ಲದಂತಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಹೋಟೆಲ್ ಸೇವೆಯೂ ಬಂದ್ ಆಗಲಿದೆ’ ಎಂಬುದಾಗಿ ಅಳಲು ತೋಡಿಕೊಂಡರು ಎಂದು ಹೇಳಿದ್ದಾರೆ.

ಖಾರ್ಟೂಮ್‌ನಲ್ಲಿ ಗುಂಡು ತಗುಲಿ ಗಾಯಗೊಂಡು ಮೃತಪಟ್ಟ ಭಾರತೀಯನನ್ನು ನಿವೃತ್ತ ಸೈನಿಕ ಅಲ್ಬರ್ಟ್ ಅಗೆಸ್ಟೆನ್ ಎಂದು ಗುರುತಿಸಲಾಗಿದೆ. ಬುಧವಾರ ಸಂಜೆ 6 ಗಂಟೆಯಿಂದ ಆರಂಭಗೊಂಡಂತೆ 24 ಗಂಟೆ ಕಾಲ ಕದನ ವಿರಾಮ ಒಪ್ಪಂದಕ್ಕೆ ಅರೆಸೇನಾ ಪಡೆ ಮತ್ತೆ ಒಪ್ಪಿಗೆ ನೀಡಿದೆ.



ಸಂಘರ್ಷಪೀಡಿತ ಸುಡಾನ್‌ನ ರಾಜಧಾನಿ ಖಾರ್ಟೂಮ್ ನಗರದ ಹೋಟೆಲ್ ಒಂದರಲ್ಲಿ ಆಶ್ರಯ ಪಡೆದಿರುವ ಹಕ್ಕಿಪಿಕ್ಕಿ ಸಮುದಾಯದ ಮಹಿಳೆಯರು ಮತ್ತು ಮಕ್ಕಳೊಂದಿಗೆ ಕುಟುಂಬ ಸದಸ್ಯರು ಇರುವುದು.

ಕನ್ನಡಿಗರ ವಾಪಸಾತಿ ಭರವಸೆ

• ಡಿ.ಕೆ. ಬಸವರಾಜು

ದಾವಣಗೆರೆ: ಸೇನಾಪಡೆಗಳ ಸಂಘರ್ಷದಿಂದ ನಲುಗಿರುವ ಸುಡಾನ್‌ನಲ್ಲಿ ಸಿಲುಕಿಕೊಂಡಿರುವ ಕನ್ನಡಿಗರು ಜೀವಭಯದಿಂದ ದಿನ ದೂಡುತ್ತಿದ್ದು, ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ.

ಬುಧವಾರ ಸಂತ್ರಸ್ತ ಕುಟುಂಬಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿರುವ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಡಾ. ಮನೋಜ್ ರಾಜನ್, ‘ಯಾರೂ ಅಪಾಯಕಾರಿ ಸ್ಥಳಕ್ಕೆ ತೆರಳಬೇಡಿ. ಮನೆಗಳಿಂದ ಹೊರಬರಬೇಡಿ, ಶೀಘ್ರವೇ ನಿಮ್ಮೆಲ್ಲರನ್ನೂ ಸುರಕ್ಷಿತವಾಗಿ ಸ್ವದೇಶಕ್ಕೆ ವಾಪಸ್ ಕರೆತರಲು ಕ್ರಮ ಕೈಗೊಳ್ಳಲಾಗುವುದು’ ಎಂದು ಅಭಯ ನೀಡಿದ್ದಾರೆ.

‘ಕರ್ನಾಟಕದ ಅಧಿಕಾರಿಗಳು ಧೈರ್ಯ ತುಂಬಿದ್ದಾರೆ. ಸಂಘರ್ಷದ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣಗಳನ್ನೂ ವಶಕ್ಕೆ ಪಡೆಯಲಾಗಿದೆ. ವಾಪಸ್ ಕರೆತರಲು ಅನ್ಯ ಮಾರ್ಗಗಳಿವೆಯೇ ಎಂಬುದನ್ನು ಪರಿಶೀಲಿಸುತ್ತಿದ್ದೇವೆ’ ಎಂದು ಅವರು ಹೇಳಿದ್ದಾರೆ’ ಎಂದು ಚನ್ನಗಿರಿ ತಾಲ್ಲೂಕಿನ ಗೋಪನಾಳ್ ಗ್ರಾಮದ ಶಿವಾನಂದ್ ಅವರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ನಾವೆಲ್ಲ ಆಹಾರ, ನೀರು ಸಿಗದೇ ಪರಿತಪಿಸುತ್ತಿದ್ದೇವೆ. ಮಹಿಳೆಯರು, ಮಕ್ಕಳು ಜೊತೆಗಿದ್ದಾರೆ. ಮಂಗಳವಾರದಿಂದ ವಿದ್ಯುತ್ ಕಡಿತಗೊಂಡಿದ್ದು, ಕತ್ತಲ್ಲಲ್ಲಿ ಕಾಲ ದೂಡುವಂತಾಗಿದೆ. ನಮ್ಮವರನ್ನು ಸಂಪರ್ಕಿಸಲು ಮೊಬೈಲ್ ಬ್ಯಾಟರಿ ಚಾರ್ಜ್ ಮಾಡಿಕೊಳ್ಳಲೂ ವಿದ್ಯುತ್ ಇಲ್ಲದಂತಾಗಿದೆ’ ಎಂದು ಅವರು ಅಲ್ಲಿನ ಸ್ಥಿತಿಗತಿ ಕುರಿತು ವಿವರಿಸಿದರು.

> **ಕದನ ವಿರಾಮ ಘೋಷಿಸಿದರೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಏಕೆಂದರೆ ಬಂಡುಕೋರರು ದಾಳಿ ನಡೆಸಿ ಹಣ ದೋಚುವ, ಜೀವಕ್ಕೆ ಹಾನಿ ಮಾಡುವ ಸಂಭವವಿದೆ**
> **ಶಿವಾನಂದ್,** ಗೋಪನಾಳ್ ನಿವಾಸಿ

‘200ಕ್ಕೂ ಹೆಚ್ಚು ಕನ್ನಡಿಗರು ಒಂದೇ ವಸತಿಗೃಹದಲ್ಲಿ ಎರಡು ತಿಂಗಳಿನಿಂದ ಉಳಿದುಕೊಂಡಿದ್ದೇವೆ. ವಿದ್ಯುತ್ ಕಡಿತಗೊಂಡಿದ್ದರಿಂದ ಕುಡಿಯುವ ನೀರು ಸಿಗುತ್ತಿಲ್ಲ. ಶೌಚಾಲಯದ ನೀರೇ ಗತಿಯಾಗಿದೆ’ ಎಂದು ಅವರು ಸಂಕಷ್ಟ ತೋಡಿಕೊಂಡರು. ‘ಮೂರು ದಿನಗಳ ಹಿಂದೆ ಅನತಿ ದೂರದಲ್ಲೇ ಬಾಂಬ್ ದಾಳಿ ನಡೆದಿದ್ದರಿಂದ ನಾವಿರುವ ಹೋಟೆಲ್‌ನ ಮಾಲೀಕರು ನಾಪತ್ತೆಯಾಗಿದ್ದಾರೆ. ಬೇಗನೇ ಹೋಟೆಲ್ ಖಾಲಿ ಮಾಡುವಂತೆ ಹೋಟೆಲ್ ಸಿಬ್ಬಂದಿ ಒತ್ತಡ ಹೇರುತ್ತಿದ್ದು, ದಿಕ್ಕು ತೋಚದಂತಾಗಿದೆ. ಕ್ಷಿಪಣಿ ದಾಳಿಗೆ ನಮ್ಮ ಹೋಟೆಲ್ ಪಕ್ಕದಲ್ಲಿನ ಕಟ್ಟಡವೊಂದು ನೆಲಕ್ಕುರುಳಿ ಬಿದ್ದಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಬೆಳಗಿನ ಜಾವ 3 ಗಂಟೆಗೆ ಗುಂಡಿನ ದಾಳಿ ಆರಂಭವಾಗುತ್ತದೆ. ನಿದ್ರೆಯ ಮಂಪರಿನಲ್ಲಿದ್ದ ನಮ್ಮನ್ನು ಕ್ಷಿಪಣಿ, ಬಾಂಬ್ ಸದ್ದು ಎಚ್ಚರಗೊಳಿಸುತ್ತವೆ’ ಎಂದು ಗೋಪನಾಳ್ ಗ್ರಾಮದ ಪ್ರಭು ಹೇಳಿದರು.

ಲೋಕಾಯುಕ್ತ ಬಲೆಗೆ ಅಗ್ನಿಶಾಮಕ ಅಧಿಕಾರಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಶಾಲೆಯ ಮಾನ್ಯತೆ ನವೀಕರಣಕ್ಕೆ ಅಗತ್ಯವಿದ್ದ ನಿರಾಕ್ಷೇಪಣಾ ಪತ್ರ (ಎನ್‌ಒಸಿ)ವನ್ನು ನೀಡಲು ಲಂಚದ ರೂಪದಲ್ಲಿ ಲ್ಯಾಪ್‌ಟಾಪ್ ಪಡೆಯುತ್ತಿದ್ದಾಗ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬಸವಪ್ರಭು ಶರ್ಮ ಹಾಗೂ ಫೈರ್‌ಮನ್ ಎಸ್‌.ಕೆ. ರಾಜೇಶ್ ಬುಧವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಹರಿಹರದ ದುರುಗೋಜಿ ಗೋಪಾಲರಾವ್ ಶಿಕ್ಷಣ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಿ.ಜಿ. ರಘುನಾಥ್ ಅವರು ತಮ್ಮ ವಿದ್ಯಾದಾಯಿನಿ ಶಾಲೆಯ ಮಾನ್ಯತೆ ನವೀಕರಣಕ್ಕೆ ಅಗ್ನಿಶಾಮಕ ಇಲಾಖೆಯಿಂದ ಎನ್‌ಒಸಿ ಕೋರಿ ಅರ್ಜಿ ಸಲ್ಲಿಸಿದ್ದರು. ಎನ್‌ಒಸಿ ನೀಡುವುದಕ್ಕೆ ಬಸವಪ್ರಭು ಶರ್ಮ ಅವರು ಲ್ಯಾಪ್‌ಟಾಪ್ ರೂಪದ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಡೆಲ್ ಕಂಪನಿಯ ₹ 38,500 ಬೆಲೆಯ ಲ್ಯಾಪ್‌ಟಾಪ್ ಅನ್ನು ಬುಧವಾರ ಮಧ್ಯಾಹ್ನ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.



ಬಸವಪ್ರಭು ಶರ್ಮ



ರಾಜೇಶ್ ಎಸ್‌.ಕೆ.

ಲೋಕಾಯುಕ್ತ ಎಸ್‌ಪಿ ಎಂ.ಎಸ್. ಕೌಲಾಪೂರೆ ನೇತೃತ್ವದಲ್ಲಿ ಡಿವೈಎಸ್‌ಪಿ ಕೆ.ಜಿ. ರಾಮಕೃಷ್ಣ, ಇನ್‌ಸ್ಪೆಕ್ಟರ್‌ಗಳಾದ ಎಚ್‌.ಎಸ್. ರಾಷ್ಟ್ರಪತಿ, ಎನ್‌.ಎಚ್. ಆಂಜನೇಯ, ಸಿಬ್ಬಂದಿ ಚಂದ್ರಶೇಖರ್, ವಿ.ಎಚ್‌.ಆಂಜನೇಯ, ಎಸ್.ಎಂ. ವೀರೇಶಯ್ಯ, ಮುಜೀಬ್‌ಖಾನ್, ಎಸ್. ಎನ್‌.ಲಿಂಗೇಶ್, ಸಿ.ಎಚ್‌.ಬಸವರಾಜ, ಕೃಷ್ಣನಾಯ್ಕ ದಾಳಿ ನಡೆಸಿದ್ದರು.

ಆರ್‌.ಡಿ.ಪಾಟೀಲ ವಿರುದ್ಧದ ಪ್ರಕರಣ: ಪ್ರಕ್ರಿಯೆಗೆ ತಡೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಕಿಂಗ್‌ಪಿನ್ ಎಂದೇ ಪರಿಗಣಿಸಲಾಗಿರುವ ರುದ್ರಗೌಡ ಪಾಟೀಲ್ ಅಲಿಯಾಸ್ ಆರ್‌.ಡಿ. ಪಾಟೀಲ್ ವಿರುದ್ಧ ರಾಜ್ಯದ ವಿವಿಧೆಡೆ ದಾಖಲಾಗಿರುವ 11 ಕ್ರಿಮಿನಲ್ ಪ್ರಕರಣಗಳ ಮುಂದಿನ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಬುರಗಿ, ಬೆಂಗಳೂರು, ಧಾರವಾಡ ಮತ್ತು ತುಮಕೂರಿನ ವಿವಿಧ ಠಾಣೆಗಳಲ್ಲಿ ಪ್ರತ್ಯೇಕವಾಗಿ ದಾಖಲಾಗಿರುವ 11 ಪ್ರಕರಣಗಳನ್ನು ಒಂದೇ ಕೋರ್ಟ್‌ನಲ್ಲಿ ವಿಚಾರಣೆ ನಡೆಸಲು ಆದೇಶಿಸಬೇಕು’ ಎಂದು ಕೋರಿ ಆರ್‌.ಡಿ. ಪಾಟೀಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್‌.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿಯ ಮುಂದಿನ ಮುಂದಿನ ವಿಚಾರಣೆವರೆಗೆ ಪಾಟೀಲ್ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂದು ರಾಜ್ಯ ಸರ್ಕಾರ ಮತ್ತು ಪೊಲೀಸರಿಗೆ ನಿರ್ದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿದೆ.

ಪಾಟೀಲ್ ವಿರುದ್ಧ ಕಲಬುರಗಿಯ ಚೌಕ್ ಬಜಾರ್ ಠಾಣೆಯಲ್ಲಿ ಒಂದು ಪ್ರಕರಣ, ಸ್ಟೇಷನ್ ಬಜಾರ್ ಠಾಣೆಯಲ್ಲಿ 2 ಪ್ರಕರಣ, ಅಶೋಕ್ ನಗರ ಠಾಣೆಯಲ್ಲಿ ಐದು ಪ್ರಕರಣ, ಬೆಂಗಳೂರಿನ ರಾಮಮೂರ್ತಿ ನಗರ, ತುಮಕೂರಿನ ಕ್ಯಾತ್ಸಂದ್ರ ಹಾಗೂ ಧಾರವಾಡದ ಉಪನಗರ ಠಾಣೆಗಳಲ್ಲಿ ತಲಾ ಒಂದೊಂದು ಪ್ರಕರಣ ದಾಖಲಾಗಿವೆ.

ಹೊಸಪೇಟೆ: 42 ಡಿಗ್ರಿ ಸೆಲ್ಸಿಯಸ್ ದಾಖಲು

ಹೊಸಪೇಟೆ (ವಿಜಯನಗರ)/ವಿಜಯಪುರ: ನಗರ ಸೇರಿದಂತೆ ಜಿಲ್ಲೆಯಾದ್ಯಂತ ಬಿಸಿಲು ಹೆಚ್ಚಾಗಿದ್ದು, ಬುಧವಾರ ತಾಪಮಾನ 42 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ತಾಪಮಾನ ಹೆಚ್ಚಾಗಿರುವುದರಿಂದ ಮಧ್ಯಾಹ್ನ 12ರಿಂದ ಸಂಜೆ 4ರ ವರೆಗೆ ಬಿಸಿಲ ಝಳ ಇರುತ್ತಿದ್ದು, ಜನ ಹೊರಗೆ ಸುಳಿಯುತ್ತಿಲ್ಲ. ಪ್ರಮುಖ ರಸ್ತೆಗಳು ಬಿಕೋ ಎನ್ನುತ್ತಿವೆ. ರಾಜಕೀಯ ಪಕ್ಷಗಳ ಮುಖಂಡರು ಕೂಡ ಬೆಳಿಗ್ಗೆ ಹಾಗೂ ಸಂಜೆ ವೇಳೆ ಪ್ರಚಾರಕ್ಕೆ ಒತ್ತು ಕೊಡುತ್ತಿದ್ದಾರೆ. ಕೆಲ ದಿನಗಳಿಂದ ತಾಪಮಾನ 40ರಿಂದ 41 ಡಿಗ್ರಿ ಸೆಲ್ಸಿಯಸ್ ನಡುವೆ ಇದೆ.

ವಿಜಯಪುರ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚಳ ಜತೆಗೆ ಬಿಸಿ ಗಾಳಿಯೂ ಬೀಸುತ್ತಿದೆ. ವಿಜಯಪುರ ನಗರದಲ್ಲಿ ಗುರುವಾರ ಉಷ್ಣಾಂಶ 41 ಡಿಗ್ರಿ ಸೆಲ್ಸಿಯಸ್ ಇತ್ತು. ಮುಂದಿನ ಏ. 27ರ ವರೆಗೆ ಇದೇ ಪರಿಸ್ಥಿತಿ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬಿಸಿಲಿನ ಬೇಗೆಗೆ ಜನ, ಜಾನುವಾರು, ಪ್ರಾಣಿ, ಪಕ್ಷಿಗಳು ತತ್ತರಿಸಿವೆ. ಬೆಳಿಗ್ಗೆ 8ಕ್ಕೆ ಮೈಸುಡುವ ಬಿಸಿಲು ಮಧ್ಯಾಹ್ನಕ್ಕೆ ಗರಿಷ್ಠ ಮಟ್ಟ ತಲುಪುವುದರಿಂದ ಜನಸಂಚಾರ ವಿರಳವಾಗಿದೆ. ವಿಜಯಪುರ ನಗರದ ಪ್ರಮುಖ ವೃತ್ತಗಳಲ್ಲಿ- (ಟ್ರಾಫಿಕ್) ಮಹಾನಗರ ಪಾಲಿಕೆಯು ಹಸಿರು ಹೊದಿಕೆಯ ಚಪ್ಪರ ಮಾಡಿ, ವಾಹನ, ಸಂಚಾರಿಗಳಿಗೆ ಅನುಕೂಲ ಮಾಡಿಕೊಟ್ಟಿದೆ.

ರಾಜ್ಯದ ಕೆಲವೆಡೆ ಮಳೆ

ಬೆಂಗಳೂರು: ರಾಜ್ಯದ ಕೆಲವೆಡೆ ಗುರುವಾರ ಮತ್ತು ಶುಕ್ರವಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಲಿದೆ. ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಹಾಗೂ ದಕ್ಷಿಣ ಒಳನಾಡಿನ ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಮೈಸೂರು ಹಾಗೂ ರಾಮನಗರ ಜಿಲ್ಲೆಯ ಒಂದೆರಡು ಕಡೆ ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕರಾವಳಿಯ ಕೆಲವು ಕಡೆ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ ಎರಡು ಡಿಗ್ರಿ ಸೆಲ್ಸಿಯಸ್ ಹಾಗೂ ಉತ್ತರ ಒಳನಾಡಿನ ಒಂದೆರಡು ಕಡೆ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆ ಇದೆ. ಬೆಂಗಳೂರು ನಗರದಲ್ಲಿ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ರಾಜ್ಯದ ವಿವಿಧೆಡೆ ಬುಧವಾರವೂ ತಾಪಮಾನ ಹೆಚ್ಚಳವಾಗಿದ್ದು, ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (41.5 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ 36.5 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು ಎಂದು ಇಲಾಖೆ ಹೇಳಿದೆ.

ಸಿದ್ಧಗಂಗಾ ಮಠಕ್ಕೆ ಉತ್ತರಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಉತ್ತರಾಧಿಕಾರಿಯನ್ನಾಗಿ ಸಿದ್ಧಗಂಗಾ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ 35 ವರ್ಷದ ಮನೋಜ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.



ಮನೋಜ್ ಕುಮಾರ್

ಪಟ್ಟಾಧಿಕಾರ ಮಹೋತ್ಸವ ಏ. 23ರ ಬಸವ ಜಯಂತಿಯಂದು ಮಠದಲ್ಲಿ ನೆರವೇರಲಿದ್ದು, ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಸಿದ್ಧಲಿಂಗ ಸ್ವಾಮೀಜಿ ಮಠಾಧ್ಯಕ್ಷರಾದ ನಂತರ ಉತ್ತರಾಧಿಕಾರಿ ನೇಮಕಗೊಂಡಿರಲಿಲ್ಲ.

ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆ ಮಠಕ್ಕೆ ಕೆ.ಎಂ. ಹರ್ಷ, ದೇವನಹಳ್ಳಿ ತಾಲ್ಲೂಕಿನ ಬಸವ ಕಲ್ಯಾಣ ಮಠಕ್ಕೆ ಗೌರೀಶ್ ಕುಮಾರ್ ಅವರನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಇವರ ಪಟ್ಟಾಧಿಕಾರ ಮಹೋತ್ಸವ ಭಾನುವಾರ ನೆರವೇರಲಿದೆ.

ಎಂಎಸ್‌ಸಿ, ಎಂ.ಎ ವಿದ್ವತ್ ಶಿಕ್ಷಣ ಪಡೆದಿರುವ ಮನೋಜ್ ಕುಮಾರ್ ಅವರು ನೆಲಮಂಗಲ ತಾಲ್ಲೂಕು ಮೈಲನಹಳ್ಳಿ ಗ್ರಾಮದ ಎಂ.ಬಿ.ಷಡಕ್ಷರಯ್ಯ, ವಿರುಪಾಕ್ಷಮ್ಮ ದಂಪತಿ ಪುತ್ರ. ಪ್ರಸ್ತುತ ನಗರದ ಸಿದ್ಧಗಂಗಾ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ

ಫೆಬ್ರುವರಿಯಲ್ಲಿ ವೇಣೂರಿನ ಬಾಹುಬಲಿಗೆ ಮಹಾಮಸ್ತಕಾಭಿಷೇಕ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ವೇಣೂರಿನಲ್ಲಿ ಭಗವಾನ್ ಬಾಹುಬಲಿ ಮೂರ್ತಿಯ ಮಹಾಮಸ್ತಕಾಭಿಷೇಕವು 2024ರ ಫೆಬ್ರುವರಿಯಲ್ಲಿ ನಡೆಯಲಿದೆ ಎಂದು ವೇಣೂರು ದಿಗಂಬರ ಜೈನತೀರ್ಥ ಕ್ಷೇತ್ರ ಸಮಿತಿ ಅಧ್ಯಕ್ಷರಾಗಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಪ್ರಕಟಿಸಿದರು.

ಬುಧವಾರ ಉಜಿರೆಯಲ್ಲಿ ನಡೆದ ಮಹಾಮಸ್ತಕಾಭಿಷೇಕದ ಪೂರ್ವ ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

ಸುಮಾರು 10 ದಿನ ರಾತ್ರಿ ವೇಳೆ ಸರಳವಾಗಿ ಮಹಾಮಸ್ತಕಾಭಿಷೇಕ ನಡೆಸಲಿದ್ದು, ಶೀಘ್ರವೇ ದಿನಾಂಕ ಪ್ರಕಟಿಸಲಾಗುವುದು. ಧರ್ಮ ಪ್ರಭಾವನೆಯೊಂದಿಗೆ ಧರ್ಮ ಜಾಗೃತಿ ಮಹಾಮಸ್ತಕಾಭಿಷೇಕದ ಉದ್ದೇಶವಾಗಿದೆ’ ಎಂದರು.

ಹೈಕೋರ್ಟ್‌ಗೆ ಬೇಸಿಗೆ ರಜೆ 24ರಿಂದ

ಬೆಂಗಳೂರು: ಹೈಕೋರ್ಟ್‌ಗೆ ಇದೇ 24ರಿಂದ ಮೇ 20ರವರೆಗೆ ಬೇಸಿಗೆ ರಜೆ ಇರಲಿದೆ. ತುರ್ತು ಪ್ರಕರಣಗಳ ವಿಚಾರಣೆ ನಡೆಸಲು ಬೆಂಗಳೂರಿನ ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರಗಿಯಲ್ಲಿ ವಿಭಾಗೀಯ ಮತ್ತು ಏಕಸದಸ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ರಜಾಕಾಲೀನ ಪೀಠಗಳನ್ನು ರಚಿಸಲಾಗಿದೆ.

‘ತಡೆಯಾಜ್ಞೆ, ಮಧ್ಯಂತರ ನಿರ್ದೇಶನ ಮತ್ತು ತಾತ್ಕಾಲಿಕ ಪ್ರತಿಬಂಧಕ ಆದೇಶ ಸೇರಿದಂತೆ ತುರ್ತು ಪ್ರಕರಣಗಳ ವಿಚಾರಣೆಯನ್ನು ಮಾತ್ರ ರಜಾಕಾಲೀನ ಅವಧಿಯಲ್ಲಿ ನಡೆಸಲಾಗುತ್ತದೆ. ಮೇಲ್ಮನವಿ, ಕ್ರಿಮಿನಲ್ ಮೇಲ್ಮನವಿ, ಕ್ರಿಮಿನಲ್ ಅರ್ಜಿ, ಸಿವಿಲ್ ರೂಪದ ಅರ್ಜಿಗಳ ವಿಚಾರಣೆ ಇರುವುದಿಲ್ಲ. ಇ-ಫೈಲಿಂಗ್ ಪೋರ್ಟಲ್ ಮೂಲಕ ಇ-ಫೈಲಿಂಗ್ ಮಾಡಬಹುದಾಗಿದೆ’ ಎಂದು ರಿಜಿಸ್ಟ್ರಾರ್ ಎಂ. ಚಂದ್ರಶೇಖರ್ ರೆಡ್ಡಿ ಅಧಿಸೂಚನೆಯಲ್ಲಿ ಪ್ರಕಟಿಸಿದ್ದಾರೆ.

ಏಪ್ರಿಲ್ 24ಕ್ಕೆ ಪಿಯು ಫಲಿತಾಂಶ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಅಂಕಗಳ ಕೂಡಿಕೆ ಕಾರ್ಯ ಪೂರ್ಣಗೊಂಡಿದ್ದು ಏಪ್ರಿಲ್ 24 ಅಥವಾ 25ರಂದು ಫಲಿತಾಂಶ ಪ್ರಕಟವಾಗಲಿದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯ ಮೂಲಗಳು ತಿಳಿಸಿವೆ.

2022–23ನೇ ಶೈಕ್ಷಣಿಕ ಸಾಲಿನಲ್ಲಿ 7,27,387ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ರಾಜ್ಯದ 1,109 ಕೇಂದ್ರಗಳಲ್ಲಿ ಮಾರ್ಚ್ 9ರಿಂದ 29ರವರೆಗೆ ಪರೀಕ್ಷೆಗಳು ನಡೆದಿದ್ದವು. ವಿಧಾನಸಭಾ ಚುನಾವಣಾ ಪ್ರಕ್ರಿಯೆಗಳ ಮಧ್ಯೆಯೇ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳ ಉಪನ್ಯಾಸಕರನ್ನು ಬಳಸಿಕೊಂಡು ಮೌಲ್ಯಮಾಪನ ಕಾರ್ಯವನ್ನು ಮಂಡಳಿ ಸುಸೂತ್ರವಾಗಿ ಪೂರ್ಣಗೊಳಿಸಿದೆ.

ಪ್ರತಿ ವಿಷಯದಲ್ಲಿ ಬಹು ಆಯ್ಕೆ ಸೇರಿದಂತೆ ಒಂದು ಅಂಕದ 20 ಪ್ರಶ್ನೆಗಳನ್ನು ಇದೇ ಮೊದಲ ಬಾರಿ ಪರಿಚಯಿಸಲಾಗಿತ್ತು. ರಸಾಯನ ವಿಜ್ಞಾನ ಹೊರತುಪಡಿಸಿ, ಉಳಿದ ಪತ್ರಿಕೆಗಳ ಕುರಿತು ಯಾವುದೇ ತಕರಾರು ಬಂದಿರಲಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕಲಿತ ವಿದ್ಯಾರ್ಥಿಗಳಿಗೆ ರಸಾಯನ ವಿಜ್ಞಾನ ವಿಷಯದ ಪ್ರಶ್ನೆಗಳು ತೊಡಕಾಗಿವೆ. ಸಿಬಿಎಸ್‌ಸಿ, ಐಸಿಎಸ್‌ಸಿ ಮಾದರಿ ಯಲ್ಲಿ ಪ್ರಶ್ನೆಗಳಿವೆ ಎಂದು ಕೆಲವರು ಮಂಡಳಿಗೆ ದೂರು ಸಲ್ಲಿಸಿದ್ದರು.

‘ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಅಂಕಗಳ ಕೂಡುವ ಕಾರ್ಯ ಮುಗಿದಿದೆ. ಉಪನ್ಯಾಸಕರು ಕಾಲಮಿತಿಯ ಒಳಗೆ ಕೆಲಸ ಮಾಡಿದ್ದಾರೆ. ಇದೇ ತಿಂಗಳ ನಾಲ್ಕನೇ ವಾರದ ಮೊದಲ ಅಥವಾ ಎರಡನೆ ದಿನ ಫಲಿತಾಂಶ ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ’ ಎಂದು ಮಂಡಳಿಯ ಉನ್ನತಾಧಿಕಾರಿಗಳು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಆರಗ ಆಸ್ತಿಯಲ್ಲಿ ಬಿಡಿಎ ನಿವೇಶನ

ಒಂದನೇ ಪುಟದಿಂದ....

ಮನವಿಯನ್ನು ಬಾಕಿ ಇರಿಸಿಕೊಂಡಿರುವ ಬಿಡಿಎ ಆಡಳಿತ ಮಂಡಳಿ, ಜ್ಞಾನೇಂದ್ರ ಅವರಿಂದ ನಿವೇಶನವನ್ನು ವಶಕ್ಕೆ ಪಡೆಯಲು ನಗರದ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಹೂಡಿದೆ.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಮರು ಆಯ್ಕೆ ಬಯಸಿ ಸೋಮವಾರ ನಾಮಪತ್ರ ಸಲ್ಲಿಸಿರುವ ಜ್ಞಾನೇಂದ್ರ, ವಿವಾದಿತ ಬಿಡಿಎ ನಿವೇಶನವನ್ನೂ ತಮ್ಮ ಆಸ್ತಿ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ. ಬೆಂಗಳೂರಿನ ಆರ್‌ಎಂವಿ ಎರಡನೇ ಹಂತದ ಬಡಾವಣೆಯ ಭೂಪಸಂದ್ರದಲ್ಲಿ ನಿವೇಶನ ಸಂಖ್ಯೆ 2 ಅನ್ನು ಹೊಂದಿರುವುದಾಗಿ ಘೋಷಿಸಿದ್ದಾರೆ.

‘ಎಚ್‌ಎಸ್‌ಆರ್ ಬಡಾವಣೆಯಲ್ಲಿ ಹಂಚಿಕೆಯಾಗಿದ್ದ ನಿವೇಶನಕ್ಕೆ ಬದಲಿಯಾಗಿ ಹಂಚಿಕೆ ಮಾಡಿರುವ ಈ ನಿವೇಶನಕ್ಕೆ ₹ 13.94 ಲಕ್ಷ ಪಾವತಿಸಲಾಗಿದೆ. ಅಭಿವೃದ್ಧಿ ಕೆಲಸಗಳಿಗೆ ₹ 3 ಲಕ್ಷ ವೆಚ್ಚ ಮಾಡಲಾಗಿದೆ. ಪ್ರಸ್ತುತ ಈ ನಿವೇಶನದ ಮಾರುಕಟ್ಟೆ ಮೌಲ್ಯ ₹ 4 ಕೋಟಿ’ ಎಂದು ನಾಮಪತ್ರದ ಜತೆ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

‘ಸಚಿವರಿಗೆ ಆರ್‌ಎಂವಿ ಬಡಾವಣೆಯಲ್ಲಿ ಹಂಚಿಕೆಯಾಗಿದ್ದ ನಿವೇಶನವನ್ನು ವಾಪಸ್ ಪಡೆಯಲು ನಗರ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಹೂಡಿದ್ದೇವೆ. ಸಚಿವರ ಮನವಿಯೂ ಪ್ರಾಧಿಕಾರದಲ್ಲಿ ಬಾಕಿ ಇದೆ’ ಎಂದು ಬಿಡಿಎ ಕಾರ್ಯದರ್ಶಿ ಶಾಂತರಾಜು ವೈ.ಬಿ. ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಕುಕ್ಕರ್ ಸ್ಫೋಟಿಸಿ ಸ್ಟೌ ನಾಶ’

ಮಂಚೇನಹಳ್ಳಿ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಪುರ ಗ್ರಾಮದಲ್ಲಿ ಗ್ಯಾಸ್ ಸ್ಟೌ ಜಖಂಗೊಂಡ ಮನೆಗೆ ಬುಧವಾರ ಭೇಟಿ ನೀಡಿದ್ದ ಡಾ.ಕೆ.ಸುಧಾಕರ್ ಫೌಂಡೇಶನ್ ಸಿಬ್ಬಂದಿ ಮತ್ತು ಪೊಲೀಸರು ಮಾಹಿತಿ ಸಂಗ್ರಹಿಸಿದರು.

‘ಕುಕ್ಕರ್ ಸ್ಫೋಟದಿಂದ ಸ್ಟೌ ನಾಶವಾಗಿದೆಯೇ ಹೊರತು ಅದು ಸ್ಫೋಟಿಸಿಲ್ಲ’ ಎಂದು ಸ್ಟೌ ಕಂಪನಿ ಸಿಬ್ಬಂದಿ ಸ್ಪಷ್ಟಪಡಿಸಿದರು.

‘ಚುನಾವಣೆ ಘೋಷಣೆಗೂ ಮುನ್ನ ಸಂಕ್ರಾಂತಿ ಸಮಯದಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ರಂಗೋಲಿ ಸ್ಪರ್ಧೆ ನಡೆಸಲಾಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಮಾಧಾನಕರ ಬಹುಮಾನವಾಗಿ ಸ್ಟೌ ನೀಡಲಾಗಿತ್ತು.

‘ಪುರ ಗ್ರಾಮದ ಮಂಜುಳಾ ಅವರ ಮನೆಯ ಕುಕ್ಕರ್‌ನ ಸೇಫ್ಟಿ ವಾಲ್ ಮುಚ್ಚಿದ್ದರಿಂದ ಅದು ಸ್ಫೋಟವಾಗಿದೆ. ಕುಟುಂಬಕ್ಕೆ ಮತ್ತೊಂದು ಹೊಸ ಒಲೆ ನೀಡಿದ್ದೇವೆ’ ಎಂದು ಫೌಂಡೇಶನ್ ಸಿಬ್ಬಂದಿ ತಿಳಿಸಿದರು.

‘ಅಡುಗೆ ಮಾಡಲು ಕುಕ್ಕರ್ ಇಟ್ಟು ಮನೆಯ ಹೊರಗಿದ್ದೆವು. ಸ್ಫೋಟದ ಸದ್ದು ಕೇಳಿ ಒಳಗೆ ಬಂದು ನೋಡಿದಾಗ ಕೆಳಗೆ ಬಿದ್ದಿದ್ದ ಸ್ಟೌ ಸ್ಫೋಟವಾಗಿದೆ ಎಂದು ಭಾವಿಸಿದೆವು’ ಎಂದು ಮಂಜುಳಾ ತಿಳಿಸಿದರು.

ಇಂದು ‘ಸಮ್ಮಿಶ್ರ ಸೂರ್ಯಗ್ರಹಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವದ ಹಲವೆಡೆ ಗುರುವಾರ ಗೋಚರಿಸಲಿರುವ ಸೂರ್ಯಗ್ರಹಣವು ಖಗೋಳ ವೀಕ್ಷಕರಲ್ಲಿ ಭಾರಿ ಕುತೂಹಲ ಮೂಡಿಸಿದೆ. ಕಂಕಣ ಮತ್ತು ಪೂರ್ಣ ಸೂರ್ಯಗ್ರಹಣಗಳು ಒಟ್ಟಿಗೇ ಸಂಭವಿಸುವುದರಿಂದ ಈ ಗ್ರಹಣವನ್ನು ‘ಸಮ್ಮಿಶ್ರ ಸೂರ್ಯ ಗ್ರಹಣ’ ಎಂದೇ ಕರೆಯಲಾಗುತ್ತದೆ. ಇದು ಅತ್ಯಂತ ಅಪರೂಪ.

ಸೂರ್ಯ ಮತ್ತು ಭೂಮಿಯ ನಡುವೆ ಚಂದ್ರ ಬಂದು ಅವು ಮೂರು ಒಂದೇ ಸರಳರೇಖೆಯಲ್ಲಿ ನೆಲೆ ನಿಂತಾಗ, ಚಂದ್ರನ ನೆರಳು ಭೂಮಿಯ ಮೇಲೆ ಬೀಳುತ್ತದೆ. ಇದರಿಂದ ಕೆಲವು ಕ್ಷಣಗಳು ಸೂರ್ಯ ಮರೆಯಾಗುತ್ತಾನೆ. ‘ಈ ಗ್ರಹಣವು ಕಂಕಣ ಮತ್ತು ಪೂರ್ಣ ಸೂರ್ಯಗ್ರಹಣದ ಸಮ್ಮಿಶ್ರಣವಾಗಿರುತ್ತದೆ. ಈ ವಿಧಾನದಲ್ಲಿ ಸೂರ್ಯನು ಉಂಗುರವಾಗಿ ಕೆಲವು ಸೆಕೆಂಡುಗಳ ಕಾಲ ಕಂಡು ಬರಲಿದ್ದು, ಬಳಿಕ ಪೂರ್ಣವಾಗಿ ಮರೆಯಾಗುತ್ತದೆ’ ಎನ್ನುತ್ತಾರೆ ಬಸವನಗುಡಿ ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರೂ ಆಗಿರುವ ಭೌತಶಾಸ್ತ್ರ ಪ್ರಾಧ್ಯಾಪಕಿ ಡಾ.ವೈ.ಸಿ.ಕಮಲಾ.

‘ಸಮ್ಮಿಶ್ರ ಗ್ರಹಣವು ನೋಡುಗನ ಸ್ಥಳದ ಮೇಲೆ ಅವಲಂಬಿತವಾಗಿರುತ್ತದೆ. ಈ ಗ್ರಹಣದ ಸಂದರ್ಭದಲ್ಲಿ ಭೂಮಿಯು ಆಂಶಿಕವಾಗಿ ಚಂದ್ರನ ದಟ್ಟ ನೆರಳಿನ ಪ್ರದೇಶದಲ್ಲಿದ್ದು, ಇತರೆ ಭಾಗವು ದಟ್ಟ ನೆರಳಿನಿಂದ ಹೊರಭಾಗದಲ್ಲಿರುತ್ತದೆ. ಒಟ್ಟಾರೆಯಾಗಿ ಭೂಮಿಯು ಚಂದ್ರನ ದಟ್ಟ ನೆರಳು, ಪಾರ್ಶ್ವ ನೆರಳನ್ನು ಸಂಧಿಸುವ ಜಾಗದಲ್ಲಿ ದಾಟುವಾಗ ‘ಸಮ್ಮಿಶ್ರ ಗ್ರಹಣ’ವಾಗುತ್ತದೆ’ ಎಂದು ಅವರು ವಿವರಿಸಿದರು.

ಸೂರ್ಯಗ್ರಹಣ ಬೆಳಿಗ್ಗೆ 10.04 ನಿಮಿಷಕ್ಕೆ ಆರಂಭವಾಗಲಿದ್ದು, ಅಂತಿಮ ಘಟ್ಟ 11.30 ಕ್ಕೆ ತಲುಪುತ್ತದೆ. ಚಂದ್ರನು ಸೂರ್ಯನನ್ನು ಪೂರ್ಣ ಆವರಿಸುವ ಅವಧಿ ಕೆಲವು ಸೆಕೆಂಡುಗಳು ಮಾತ್ರ. ಈ ಗ್ರಹಣವು ಭಾರತದಲ್ಲಿ ಗೋಚರಿಸುವುದಿಲ್ಲ. ಆಸ್ಟ್ರೇಲಿಯಾದ ಹಲವು ಭಾಗಗಳಲ್ಲಿ ಗೋಚರಿಸಲಿದೆ. ಆಗ್ನೇಯಾ ಏಷ್ಯಾ, ಫೆಸಿಫಿಕ್, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಗೋಚರಿಸಲಿದೆ. ಆಸ್ಟ್ರೇಲಿಯಾದ ಪಶ್ಚಿಮಭಾಗದಲ್ಲಿ ಪೂರ್ಣ ಪ್ರಮಾಣದಲ್ಲಿ ಗ್ರಹಣ ಗೋಚರಿಸಲಿದೆ.

ಅಕ್ರಮದಲ್ಲಿ ನನ್ನ ಪಾತ್ರವಿಲ್ಲ: ಡಿ.ಎಸ್. ವೀರಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ ನಡೆದಿರುವ ಹಣ ದುರ್ಬಳಕೆ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಅಧಿಕಾರಿಗಳೇ ಅಕ್ರಮಕ್ಕೆ ಸಂಪೂರ್ಣ ಹೊಣೆ’ ಎಂದು ಸಂಸ್ಥೆಯ ಅಧ್ಯಕ್ಷ ಡಿ.ಎಸ್. ವೀರಯ್ಯ ತಿಳಿಸಿದ್ದಾರೆ.



ಡಿ.ಎಸ್. ವೀರಯ್ಯ

ಅರಸು ಟ್ರಕ್ ಟರ್ಮಿನಲ್ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರು ದಾಳಿಮಾಡಿ ಶೋಧ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿದ್ದ ವರದಿ ಕುರಿತು ಲಿಖಿತ ಪ್ರತಿಕ್ರಿಯೆ ನೀಡಿರುವ ಅವರು, ‘ಚೆಕ್‌ಗಳಿಗೆ ಸಹಿಮಾಡುವ ಅಧಿಕಾರ ಅಧ್ಯಕ್ಷರಿಗೆ ಇಲ್ಲ. ನಾನು ಯಾವುದೇ ಚೆಕ್‌ಗೂ ಸಹಿ ಮಾಡಿಲ್ಲ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರೇ ಚೆಕ್‌ಗಳಿಗೆ ಸಹಿ ಮಾಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ಹಿಂದಿನ ವ್ಯವಸ್ಥಾಪಕ ನಿರ್ದೇಶಕ ನರಸಿಂಹಮೂರ್ತಿ ಅಕ್ರಮವಾಗಿ ₹ 6.75 ಕೋಟಿ ಪಾವತಿಸಲು ಯತ್ನಿಸಿದ್ದಾಗ ನಾನೇ ಮಧ್ಯ ಪ್ರವೇಶಿಸಿ ತಡೆಹಿಡಿದಿದ್ದೆ. ಸಂಸ್ಥೆಯಲ್ಲಿ ಅಕ್ರಮ ನಡೆಯುತ್ತಿರುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾರಿಗೆ ಸಚಿವ ಬಿ. ಶ್ರೀರಾಮುಲು ಹಾಗೂ ಇಲಾಖೆಯ ಕಾರ್ಯದರ್ಶಿಗಳಿಗೆ ನಾನೇ ದೂರು ನೀಡಿದ್ದೆ. ಸಾರಿಗೆ ಸಚಿವರು ಅಕೌಂಟೆಂಟ್ ಜನರಲ್ ಅವರಿಂದ ತನಿಖೆಗೂ ಆದೇಶಿಸಿದ್ದರು’ ಎಂದು ಹೇಳಿದ್ದಾರೆ.

ಸಂಸ್ಥೆಯ ನಿರ್ದೇಶಕರಿಬ್ಬರಿಗೆ ಸಂಸ್ಥೆಯ ಜಮೀನನ್ನು ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಕಡಿಮೆ ದರಕ್ಕೆ ನೀಡಿದ್ದರು. ಅದನ್ನು ಪ್ರಶ್ನಿಸಿರುವುದಕ್ಕೆ ದುರುದ್ದೇಶದಿಂದ ತಮ್ಮ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಲಾಗಿದೆ ಎಂದು ಆರೋಪಿಸಿದ್ದಾರೆ.

ಅಖಾಡಕ್ಕೆ ಬರಲಿದ್ದಾರೆ ತಾರಾ ಪ್ರಚಾರಕರು

ಸೋನಿಯಾ, ರಾಹುಲ್, ಖರ್ಗೆ, ಶೆಟ್ಟರ್, ರಮ್ಯಾ ಮೆರಗು


ಸೋನಿಯಾ ಗಾಂಧಿ


ಜಗದೀಶ ಶೆಟ್ಟರ್

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ 40 ತಾರಾ ಪ್ರಚಾರಕರ ಪಟ್ಟಿಯನ್ನು ಕಾಂಗ್ರೆಸ್ ಬುಧವಾರ ಬಿಡುಗಡೆ ಮಾಡಿದೆ.

ಸೋಮವಾರವಷ್ಟೇ ಪಕ್ಷಕ್ಕೆ ಸೇರ್ಪಡೆಯಾದ ಹಿರಿಯ ಶಾಸಕ ಜಗದೀಶ ಶೆಟ್ಟರ್ ಅವರಿಗೆ ಸ್ಥಾನ ಸಿಕ್ಕಿದೆ. ಕಳೆದ ವಾರ ಪಕ್ಷಕ್ಕೆ ಸೇರ್ಪಡೆಯಾದ ಲಕ್ಷ್ಮಣ ಸವದಿ ಅವರು ಈ ಪಟ್ಟಿಯಲ್ಲಿಲ್ಲ. ಕೆಪಿಸಿಸಿಯ ಮೂವರು ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಈಶ್ವರ ಖಂಡ್ರೆ, ಬಿ.ಚಂದ್ರಪ್ಪ ಅವರನ್ನು ತಾರಾ ಪ್ರಚಾರಕರನ್ನಾಗಿ ಪಕ್ಷ ಪರಿಗಣಿಸಿಲ್ಲ. ರಾಮಲಿಂಗಾ ರೆಡ್ಡಿ ಹಾಗೂ ಸತೀಶ ಜಾರಕಿಹೊಳಿ ಹೆಸರು ಮಾತ್ರ ಪಟ್ಟಿಯಲ್ಲಿದೆ.

ತೇರದಾಳದಲ್ಲಿ ಕಣಕ್ಕಿಳಿಯಲು ಭಾರಿ ಪ್ರಯತ್ನ ನಡೆಸಿದ್ದ ಉಮಾಶ್ರೀ ಹಾಗೂ ಮಾಗಡಿ ಅಥವಾ ಹರಿಹರ ಕ್ಷೇತ್ರದ ಟಿಕೆಟ್ ನಿರೀಕ್ಷೆಯಲ್ಲಿದ್ದ ಎಚ್.ಎಂ. ರೇವಣ್ಣ ಅವರಿಗೆ ತಾರಾ ಪ್ರಚಾರಕರ ಪಟ್ಟಿಯಲ್ಲಿ ಸ್ಥಾನ ನೀಡಿ ಸಮಾಧಾನಪಡಿಸಲಾಗಿದೆ. ನಟಿ ರಮ್ಯಾ ಹಾಗೂ ಹಾಸ್ಯನಟ ಸಾಧುಕೋಕಿಲಾ ಸಹ ಪಕ್ಷದ ತಾರಾ ಪ್ರಚಾರಕರಾಗಿದ್ದಾರೆ. ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್, ಮೂವರು ಮುಖ್ಯಮಂತ್ರಿಗಳಾದ ಅಶೋಕ್ ಗೆಹಲೋಟ್, ಭೂಪೇಶ್ ಬಘೇಲ್, ಸುಖ್ವಿಂದರ್ ಸಿಂಗ್ ಸುಖು ಸೇರಿದ್ದಾರೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಮಾಜಿ ಅಧ್ಯಕ್ಷರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ಪ್ರಿಯಾಂಕಾ ಗಾಂಧಿ ವಾದ್ರಾ, ಕೆ.ಸಿ.ವೇಣುಗೋಪಾಲ್, ಜೈರಾಮ್ ರಮೇಶ್, ರಣದೀಪ್ ಸಿಂಗ್ ಸುರ್ಜೆವಾಲಾ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಪ್ರಮುಖ ತಾರಾ ಪ್ರಚಾರಕರು ಎಂದು ಪಕ್ಷ ಪರಿಗಣಿಸಿದೆ.

ರಾಜ್ಯದ ಪ್ರಮುಖ ನಾಯಕರಾದ ಬಿ.ಕೆ. ಹರಿಪ್ರಸಾದ್, ಜಿ.ಪರಮೇಶ್ವರ, ಕೆ.ಎಚ್.ಮುನಿಯಪ್ಪ, ಎಂ.ಬಿ.ಪಾಟೀಲ, ಎಂ. ವೀರಪ್ಪ ಮೊಯಿಲಿ, ಶಾಸಕ ಜಮೀರ್ ಅಹ್ಮದ್ ಖಾನ್, ಸಂಸದರಾದ ಡಿ.ಕೆ. ಸುರೇಶ್, ಜಿ.ಸಿ.ಚಂದ್ರಶೇಖರ್, ಸಯ್ಯದ್ ನಾಸಿರ್ ಹುಸೇನ್, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ಶಾಸಕಿ ರೂಪಾ ಶಶಿಧರ್ ಅವರಿಗೆ ಸ್ಥಾನ ಸಿಕ್ಕಿದೆ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಗಳಾದ ಪ್ರಥ್ವಿರಾಜ್ ಚವಾಣ್, ಅಶೋಕ್ ಚವಾಣ್ ಹಾಗೂ ತೆಲಂಗಾಣ ಕಾಂಗ್ರೆಸ್ ಘಟಕದ ಅಧ್ಯಕ್ಷ ರೇವಂತ್ ರೆಡ್ಡಿ ಅವರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ.

ಹಿರಿಯ ಮುಖಂಡರಾದ ಶಶಿ ತರೂರ್, ಪಿ.ಚಿದಂಬರಂ, ರಮೇಶ್ ಚೆನ್ನಿತಾಲ, ರಾಜ್ ಬಬ್ಬರ್ ಹಾಗೂ ಯುವ ನಾಯಕರಾದ ಕನ್ನಯ್ಯ ಕುಮಾರ್, ಇಮ್ರಾನ್ ಪ್ರತಾಪ್‌ಗಿರಿ ಪಕ್ಷದ ತಾರಾ ಪ್ರಚಾರಕರಾಗಿದ್ದಾರೆ.

20 ಕಡೆ ರಾಹುಲ್ ರ‍್ಯಾಲಿ


ರಾಹುಲ್ ಗಾಂಧಿ

ಮುಂದಿನ 20 ದಿನಗಳಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 20 ಪ್ರಚಾರ ಸಭೆಗಳಲ್ಲಿ ಭಾಗವಹಿಸಲಿದ್ದಾರೆ. ಮುಂದಿನ 3 ವಾರಗಳಲ್ಲಿ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ ಹಲವು ಪ್ರಚಾರ ಸಭೆ, ರೋಡ್ ಶೋಗಳಲ್ಲಿ ಭಾಗಿಯಾಗಲಿದ್ದಾರೆ. ಮೇ ಮೊದಲ ವಾರದಲ್ಲಿ ಸೋನಿಯಾ ಗಾಂಧಿ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಮೋದಿ, ಶಾ, ಯೋಗಿ ರಂಗು


ನರೇಂದ್ರ ಮೋದಿ


ಅಮಿತ್ ಶಾ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸೇರಿ ಒಟ್ಟು 40 ಮಂದಿಯ ತಾರಾ ಪ್ರಚಾರಕರ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದೆ.

ಆದರೆ, ಉಪಚುನಾವಣೆಗಳಲ್ಲಿ ತಾರಾ ಪ್ರಚಾರಕರಾಗಿ ಗಮನಸೆಳೆದಿದ್ದ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಹೆಸರು ಈ ಪಟ್ಟಿಯಲ್ಲಿ ಇಲ್ಲ.

ಚುನಾವಣಾ ಪ್ರಚಾರಕ್ಕೆ ಬರಲಿರುವ ಇತರ ಪ್ರಮುಖರು: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ನಿರ್ಮಲಾ ಸೀತಾರಾಮನ್, ಪ್ರಲ್ಹಾದ ಜೋಶಿ, ಸ್ಮೃತಿ ಇರಾನಿ, ಧರ್ಮೇಂದ್ರ ಪ್ರಧಾನ್, ಮನ್ಸುಖ್ ಮಾಂಡವೀಯಾ, ಶೋಭಾ ಕರಂದ್ಲಾಜೆ, ಎ.ನಾರಾಯಣ ಸ್ವಾಮಿ, ಭಗವಂತ್ ಖೂಬಾ.

ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ನಳಿನ್ ಕುಮಾರ್ ಕಟೀಲ್, ಡಿ.ವಿ. ಸದಾನಂದಗೌಡ, ಕೆ.ಎಸ್. ಈಶ್ವರಪ್ಪ, ಗೋವಿಂದ ಕಾರಜೋಳ, ಆರ್. ಅಶೋಕ, ಕೆ. ಅಣ್ಣಾಮಲೈ, ಅರುಣ್ ಸಿಂಗ್, ಡಿ.ಕೆ. ಅರುಣಾ, ಸಿ.ಟಿ. ರವಿ, ಅರವಿಂದ ಲಿಂಬಾವಳಿ, ಬಿ. ಶ್ರೀರಾಮುಲು, ಕೋಟ ಶ್ರೀನಿವಾಸ ಪೂಜಾರಿ, ಬಸನಗೌಡ ಪಾಟೀಲ ಯತ್ನಾಳ್, ಡಾ. ಉಮೇಶ್ ಜಾಧವ್, ಛಲವಾದಿ ನಾರಾಯಣಸ್ವಾಮಿ, ಎನ್. ರವಿಕುಮಾರ್, ಜಗ್ಗೇಶ್, ಶೃತಿ, ತಾರಾ ಅನೂರಾಧ ತಾರಾ ಪ್ರಚಾರಕರ ಪಟ್ಟಿಯಲ್ಲಿ ಇದ್ದಾರೆ.

ಕುಟುಂಬದ 8 ಮಂದಿ ತಾರೆಗಳು


ಎಚ್.ಡಿ.ದೇವೇಗೌಡ


ಸಿ.ಎಂ. ಇಬ್ರಾಹಿಂ

ಬೆಂಗಳೂರು: 27 ಮಂದಿ ತಾರಾ ಪ್ರಚಾರಕರ ಪಟ್ಟಿಗೆ ಜೆಡಿಎಸ್ ಪಕ್ಷವು ಚುನಾವಣಾ ಆಯೋಗದಿಂದ ಅನುಮೋದನೆ ಪಡೆದಿದ್ದು, ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಸೇರಿದಂತೆ ಅವರ ಕುಟುಂಬದ ಎಂಟು ಮಂದಿ ಹೆಸರು ಅದರಲ್ಲಿದೆ.

ಎಚ್.ಡಿ. ಕುಮಾರಸ್ವಾಮಿ, ಅವರ ಪತ್ನಿ ಅನಿತಾ, ಮಗ ನಿಖಿಲ್ ಕುಮಾರಸ್ವಾಮಿ, ಶಾಸಕ ಎಚ್.ಡಿ. ರೇವಣ್ಣ, ಅವರ ಪತ್ನಿ ಭವಾನಿ, ಮಗ ಹಾಗೂ ಹಾಸನ ಸಂಸದ ಪ್ರಜ್ವಲ್ ರೇವಣ್ಣ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ತಾರಾ ಪ್ರಚಾರಕರ ಪಟ್ಟಿಯಲ್ಲಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ರಾಜ್ಯಸಭೆ ಮಾಜಿ ಸದಸ್ಯ ಡಿ. ಕುಪೇಂದ್ರ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಕೆ.ಎ. ತಿಪ್ಪೇಸ್ವಾಮಿ, ಎಸ್.ಎಲ್. ಭೋಜೇಗೌಡ, ಬಿ.ಎಂ. ಫಾರೂಕ್, ಪಕ್ಷದ ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ನಜ್ಮಾ ನಝೀರ್ ಚಿಕ್ಕನೇರಳೆ ಇದ್ದಾರೆ.

ಬೊಮ್ಮಾಯಿ ರೋಡ್ ಶೋಗೆ ‘ಕಿಚ್ಚ’ನ ರಂಗು

ಮುಖ್ಯಮಂತ್ರಿ ಪರ ನಟ ಸುದೀಪ್ ಪ್ರಚಾರ: ಹರಿದುಬಂದ ಜನಸಾಗರ

ಪ್ರಜಾವಾಣಿ ವಾರ್ತೆ


ಶಿಗ್ಗಾವಿ ಪಟ್ಟಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಮಪತ್ರ ಸಲ್ಲಿಕೆ ಅಂಗವಾಗಿ ಬುಧವಾರ ನಡೆದ ‘ರೋಡ್ ಶೋ’ನಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಚಿತ್ರನಟ ಸುದೀಪ್, ಸಚಿವರಾದ ಬಿ.ಸಿ.ಪಾಟೀಲ್, ಮುರುಗೇಶ ನಿರಾಣಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಶಿಗ್ಗಾವಿ (ಹಾವೇರಿ): ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಅಂಗವಾಗಿ ಬುಧವಾರ ಏರ್ಪಡಿಸಿದ್ದ ‘ರೋಡ್ ಶೋ’ಗೆ ಚಿತ್ರನಟ ಸುದೀಪ್ ರಂಗು ತಂದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಶಿಗ್ಗಾವಿಗೆ ಬಂದಿಳಿದ ಕಿಚ್ಚ ಸುದೀಪ್ ಅವರು ಮೊದಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನೆಗೆ ಭೇಟಿ ನೀಡಿ, ಕೆಲಕಾಲ ಔಪಚಾರಿಕ ಮಾತುಕತೆ ನಡೆಸಿದರು.

ನಂತರ ಕಿತ್ತೂರು ಚನ್ನಮ್ಮ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ರೋಡ್ ಶೋ ಆರಂಭಿಸಿದರು. ರೋಡ್ ಶೋನಲ್ಲಿ ಜೆ.ಪಿ.ನಡ್ಡಾ, ಸಚಿವರಾದ ಬಿ.ಸಿ.ಪಾಟೀಲ್, ಮುರುಗೇಶ ನಿರಾಣಿ, ಗೋವಿಂದ ಕಾರಜೋಳ ಜತೆಯಾದರು.

ಸುದೀಪ್ ಅವರನ್ನು ಕಂಡ ಅಭಿಮಾನಿಗಳು ‘ಕಿಚ್ಚ– ಕಿಚ್ಚ’ ಎಂದು ಹರ್ಷೋದ್ಗಾರ ಮಾಡಿ, ಫೋಟೊ ತೆಗೆದುಕೊಳ್ಳುವುದಕ್ಕೆ ಮುಗಿಬಿದ್ದರು. ರಸ್ತೆಯುದ್ದಕ್ಕೂ ನೆರೆದಿದ್ದ ಜನರತ್ತ ಸುದೀಪ್ ಕೈಬೀಸಿ ಮುಗುಳ್ನಕ್ಕರು.

ಅಭಿವೃದ್ಧಿಗೆ ಗರಿಷ್ಠ ಕೊಡುಗೆ: ನಂತರ ನಡೆದ ಬಹಿರಂಗ ಸಮಾವೇಶದಲ್ಲಿ ಜೆ.ಪಿ.ನಡ್ಡಾ ಮಾತನಾಡಿ, ‘ಬೊಮ್ಮಾಯಿ ಅವರು ಅಭಿವೃದ್ಧಿಗೆ ಗರಿಷ್ಠ ಕೊಡುಗೆ ಕೊಟ್ಟಿದ್ದಾರೆ. ಕಾಂಗ್ರೆಸ್ ಎಂದರೆ ಭ್ರಷ್ಟಾಚಾರ. ಸಿದ್ದರಾಮಯ್ಯನವರ ಕಾಲದಲ್ಲಿ ಹೆಚ್ಚಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟಿತ್ತು. ಕಾಂಗ್ರೆಸ್ ಮುಖಂಡರು ನೇತಾರರಾಗಿ ಉಳಿದಿಲ್ಲ. ಅವರು ಎಟಿಎಂ ಚಲಾಯಿಸುವ ವ್ಯಕ್ತಿಗಳಾಗಿದ್ದಾರೆ ಎಂದು ಟೀಕಿಸಿದರು.

ಮೋದಿ ಅವರು ರಾಜ್ಯದ ಅಭಿವೃದ್ಧಿಗಾಗಿ ಕಳುಹಿಸಿದ ಹಣವನ್ನು ದೆಹಲಿಯ ಕಾಂಗ್ರೆಸ್ ಕಚೇರಿಗೆ ವರ್ಗಾಯಿಸುವ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬೇಕೇ ಎಂದು ಪ್ರಶ್ನಿಸಿದರು.

ಓಡಿ ಹೋಗುವ, ಕ್ಷೇತ್ರ ಬದಲಿಸುವ ಮುಖ್ಯಮಂತ್ರಿ ಅಲ್ಲ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಓಡಿ ಹೋಗುವ, ಕ್ಷೇತ್ರ ಬದಲಿಸುವ ಮುಖ್ಯಮಂತ್ರಿ ನಾನಲ್ಲ. ಜೀವನದ ಕೊನೆ ಉಸಿರು ಇರುವವರೆಗೂ ನಿಮ್ಮ ಸೇವೆ ಮಾಡುತ್ತೇನೆ. ಬಂಕಾಪುರವು ಮುಂದಿನ ದಿನಗಳಲ್ಲಿ ತಾಲ್ಲೂಕಾಗಲಿದೆ. ನನ್ನ ಸಾವಾದರೆ ಶಿಗ್ಗಾವಿ ಮಣ್ಣಿನಲ್ಲೇ ಅಂತ್ಯಸಂಸ್ಕಾರ ಮಾಡಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವುಕರಾಗಿ ನುಡಿದರು.

‘ರಾಜ್ಯದಲ್ಲಿ ಬಿಜೆಪಿ 125ಕ್ಕೂ ಹೆಚ್ಚು ಸ್ಥಾನಗಳೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ. ಮತ್ತೆ ಕನ್ನಡ ಮಾತೆಯ ಸೇವೆ ಮಾಡಲಿದೆ’ ಎಂದರು.

‘ಕಾಂಗ್ರೆಸ್ ಸರ್ಕಾರ ಎಲ್ಲ ರಂಗಗಳಲ್ಲೂ ವಿಫಲವಾಗಿತ್ತು. ಮೂಲಸೌಕರ್ಯದ ಕೊರತೆ, ನೀರಿನ ಸಮಸ್ಯೆ ವ್ಯಾಪಕವಾಗಿತ್ತು’ ಎಂದು ಟೀಕಿಸಿದರು.

‘ಕಾಮ್ ಕಾ ವಾಸ್ತೆ ಮಾಮ’

‘ಕಡಿಮೆ ಅವಧಿಯಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದಾರೆ ಬೊಮ್ಮಾಯಿ ಮಾಮ. ಇವರು ನಾಮ್ ಕಾ ವಾಸ್ತೆ ಸಿಎಂ ಅಲ್ಲ, ಕಾಮ್ ಕಾ ವಾಸ್ತೆ ಸಿಎಂ’ ಎಂದು ಚಿತ್ರನಟ ಸುದೀಪ್ ಮೆಚ್ಚುಗೆ ವ್ಯಕ್ತಪಡಿಸಿದರು.

‘ನಾನು ಒಬ್ಬ ಭಾರತೀಯನಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಕೆಲಸಗಳನ್ನು ಮೆಚ್ಚುತ್ತೇನೆ. ವಿದೇಶಗಳಿಗೆ ಹೋದರೆ ಭಾರತ ಮತ್ತು ಮೋದಿಯವರ ಬಗ್ಗೆ ಜನರು ಹೆಮ್ಮೆಯಿಂದ ಮಾತನಾಡುತ್ತಾರೆ. ಎಲ್ಲ ಸರ್ಕಾರಗಳಲ್ಲೂ ಒಂದಿಷ್ಟು ಒಳ್ಳೆಯ ಕೆಲಸಗಳು ಆಗುತ್ತವೆ. ಕೆಲವು ಕೊರತೆಗಳೂ ಇರುತ್ತವೆ. ಒಳ್ಳೆಯ ಕೆಲಸ ಮಾಡಿದ ಬೊಮ್ಮಾಯಿ ಮಾಮ ಪರ ನಾನು ಇದ್ದೇನೆ. ಗೆದ್ದೇ ಗೆಲ್ಲುವೆ ಒಂದು ದಿನ, ಗೆಲ್ಲಲೇ ಬೇಕು ಒಳ್ಳೆತನ ಹಾಡು ಈಗ ನೆನಪಿಗೆ ಬರುತ್ತಿದೆ’ ಎಂದು ಹೇಳಿದರು.

ಮನೆ ದೇವರಿಗೆ ಪೂಜೆ: ಮೊಮ್ಮಗ ಧವನ್ ರಾಕೇಶ್ ಸಾಥ್

ನಾಮಪತ್ರ ಸಲ್ಲಿಸಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ


ನಂಜನಗೂಡಿನಲ್ಲಿ ಬುಧವಾರ ವಿಧಾನಸಭಾ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾರ್ಯಕರ್ತರು ಹಾಗೂ ಬೆಂಬಲಿಗರತ್ತ ಕೈಬೀಸಿದರು —ಪ್ರಜಾವಾಣಿ ಚಿತ್ರ

ಮೈಸೂರು/ನಂಜನಗೂಡು: ವರುಣ ವಿಧಾನಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಂಜನಗೂಡಿನ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಬುಧವಾರ ನಾಮಪತ್ರ ಸಲ್ಲಿಸಿದರು.

ಸಿದ್ದರಾಮನಹುಂಡಿಯ ಮನೆ ದೇವರಿಗೆ ಬೆಳಿಗ್ಗೆ ಪೂಜೆ ಸಲ್ಲಿಸಿ, ಕುಟುಂಬದ ಸದಸ್ಯರೊಂದಿಗೆ ಸಿದ್ದರಾಮೇಶ್ವರ ಹಾಗೂ ಶ್ರೀರಾಮ ಮಂದಿರದಲ್ಲಿ ಪೂಜೆ ಸಲ್ಲಿಸಿದರು. ನಂತರ ಚಾಮುಂಡಿ ಬೆಟ್ಟದಲ್ಲಿ ದೇವಿಯ ಮೂರ್ತಿಯ ಪಾದಕ್ಕೆ ನಾಮಪತ್ರ ವಿಟ್ಟು, ಪೂಜೆ ಸಲ್ಲಿಸಿದರು. ಉತ್ತನಹಳ್ಳಿ ತ್ರಿಪುರ ಸುಂದರಿ ದೇವಿಯ ದರ್ಶನ ಪಡೆದರು.

ನಂಜನಗೂಡಿನ ಗೋಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ, ‘ವರುಣ ಹೋಬಳಿಯಲ್ಲೇ ಹುಟ್ಟಿದವ ನಾನು. ನನ್ನ ಎದುರು ಬಿಜೆಪಿಗರು ಬೆಂಗಳೂರು ನಿವಾಸಿಯನ್ನು ಕರೆತಂದಿದ್ದು, ಹಣದ ಹೊಳೆ ಹರಿಸುತ್ತಾರೆ. ಜೆಡಿಎಸ್ ಮತ್ತು ಬಿಜೆಪಿ ಒಳ ಒಪ್ಪಂದ ಮಾಡಿಕೊಂಡಿದ್ದು, ಪರಿಶಿಷ್ಟರ ಮತ ವಿಭಜಿಸಲು ತಿ.ನರಸೀಪುರದ ಭಾರತಿ ಶಂಕರ್ ಅವರನ್ನು ಕರೆತಂದು ನಿಲ್ಲಿಸಿದ್ದಾರೆ. ಅದಕ್ಕೆಲ್ಲ ಕ್ಷೇತ್ರದ ಜನ ಬಗ್ಗುವುದಿಲ್ಲ’ ಎಂದರು.

‘ಇದೇ ನನ್ನ ಕೊನೆಯ ಚುನಾವಣೆ. 2008, 2013ರಲ್ಲಿ ಸುಮಾರು 30 ಸಾವಿರ ಅಂತರದಿಂದ ಗೆದ್ದಿದ್ದೆ. 2018ರಲ್ಲಿ ಯತೀಂದ್ರ ಅವರನ್ನು 58 ಸಾವಿರ ಮತಗಳಿಂದ ಗೆಲ್ಲಿಸಿದ್ದೀರಿ. ನನ್ನನ್ನು ಲಕ್ಷ ಮತಗಳಿಂದ ಗೆಲ್ಲಿಸಿ’ ಎಂದು ಕೋರಿದರು.

ತಾತನ ಜೊತೆ ಮೊಮ್ಮಗನ ಹೆಜ್ಜೆ

ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರ ಜೊತೆ ಮೊಮ್ಮಗ ಧವನ್ ರಾಕೇಶ್ ಅತ್ಯಂತ ಉತ್ಸಾಹದಿಂದ ಹೆಜ್ಜೆ ಹಾಕಿ ಗಮನ ಸೆಳೆದರು. ಸಿದ್ದರಾಮನಹುಂಡಿಯಲ್ಲಿ ಮನೆದೇವರು ಸಿದ್ದರಾಮೇಶ್ವರ ದೇಗುಲದಲ್ಲಿ ಪೂಜೆ ಸಲ್ಲಿಸುವಾಗ ಹಾಗೂ ಚಾಮುಂಡಿಬೆಟ್ಟಕ್ಕೆ ತೆರಳುವಾಗ ಧವನ್ ಜನರತ್ತ ಕೈಬೀಸಿದರು. ಅವರನ್ನು ನೋಡಲು ಜನರೂ ಮುಗಿಬಿದ್ದರು. ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದ್ದರಲ್ಲದೇ, ‘ನೀನೂ ಹುಲಿ ಆಗಬೇಕು’ ಎಂದರು.

‘ಮೊಮ್ಮಗನಿಗೊಂದು ಹಾರ ಹಾಕಪ್ಪ’ ಎಂದು ಸಿದ್ದರಾಮಯ್ಯ ಅವರು ಚಾಮುಂಡಿ ಬೆಟ್ಟದಲ್ಲಿ ಅರ್ಚಕ ಶಶಿಶೇಖರ್ ದೀಕ್ಷಿತ್ ಅವರಿಗೆ ಹೇಳಿದರು.

ನಂಜನಗೂಡು ಹೊರವಲಯದ ಗೋಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮೊಮ್ಮಗನನ್ನು ಹತ್ತಿರಕ್ಕೆ ಕರೆದ ಸಿದ್ದರಾಮಯ್ಯ, ‘ಇದೇ ನನ್ನ ಕೊನೆ ಚುನಾವಣೆ. ಇನ್ನು ಮುಂದೆ ಯತೀಂದ್ರ ಹಾಗೂ ಮೊಮ್ಮಗ ಧವನ್ ರಾಕೇಶ್ ಇರುತ್ತಾರೆ. 17ರ ವಯಸ್ಸಿನ ಮೊಮ್ಮಗ ರಾಜಕೀಯಕ್ಕೆ ಬರಲು ಇನ್ನೂ 8 ವರ್ಷ ಬೇಕು. ಜನರು ಅವನ ಮೇಲೆ ತೋರಿಸುತ್ತಿರುವ ಪ್ರೀತಿ ನೋಡಿದರೆ ರಾಕೇಶ್ ನೆನಪಾಗುತ್ತಿದ್ದಾನೆ. ಆತ ವರುಣ–ಚಾಮುಂಡೇಶ್ವರಿಯಲ್ಲಿ ಜನಪ್ರಿಯನಾಗಿದ್ದ’ ಎಂದು ಭಾವುಕರಾದರು.

ಜಾರ್ಜ್ ಬಳಿ ₹4 ಕೋಟಿ ಸಾಲ

ಮೈಸೂರು: ಸಿದ್ದರಾಮಯ್ಯ ಅವರ ಚರಾಸ್ತಿ ₹ 9.58 ಕೋಟಿ, ಸ್ಥಿರಾಸ್ತಿ ₹ 9.43 ಕೋಟಿ ಇದ್ದು, ₹ 6.84 ಕೋಟಿ ಸಾಲವಿದೆ. ಕಾಂಗ್ರೆಸ್ ಮುಖಂಡ ಕೆ.ಜೆ. ಜಾರ್ಜ್ ಅವರ ಬಳಿಯೇ ಅವರು ₹ 4 ಕೋಟಿ ಸಾಲ ಪಡೆದಿದ್ದಾರೆ. ಪತ್ನಿ ಪಾರ್ವತಿ ಅವರ ಚರಾಸ್ತಿ ₹ 11.26 ಕೋಟಿ, ಸ್ಥಿರಾಸ್ತಿ ₹ 20.85 ಕೋಟಿ ಇದೆ. ಬ್ಯಾಂಕ್ ಆಫ್ ಬರೋಡಾದಲ್ಲಿ ₹ 1.93 ಕೋಟಿ ಮನೆ ಸಾಲ ಸೇರಿದಂತೆ ಒಟ್ಟು ₹ 16.24 ಕೋಟಿ ಸಾಲವಿದೆ. ಸಿದ್ದರಾಮಯ್ಯ ಕೈಯಲ್ಲಿರುವ ನಗದು ₹ 1.5 ಲಕ್ಷ. ಸಿದ್ದರಾಮಯ್ಯ ವಿರುದ್ಧ 13 ಪ್ರಕರಣಗಳು ದಾಖಲಾಗಿದ್ದು, 4 ಪ್ರಕರಣಗಳ ವಿಚಾರಣೆ ನಡೆದಿದೆ. 5 ಪ್ರಕರಣಗಳು ಸಿಐಡಿ ತನಿಖೆಗೆ ಒಳಪಟ್ಟಿವೆ.

ಪ್ರವೀಣ್ ನೆಟ್ಟಾರು ಹತ್ಯೆ ಆರೋಪಿ ನಾಮಪತ್ರ


ಇಸ್ಮಾಯಿಲ್ ಶಾಫಿ ಕೆ

ಪುತ್ತೂರು (ದಕ್ಷಿಣ ಕನ್ನಡ): ಬಿಜೆಪಿ ಯುವ ಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾಗಿದ್ದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಆರೋಪಿ ಇಸ್ಮಾಯಿಲ್ ಶಾಫಿ ಕೆ. (ಶಾಫಿ ಬೆಳ್ಳಾರೆ) (41 ವರ್ಷ) ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಡಿಪಿಐ ಅಭ್ಯರ್ಥಿಯಾಗಿ ಜೈಲಿನಿಂದಲೇ ನಾಮಪತ್ರ ಸಲ್ಲಿಸಿದ್ದಾರೆ.

ಯುಎಪಿಎ ಅಡಿ ಬಂಧಿತನಾಗಿ ಜೈಲಿನಲ್ಲಿರುವ ಇಸ್ಮಾಯಿಲ್ ಶಾಫಿ ಕೆ ಪರವಾಗಿ, ಅವರ ನಾಮಪತ್ರದ ಸೂಚಕ ಹಾಗೂ ಏಜೆಂಟ್ ಆಗಿರುವ ಅಬ್ದುಲ್ ರಹಿಮಾನ್ ಅವರು ನಾಮಪತ್ರವನ್ನು ಚುನಾವಣಾಧಿಕಾರಿಗೆ ಸಲ್ಲಿಸಿದರು.

ಲಿಂಗಾಯತರೇ ಮತ್ತೆ ಸಿಎಂ: ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿಯು ಲಿಂಗಾಯತ ಸಮುದಾಯದ ನಾಯಕರನ್ನು ತುಳಿಯುತ್ತಿದೆ’ ಎಂದು ಕಾಂಗ್ರೆಸ್ ಪ್ರಚಾರ ಆರಂಭಿಸಿರುವ ಬೆನ್ನಲ್ಲೇ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಪಕ್ಷದ ಲಿಂಗಾಯತ ಮುಖಂಡರ ಸಭೆ ಬುಧವಾರ ರಾತ್ರಿ ನಡೆಯಿತು. ಕಾಂಗ್ರೆಸ್ ಆರೋಪಕ್ಕೆ ಯಾವ ರೀತಿ ತಿರುಗೇಟು ನೀಡಬೇಕು ಎಂಬ ಕುರಿತು ಗಂಭೀರ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

ಬಿಜೆಪಿಯಲ್ಲಿ ಟಿಕೆಟ್ ಸಿಗದೇ ಮುನಿಸಿಕೊಂಡು ಕಾಂಗ್ರೆಸ್ ಸೇರಿದ ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರು‘ ಬಿಜೆಪಿ ಲಿಂಗಾಯತ ನಾಯಕರನ್ನು ಹತ್ತಿಕ್ಕುತ್ತಿದೆ’ ಎಂದು ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಪಕ್ಷವೂ ‘ಬಿಜೆಪಿ ಲಿಂಗಾಯತ ವಿರೋಧಿ’ ಎಂಬ ಅಸ್ತ್ರವನ್ನು ಬಳಸಿಕೊಳ್ಳುವ ಪ್ರಯತ್ನ ನಡೆಸಿರುವ ಬೆನ್ನಲ್ಲೇ ಲಿಂಗಾಯತ ಮುಖಂಡರ ಸಭೆಯನ್ನು ನಡೆಸಲು ವರಿಷ್ಠರು ಯಡಿಯೂರಪ್ಪ ಅವರಿಗೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಅವರ ನಿವಾಸ ‘ಕಾವೇರಿ’ಯಲ್ಲಿ ಸಭೆ ನಡೆಯಿತು.

‘ಮುಂದೆ ಬಿಜೆಪಿ ಸರ್ಕಾರ ಬಂದರೆ ಲಿಂಗಾಯತ ಸಮುದಾಯದವರನ್ನೇ ಮುಖ್ಯಮಂತ್ರಿ ಎಂದು ಘೋಷಣೆ ಮಾಡಬೇಕು. ಇದರಿಂದ ಹಾನಿ ತಪ್ಪಿಸಲು ಸಾಧ್ಯ’ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು.

‘ಈ ಹಿಂದೆ ಲಿಂಗಾಯತ ಸಮುದಾಯವನ್ನು ಒಡೆದು ಅದರ ಲಾಭ ಪಡೆಯಲು ಪ್ರಯತ್ನಿಸಿ ಕೈ ಸುಟ್ಟುಕೊಂಡಿದ್ದ ಕಾಂಗ್ರೆಸ್ ಈ ಬಾರಿ ಲಿಂಗಾಯತ ಮತ ಬ್ಯಾಂಕ್ ಒಡೆಯಲು ಪರ್ಯಾಯ ಮಾರ್ಗ ಕಂಡುಕೊಂಡಿದ್ದು, ಇದಕ್ಕೆ ಶೆಟ್ಟರ್ ಮತ್ತು ಸವದಿಯವರನ್ನು ದಾಳವಾಗಿ ಬಳಸಿಕೊಳ್ಳುತ್ತಿದೆ. ಈ ವಿಷಯವನ್ನು ಸಮುದಾಯದ ಗಮನಕ್ಕೆ ತರಬೇಕು. ಇದಕ್ಕಾಗಿ ಸಮುದಾಯದ ಪ್ರಭಾವಿಗಳು ಮತ್ತು ಮಠಾಧಿಪತಿಗಳನ್ನು ಬಳಸಿಕೊಳ್ಳಬೇಕು’ ಎಂಬ ಸಲಹೆಯೂ ಬಂದಿತು ಎಂದು ಮೂಲಗಳು ಹೇಳಿವೆ.

‘ಬಿಜೆಪಿ ಈವರೆಗೆ ಮೂವರು ಲಿಂಗಾಯತರನ್ನು ಮುಖ್ಯಮಂತ್ರಿ ಮಾಡಿದೆ. ಆದರೆ, ಕಳೆದ 52 ವರ್ಷಗಳಲ್ಲಿ ಕಾಂಗ್ರೆಸ್ ಒಬ್ಬರನ್ನು ಮಾತ್ರ ಮುಖ್ಯಮಂತ್ರಿ ಮಾಡಿದೆ. ನಾಮಕಾವಸ್ತೆ ಎಂಬಂತೆ ಕೆಲ ಲಿಂಗಾಯತರಿಗೆ ಹುದ್ದೆಗಳನ್ನು ನೀಡಿದೆಯೇ ಹೊರತು, ಲಿಂಗಾಯತರಿಗೆ ಎಂದಿಗೂ ಆದ್ಯತೆ ನೀಡಿಲ್ಲ. ಬಿಜೆಪಿ 67 ಲಿಂಗಾಯತರಿಗೆ ಟಿಕೆಟ್ ನೀಡಿದೆ ಎಂಬ ಅಂಶವನ್ನು ಸಮುದಾಯಕ್ಕೆ ಮನದಟ್ಟು ಮಾಡಿಕೊಡಬೇಕು ’ ಎಂಬ ವಿಷಯವೂ ಚರ್ಚೆ ಆಯಿತು.

ಈ ಸಭೆಯಲ್ಲಿ ಬಿಜೆಪಿಯ ಪ್ರಮುಖ ಲಿಂಗಾಯತ ಸಚಿವರು, ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು ಮತ್ತು ಮಾಜಿ ಶಾಸಕರು ಭಾಗವಹಿಸಿದ್ದರು. ಯಡಿಯೂರಪ್ಪ ಅವರ ವಿರುದ್ಧ ಸುದೀರ್ಘವಾಗಿ ವಾಗ್ದಾಳಿ ನಡೆಸುತ್ತಾ ಬಂದಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ, ಬಿಎಸ್‌ವೈ ಜತೆ ಮುನಿಸಿಕೊಂಡಿದ್ದ ವಿ.ಸೋಮಣ್ಣ ಅವರು ಸಭೆಯಲ್ಲಿ ಹಾಜರಿದ್ದರು. ಸುಮಾರು 23 ಮಂದಿ ಸಭೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿ ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್, ಸಚಿವರಾದ ಬಿ.ಸಿ.ಪಾಟೀಲ, ಶಂಕರಪಾಟೀಲ ಮುನೇನಕೊಪ್ಪ, ಶಾಸಕ ಅರವಿಂದ ಬೆಲ್ಲದ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ವೈಎಸ್‌ವಿ ದತ್ತ ವಿರುದ್ಧ 41 ಚೆಕ್‌ಬೌನ್ಸ್ ಪ್ರಕರಣ


ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಡೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ವೈಎಸ್‌ವಿ ದತ್ತ ಅವರ ವಿರುದ್ಧ ಚೆಕ್‌ಬೌನ್ಸ್‌ನ 41 ಪ್ರಕರಣಗಳು ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ದಾಖಲಾಗಿವೆ.

ಚೆಕ್ ನಗದು ಆಗದಿರುವ ಕಾರಣ ಈ ಎಲ್ಲ ಪ್ರಕರಣಗಳು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ (ಎನ್‌ಐ) ಕಾಯ್ದೆ 1881 ರ ಕಲಂ 138ರ ಅಡಿಯಲ್ಲಿ ದಾಖಲಾಗಿವೆ. 2014ರಿಂದ 2020 ಅವಧಿಯಲ್ಲಿ ಈ ಪ್ರಕರಣಗಳು ದಾಖಲಾಗಿದ್ದು, ವಿಚಾರಣೆ ಹಂತದಲ್ಲಿವೆ. ಚುನಾವಣಾಧಿಕಾರಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಈ ಮಾಹಿತಿ ಇದೆ. 2022–23ನೇ ಸಾಲಿನಲ್ಲಿ ಅವರ ವಾರ್ಷಿಕ ಆದಾಯ ₹8.15 ಲಕ್ಷ ಇತ್ತು. ₹17.89 ಲಕ್ಷ ಮೌಲ್ಯದ ಚರಾಸ್ತಿ, ₹2.94 ಕೋಟಿ ಮೌಲ್ಯದ ಸ್ಥಿರಾಸ್ತಿ ಹಾಗೂ ₹93.19 ಲಕ್ಷ ಸಾಲ ಇದೆ.

ಬಿಜೆಪಿ ಅಭ್ಯರ್ಥಿ ಮಣಿಕಂಠ ವಿರುದ್ಧ 23 ಪ್ರಕರಣ

ಪ್ರಜಾವಾಣಿ ವಾರ್ತೆ


ಮಣಿಕಂಠ ರಾಠೋಡ

ಕಲಬುರಗಿ: ಇಲ್ಲಿನ ಚಿತ್ತಾಪುರ ವಿಧಾನಸಭಾ ಪರಿಶಿಷ್ಟ ಜಾತಿ (ಎಸ್‌ಸಿ) ಮೀಸಲು ಕ್ರೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿರುವ ಮಣಿಕಂಠ ರಾಠೋಡ ಮೇಲೆ ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರದ ವಿವಿಧ ಪೊಲೀಸ್ ಠಾಣೆಗಳಲ್ಲಿ 40 ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ 23 ಪಡಿತರ ಅಕ್ಕಿ ಕಳ್ಳ ಸಾಗಣೆ ಪ್ರಕರಣಗಳಿವೆ.

ಅವಾಚ್ಯ ಶಬ್ದಗಳಿಂದ ನಿಂದನೆ ಮತ್ತು ಜೀವ ಬೆದರಿಕೆ, ಆರೋಪಿಗಳಿಗೆ ಕುಮ್ಮಕ್ಕು, ಮಾರಣಾಂತಿಕ ಹಲ್ಲೆ, ಸಾರ್ವಜನಿಕರಿಗೆ ತೊಂದರೆ, ಕಾನೂನು ಬಾಹಿರ ಡೀಸೆಲ್ ಸಂಗ್ರಹ, ವಂಚನೆ, ಮೋಸ ಮತ್ತು ಸಾರ್ವಜನಿಕವಾಗಿ ಶಾಂತಿ ಭಂಗ ಮಾಡಬಹುದು ಎಂಬ ಮುಂಜಾಗ್ರತಾ ಕ್ರಮವಾಗಿಯೂ ದೂರು ದಾಖಲಾಗಿವೆ.

ರಾಜ್ಯದ ಕಲಬುರಗಿ, ಬೀದರ್, ವಿಜಯಪುರ, ಯಾದಗಿರಿ, ಬೆಂಗಳೂರು ಸೇರಿ ನೆರೆಯ ತೆಲಂಗಾಣದ ಮೆಹಬೂಬಾಬಾದ್, ಮೈಲಾರ ದೇವಪಲ್ಲಿ, ಸಿಕಂದರಬಾದ್, ಬೀಕನೂರ, ಬೊಮ್ಮಲರಾಮ ಹಾಗೂ ಮೆಲ್ಲಾಚರಾವು ಮತ್ತು ಮಹಾರಾಷ್ಟ್ರದ ಉಸ್ಮನಬಾದ್ ಠಾಣೆಗಳಲ್ಲಿ ಅಕ್ಕಿ ಕಳ್ಳ ಸಾಗಣೆ ಸೇರಿ ಇತರೆ ಪ್ರಕರಣಗಳಿವೆ. ಬಹುತೇಕ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿವೆ.

ನಿರ್ಲಕ್ಷ್ಯ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿ ಜೀವಕ್ಕೆ ಅಪಾಯ ಮಾಡಿದ್ದು ಒಪ್ಪಿಕೊಂಡು ₹2,400 ದಂಡ ಕಟ್ಟಿದ್ದಾರೆ. ಮಕ್ಕಳಿಗೆ ಹಂಚುವ ಹಾಲಿನ ಪುಡಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ ಪ್ರಕರಣದಲ್ಲಿ ಒಂದು ವರ್ಷ ಕಾರಾಗೃಹ ವಾಸ ಶಿಕ್ಷೆಯಾಗಿದೆ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣೆ ನಡೆಯುತ್ತಿದೆ. ಸರ್ಕಾರಿ ಅಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿರುವುದಾಗಿ ಚುನಾವಣೆ ಅಧಿಕಾರಿಗಳಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಮಣಿಕಂಠ ಬಳಿ ₹11.34 ಕೋಟಿ ಮತ್ತು ಪತ್ನಿ ಭಾರತಿ ರಾಠೋಡ ಬಳಿ ₹3,22 ಕೋಟಿ ಚರಾಸ್ತಿ ಇದೆ. ಪುತ್ರ ಲಕ್ಷ್ಮಿತಿಮ್ಮಪ್ಪ ರಾಠೋಡ ಮತ್ತು ಪುತ್ರಿ ನಾರಾಯಣಿ ರಾಠೋಡ ಬಳಿ ಕ್ರಮವಾಗಿ ₹ 25 ಲಕ್ಷ ಮತ್ತು ₹50 ಲಕ್ಷ ಚರಾಸ್ತಿ ಇದೆ.

ದಂಪತಿ ಇಬ್ಬರೂ ತಲಾ 500 ಗ್ರಾಂ ಬೆಳ್ಳಿ, ಕ್ರಮವಾಗಿ 408 ಗ್ರಾಂ ಮತ್ತು 250 ಗ್ರಾಂ ಚಿನ್ನ ಹೊಂದಿದ್ದಾರೆ. ಪತ್ನಿ ಬಳಿ ₹21.99 ಲಕ್ಷ ಮೌಲ್ಯದ ಇನ್ನೊವಾ ಕ್ರಿಸ್ಟಾ ಹಾಗೂ ₹1.04 ಕೋಟಿ ಮೌಲ್ಯದ ಮರ್ಸಿಡಿಸ್ ಬೆಂಜ್ ‘ಜಿಎಲ್‌ಎಸ್– 400’ ಕಾರುಗಳು ಇವೆ.

ಮಣಿಕಂಠ ಬಳಿ ₹1.06 ಕೋಟಿ ಮೌಲ್ಯದ ವೋಲ್ವೊ ‘ಎಕ್ಸ್‌ಸಿ 90’, ₹ 52.41 ಲಕ್ಷ ಮೌಲ್ಯದ ರೇಂಜ್ ರೋವರ್, ₹42.82 ಲಕ್ಷ ಮೌಲ್ಯದ ಟೊಯೊಟಾ ಫಾರ್ಚುನರ್ ಸೇರಿ ಬಹು ಲಕ್ಷ ಮೌಲ್ಯದ 12 ವಾಹನಗಳಿವೆ.

ಗುರುಮಠಕಲ್ ಮತ್ತು ಚಿತ್ತಾಪುರದ ವಿವಿಧ ಗ್ರಾಮಗಳಲ್ಲಿ ಮಣಿಕಂಠ ಅವರು ಕೃಷಿ ಜಮೀನು ಮತ್ತು ಕಲಬುರಗಿಯಲ್ಲಿ ಪತ್ನಿ ಭಾರತಿ ಅವರು ಕೃಷಿಯೇತರ ಭೂಮಿ ಹೊಂದಿದ್ದಾರೆ. ಮಹಾರಾಷ್ಟ್ರ, ಯಾದಗಿರಿ ಮತ್ತು ಹೈದರಾಬಾದ್‌ನಲ್ಲಿ ದಂಪತಿ ಹೆಸರಲ್ಲಿ ಬಹುಕೋಟಿ ಬೆಲೆಯ ವಾಣಿಜ್ಯ ಕಟ್ಟಡಗಳಿವೆ. ಪತಿ ಮತ್ತು ಪತ್ನಿಯರ ಒಟ್ಟಾರೆ ಸ್ಥಿರಾಸ್ತಿ ಕ್ರಮವಾಗಿ ₹17.83 ಹಾಗೂ ₹13.48 ಕೋಟಿಯಷ್ಟಿದೆ. ಸಾಲ ಕ್ರಮವಾಗಿ ₹15.33 ಕೋಟಿ ಹಾಗೂ ₹7.05 ಕೋಟಿಯಷ್ಟಿದೆ.

ಮಣಿಕಂಠ, ಪತ್ನಿ ಹಾಗೂ ಮಕ್ಕಳ ಒಟ್ಟಾರೆ ಆಸ್ತಿಯ ಪ್ರಮಾಣ ₹46.63 ಕೋಟಿ. ₹22.38 ಕೋಟಿ ಸಾಲ ಪಾವತಿಸಬೇಕಿದೆ. ವ್ಯಾಪಾರವೇ ತಮ್ಮ ಆದಾಯದ ಮೂಲ ಎಂದು ನಮೂದಿಸಿದ್ದಾರೆ. ಯಾದಗಿರಿ ಜಿಲ್ಲೆಯ ಗುರುಮಠಕಲ್‌ನ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿವರೆಗೆ ಓದಿದ್ದು, ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ.

ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ

ಕ್ಷೇತ್ರ	ಅಭ್ಯರ್ಥಿ ಹೆಸರು
ಬಸವನ ಬಾಗೇವಾಡಿ	ಸೋಮನಗೌಡ ಪಾಟೀಲ
ಬಸವಕಲ್ಯಾಣ	ಸಂಜಯ್ ವಾಡೇಕರ್
ಕುಷ್ಟಗಿ	ಶರಣಪ್ಪ ಕುಂಬಾರ
ಚನ್ನಗಿರಿ	ತೇಜಸ್ವಿ ಪಟೇಲ್
ರಾಜಾಜಿನಗರ	ಡಾ.ಅಂಜನಪ್ಪ
ಬೆಂಗಳೂರು ದಕ್ಷಿಣ	ರಾಜಗೋಪಾಲರೆಡ್ಡಿ
ಮಂಡ್ಯ	ಬಿ.ಆರ್.ರಾಮಚಂದ್ರ
ನಿಪ್ಪಾಣಿ	ರಾಜು ಮಾರುತಿ ಪವಾರ್
ಚಿಕ್ಕೋಡಿ–ಸದಲಗ	ಸದಾಶಿವ ವಾಳಕೆ
ಕಾಗವಾಡ	ಮಲ್ಲಪ್ಪ ಎಂ. ಚುಂಗ
ಹುಕ್ಕೇರಿ	ಬಸವರಾಜಗೌಡ ಪಾಟೀಲ
ಅರಭಾವಿ	ಪ್ರಕಾಶ ಕಾಳಶೆಟ್ಟಿ
ಯಮಕನಮರಡಿ	ಮಾರುತಿ ಮಲ್ಲಪ್ಪ ಅಷ್ಟಗಿ
ಬೆಳಗಾವಿ ಉತ್ತರ	ಶಿವಾನಂದ ಮುಗಳಿಹಾಳ
ಬೆಳಗಾವಿ ಗ್ರಾಮಾಂತರ	ಶಂಕರಗೌಡ ರುದ್ರಗೌಡ ಪಾಟೀಲ
ರಾಮದುರ್ಗ	ಪ್ರಕಾಶ್ ಮುಧೋಳ್
ಮುಧೋಳ	ಧರ್ಮರಾಜ್ ವಿಠಲ್ ದೊಡ್ಡಮನಿ
ತೇರದಾಳ	ಸುರೇಶ್ ಅರ್ಜುನ್ ಮಡಿವಾಳರ್
ಜಮಖಂಡಿ	ಯಾಕೂಬ್ ಬಾಬಾಲಾಲ್ ಕಪಡೇವಾಲ್
ಬೀಳಗಿ	ರುಕ್ಮುದ್ದೀನ್ ಸೌದಾಗರ್
ಬಾಗಲಕೋಟೆ	ಡಾ.ದೇವರಾಜ ಪಾಟೀಲ
ಹುನಗುಂದ	ಶಿವಪ್ಪ ಮಹಾದೇವಪ್ಪ ಬೋಲಿ
ವಿಜಯಪುರ ನಗರ	ಬಂದೇನವಾಜ್ ಮಾಬರಿ
ಸುರಪುರ	ಶ್ರವಣಕುಮಾರ್ ನಾಯ್ಕ
ಕಲಬುರಗಿ ದಕ್ಷಿಣ	ಕೃಷ್ಣಾ ರೆಡ್ಡಿ
ಔರಾದ್	ಜೈಸಿಂಗ್ ರಾಥೋಡ್
ರಾಯಚೂರು ನಗರ	ವಿನಯಕ್ ಕುಮಾರ್ ಇ.
ಮಸ್ಕಿ	ರಾಘವೇಂದ್ರ ನಾಯಕ
ಕನಕಗಿರಿ	ರಾಜಗೋಪಾಲ್
ಯಲಬುರ್ಗ	ಮಲ್ಲನಗೌಡ ಸಿದ್ದಪ್ಪ ಕೋಣನಗೌಡ
ಕೊಪ್ಪಳ	ಚಂದ್ರಶೇಖರ್
ಶಿರಹಟ್ಟಿ	ಹನುಮಂತಪ್ಪ ನಾಯಕ
ಗದಗ	ವೆಂಕನಗೌಡ ಗೋವಿಂದ ಗೌಡರ
ರೋಣ	ಮುಗ್ದಂ ಸಾಬ್ ಮುಧೋಳ
ನರಗುಂದ	ರುದ್ರಗೌಡ ನಿಂಗನಗೌಡ ಪಾಟೀಲ
ನವಲಗುಂದ	ಕಲ್ಲಪ್ಪ ನಾಗಪ್ಪ ಗಡ್ಡಿ
ಧಾರವಾಡ	ಮಂಜುನಾಥ್ ಲಕ್ಷ್ಮಣ್ ಹಗೇದಾರ್
ಹುಬ್ಬಳ್ಳಿ–ಧಾರವಾಡ ಕೇಂದ್ರ	ಸಿದ್ದಲಿಂಗೇಶ್‌ಗೌಡ ಮಹಾಂತ ಒಡೆಯರ್
ಹುಬ್ಬಳ್ಳಿ–ಧಾರವಾಡ ಪಶ್ಚಿಮ	ಗುರುರಾಜ ಹುಣಸಿಮರದ
ಕಲಘಟಗಿ	ವೀರಪ್ಪ ಬಸಪ್ಪ ಶೀಗೆಹಟ್ಟಿ
ಹಾವೇರಿ	ತುಕಾರಾಂ ಮಾಳಗಿ
ಬ್ಯಾಡಗಿ	ಸುನೀತಾ ಎಂ. ಪೂಜಾರ್
ಕೂಡ್ಲಿಗಿ	ಕೋಡಿಹಳ್ಳಿ ಭೀಮಪ್ಪ
ಹೊಳಲ್ಕೆರೆ	ಇಂದ್ರಜಿತ್ ನಾಯ್ಕ
ಜಗಳೂರು	ದೇವರಾಜ
ಸೊರಬ	ಬಾಸೂರು ಚಂದ್ರೇಗೌಡ
ಸಾಗರ	ಝಾಕೀರ್
ರಾಜರಾಜೇಶ್ವರಿನಗರ	ನಾರಾಯಣಸ್ವಾಮಿ
ಮಲ್ಲೇಶ್ವರ	ಉತ್ಕರ್ಷ್
ಚಾಮರಾಜಪೇಟೆ	ಗೋವಿಂದರಾಜು
ಚಿಕ್ಕಪೇಟೆ	ಇಮ್ರಾನ್ ಪಾಷ
ಪದ್ಮನಾಭನಗರ	ಬಿ.ಮಂಜುನಾಥ್
ಬಿಟಿಎಂ ಬಡಾವಣೆ	ವೆಂಕಟೇಶ್
ಜಯನಗರ	ಕಾಳೇಗೌಡ
ಬೊಮ್ಮನಹಳ್ಳಿ	ನಾರಾಯಣ ರಾಜು
ಸುಳ್ಯ	ವೆಂಕಟೇಶ್ ಎಚ್.ಎನ್.
ವಿರಾಜಪೇಟೆ	ಮನ್ಸೂರ್ ಅಲಿ
ಚಾಮರಾಜ	ಎಚ್.ಕೆ.ರಮೇಶ್ (ರವಿ)
ನರಸಿಂಹರಾಜ	ಅಬ್ದುಲ್ ಖಾದರ್ ಶಾಹೀದ್
ಚಾಮರಾಜನಗರ	ಮಲ್ಲಿಕಾರ್ಜುನಸ್ವಾಮಿ

ಅಖಂಡ ‘ಕೈ’ತಪ್ಪಿದ ಟಿಕೆಟ್; ಶಿಗ್ಗಾವಿ ಅಭ್ಯರ್ಥಿ ಬದಲು

ನವದೆಹಲಿ: ಚುನಾವಣೆಗೆ ಅಭ್ಯರ್ಥಿಗಳ ಐದನೇ ಪಟ್ಟಿಯನ್ನು ಕಾಂಗ್ರೆಸ್ ಬುಧವಾರ ರಾತ್ರಿ ಪ್ರಕಟಿಸಿದೆ. ಕಳೆದ ಬಾರಿ ಅತಿ ಹೆಚ್ಚು ಮತಗಳ ಅಂತರದಿಂದ ಜಯಿಸಿದ ಪುಲಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರಿಗೆ ಟಿಕೆಟ್ ನಿರಾಕರಿಸಿದೆ. ಹಿಂದಿನ ಎರಡು ಚುನಾವಣೆಗಳಲ್ಲಿ ಮಹದೇವಪುರದಿಂದ ಸ್ಪರ್ಧಿಸಿ ಸೋತಿದ್ದ ಶ್ರೀನಿವಾಸ್‌ಗೆ ಟಿಕೆಟ್ ನೀಡಲಾಗಿದೆ. ಶಿಗ್ಗಾವಿ ಕ್ಷೇತ್ರದ ಅಭ್ಯರ್ಥಿಯನ್ನು ಒಂದೇ ದಿನದಲ್ಲಿ ಬದಲಿಸಲಾಗಿದ್ದು, ಮೊಹಮ್ಮದ್ ಯೂಸುಫ್ ಸವಣೂರ್ ಬದಲಿಗೆ ಯಾಸಿರ್ ಅಹ್ಮದ್ ಖಾನ್ ಪಠಾಣ್ ಅವರಿಗೆ ಟಿಕೆಟ್ ಕೊಡಲಾಗಿದೆ.

ಕಲ್ಯಾಣ ಕರ್ನಾಟಕ: ಸುಭದ್ರ ನೆಲೆಯ ನಿರೀಕ್ಷೆಯಲ್ಲಿ ಜೆಡಿಎಸ್; ಬಿಜೆಪಿ ವಿರುದ್ಧ ಪ್ರತೀಕಾರಕ್ಕೆ ಕಾಂಗ್ರೆಸ್ ಯತ್ನ • ಟಿಕೆಟ್ ವಂಚಿತರಿಂದ ಬಂಡಾಯ

ಕಲ್ಯಾಣ 'ಕ್ರಾಂತಿ'ಗೆ ಕೈ, ಕಮಲ, ತೆನೆ ಸಜ್ಜು

• ರಾಹುಲ ಬೆಳಗಲಿ

ಕಲಬುರಗಿ: ವಿಧಾನಸಭೆ ಚುನಾವಣೆ ಘೋಷಣೆಯಾದರೆ ಸಾಕು, ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಜಿದ್ದಾಜಿದ್ದಿನ ಹೋರಾಟಕ್ಕೆ ವೇದಿಕೆ ಸಿದ್ಧವಾಯಿತೆಂದೇ ಅರ್ಥ. ಎರಡೂ ಪಕ್ಷಗಳ ನಾಯಕರು ಆಯಾ ಕ್ಷೇತ್ರಗಳ ಮೇಲೆ ವರ್ಷಗಳಿಂದ ನಿರಂತರ ಹಿಡಿತ ಕಾಯ್ದುಕೊಂಡರೆ, ಕುಟುಂಬ ರಾಜಕಾರಣವು 'ಅನ್ಯರಿಗೆ' ಚಿಗುರಲು ಅವಕಾಶವನ್ನೇ ಮಾಡಿಕೊಟ್ಟಿಲ್ಲ. ಇದೆಲ್ಲದರ ಮಧ್ಯೆ ಈ ಸಲ ಟಿಕೆಟ್ ವಂಚಿತರ 'ಬಂಡಾಯದ ಬಿರುಗಾಳಿ' ಬೀಸಿದೆ. ಇದರಿಂದ ಕಲ್ಯಾಣ ಕರ್ನಾಟಕದ ರಾಜಕೀಯ ಚಿತ್ರಣವನ್ನು ಸ್ವಲ್ಪ ಮಟ್ಟಿಗಾದರೂ ಬದಲಿಸುವ ಲಕ್ಷಣ ಗೋಚರಿಸಿದೆ.

ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು ಮತ್ತು ಕೊಪ್ಪಳದಲ್ಲಿ ಜೆಡಿಎಸ್‌ಗೆ ನೆಲೆಯೇ ಇಲ್ಲ ಎಂದು ವ್ಯಂಗ್ಯವಾಡುವವರಿಗೆ ತಿರುಗೇಟು ನೀಡುವ 'ಸದಾವಕಾಶ' ಈ ಬಾರಿ ಪಕ್ಷದ ವರಿಷ್ಠರಿಗೆ ಲಭಿಸಿದೆ. ತಾವು ಕಟ್ಟಿ ಬೆಳೆಸಿದ ಮತ್ತು ವಿಧಾನಸಭೆಯಲ್ಲಿ ಪ್ರತಿನಿಧಿಸಿದ, ಪಕ್ಷದ ಹೈಕಮಾಂಡ್‌ನಿಂದ ಟಿಕೆಟ್ ವಂಚಿತರಾದ ಪ್ರಬಲ ಆಕಾಂಕ್ಷಿಗಳು ಜೆಡಿಎಸ್ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ. ಇದು ಆ ಪಕ್ಷಕ್ಕೆ ಬಲವನ್ನು ತಂದುಕೊಟ್ಟಿದೆ.

ಕಾಂಗ್ರೆಸ್‌ನ ಭದ್ರಕೋಟೆಯನ್ನು ಭೇದಿಸಲು ಸಂಘ ಪರಿವಾರವು ಬಿಜೆಪಿ ಮೂಲಕ ಕಾರ್ಯತಂತ್ರ ರೂಪಿಸಿದೆ. ಶಿವರಾತ್ರಿ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯ ಆಳಂದದ ಲಾಡ್ಲೆ ಮಶಾಕ್ ದರ್ಗಾ ಆವರಣದಲ್ಲಿನ ರಾಘವ ಚೈತನ್ಯಲಿಂಗಕ್ಕೆ ಶ್ರೀರಾಮ ಸೇನೆ ಮತ್ತು ಬಿಜೆಪಿಯವರು ವಿಶೇಷ ಪೂಜೆ ಮಾಡಿದರು. ಇದರಿಂದ ಪರಿಸ್ಥಿತಿ ಬಿಗಡಾಯಿಸಿತ್ತು.

ಕಲ್ಯಾಣ ಕರ್ನಾಟಕದಲ್ಲಿ ಜನರ ಒಲವು ಗಳಿಸಲು ಯತ್ನಿಸಿದ ಬಿಜೆಪಿ 2018ರ ವಿಧಾನಸಭೆ ಚುನಾವಣೆಯಲ್ಲಿ ಯಶ ಕಂಡಿತು. ಅವಿಭಜಿತ ಬಳ್ಳಾರಿ ಜಿಲ್ಲೆ ಹೊರತುಪಡಿಸಿ ಒಟ್ಟು 31ರ ಪೈಕಿ 14 ಕ್ಷೇತ್ರಗಳಲ್ಲಿ ಕಮಲ ಅರಳಿತು. 13 ಕ್ಷೇತ್ರಗಳಲ್ಲಿ 'ಕೈ' ಹಿಡಿತ ಸಾಧಿಸಿತು. 2019ರ ಲೋಕಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮಣಿಸಿದ ಬಿಜೆಪಿಯು ತನ್ನ ಶಕ್ತಿಯನ್ನು ಇನ್ನಷ್ಟು ವೃದ್ಧಿಸಿಕೊಂಡಿತು. ಪ್ರಸಕ್ತ ಚುನಾವಣೆಯಲ್ಲಿ ಸುಭದ್ರ ನೆಲೆ ಕಂಡುಕೊಳ್ಳಲು ಪ್ರಯತ್ನ ನಡೆಸಿದೆ.

ವಿವಿಧ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳ ವಿವರ

ಜಿಲ್ಲೆ	ಕ್ಷೇತ್ರಗಳ ಸಂಖ್ಯೆ	ಪಕ್ಷಗಳ ಬಲಾಬಲ		
		ಬಿಜೆಪಿ	ಕಾಂಗ್ರೆಸ್	ಜೆಡಿಎಸ್
ಕಲಬುರಗಿ	9	5	4	-
ಯಾದಗಿರಿ	4	2	1	1
ಬೀದರ್	6	2	3	1
ರಾಯಚೂರು	7	2	3	2
ಕೊಪ್ಪಳ	5	3	2	-
ಒಟ್ಟು	31	14	13	4

ಕಲ್ಯಾಣ ಕರ್ನಾಟಕದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳು ಮತದಾರರ ಮೇಲೆ ಉತ್ತಮ ಪ್ರಭಾವ ಬೀರಿ, ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಿದೆ

ಸುರೇಶ ಮಹಾಗಾಂವಕರ್, ಅಧ್ಯಕ್ಷ, ಜೆಡಿಎಸ್ ಜಿಲ್ಲಾ ಘಟಕ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕಳೆದ ಸಲಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಗೆಲ್ಲುತ್ತೇವೆ

ಜಗದೇವ ಗುತ್ತೇದಾರ, ಅಧ್ಯಕ್ಷ, ಕಾಂಗ್ರೆಸ್ ಜಿಲ್ಲಾ ಘಟಕ

ಪ್ರತೀಕಾರಕ್ಕೆ ಸಿದ್ಧತೆ: ಸೋಲಿನ ಕಹಿ ಮರೆಯಲು ಮತ್ತು ಪ್ರತೀಕಾರ ತೀರಿಸಿಕೊಳ್ಳಲು ಕಾಯುತ್ತಿದ್ದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈ ಸಲದ ಚುನಾವಣೆಯು ಅವಕಾಶ ಮಾಡಿಕೊಟ್ಟಿದೆ. ಎಐಸಿಸಿ ಅಧ್ಯಕ್ಷರಾಗಿರುವ ಖರ್ಗೆ ಅವರು ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ್ದಾರೆ. ಇಲ್ಲಿನ ಕ್ಷೇತ್ರಗಳ ಸ್ಥಿತಿಗತಿ ಮತ್ತು ಜನರ ಮನೋಭಾವ ದಶಕಗಳಿಂದ ಅರಿತಿದ್ದು ಕಾರ್ಯತಂತ್ರ ರೂಪಿಸಿದ್ದಾರೆ.

'ಹೈದರಾಬಾದ್ ಕರ್ನಾಟಕ' ಬದಲು 'ಕಲ್ಯಾಣ ಕರ್ನಾಟಕ' ಎಂದು ಮರುನಾಮಕರಣ ಮಾಡಿದ ಬಿಜೆಪಿ 'ಡಬಲ್ ಎಂಜಿನ್ ಸರ್ಕಾರದ ಮೂಲಕ ಅಭಿವೃದ್ಧಿಯ ಸರಣಿಯೇ ಮುಂದುವರೆಯಲಿದೆ' ಎಂದು ಹೇಳುತ್ತಿದೆ. ಆದರೆ, ಶೇ 40ರಷ್ಟು ಕಮಿಷನ್ ಹಗರಣ, ಪಿಎಸ್‌ಐ ಅಕ್ರಮ ನೇಮಕಾತಿ, ಪಕ್ಷದ ಬೆಂಬಲಿಗರು ಜೈಲುಪಾಲಾಗಿದ್ದು ಎಲ್ಲವನ್ನೂ ಜನರ ಸ್ಮೃತಿ ಪಟಲದಿಂದ ಮರೆಸಲು ಹರಸಾಹಸ ಪಡುತ್ತಿದೆ. 'ಕಲ್ಯಾಣ ಕರ್ನಾಟಕ ಉತ್ಸವ', 'ಬೀದರ್ ಉತ್ಸವ' ಮುಂತಾದವನ್ನು ಆಯೋಜಿಸಿ ಜನರು ಸಂಭ್ರಮದಲ್ಲಿ ತೇಲಾಡುವಂತೆ ಸರ್ಕಾರ ಮಾಡಿತು. ಆದರೆ ಮೂಲಸೌಕರ್ಯ, ಬಡತನ ನಿವಾರಣೆ ಮುಂತಾದವುಗಳಿಗೆ ಆದ್ಯತೆ ನೀಡುವ ಬದಲು ವಿನಾಕಾರಣ ದುಂದುವೆಚ್ಚ ಮಾಡಿದೆ ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿತು.



ರಾಯಚೂರಿನಲ್ಲಿ ಏಮ್ಸ್ ಸ್ಥಾಪನೆಗೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಧರಣಿ ಆರಂಭಗೊಂಡು 300ಕ್ಕೂ ಹೆಚ್ಚು ದಿನಗಳಾಗಿದ್ದು, ಹೋರಾಟ ಮುಂದುವರೆದಿದೆ (ಸಂಗ್ರಹ ಚಿತ್ರ)

ಚಿತ್ತಾಪುರದ ಶಾಸಕ, ಕೆಪಿಸಿಸಿ ಮಾಧ್ಯಮ ಸಂಯೋಜಕ ಪ್ರಿಯಾಂಕ್ ಖರ್ಗೆ ನಿರಂತರವಾಗಿ ರಾಜ್ಯ ಸರ್ಕಾರದ ಹಗರಣಗಳನ್ನು ಬಯಲು ಮಾಡುವುದರ ಜೊತೆಗೆ ತನಿಖೆಗೆ ಒತ್ತಾಯಿಸುತ್ತಿರುವುದು ಬಿಜೆಪಿಯ ಕಣ್ಣು ಕೆಂಪಾಗಿಸಿದೆ. ಇದಕ್ಕೆಲ್ಲ ಕೊನೆ ಹಾಡಬೇಕೆಂದು ರೌಡಿಶೀಟರ್ ಮಣಿಕಂಠ ರಾಠೋಡ ಅವರನ್ನು ಕಣಕ್ಕಿಳಿಸಿರುವ ಪಕ್ಷವು ಹೇಗಾದರೂ ಮಾಡಿ ಪ್ರಿಯಾಂಕ್ ಖರ್ಗೆಯನ್ನು ಹಣಿಯಲೇಬೇಕು ಎನ್ನುವ ಹಟಕ್ಕೆ ಬಿದ್ದಿದೆ. ಬಿಜೆಪಿ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಅವರು ನಿರಂತರ ಸಭೆಗಳನ್ನು ನಡೆಸಿದ್ದಾರೆ.

'ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ವಾರ್ಷಿಕ ಅನುದಾನವನ್ನು ₹ 1,500 ಕೋಟಿಯಿಂದ ₹ 5,000 ಕೋಟಿವರೆಗೆ ಏರಿಸಲಾಗಿದೆ. ಹಾಗೆಯೇ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮತ್ತು ಸರ್ವಜನರ ಏಳ್ಗೆಯೇ ಮುಖ್ಯ' ಎಂದು ಬಿಜೆಪಿ ಹೇಳುತ್ತಿದೆ. ಆದರೆ, ಇದೆಲ್ಲವೂ ಬರೀ ಸುಳ್ಳು ಎಂದು ಹೇಳುತ್ತಿರುವ ಕಾಂಗ್ರೆಸ್, '371 (ಜೆ) ಕಲಂ ಅನುಷ್ಠಾನಕ್ಕೆ ತರುವ ಮೂಲಕ ಇಲ್ಲಿನ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವಲ್ಲಿ ಮಲ್ಲಿಕಾರ್ಜುನ ಖರ್ಗೆ ಅಪಾರವಾಗಿ ಶ್ರಮಿಸಿದ್ದಾರೆ. ವಿಶೇಷ ಸ್ಥಾನಮಾನದ ಸೌಲಭ್ಯಗಳನ್ನು ಪಡೆದುಕೊಂಡಲ್ಲಿ ಇಲ್ಲಿನ ಜನರಿಗೆ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಸಿಗುತ್ತದೆ' ಎನ್ನುತ್ತಿದೆ.

ರಾಯಚೂರು ಜಿಲ್ಲೆಯಲ್ಲಿ ಇಬ್ಬರು, ಬೀದರ್ ಮತ್ತು ಯಾದಗಿರಿ ಜಿಲ್ಲೆಯಲ್ಲಿ ತಲಾ ಒಂದೊಂದು ಶಾಸಕರನ್ನು ಹೊಂದಿರುವ ಜೆಡಿಎಸ್‌ಗೆ ಕಲಬುರಗಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಳೆದ ಚುನಾವಣೆಯಲ್ಲಿ ಖಾತೆ ತೆರೆಯಲು ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ 'ಕಲ್ಯಾಣ'ದ ಬಹುತೇಕ ಕಡೆ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ, ಉತ್ತಮ ಪೈಪೋಟಿ ನೀಡುವ ಹುಮ್ಮಸ್ಸಿನಲ್ಲಿದೆ. ಪಂಚರತ್ನ ಯಾತ್ರೆ ಮೂಲಕ ಸಂಚರಿಸಿದ ಎಚ್.ಡಿ.ಕುಮಾರಸ್ವಾಮಿ, 'ಒಮ್ಮೆಯಾದರೂ ಬಹುಮತ ನೀಡಿ' ಎಂದು ಮತದಾರರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಬಿಜೆಪಿಯಲ್ಲಿನ ಬಂಡಾಯ ಜೆಡಿಎಸ್‌ಗೆ ವರವಾಗಿದೆ. ಬಿಜೆಪಿ ತೊರೆದ ದೊಡ್ಡಪ್ಪಗೌಡ ಪಾಟೀಲ ನರಿಬೋಳ (ಜೇವರ್ಗಿ), ಡಾ. ಎ.ಬಿ.ಮಾಲಕರೆಡ್ಡಿ (ಯಾದಗಿರಿ), ಗುರು ಪಾಟೀಲ ಶಿರವಾಳ (ಶಹಾಪುರ), ಸೂರ್ಯಕಾಂತ ನಾಗಮಾರಪಳ್ಳಿ (ಬೀದರ್), ಸಿ.ವಿ.ಚಂದ್ರಶೇಖರ್ (ಕೊಪ್ಪಳ), ಎಚ್.ಆರ್.ಚನ್ನಕೇಶವ (ಗಂಗಾವತಿ) ಕಠಿಣ ಸವಾಲು ಒಡ್ಡುವುದು ನಿಶ್ಚಿತ.

ಚುನಾವಣೆ ಹೊಸ್ತಿಲಲ್ಲಿ ಗಣಿ ಉದ್ಯಮಿ ಗಾಲಿ ಜನಾರ್ದನ ರೆಡ್ಡಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ವನ್ನು ಸ್ಥಾಪಿಸಿದ್ದು, ಗಂಗಾವತಿಯಿಂದ ಸ್ಪರ್ಧಿಸುತ್ತಿದ್ದಾರೆ. ಹೆಚ್ಚಾಗಿ ಕಲ್ಯಾಣ ಕರ್ನಾಟಕ ಭಾಗವನ್ನೇ ಕೇಂದ್ರೀಕರಿಸಿದ್ದಾರೆ. ರೆಡ್ಡಿ ಪಕ್ಷದಿಂದ ಕೆಲವು ಕ್ಷೇತ್ರಗಳಲ್ಲಿನ ಫಲಿತಾಂಶದಲ್ಲಿ ವ್ಯತ್ಯಾಸ ಆಗಬಹುದು ಎನ್ನುವ ಮಾತಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ನಡುವೆಯೇ ಇರುತ್ತಿದ್ದ ಕಾದಾಟವು ಜೆಡಿಎಸ್ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವುದರಿಂದ ತ್ರಿಕೋನ ಸ್ಪರ್ಧೆ ಏರ್ಪಡಲಿದೆ. ಅನಿರೀಕ್ಷಿತ ಬೆಳವಣಿಗೆಯಿಂದ ಜೆಡಿಎಸ್ ಪುಟಿದ್ದೆದ್ದಿದೆ.

ಹಲವು ವರ್ಷಗಳಿಂದ ತಾವು ನಂಬಿದ ಪಕ್ಷದ ನೀತಿ, ಸಿದ್ಧಾಂತ, ತತ್ವಗಳನ್ನು ಅನುಸರಿಸಿಕೊಂಡು ಬಂದ ಪ್ರಮುಖರು ಈ ಸಲ ಪಕ್ಷಾಂತರ ಮಾಡಿದ್ದಾರೆ. ಮತದಾರರು ಪಕ್ಷಕ್ಕೆ ಮಣೆ ಹಾಕುವರೋ ಅಥವಾ ವ್ಯಕ್ತಿತ್ವಕ್ಕೆ ಆದ್ಯತೆ ನೀಡುವರೋ ಎನ್ನುವ ಕುತೂಹಲ ಉಳಿದಿದೆ.

* ಪೂರಕ ಮಾಹಿತಿ: **ಮನೋಜಕುಮಾರ್ ಗುದ್ದಿ, ಚಂದ್ರಕಾಂತ ಮಸಾನಿ, ನಾಗರಾಜ ಚಿನಗುಂಡಿ, ಪ್ರಮೋದ ಮತ್ತು ಬಿ.ಜಿ.ಪ್ರವೀಣಕುಮಾರ.**

ಪರಿಣಾಮ ಬೀರಬಹುದಾದ ವಿಷಯಗಳು...

ಕಲಬುರಗಿ
- ಜಲಾಶಯಗಳಿಂದ ಗ್ರಾಮಗಳಿಗೆ, ಕೃಷಿ ಜಮೀನುಗಳಿಗೆ ನೀರು ಹರಿದಿಲ್ಲ.
- ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕೊರತೆ ನೀಗಿಲ್ಲ.
- ಅಂತರರಾಷ್ಟ್ರೀಯ ಕ್ರೀಡಾ ಸಂಕೀರ್ಣ ಇನ್ನೂ ನಿರ್ಮಾಣಗೊಂಡಿಲ್ಲ.

ಯಾದಗಿರಿ
- ಹೊಸ ತಾಲ್ಲೂಕುಗಳಲ್ಲಿ ಇನ್ನೂ ಪೂರ್ಣಪ್ರಮಾಣದಲ್ಲಿ ಸರ್ಕಾರಿ ಕಚೇರಿಗಳು ಆರಂಭಗೊಂಡಿಲ್ಲ.
- ಕಾಲುವೆಯ ಕೊನೆಯ ಭಾಗಕ್ಕೆ ನೀರು ತಲುಪುತ್ತಿಲ್ಲ.
- ವಲಸೆ ಸಮಸ್ಯೆ ಇನ್ನೂ ಬಗೆಹರಿದಿಲ್ಲ.

ಬೀದರ್
- ಜಿಲ್ಲಾಡಳಿತ ಕಚೇರಿಗಳ ಸಂಕೀರ್ಣ ಕಟ್ಟಡ ಕಾಮಗಾರಿ ಇನ್ನೂ ಆರಂಭವಾಗಿಲ್ಲ.
- ತಾಲ್ಲೂಕು ಕೇಂದ್ರಗಳಲ್ಲಿ ರಸ್ತೆಗಳು ವಿಸ್ತರಣೆಗೊಂಡಿಲ್ಲ.
- ಗ್ರಾಮಗಳಿಗೆ ಬಸ್ ಸಂಪರ್ಕ ವ್ಯವಸ್ಥೆಯಿಲ್ಲ.

ರಾಯಚೂರು
- ಏಮ್ಸ್ ಸ್ಥಾಪನೆಗಾಗಿ 300ಕ್ಕೂ ಹೆಚ್ಚು ದಿನಗಳಿಂದ ಅನಿರ್ದಿಷ್ಟಾವಧಿ ಧರಣಿ ನಡೆದರೂ ದೊರೆಯದ ಸ್ಪಂದನೆ.
- ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ.
- ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾಗಿಲ್ಲ.

ಕೊಪ್ಪಳ
- ಹೊಸ ವಿಶ್ವವಿದ್ಯಾಲಯ ಮಂಜೂರಾದರೂ ಜಾಗ ಸಿಕ್ಕಿಲ್ಲ.
- ಕೆರೆಗೆ ನೀರು ತುಂಬಿಸುವ ಯೋಜನೆ ಕಡತಗಳಿಗೆ ಸೀಮಿತ.
- ಹನುಮಸಾಗರ ಪ್ರತ್ಯೇಕ ತಾಲ್ಲೂಕು ರಚನೆಗೆ ಹೋರಾಡಿದರೂ ಪ್ರಯೋಜನ ಆಗಿಲ್ಲ

ಮಾತಿನೇಟು

ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಹೊಡೆಯುವ ಹಾಗೆಯೇ ರಾಘವೇಂದ್ರ ಹಿಟ್ನಾಳ ಮತ್ತು ಸಂಗಣ್ಣ ಕರಡಿ ಈ ಎರಡೂ ಕುಟುಂಬಗಳ ರಾಜಕಾರಣಕ್ಕೆ ಅಂತ್ಯ ಹಾಡುವ ಅವಕಾಶ ಲಭಿಸಿದೆ. ಕೊಪ್ಪಳ ಕ್ಷೇತ್ರದಲ್ಲಿ ಎರಡೂ ಕುಟುಂಬಗಳು ಹೊಂದಾಣಿಕೆ ರಾಜಕಾರಣದಲ್ಲಿ ತೊಡಗಿವೆ. ಚುನಾವಣೆಯಲ್ಲಿ ಗೆದ್ದು, ಇದಕ್ಕೆ ಅಂತ್ಯ ಹಾಡುವೆ. ಈಗಿನ ಸಂಸದರನ್ನು (ಸಂಗಣ್ಣ ಕರಡಿ) ಚುನಾವಣೆಯಲ್ಲಿ ಗೆಲ್ಲಿಸಲು ತಳಮಟ್ಟದಿಂದ ಸಾಕಷ್ಟು ಕೆಲಸ ಮಾಡಿದೆ. ಆದರೆ, ಈ ಬಾರಿ ಅವರೇ ಟಿಕೆಟ್ ಸಿಗದಂತೆ ನೋಡಿಕೊಂಡರು.



ಸಿ.ವಿ.ಚಂದ್ರಶೇಖರ, ಜೆಡಿಎಸ್ ಅಭ್ಯರ್ಥಿ, ಕೊಪ್ಪಳ



ಬಿಜೆಪಿಯ ಕೆಲವು ನಾಯಕರು ಲಿಂಗಾಯತ ಸಮಾಜದ ಮೇಲೆ ದ್ವೇಷ ಸಾಧಿಸುತ್ತಿದ್ದಾರೆ. ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಅವರಿಗೆ ಬಂದ ಪರಿಸ್ಥಿತಿ ಚುನಾವಣೆ ಮುಗಿದ ನಂತರ ಬಸವರಾಜ ಬೊಮ್ಮಾಯಿ ಅವರಿಗೂ ಬರಲಿದೆ.

ಎಂ.ಬಿ.ಪಾಟೀಲ, ಅಧ್ಯಕ್ಷ, ಕೆಪಿಸಿಸಿ ಪ್ರಚಾರ ಸಮಿತಿ



ದಟ್ಟಣೆ... ಅಡಚಣೆ...

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ಚಂದ್ರಪ್ಪ ಬುಧವಾರ ನಾಮಪತ್ರ ಸಲ್ಲಿಕೆಗೂ ಮುನ್ನ ಬೆಂಬಲಿಗರೊಂದಿಗೆ ಭಾರಿ ಮೆರವಣಿಗೆ ನಡೆಸಿ ಶಕ್ತಿ ಪ್ರದರ್ಶಿಸಿದರು. ರಾಷ್ಟ್ರೀಯ ಹೆದ್ದಾರಿ 13ರ ಶಿವಮೊಗ್ಗ – ಚಿತ್ರದುರ್ಗ ಮಾರ್ಗದಲ್ಲಿ ಸಾಗಿದ ಈ ಮೆರವಣಿಗೆಯಿಂದ ಎರಡು ಗಂಟೆಗೂ ಹೆಚ್ಚು ಕಾಲ ಸಂಚಾರ ದಟ್ಟಣೆ ಉಂಟಾಗಿತ್ತು.

ಪ್ರಜಾ ಪತ್ರ

ನಮ್ಮ ಆಯ್ಕೆಯೇ ನಮ್ಮ ಅಭಿವೃದ್ಧಿ



ಇನ್ನು ಕೆಲವೇ ದಿನಗಳಲ್ಲಿ ನಮ್ಮ ಅಭಿವೃದ್ಧಿಯ ಹರಿಕಾರರನ್ನು ಆಯ್ಕೆ ಮಾಡುವ ಸದಾವಕಾಶ ಒದಗಲಿದೆ. ಪ್ರಜಾಪ್ರಭುತ್ವದ ಪ್ರಜೆಗಳಾದ ನಾವು ಲಿಕ್ಕರ್, ಕುಕ್ಕರ್‌ಗಿಂತಲೂ ನಮ್ಮ ಸ್ವಾಭಿಮಾನ ದೊಡ್ಡದು ಎಂದು ಅರಿತುಕೊಂಡು ಯಾವುದೇ ನಿಷ್ಪಕ್ಷಪಾತವಾಗಿ ಅಭ್ಯರ್ಥಿಯನ್ನು ಆಯ್ಕೆ ಮಾಡಿದಾಗ ಪ್ರಶ್ನಿಸುವ ಹಕ್ಕನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಗ್ರಾಮಗಳ ಅಭಿವೃದ್ಧಿಯಾದರೆ ಮಾತ್ರ ದೇಶದ ಅಭಿವೃದ್ಧಿಯಾಗುತ್ತದೆ. ಹೀಗಾಗಿ, ಕುಡಿಯುವ ನೀರು, ನೈರ್ಮಲ್ಯ, ಉತ್ತಮ ಚರಂಡಿ ವ್ಯವಸ್ಥೆ, ಸಾರ್ವಜನಿಕ ಆಸ್ಪತ್ರೆ, ಉತ್ತಮ ಶಾಲೆ ಹೀಗೆ ಮೂಲ ಸೌಕರ್ಯಗಳನ್ನು ಒದಗಿಸುವ ನಾಯಕನನ್ನು ಆಯ್ಕೆ ಮಾಡೋಣ. ಜಾಗೃತರಾಗಿ ಬೆಲೆ ಕಟ್ಟಲಾಗದ ಮತಕ್ಕೆ ಬೆಲೆ ಕಟ್ಟುವವರಿಂದ ದೂರಸರಿದು ಹಕ್ಕು ಚಲಾಯಿಸೋಣ. ನಮ್ಮ ಮತ ಅಭಿವೃದ್ಧಿಯ ಪಥ.

ಸಂಗೀತಾ ಟಿ. ಆರ್., ಹಾಸನ

ಉತ್ತಮರ ಆಯ್ಕೆ ನಮ್ಮ ಹಕ್ಕು



ಚುನಾವಣೆಯಲ್ಲಿ ಪ್ರಜ್ಞಾವಂತ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ಉತ್ತಮ ನಾಯಕನನ್ನು ಗುರುತಿಸಿ ಮತ ನೀಡುವುದು ಮತದಾರರ ಕರ್ತವ್ಯ. ಪೊಳ್ಳು ಭರವಸೆಗೆ ಬಲಿಯಾಗದೆ ಮತ ನೀಡಬೇಕು. ಮುಂದಿನ 5 ವರ್ಷಗಳ ಅಧಿಕಾರವನ್ನು ಉತ್ತಮ ವ್ಯಕ್ತಿಯ ಕೈಗೆ ನೀಡಬೇಕು. ಈ ಬಾರಿ ಯುವ ಮತದಾರರ ಸಂಖ್ಯೆ ಹೆಚ್ಚಿದ್ದು, ಉತ್ತಮ ನಾಯಕನ ಆಯ್ಕೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮತದಾನದ ದಿನವನ್ನು ಮೋಜಿಗಾಗಿ ಮೀಸಲಿಡದೆ ಪ್ರತಿಯೊಬ್ಬರು ಮತ ಚಲಾಯಿಸಬೇಕು.

ಕುಸುಮಾ ರುದ್ರೇಶ್, ಬೆಂಗಳೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಸಿದ್ದರಾಮಯ್ಯನವರ ಮೊಮ್ಮಗ ಧವನ್ ರಾಕೇಶ್ ಮನದಾಳ

ತಾತನಂತೆ ಜನಸೇವೆ ಮಾಡುವಾಸೆ

ಮಾತು ಕತೆ



ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಾಮಪತ್ರ ಸಲ್ಲಿಕೆಯ ದಿನ ಆರಂಭದಿಂದ ಕೊನೆ ಹಂತದವರೆಗೂ ಅವರ ಮೊಮ್ಮಗ ಧವನ್ ರಾಕೇಶ್ ಅತ್ಯಂತ ಉತ್ಸಾಹದಿಂದ ಸಾಥ್ ನೀಡಿದ್ದರು. ಸಿದ್ದರಾಮಯ್ಯ ಅವರೊಂದಿಗೆ ಸಂಚರಿಸುತ್ತಲೇ ಧವನ್ ಅವರು ನಂಜನಗೂಡಿನ ಗೋಳೂರಿನಲ್ಲಿ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಿದರು.

- **ಈ ಬಾರಿ ಪ್ರಚಾರದಲ್ಲಿ ತಾತ ಸಿದ್ದರಾಮಯ್ಯ ಜೊತೆ ಮೊಮ್ಮಗ. ಹೇಗನ್ನಿಸುತ್ತಿದೆ?**

ಧವನ್: ಬಹಳ ಖುಷಿಯಾಗಿದೆ. ಶಿಕ್ಷಣ ಮುಗಿಸಿ, ಆತ್ಮವಿಶ್ವಾಸದೊಂದಿಗೆ ತಾತನಂತೆಯೇ ರಾಜಕೀಯಕ್ಕೆ ಬರುವೆ.

- **ರಾಜಕೀಯಕ್ಕೆ ಬರಲು ಹೇಗೆ ಸಿದ್ಧತೆ ನಡೆಸಿದ್ದೀರಾ?**

ಈಗ ಪಿ.ಯು ಓದುತ್ತಿರುವೆ. ಅಪ್ಪ ಈಗಿಲ್ಲ. ಅವರನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಎನಿಸುತ್ತದೆ. ಆಗೆಲ್ಲ ಮನೆ ಮುಂದೆ ಜನ ಇರುತ್ತಿದ್ದರು. ಚಿಕ್ಕವನಿದ್ದಾಗ ರಾಜಕೀಯ ಏನೆಂಬುದೇ ಗೊತ್ತಿರಲಿಲ್ಲ. ಈಗ ಅರ್ಥವಾಗುತ್ತಿದೆ. ತಂದೆ ಹೆಸರು ಹೇಳುತ್ತಲೇ ಜನ ಪ್ರೀತಿಯಿಂದ ಮಾತನಾಡಿಸಿದಾಗೆಲ್ಲ ಖುಷಿಯಾಗುತ್ತದೆ.

- **ಏನು ಓದಬೇಕೆಂದುಕೊಂಡಿದ್ದೀರಿ?**

ನಾನು ಡಾ.ಬಿ.ಆರ್.ಅಂಬೇಡ್ಕರ್ ಅವರ ಅಭಿಮಾನಿ. ಬೇಸಿಗೆ ರಜೆ ಇದ್ದಾಗಲೆಲ್ಲ ಸಂವಿಧಾನ, ಕಾಯ್ದೆ, ಮಸೂದೆಗಳ ಬಗ್ಗೆ ಓದುವ ಹವ್ಯಾಸವಿದೆ. ತಾತನವರಂತೆಯೇ ಕಾನೂನು ಪದವಿ ಪಡೆಯುವೆ. ತಾತ– ಅಮ್ಮ– ಚಿಕ್ಕಪ್ಪನ ಸಲಹೆ ಪಡೆದು ರಾಜಕೀಯ ಬಂದೇ ಬರುತ್ತೇನೆ.

- **ತಾತ ಸಿದ್ದರಾಮಯ್ಯ ಜೊತೆ ಓಡಾಡುವಾಗ ಏನನ್ನಿಸುತ್ತದೆ?**

ಅವರು ಪ್ರತಿಯೊಬ್ಬರ ಹೆಸರು ಹಿಡಿದು ಕರೆದು ಮಾತನಾಡಿಸುತ್ತಾರೆ. ಅವರಿಗೆ ತುಂಬಾ ಜ್ಞಾಪಕ ಶಕ್ತಿಯಿದೆ. ಅವರಂತೆಯೇ ಜನರ ಸೇವೆ ಮಾಡಬೇಕು.

ಸೆಲೆಬ್ರಿಟಿ ಮಾತು

ಮತದಾನದಲ್ಲಿ ಪ್ರಜಾಪ್ರಭುತ್ವದ ಸೌಂದರ್ಯ



ನವೀದ್ ಡಿ. ಪಡೀಲ್, ನಟ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವು ಪ್ರತಿಯೊಬ್ಬರ ಹಕ್ಕು ಮಾತ್ರವಲ್ಲ, ಜವಾಬ್ದಾರಿಯೂ ಹೌದು. ಆಡಳಿತ ವ್ಯವಸ್ಥೆಯನ್ನು ನಿರ್ಧರಿಸುವ ಈ ಪ್ರಕ್ರಿಯೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಭಾಗವಹಿಸಿದಾಗ ಪ್ರಜಾಪ್ರಭುತ್ವದ ಸೌಂದರ್ಯ ಹೆಚ್ಚುತ್ತದೆ. ಎಷ್ಟೇ ಕಾರ್ಯದ ಒತ್ತಡ ಇದ್ದರೂ ಮತದಾನ ಹಬ್ಬದಲ್ಲಿ ನಾವು ಉತ್ಸಾಹದಿಂದ ಭಾಗವಹಿಸಬೇಕು. ಯಾವುದೇ ಆಸೆ– ಆಮಿಷಗಳಿಗೆ ನಮ್ಮ ಮತವನ್ನು ಮಾರಿಕೊಳ್ಳದೆ, ಯೋಗ್ಯ ಮತ್ತು ಸರ್ವಜನಾಂಗದ ಅಭಿವೃದ್ಧಿಯ ತುಡಿತ ಇರುವ ಅಭ್ಯರ್ಥಿಗೆ ಮತ ನೀಡಬೇಕು. ನಾನಂತೂ ನನ್ನ ಅಮೂಲ್ಯ ಹಕ್ಕು ಚಲಾಯಿಸಲು ಕಾತರನಾಗಿದ್ದೇನೆ.

ಶೆಟ್ಟರ್ ಕಡೆಗಣಿಸಿದ್ದರೆ ತಪ್ಪು; ಮೂರು ಸಾವಿರ ಮಠದ ಶ್ರೀ

ಹುಬ್ಬಳ್ಳಿ: 'ಎಲ್ಲ ಪಕ್ಷಗಳಲ್ಲಿಯೂ ಲಿಂಗಾಯತರಿಗೆ ಆದ್ಯತೆ ನೀಡಿದ್ದಾರೆ. ಬಿಜೆಪಿಯವರು ಲಿಂಗಾಯತರ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ನನಗೆ ಅನಿಸುವುದಿಲ್ಲ. ಶೆಟ್ಟರ್ ಅವರನ್ನು ಗುರಿಯಾಗಿಸಿಕೊಂಡು ಅವರನ್ನು ಕಡೆಗಣಿಸಿದ್ದರೆ ತಪ್ಪು' ಎಂದು ಹುಬ್ಬಳ್ಳಿಯ ಮೂರು ಸಾವಿರ ಮಠದ ಪೀಠಾಧಿಪತಿ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಮುಖಂಡರಾದ ಆರ್.ವಿ.ದೇಶಪಾಂಡೆ, ಪಿ.ವಿ. ಮೋಹನ್, ಪಿ.ಸಿ.ವಿಷ್ಣುನಾದ ಅವರು ಬುಧವಾರ ನಗರದ ಮೂರು ಸಾವಿರ ಮಠಕ್ಕೆ ಪ್ರತ್ಯೇಕವಾಗಿ ಭೇಟಿ ನೀಡಿದ ನಂತರ ಅವರು ಮಾಧ್ಯಮದವರ ಜೊತೆ ಮಾತನಾಡಿದರು.

'ಜಗದೀಶ ಶೆಟ್ಟರ್ ಅವರು ಹಿಂದೆ ಬಿಜೆಪಿಯಲ್ಲಿದ್ದರು. ಹೀಗಾಗಿ ನ್ಯಾಯಯುತವಾಗಿ ಅವರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದ್ದೆ. ಈಗ ಆ ಪಕ್ಷದ ಕಾರ್ಯಸೂಚಿಯಂತೆ ಅವರಿಗೆ ಟಿಕೆಟ್ ನಿರಾಕರಿಸಿರಬಹುದು' ಎಂದು ಹೇಳಿದರು.

'ಯಾವುದೇ ವ್ಯಕ್ತಿ ಒಂದು ಪಕ್ಷದಲ್ಲಿ ಇದ್ದಾಗ ಆ ಪಕ್ಷದ ಸಿದ್ಧಾಂತಕ್ಕೆ ನಿಷ್ಠರಾಗಿ ಇರಬೇಕು. ಇದು ಎಲ್ಲರಿಗೂ ಅನ್ವಯವಾಗುತ್ತದೆ. ಯಾವುದೇ ಪಕ್ಷದಲ್ಲಿ ಇಂದು ತತ್ವ ಸಿದ್ಧಾಂತ ಉಳಿದಿಲ್ಲ. ಪಕ್ಷಾಂತರ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂದು ನಾವು ಚಿಂತನೆ ಮಾಡಬೇಕಿದೆ' ಎಂದರು.

ಎಂ.ಬಿ.ಪಾಟೀಲ ಮಾತನಾಡಿ, 'ಶೆಟ್ಟರ್ ಅವರಿಗೆ ಬಿಜೆಪಿಯವರು ಮಾಡಿರುವ ಅವಮಾನದ ಬಗ್ಗೆ ಸ್ವಾಮೀಜಿಗೆ ವಿವರಿಸಲಾಗಿದೆ' ಎಂದರು.

ಕಾಂಗ್ರೆಸ್ ಮುಖಂಡ ಆರ್.ವಿ. ದೇಶಪಾಂಡೆ ಮಾತನಾಡಿ, ಜಗದೀಶ ಶೆಟ್ಟರ್ ಅವರ ಅನುಭವ ಕಾಂಗ್ರೆಸ್‌ಗೆ ಖಂಡಿತ ಲಾಭವಾಗಲಿದೆ. ಪಕ್ಷದಿಂದಲೂ ಅವರಿಗೆ ಲಾಭ ಆಗುತ್ತದೆ ಎಂದರು. ಇದಕ್ಕೂ ಮುನ್ನ ಸ್ವಾಮೀಜಿ ಅವರೊಂದಿಗೆ ಮಾತುಕತೆ ನಡೆಸಿ ಹೊರಬಂದ ಜೆ.ಪಿ.ನಡ್ಡಾ ಶೆಟ್ಟರ್ ಅವರ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರು.

ಜೆಡಿಎಸ್‌ನತ್ತ ಎಸ್‌ಎಂಕೆ ತಮ್ಮನ ಮಗ




ಮಂಡ್ಯ: ಮದ್ದೂರು ಕ್ಷೇತ್ರದಿಂದ ಕದಲೂರು ಉದಯ್ ಅವರಿಗೆ ಟಿಕೆಟ್ ನೀಡಿರುವುದಕ್ಕೆ ಅಸಮಾಧಾನಗೊಂಡಿರುವ ಎಸ್.ಎಂ.ಕೃಷ್ಣ ಅವರ ತಮ್ಮನ ಮಗ ಎಸ್. ಗುರುಚರಣ್ ಗುರುವಾರ ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರ್ಪಡೆಯಾಗಲಿದ್ದಾರೆ.

ಮದ್ದೂರು ತಾಲ್ಲೂಕಿನ ಸೋಮನಹಳ್ಳಿಯ ಗುರುಚರಣ್ ನಿವಾಸಕ್ಕೆ ಗುರುವಾರ ಬೆಳಿಗ್ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಬರಲಿದ್ದು, ಅಲ್ಲಿ ಅವರು ತಮ್ಮ ಬೆಂಬಲಿಗರೊಂದಿಗೆ ಸೇರ್ಪಡೆಯಾಗಲಿದ್ದಾರೆ. 'ಮದ್ದೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಡಿ.ಸಿ.ತಮ್ಮಣ್ಣ ಅವರಿಗೆ ಬೆಂಬಲ ನೀಡಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಜೂಜು ಆಡಿಸುವವರು, ಅಕ್ರಮ ದಂಧೆ ನಡೆಸುವವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ವರ್ಷದ ಹಿಂದೆಯೇ ನನ್ನ ಹೆಸರು ಘೋಷಿಸಿ ಈಗ ಅನ್ಯಾಯ ಮಾಡಿದ್ದಾರೆ. ನನ್ನ ಬೆಂಬಲಿಗರು ಹಾಗೂ ಹಿತೈಷಿಗಳ ಸಲಹೆ ಮೇರೆಗೆ ನಾನು ಜೆಡಿಎಸ್ ಸೇರ್ಪಡೆಯಾಗುತ್ತಿದ್ದೇನೆ' ಎಂದು ಎಸ್.ಗುರುಚರಣ್ ಹೇಳಿದರು.

ಮಾಡಾಳ್ ಮಲ್ಲಿಕಾರ್ಜುನ್ ಉಚ್ಚಾಟನೆ



ಚನ್ನಗಿರಿ (ದಾವಣಗೆರೆ ಜಿಲ್ಲೆ): ಚನ್ನಗಿರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ಸಿಗದ ಕಾರಣ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ ಮಾಡಾಳ್ ಮಲ್ಲಿಕಾರ್ಜುನ್ ಅವರನ್ನು ಬಿಜೆಪಿ ಉಚ್ಚಾಟಿಸಿದೆ. ಅವರು ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ.

'ಬಿಜೆಪಿಯ ಅಧಿಕೃತ ಅಭ್ಯರ್ಥಿ ಎಚ್.ಎಸ್. ಶಿವಕುಮಾರ್ ವಿರುದ್ಧ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿ ಪಕ್ಷದ ಶಿಸ್ತನ್ನು ಉಲ್ಲಂಘಿಸಿದ್ದೀರಿ. ನಿಮ್ಮನ್ನು ಬಿಜೆಪಿಯ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷ ಉಚ್ಚಾಟಿಸಲಾಗಿದೆ' ಎಂದು ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ್ ಪಾಟೀಲ ಅವರು ಮಲ್ಲಿಕಾರ್ಜುನ್ ಅವರಿಗೆ ಕಳುಹಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.


'ಸಮೀಕ್ಷೆಗಳು ತಲೆಕೆಳಗೆ ಆಗಲಿವೆ'



ಚಿತ್ರದುರ್ಗ: 'ಖಾಸಗಿ ಸಂಸ್ಥೆಗಳು ನಡೆಸಿದ ಚುನಾವಣಾ ಸಮೀಕ್ಷೆ ತಲೆಕೆಳಗಾಗಲಿದೆ. ರಾಜ್ಯ ರಾಜಕಾರಣದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ಎಲ್ಲ ಸಮೀಕ್ಷೆಗಳು ಸುಳ್ಳಾಗುವ ಸಾಧ್ಯತೆ ಇದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಹಿಂದೆಂದೂ ಇಷ್ಟು ದೊಡ್ಡ ಮಟ್ಟದ ಪಕ್ಷಾಂತರ ಪ್ರಕ್ರಿಯೆ ನಡೆದಿರಲಿಲ್ಲ. ದಿನವೂ ಅಚ್ಚರಿಯ ಬೆಳವಣಿಗೆಗಳನ್ನು ನೋಡುತ್ತಿದ್ದೇವೆ. ಪಕ್ಷಾಂತರದಿಂದ ಯಾರಿಗೆ ಎಷ್ಟು ಲಾಭ–ನಷ್ಟ ಉಂಟಾಗಲಿದೆ ಎಂಬುದು ಮುಂದೆ ಗೊತ್ತಾಗಲಿದೆ' ಎಂದರು.

ಬಳ್ಳಾರಿ ಭೇಟಿ: ರೆಡ್ಡಿ ಅರ್ಜಿ ವಜಾ




ನವದೆಹಲಿ: ಕರ್ನಾಟಕದ ಬಳ್ಳಾರಿಗೆ ಭೇಟಿ ನೀಡಲು ಅನುಮತಿ ಕೋರಿ ಗಣಿ ಉದ್ಯಮಿ, ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ಜಾಮೀನು ಷರತ್ತುಗಳನ್ನು ಸಡಿಲಿಸುವಂತೆ ಕೋರಿ ರೆಡ್ಡಿ ಸಲ್ಲಿಸಿದ್ದ ಹೊಸ ಅರ್ಜಿಯನ್ನು ಪರಿಗಣಿಸಲು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ. ರವಿಕುಮಾರ್ ಅವರ ಪೀಠ ನಿರಾಕರಿಸಿದೆ.

ರೆಡ್ಡಿ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಮೀನಾಕ್ಷಿ ಅರೋರಾ, 'ಮೊಮ್ಮಗಳನ್ನು ನೋಡಲು ರೆಡ್ಡಿ ಅವರಿಗೆ ಬಳ್ಳಾರಿಗೆ ಭೇಟಿ ನೀಡಲು ಕಳೆದ ವರ್ಷ ಅನುಮತಿ ನೀಡಲಾಗಿತ್ತು. ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈ ಸಡಿಲಿಕೆಯನ್ನು ಮತ್ತಷ್ಟು ವಿಸ್ತರಿಸಬೇಕು' ಎಂದು ಕೋರಿದರು.

ಗಣಿ ಪ್ರಕರಣದಲ್ಲಿ ರೆಡ್ಡಿ ಅವರಿಗೆ 2015ರ ಜನವರಿ 15ರಂದು ಸುಪ್ರೀಂ ಕೋರ್ಟ್ ಜಾಮೀನು ನೀಡಿತ್ತು. ಆದರೆ, ಬಳ್ಳಾರಿ, ಅನಂತಪುರಂ ಹಾಗೂ ಕಡಪ ಜಿಲ್ಲೆಗಳಿಗೆ ಭೇಟಿ ನೀಡದಂತೆ ಷರತ್ತು ವಿಧಿಸಿತ್ತು.


ಜೆಡಿಎಸ್‌ಗೆ ಆಯನೂರು ಮಂಜುನಾಥ್



ಚಿತ್ರದುರ್ಗ: ವಿಧಾನಪರಿಷತ್ ಸದಸ್ಯ ಆಯನೂರು ಮಂಜುನಾಥ್ ಅವರು ಬಿಜೆಪಿ ತೊರೆದಿದ್ದು, ಚಿತ್ರದುರ್ಗದಲ್ಲಿ ಬುಧವಾರ ಎಚ್.ಡಿ. ಕುಮಾರಸ್ವಾಮಿ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಯಾದರು.

ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲು ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿಯಾಗಲು ಹುಬ್ಬಳ್ಳಿಗೆ ತೆರಳುವ ಮಾರ್ಗದಲ್ಲಿ ಚಿತ್ರದುರ್ಗದಲ್ಲಿನ ಪಕ್ಷದ ಕಚೇರಿಯಲ್ಲಿ ಅವರು ಜೆಡಿಎಸ್ ಸೇರಿದರು. ಶಿವಮೊಗ್ಗ ನಗರ ಕ್ಷೇತ್ರದಿಂದ ಚುನಾವಣೆಯ ಕಣಕ್ಕಿಳಿಯಲು ನಿರ್ಧರಿಸಿರುವ ಅವರಿಗೆ ಇದೇ ವೇಳೆ ಬಿ ಫಾರಂ ನೀಡಲಾಯಿತು. ಗುರುವಾರ ನಾಮಪತ್ರ ಸಲ್ಲಿಸುವುದಾಗಿ ಮಾಹಿತಿ ನೀಡಿದರು.

ಜೆಡಿಎಸ್ ತೊರೆದ ಶಾಸಕ ಎಂ.ಶ್ರೀನಿವಾಸ್



ಮಂಡ್ಯ: ಮೊದಲ ಪಟ್ಟಿಯಲ್ಲಿ ಟಿಕೆಟ್ ಘೋಷಿಸಿ, ಕಡೇ ಗಳಿಗೆಯಲ್ಲಿ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಬಿ.ಆರ್. ರಾಮಚಂದ್ರ ಅವರಿಗೆ ಬಿ.ಫಾರಂ ನೀಡಿರುವುದನ್ನು ಖಂಡಿಸಿ ಶಾಸಕ ಎಂ.ಶ್ರೀನಿವಾಸ್ ತಮ್ಮಸ್ಥಾನ ಹಾಗೂ ಜೆಡಿಎಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಘೋಷಿಸಿದ್ದಾರೆ.

ಬುಧವಾರ ಬೆಂಬಲಿಗರ ಸಭೆ ನಡೆಸಿದ ಅವರು 'ಪಕ್ಷ ಹಣಕ್ಕೆ ಟಿಕೆಟ್ ಮಾರಿಕೊಂಡಿದೆ, ಟಿಕೆಟ್ ತಪ್ಪಲು ಜಿಲ್ಲೆಯ ಇತರ ಜೆಡಿಎಸ್ ಶಾಸಕರೇ ಕಾರಣ. ಬೇರೆ ಕ್ಷೇತ್ರದವರಾದ ರಾಮಚಂದ್ರ ಅವರಿಗೆ ಟಿಕೆಟ್ ನೀಡಲಾಗಿದೆ. ವರಿಷ್ಠರ ವಂಚನೆ ಖಂಡಿಸಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತೇನೆ' ಎಂದರು.

ಸ್ವರೂಪ್ ನನ್ನ ಮಗನಂತೆ: ಭವಾನಿ

ಹಾಸನ: 'ಸ್ವರೂಪ್‌ನನ್ನು ನನ್ನ ಮಗನಂತೆ ನೋಡಿದ್ದೇನೆ. ಪರಿಪೂರ್ಣ ಆಶೀರ್ವಾದ ಮಾಡಿದ್ದೇನೆ. ನಮ್ಮ ವಿರೋಧಿ ಯಾರೇ ಇದ್ದರೂ ಸೋಲಿಸಿ, ಜೆಡಿಎಸ್ ಅಧಿಕಾರಕ್ಕೆ ತನ್ನಿ. ಜಿಲ್ಲೆಯ ಎಲ್ಲ ಏಳು ಕ್ಷೇತ್ರಗಳಲ್ಲಿ ಗೆಲ್ಲಿಸಬೇಕು' ಎಂದು ಭವಾನಿ ರೇವಣ್ಣ ಮನವಿ ಮಾಡಿದರು.



ಭವಾನಿ ರೇವಣ್ಣ ಅವರು ಎಚ್.ಪಿ. ಸ್ವರೂಪ್ ಅವರ ಕೈಯನ್ನು ಮೇಲೆತ್ತಿ ಗೆಲ್ಲಿಸುವಂತೆ ಮನವಿ ಮಾಡಿದರು

ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಬುಧವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಹಾಸನ ಅಭ್ಯರ್ಥಿ ಎಚ್.ಪಿ.ಸ್ವರೂಪ್ ಅವರ ಕೈಯನ್ನು ಮೇಲೆತ್ತಿ ಹಿಡಿದು, 'ಸ್ವರೂಪ್‌ನನ್ನು ಗೆಲ್ಲಿಸುವ ಕೆಲಸ ಮಾಡಿ' ಎಂದರು.

'90ನೇ ವಯಸ್ಸಿನಲ್ಲೂ ದುಡಿಯುತ್ತಿರುವ ದೇವೇಗೌಡರು ಮತ್ತು ಪಕ್ಷಕ್ಕಿಂತ ನಾನು ದೊಡ್ಡವಳಲ್ಲ. ನಾನೇ ಕುಮಾರಸ್ವಾಮಿ ಅವರಿಗೆ ಕರೆ ಮಾಡಿ ಸ್ವರೂಪ್‌ಗೆ ಅವಕಾಶ ನೀಡಲು ಕೋರಿದ್ದೇನೆ' ಎಂದು ಸ್ಪಷ್ಟಪಡಿಸಿದರು.

ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ಎಚ್.ಡಿ.ರೇವಣ್ಣ ಪಾಲ್ಗೊಂಡಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ–ಮೇಲ್ : editpage@prajavani.co.in



ಸುಭಾಷಿತ

ಎಂತಹುದೇ ಸ್ಥಿತಿ ಇರಲಿ, 'ನನಗೆ ಆಯ್ಕೆ ಇದೆ' ಎಂಬುದನ್ನು ನೆನಪಿನಲ್ಲಿಡಿ.

–ದೀಪಕ್ ಚೋಪ್ರಾ

ರಾಜಕೀಯ ಆಟ ಆಡುವುದು ರಾಜ್ಯಪಾಲರಿಗೆ ಸಲ್ಲದ ನಡವಳಿಕೆ

ರಾಜ್ಯಪಾಲರು ಹಾಗೂ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳ ನಡುವೆ ಹೊಸದೊಂದು ವಿಚಾರವಾಗಿ ಈಗ ಸಂಘರ್ಷ ಉಂಟಾಗುತ್ತಿದೆ. ಅದು, ಆ ರಾಜ್ಯಗಳ ಶಾಸನಸಭೆಗಳು ಅನುಮೋದನೆ ನೀಡಿದ ಮಸೂದೆಗಳಿಗೆ ರಾಜ್ಯಪಾಲರು ಸಮ್ಮತಿ ಸೂಚಿಸುವುದಕ್ಕೆ ವಿಳಂಬ ಮಾಡುತ್ತಿರುವುದು. ತಮಿಳುನಾಡು ರಾಜ್ಯಪಾಲ ಆರ್‌.ಎನ್‌. ರವಿ, ಕೇರಳ, ತೆಲಂಗಾಣ ಮತ್ತು ಛತ್ತೀಸಗಡ ರಾಜ್ಯಪಾಲರು ಆಯಾ ರಾಜ್ಯಗಳ ಶಾಸನಸಭೆಗಳು ಅನುಮೋದನೆ ನೀಡಿರುವ ಮಸೂದೆಗಳಿಗೆ ಅಂಕಿತ ಹಾಕದೆ ಕುಳಿತಿದ್ದಾರೆ. ರಾಜ್ಯ ಸರ್ಕಾರಗಳ ಜೊತೆಗಿನ ಸಂಘರ್ಷದಲ್ಲಿ ಈ ರಾಜ್ಯಪಾಲರು, ಮಸೂದೆಗಳಿಗೆ ಸಹಿ ಹಾಕುವ ತಮ್ಮ ಅಧಿಕಾರವನ್ನು ಹೊಸ ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. 'ರಾಜ್ಯದ ವಿಧಾನಸಭೆಯು ಅನುಮೋದನೆ ನೀಡಿರುವ ಮಸೂದೆಗಳಿಗೆ ಕಾಲಮಿತಿಯಲ್ಲಿ ಅಂಕಿತ ಹಾಕುವಂತೆ ರಾಜ್ಯಪಾಲರಿಗೆ ತಕ್ಷಣವೇ ಸೂಕ್ತವಾದ ಸೂಚನೆಗಳನ್ನು ರವಾನಿಸಬೇಕು' ಎಂದು ಕೇಂದ್ರ ಸರ್ಕಾರ ಹಾಗೂ ರಾಷ್ಟ್ರಪತಿಯವರಿಗೆ ಮನವಿ ಮಾಡುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆಯು ಈಚೆಗೆ ಕೈಗೊಂಡಿದೆ. ಇದೇ ಮಾದರಿಯ ನಿರ್ಣಯವನ್ನು ಕೇರಳದಲ್ಲಿಯೂ ಕೈಗೊಳ್ಳುವ ಇಂಗಿತವನ್ನು ಅಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವ್ಯಕ್ತಪಡಿಸಿದ್ದಾರೆ. ಮಸೂದೆಯೊಂದಕ್ಕೆ ಅಂಕಿತ ಹಾಕುವಲ್ಲಿ ತೆಲಂಗಾಣದ ರಾಜ್ಯಪಾಲರು ಅನುಸರಿಸುತ್ತಿರುವ ವಿಳಂಬ ಧೋರಣೆಯು ಕಾನೂನುಬಾಹಿರ, ಸಂವಿಧಾನಬಾಹಿರ ಹಾಗೂ ಅಕ್ರಮ ಎಂದು ಘೋಷಿಸುವಂತೆ ಕೋರಿ ತೆಲಂಗಾಣ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.



ಮಸೂದೆಗಳಿಗೆ ಅಂಕಿತ ಹಾಕದೆ ಸುಮ್ಮನೆ ಉಳಿಯುವ ಮೂಲಕ ರಾಜ್ಯಪಾಲರು ಶಾಸನಸಭೆಗಳಿಗೆ ಅಗೌರವ ತೋರುತ್ತಿದ್ದಾರೆ

ರಾಜ್ಯದ ವಿಧಾನಸಭೆ ಅನುಮೋದನೆ ನೀಡಿದ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬರಬೇಕು ಎಂದಾದರೆ ಅದಕ್ಕೆ ರಾಜ್ಯಪಾಲರ ಅಂಕಿತ ಬೇಕು. ಇದು ಸಂವಿಧಾನ ಹೇಳಿರುವ ನಿಯಮ. ಈ ವಿಚಾರದಲ್ಲಿ ಸಂವಿಧಾನದ 200ನೇ ವಿಧಿಯು ರಾಜ್ಯಪಾಲರಿಗೆ ಮೂರು ಆಯ್ಕೆಗಳನ್ನು ನೀಡುತ್ತದೆ. ಮೊದಲನೆಯದು, ಮಸೂದೆಗೆ ಅಂಕಿತ ಹಾಕುವುದು. ಎರಡನೆಯದು, ಮಸೂದೆಯನ್ನು ರಾಷ್ಟ್ರಪತಿ ಅವರಿಗೆ ರವಾನಿಸುವುದು. ಮೂರನೆಯದು, ಅಂಕಿತ ಹಾಕದೆ, ಆ ಮಸೂದೆಯನ್ನು ತಮ್ಮ ಅಭಿಪ್ರಾಯಗಳ ಜೊತೆ ಶಾಸನಸಭೆಗೆ 'ಸಾಧ್ಯವಾದಷ್ಟು ಬೇಗ' ವಾಪಸ್ ಕಳುಹಿಸುವುದು. ಹೀಗೆ ವಾಪಸ್ ಕಳುಹಿಸಿದ ಸಂದರ್ಭದಲ್ಲಿ, ಶಾಸನಸಭೆಯು ಆ ಮಸೂದೆಗೆ ಮತ್ತೆ ಅನುಮೋದನೆ ನೀಡಿದರೆ, ರಾಜ್ಯಪಾಲರಿಗೆ ಆ ಮಸೂದೆಗೆ ಸಹಿ ಮಾಡದೆ ಬೇರೆ ಆಯ್ಕೆ ಉಳಿದುಕೊಳ್ಳುವುದಿಲ್ಲ. ಆದರೆ ರಾಜ್ಯಪಾಲರು ಮಸೂದೆಯೊಂದರ ವಿಚಾರವಾಗಿ ಎಷ್ಟು ಸಮಯದವರೆಗೆ ಯಾವುದೇ ತೀರ್ಮಾನ ಕೈಗೊಳ್ಳದೆ ಇರಬಹುದು ಎಂಬುದನ್ನು ಸಂವಿಧಾನವು ನಿರ್ದಿಷ್ಟವಾಗಿ ಹೇಳಿಲ್ಲ. ಕೆಲವು ರಾಜ್ಯಗಳ ರಾಜ್ಯಪಾಲರು ಈಗ ಇದನ್ನು ಬಳಸಿಕೊಂಡು, ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ವಿಳಂಬ ಮಾಡುತ್ತಿದ್ದಾರೆ. ಮಸೂದೆಯನ್ನು ತಡೆಹಿಡಿಯುವುದು ಅಂದರೆ ಅದನ್ನು ತಿರಸ್ಕರಿಸುವುದಕ್ಕೆ ಸಮ ಎಂದು ತಮಿಳುನಾಡಿನ ರಾಜ್ಯಪಾಲರು ಹೇಳಿದ್ದಾರೆ. ಸಂವಿಧಾನಕ್ಕೆ ವ್ಯಾಖ್ಯಾನ ನೀಡಿ, ಮಸೂದೆಯನ್ನು ತಿರಸ್ಕರಿಸುವ ಅಧಿಕಾರ ರಾಜ್ಯಪಾಲರಿಗೆ ಇಲ್ಲ, ರಾಜ್ಯಪಾಲರು ರಾಜ್ಯದ ಸಚಿವ ಸಂಪುಟದ ಸಲಹೆ ಮತ್ತು ನೆರವು ಪಡೆದು ಮುಂದಕ್ಕೆ ಹೆಜ್ಜೆ ಇರಿಸಬೇಕು ಎಂದು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳು ಹಲವು ಬಾರಿ ಸ್ಪಷ್ಟಪಡಿಸಿವೆ. ಕಾನೂನು ರೂಪಿಸುವ ಅಥವಾ ಇರುವ ಕಾಯ್ದೆಯನ್ನು ಹಿಂದಕ್ಕೆ ಪಡೆಯುವ ಅಧಿಕಾರ ಇರುವುದು ಶಾಸನಸಭೆಗಳಿಗೆ ಮಾತ್ರ. ಹೀಗಾಗಿ, ವಿಧಾನಸಭೆಯು ಹೊಂದಿರುವ ಕಾನೂನು ರೂಪಿಸುವ ಅಧಿಕಾರದಲ್ಲಿ ಹಸ್ತಕ್ಷೇಪದಂತೆ ಆಗುವ ಯಾವುದೇ ಕೆಲಸವನ್ನು ರಾಜ್ಯಪಾಲರು ಮಾಡುವಂತಿಲ್ಲ.

ಮಸೂದೆಗಳಿಗೆ ಅಂಕಿತ ಹಾಕದೆ ಸುಮ್ಮನೆ ಉಳಿಯುವ ಮೂಲಕ ರಾಜ್ಯಪಾಲರು ಶಾಸನಸಭೆಗಳಿಗೆ ಅಗೌರವ ತೋರುತ್ತಿದ್ದಾರೆ. ಮಸೂದೆಗಳು ಕಾಯ್ದೆಗಳಾಗದಂತೆ ತಡೆಯುವ ಮೂಲಕ ಅವರು ರಾಜ್ಯದ ಆಡಳಿತಕ್ಕೆ ಅಡ್ಡಿ ಉಂಟುಮಾಡುತ್ತಿದ್ದಾರೆ. ರಾಜ್ಯಗಳ ಪಾಲಿಗೆ ಅಗತ್ಯವಿರುವ ಕಾಯ್ದೆಗಳು ಯಾವುವು ಎಂಬುದನ್ನು ತೀರ್ಮಾನಿಸುವ ಅಧಿಕಾರ ಇರುವುದು ಅಲ್ಲಿನ ವಿಧಾನಸಭೆಗಳಿಗೆ. ಕಾಯ್ದೆಗಳನ್ನು ಅನುಷ್ಠಾನಕ್ಕೆ ತರಬೇಕಿರುವುದು ಅಲ್ಲಿನ ಸರ್ಕಾರದ ಹೊಣೆ. ಇಲ್ಲಿ ರಾಜ್ಯಪಾಲರಿಗೆ ಹೆಚ್ಚಿನ ಪಾತ್ರ ಇಲ್ಲ. ಸರ್ಕಾರದ ದಿನನಿತ್ಯದ ಕಾರ್ಯಗಳಿಗೆ ರಾಜ್ಯಪಾಲರಿಂದ ಅಡ್ಡಿ ಉಂಟಾಗದಂತೆ ನೋಡಿಕೊಳ್ಳಲು, ಅಗತ್ಯ ಎದುರಾದರೆ, ಎಲ್ಲ ರಾಜ್ಯಗಳೂ ಕೇಂದ್ರದ ಎದುರು ಹಾಗೂ ರಾಷ್ಟ್ರಪತಿ ಎದುರು ತಮ್ಮ ವಿಚಾರ ಮಂಡಿಸಬೇಕು. ಸಂದರ್ಭ ಎದುರಾದಲ್ಲಿ ಸುಪ್ರೀಂ ಕೋರ್ಟ್‌ಗೂ ಮನವರಿಕೆ ಮಾಡಿಕೊಡಬೇಕು.

ದಿನದ ಟ್ವೀಟ್

ಸುಳ್ಳುಸುದ್ದಿ ನಿಲ್ಲಿಸಿ



ರಾಜಕೀಯ ಪಕ್ಷಗಳ ಮಾಹಿತಿ ತಂತ್ರಜ್ಞಾನ ಮತ್ತು ಸಾಮಾಜಿಕ ಜಾಲತಾಣ ಘಟಕಗಳು ಜನರನ್ನು ದಾರಿ ತಪ್ಪಿಸುವ ಸುಳ್ಳುಸುದ್ದಿ ಹರಡುವಿಕೆಯನ್ನು ತಡೆಯಬೇಕು! ಈ ಜವಾಬ್ದಾರಿಯು ನಾಯಕತ್ವದ ಮೇಲಿದೆ!

ಚಂದ್ರಕುಮಾರ್ ಬೋಸ್, ಸಾಮಾಜಿಕ ಕಾರ್ಯಕರ್ತ

ಕಿಡಿನುಡಿ



ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳ ಬಿಡುಗಡೆಗೆ ಅನುಮತಿ ನೀಡಿರುವುದಕ್ಕೆ ಸಂಬಂಧಿಸಿದ ವಿವರವನ್ನು ಸುಪ್ರೀಂ ಕೋರ್ಟ್‌ಗೆ ನೀಡಲು ಕೇಂದ್ರ ಸರ್ಕಾರ ಮತ್ತು ಗುಜರಾತ್ ಸರ್ಕಾರ ಏಕೆ ಸಿದ್ಧವಿಲ್ಲ? ಇದು ಖಂಡಿತವಾಗಿಯೂ 'ರಾಷ್ಟ್ರದ ಭದ್ರತೆ'ಗೆ ಸಂಬಂಧಿಸಿದ ವಿಷಯವಲ್ಲ. ಅಪರಾಧದ ಬಲಿಪಶುಗಳಾದ ಎಲ್ಲಾ ಮಹಿಳೆಯರ ಜೀವನ ಭದ್ರತೆಗೆ ಸಂಬಂಧಿಸಿದ ವಿಷಯವಂತೂ ಹೌದು.

ಸಾಗರಿಕಾ ಘೋಷ್, ಪತ್ರಕರ್ತೆ

25 ವರ್ಷಗಳ ಹಿಂದೆ

ಸೋಮವಾರ, 20-4-1998

- **ಅಟಲ್ ಸರ್ಕಾರದಿಂದ ಒಕ್ಕೂಟ ವ್ಯವಸ್ಥೆ ಬುಡಮೇಲು: ಆರೋಪ**

ನವದೆಹಲಿ, ಏ. 19– ಸಂಯುಕ್ತ ರಂಗ ಸರ್ಕಾರಕ್ಕೆ ಕ್ಷುಲ್ಲಕ ಕಾರಣಗಳಿಗಾಗಿ ಬೆಂಬಲ ಹಿಂತೆಗೆದುಕೊಂಡ ಕಾಂಗ್ರೆಸ್ ಪಕ್ಷವು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಅಧಿಕಾರಕ್ಕೆ ಬರಲು ಕಾರಣ ಎಂದು ಇಂದು ಇಲ್ಲಿ ಮುಕ್ತಾಯಗೊಂಡ ಜನತಾದಳದ ಮೂರು ದಿನಗಳ ರಾಷ್ಟ್ರೀಯ ಕಾರ್ಯನಿರ್ವಾಹಕ ಸಮಿತಿ ಸಭೆಯು ಕಟುವಾಗಿ ಟೀಕಿಸಿದೆ.

ಆಳುವ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಸ್ಥಿರ ಸರ್ಕಾರ ನೀಡುವ ಭರವಸೆ ನೀಡಿ ಅಧಿಕಾರಕ್ಕೆ ಬಂದವು. ಆದರೆ ಆರಂಭದಿಂದಲೂ ಆಂತರಿಕ ಅಸ್ಥಿರತೆ, ಭ್ರಷ್ಟಾಚಾರದ ಆಪಾದನೆಗಳಲ್ಲಿಯೇ ಮುಳುಗಿ ಹೋಗಿವೆ. ಜತೆಗೆ ಪ್ರಜಾಸತ್ತಾತ್ಮಕ ವಿಧಿ ವಿಧಾನಗಳನ್ನೆಲ್ಲ ಗಾಳಿಗೆ ತೂರಿ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತಿವೆ ಎಂದು ದಳದ ಸಮಿತಿಯು ಹೊರಡಿಸಿರುವ ರಾಜಕೀಯ ಸ್ಥಿತಿಗತಿ ಕುರಿತ ಪ್ರಕಟಣೆಯಲ್ಲಿ ತಿಳಿಸಿದೆ.

- **ಜಯಲಲಿತಾ ವರ್ತನೆ ತಂದಿರುವ ತಳಮಳ**

ನವದೆಹಲಿ, ಏ. 19– ಬಿಜೆಪಿ ಮತ್ತು ಅದರ ಮಿತ್ರ ಪಕ್ಷವಾದ ಎಐಎಡಿಎಂಕೆ ನಡುವಣ ಬಾಂಧವ್ಯ ದಿನೇ ದಿನೇ ಹದಗೆಡುವ ಸ್ಥಿತಿಯನ್ನು ಮುಟ್ಟುತ್ತಿರುವುದರಿಂದ ಸರ್ಕಾರದ ಅಸ್ತಿತ್ವಕ್ಕೆ 'ಆತಂಕ'ವು ಉಂಟಾಗುವ ಸಾಧ್ಯತೆಗಳು ಹೆಚ್ಚುತ್ತಿವೆ.

ಜಯಲಲಿತಾ ಮತ್ತು ಬಿಜೆಪಿ ಹಾಗೂ ಇತರ ಪಕ್ಷಗಳ ನಡುವೆ ಒಂದು ರೀತಿಯಲ್ಲಿ ತೆರೆಮರೆಯಲ್ಲಿ ಶೀತಲ ಯುದ್ಧವೇ ಪ್ರಾರಂಭವಾದಂತಿದೆ. ಪ್ರಕರಣವೊಂದರಲ್ಲಿ ಆರೋಪ ಪಟ್ಟಿಯನ್ನು ಹೊತ್ತಿದ್ದ ಎಐಎಡಿಎಂಕೆ ಸಚಿವ ಮುತ್ತಯ್ಯ ಅವರ ರಾಜೀನಾಮೆ ನಂತರ, ಸಂಪುಟದಲ್ಲಿನ ಎಲ್ಲ 'ಕಳಂಕಿತ' ಸಚಿವರನ್ನು ಕೈಬಿಡಬೇಕೆಂದು ಜಯಲಲಿತಾ ಈಗ ಪಟ್ಟು ಹಿಡಿಯುತ್ತಿರುವುದರಿಂದ ಆಡಳಿತ ರಂಗದಲ್ಲಿ ಈಗ ಎಲ್ಲವೂ ಸರಿಯಾಗಿಲ್ಲ ಎನ್ನುವುದು ಬಹಿರಂಗಗೊಳ್ಳುತ್ತಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 20-4-1973

- **ಸ್ಥಾನಬದ್ಧತೆ ಶಾಸನದ ಉಪವಿಧಿ 17(ಎ) ರದ್ದು: ಸುಪ್ರೀಂ ಕೋರ್ಟ್ ತೀರ್ಪು**

ನವದೆಹಲಿ, ಏ. 19– ಸಲಹಾ ಮಂಡಳಿಯ ಅಭಿಪ್ರಾಯ ಪಡೆಯದೆ ವ್ಯಕ್ತಿಯೊಬ್ಬನನ್ನು 21 ತಿಂಗಳ ಕಾಲ ಸರ್ಕಾರ ಸ್ಥಾನಬದ್ಧತೆಯಲ್ಲಿಡುವ 1971ರ ಆಂತರಿಕ ಭದ್ರತಾ ಶಾಸನದ 17(ಎ) ಉಪವಿಧಿಯು ಸಂವಿಧಾನ ವಿರುದ್ಧವಾದದ್ದು ಎಂದು ಸುಪ್ರೀಂ ಕೋರ್ಟಿನ ಏಳು ಮಂದಿ ನ್ಯಾಯಾಧೀಶರ ಪೀಠವು ಇಂದು ತೀರ್ಪು ನೀಡಿ, ಆ ವಿಧಿಯನ್ನು ಕಿತ್ತುಹಾಕಿತು.

ಪಶ್ಚಿಮ ಬಂಗಾಳದಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿರುವ ಶ್ರೀ ಶಂಭುನಾಥ ಸರಕಾರ್ ಅವರನ್ನು ಶೀಘ್ರವೇ ಬಿಡುಗಡೆ ಮಾಡಬೇಕೆಂದೂ ಆಜ್ಞೆ ಮಾಡಿತು.

- **ವ್ಯಕ್ತಿಶಃ ದೋಷ ತಿದ್ದಲು ಸಿದ್ಧ; ಆಡಳಿತದ ಬಗ್ಗೆ ಪಕ್ಷದಲ್ಲಿ ಚರ್ಚೆ**

ಬೆಂಗಳೂರು, ಏ. 19– ಆಡಳಿತ ಕುರಿತು ಪ್ರಸ್ತಾಪಿಸಿದ ಲೋಪದೋಷಗಳನ್ನು ಸರಿಪಡಿಸಲು ಗಮನ ಕೊಡುವುದಾಗಿ ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಮಂತ್ರಿಮಂಡಲದಲ್ಲಿ ಬದಲಾವಣೆ ಕೋರಿ ಮನವಿ ಸಲ್ಲಿಸಿದ್ದ ಪಕ್ಷದ ಶಾಸಕರಿಗೆ ಇಂದು ಇಲ್ಲಿ ಭರವಸೆ ನೀಡಿದರು.

ಆಡಳಿತದಲ್ಲಿನ ಲೋಪದೋಷಗಳನ್ನು ಪ್ರಸ್ತಾಪಿಸಿ, ಮಂತ್ರಿಮಂಡಲದಲ್ಲಿ ಭಾರಿ ಬದಲಾವಣೆಗೆ ಸಲಹೆ ಮಾಡಿ 43 ಮಂದಿ ಕಾಂಗ್ರೆಸ್ ಶಾಸಕರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದರು.

ಈ ತಾಣಗಳು ಮುಂದಿನ ತಲೆಮಾರಿಗೆ ಚರಿತ್ರೆ ಹೇಳಲು ನೇರವಾಗಿ ಒದಗಿಬರುವ ಪುರಾವೆಗಳು

ಪಾರಂಪರಿಕ ತಾಣ: ಆಯ್ಕೆಯ ಮಾನದಂಡ



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಭಾರತದ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಹೊಸ ಸೇರ್ಪಡೆ ಗುಜರಾತಿನ ಧೋಲವೀರ (2021). ಇಲ್ಲಿ ಸಿಂಧೂ ಕಣಿವೆ ನಾಗರಿಕತೆಯ ನಗರವೊಂದನ್ನು ಪುರಾತತ್ವ ಇಲಾಖೆಯು 1968ರಲ್ಲಿ ಉತ್ಖನನ ಮಾಡಿ, ಇದರ ಮಹತ್ವವನ್ನೂ ವಿವರಗಳನ್ನೂ ಬಹಿರಂಗಪಡಿಸಿತ್ತು. ಇದು 4,500 ವರ್ಷಗಳ ಹಿಂದಿನ ನಗರ. ಇದರೊಂದಿಗೆ ಭಾರತದ ವಿಶ್ವ ಪಾರಂಪರಿಕ ತಾಣಗಳ ಸಂಖ್ಯೆ 40 ದಾಟಿತು.

ಹಾಗೆಂದು ತೀರಾ ಸಂಭ್ರಮಿಸುವ ಸಂದರ್ಭವೇನೂ ಅಲ್ಲ. ಭಾರತದ ವಿಸ್ತೀರ್ಣಕ್ಕೆ ಹೋಲಿಸಿದರೆ, ಇಟಲಿ ಏನೇನೂ ಅಲ್ಲ, ಬರೀ ಮೂರು ಲಕ್ಷ ಚದರ ಕಿಲೊಮೀಟರ್ ಅಷ್ಟೇ. ಭಾರತ, ಅದರ ಹತ್ತರಷ್ಟಿದೆ. ಆದರೆ ಇಟಲಿ ತನ್ನ ದೇಶದ ಸಾಂಸ್ಕೃತಿಕ, ಐತಿಹಾಸಿಕ, ನೈಸರ್ಗಿಕ ಸಂಪತ್ತನ್ನು ಬಿಂಬಿಸುವಲ್ಲಿ, ವಿಶ್ವದ ಗಮನ ಸೆಳೆಯುವಲ್ಲಿ ಎಂದೂ ಮುಂದಿದೆ. ಅಲ್ಲಿ ಘೋಷಿಸಿರುವ ವಿಶ್ವ ಪಾರಂಪರಿಕ ತಾಣಗಳು 58. ಜಾಗತಿಕವಾಗಿ ಅದಕ್ಕೆ ಮೊದಲ ಸ್ಥಾನ. ಏಕೆ ಹೀಗೆ? ಯುನೆಸ್ಕೊ ಸಂಸ್ಥೆಯು ಪಾರಂಪರಿಕ ತಾಣಗಳನ್ನು ಪಟ್ಟಿ ಮಾಡುವಾಗ ತಾರತಮ್ಯ ತೋರುತ್ತಿದೆಯೇ? ಯುರೋಪಿಗೆ ಆದ್ಯತೆಯೇ ಎಂದು ಮೊದಲ ನೋಟಕ್ಕೆ ಅನ್ನಿಸಬಹುದು. ಭಾರತದಲ್ಲಿ 100ಕ್ಕೂ ಹೆಚ್ಚು ತಾಣಗಳು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಲು ಅರ್ಹತೆ ಹೊಂದಿವೆ ಎಂದು ವಾದ ಮಾಡಲೂಬಹುದು. ಈ ಪ್ರಶ್ನೆಯನ್ನು ಬೇರೆ ಬೇರೆ ಕೋನಗಳಿಂದ ನೋಡಬೇಕಾಗುತ್ತದೆ.


2012ರಲ್ಲಿ ಪಶ್ಚಿಮಘಟ್ಟದ ಕೆಲವು ಭಾಗಗಳನ್ನು ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿಸಬೇಕೆಂದಾಗ, ಅಂಥ ಸೂಚನೆಗೆ ಸಿಕ್ಕ ಪ್ರತಿಕ್ರಿಯೆಯೇ ಬೇರೆಯದಾಗಿತ್ತು. ಕೇರಳ, ತಮಿಳುನಾಡು ಒಡನೆಯೇ ಸಮ್ಮತಿಸಿದರೂ, ಕರ್ನಾಟಕದಲ್ಲಿ ವಿನಾಕಾರಣ ಅದು ರಾಜಕೀಯ ಸ್ವರೂಪ ಪಡೆಯಿತು. ಪಶ್ಚಿಮಘಟ್ಟದಲ್ಲಿರುವ ಬುಡಕಟ್ಟು ಜನರನ್ನು ಗುಳೆ ಎಬ್ಬಿಸುತ್ತಾರೆ, ಆ ಜಾಗದ ಮೇಲೆ ಕೇಂದ್ರ ಸರ್ಕಾರ ಹಿಡಿತ ಸಾಧಿಸುತ್ತದೆ, ಸ್ಥಳೀಯರನ್ನು ದೂರ ಇಡಲಾಗುತ್ತದೆ, ರಾಜ್ಯ ಸರ್ಕಾರಕ್ಕೂ ಅದರ ಮೇಲೆ ಹಕ್ಕಿರುವುದಿಲ್ಲ ಎಂಬ ಅಭಿಪ್ರಾಯ ಬಹುಬೇಗ ಚಾಲನೆ ಪಡೆಯಿತು.

ರಾಜ್ಯ ಸರ್ಕಾರವೂ ವಿಶ್ವ ಪಾರಂಪರಿಕ ತಾಣಗಳ ಬಗ್ಗೆ ಅನುಮಾನದಿಂದಲೇ ನೋಡಿತು. ಕೇಂದ್ರ ಸರ್ಕಾರ ಈ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿ, ಇದೆಲ್ಲ ಊಹಾಪೋಹ, ನಮ್ಮ ಸಾಂಸ್ಕೃತಿಕ ಸಂಪತ್ತಿಗೆ ನಾವೇ ಬಾಧ್ಯಸ್ಥರು, ಇದು ವಿಶ್ವದ ಗಮನ ಸೆಳೆಯುತ್ತದೆ ಎಂಬುದೇ ದೊಡ್ಡ ಹೆಮ್ಮೆ ಎಂದು ಸಮಜಾಯಿಷಿ ಕೊಟ್ಟ ನಂತರ ಪುಷ್ಪಗಿರಿ, ಬ್ರಹ್ಮಗಿರಿ, ತಲಕಾವೇರಿ ವನ್ಯಜೀವಿಧಾಮ, ಬಂಡೀಪುರ ರಾಷ್ಟ್ರೀಯ ಉದ್ಯಾನ, ನಾಗರಹೊಳೆ- ಇವು ಪಾರಂಪರಿಕ ಪಟ್ಟಿಗೆ ಸೇರಿದವು.

ಪಾರಂಪರಿಕ ತಾಣಗಳನ್ನು ಆಯ್ಕೆ ಮಾಡಲು ಯುನೆಸ್ಕೊ ಕೆಲವು ಮಾನದಂಡಗಳನ್ನು ರೂಪಿಸಿದೆ. ಜಾಗತಿಕವಾಗಿ ಯಾವುದೇ ಸಾಂಸ್ಕೃತಿಕ, ಐತಿಹಾಸಿಕ ಮತ್ತು ನೈಸರ್ಗಿಕ ಪಾರಂಪರಿಕ ತಾಣಗಳನ್ನು ಪರಿಗಣಿಸಲು ಎರಡು ಸಂಸ್ಥೆಗಳಿವೆ. ವಿಶ್ವ ಪಾರಂಪರಿಕ ತಾಣ ಸಮಿತಿ (ಡಬ್ಲ್ಯು.ಎಚ್.ಸಿ.), ಇನ್ನೊಂದು ಸಲಹಾ ಮಂಡಳಿ- ಅಂತರರಾಷ್ಟ್ರೀಯ ನಿಸರ್ಗ ಸಂರಕ್ಷಣಾ ಒಕ್ಕೂಟ (ಐ.ಯು.ಸಿ.ಎನ್). ಯುನೆಸ್ಕೊದ ವರ್ಲ್ಡ್ ಹೆರಿಟೇಜ್ ಸೆಂಟರ್ ಕೇಂದ್ರ ಕಚೇರಿ ಪ್ಯಾರಿಸ್‌ನಲ್ಲಿದೆ. ಅಲ್ಲಿಗೆ ಆಯಾ ದೇಶದ ಮುಖ್ಯಸ್ಥರು ಶಿಫಾರಸನ್ನು ಕಳಿಸಬೇಕಾಗುತ್ತದೆ. ಪರಿಗಣನೆಗೆ ಮೊದಲು ಅವನ್ನೆಲ್ಲ ತಾತ್ಕಾಲಿಕ ಪಟ್ಟಿಗೆ ಸೇರಿಸಲಾಗಿರುತ್ತದೆ (ಬೇಲೂರು ಮತ್ತು ಹಳೆಬೀಡು ಹೊಯ್ಸಳ ಶಿಲ್ಪಕಲೆಯು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧವಾಗಿದ್ದರೂ, ಈಗಲೂ ಅವು ತಾತ್ಕಾಲಿಕ ಪಟ್ಟಿಯಲ್ಲೇ ಇವೆ). ಈ ತಾಣಗಳು ವಿಶ್ವಸಂಸ್ಥೆ ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಇವೆಯೇ ಎಂಬುದು ಮೊದಲು ಪರಿಗಣನೆಗೆ ಒಳಗಾಗುವ ಅಂಶ.

ವಿಶ್ವ ಪಾರಂಪರಿಕ ತಾಣಗಳಲ್ಲಿ ಮೂರು ಬಗೆಯನ್ನು ವಿಶ್ವಸಂಸ್ಥೆ (ಯುನೆಸ್ಕೊ ಮೂಲಕ) ಗುರುತಿಸಿದೆ. ಸಾಂಸ್ಕೃತಿಕ ತಾಣಗಳು- ಇವು ಅತ್ಯುತ್ಕೃಷ್ಟ ಮಾದರಿಗಳಾಗಿರಬೇಕು. ತಮ್ಮದೇ ಆದ ಅಸ್ಮಿತೆಯನ್ನು ಹೊಂದಿರಬೇಕು. ಇಂದಿಗೂ ಅವು ಪ್ರವಾಸಿಗರನ್ನು ಸೆಳೆಯುವಷ್ಟು ಆಕರ್ಷಕವಾಗಿರಬೇಕು. ಇದರಲ್ಲಿ ಕೋಟೆ, ಕೊತ್ತಲಗಳೂ ಬರುತ್ತವೆ, ದೇವಾಲಯಗಳೂ ಬರುತ್ತವೆ, ಪುರಾತನ ಕಾಲದ ಚಾರಿತ್ರಿಕ ಸಂಪತ್ತೂ ಸೇರುತ್ತದೆ.

ಇನ್ನೊಂದು, ನೈಸರ್ಗಿಕ ಸಂಪತ್ತು- ಇದರಲ್ಲಿ ಇಡೀ ಭೂಮಿಯಲ್ಲೇ ವಿಶಿಷ್ಟವಾದ ಭೌಗೋಳಿಕ ತಾಣಗಳು ಸೇರುತ್ತವೆ. ವಿಶೇಷವಾಗಿ, ಜೀವಿವೈವಿಧ್ಯದ ದೃಷ್ಟಿಯಿಂದ ಎಷ್ಟರಮಟ್ಟಿಗೆ ಅವು ಪೋಷಿಸಿವೆ ಎಂಬುದೂ ಲೆಕ್ಕಕ್ಕೆ ಬರುತ್ತದೆ. ಇವೆರಡಲ್ಲದೆ ಇನ್ನೊಂದು ವರ್ಗವೂ ಇದೆ- ಅದು ಸಮ್ಮಿಶ್ರ ತಾಣಗಳು (ಮಿಕ್ಸೆಡ್ ಸೈಟ್ಸ್). ಉದಾಹರಣೆಗೆ, ಸಿಕ್ಕಿಂನಲ್ಲಿರುವ ಕಾಂಚನಜುಂಗ ರಾಷ್ಟ್ರೀಯ ಉದ್ಯಾನವನ್ನು 2016ರಲ್ಲಿ ಯುನೆಸ್ಕೊ ಈ ಪಟ್ಟಿಯಲ್ಲಿ ಪರಿಗಣಿಸಿತು. ಇದರ ಹರವು 1,784 ಚದರ ಕಿಲೊಮೀಟರ್. ಆದರೆ ವೈವಿಧ್ಯದ ದೃಷ್ಟಿಯಿಂದ ಇದಕ್ಕೆ ಹೋಲಿಕೆಯೇ ಇಲ್ಲ. ಇಲ್ಲಿ ಸೀಳುನಾಯಿಗಳ ವಿಶಿಷ್ಟ ಪ್ರಭೇದಗಳಿವೆ, ನದಿ, ಕಡಿದಾದ ಕಣಿವೆ, ಹಿಮಾಚ್ಛಾದಿತ 20 ಶೃಂಗಗಳು ಜೊತೆಗೆ ಬೌದ್ಧರ ಹೆಚ್ಚಿನ ಆರಾಧನಾ ಕೇಂದ್ರಗಳು, ಹಾಗೆಯೇ ಬುಡಕಟ್ಟು ಜನಾಂಗಗಳಿಗೂ ಇದು ಆಶ್ರಯ ನೀಡಿದೆ. ಬುಡಕಟ್ಟು ಜನಾಂಗದಲ್ಲಿ ವೈದ್ಯಕೀಯ ಗುಣವಿರುವ ಸಸ್ಯಗಳನ್ನು ಗುರುತಿಸುವ ಒಂದು ಪರಂಪರೆಯೇ ಇಲ್ಲಿದೆ. ಅಂದರೆ ಧಾರ್ಮಿಕ, ಪ್ರಾಕೃತಿಕ, ಮಾನವಿಕ- ಈ ಮೂರೂ ಸಂಬಂಧಗಳು ಇಲ್ಲಿ ಏಕೀಭವಿಸಿವೆ. ಭಾರತದ ಮೊದಲ ಸಮ್ಮಿಶ್ರ ಪಾರಂಪರಿಕ ತಾಣ ಇದು. ಇನ್ನೊಂದು ಪುಟ್ಟ ಸೂತ್ರವನ್ನು ಯುನೆಸ್ಕೊ ಅನುಸರಿಸುತ್ತದೆ. ಸಂರಕ್ಷಣೆಯ ವಿಚಾರ ಬಂದಾಗ ಸಾಂಸ್ಕೃತಿಕ ತಾಣಗಳಿಗೆ ಹೆಚ್ಚು ಪ್ರಾಧಾನ್ಯ. ಏಕೆಂದರೆ ಇಲ್ಲಿ ಸೃಜನಶೀಲತೆಯನ್ನು ಪ್ರತಿಪಾದಿಸಲು ಅವಕಾಶಗಳು ಹೆಚ್ಚಾಗಿವೆ. ಮೇಲಾಗಿ ಇದು ಮಾನವ ಪ್ರಯತ್ನದ ಫಲ. ಅದನ್ನು ಗುರುತಿಸಬೇಕು. ಈ ಕಾರಣಕ್ಕಾಗಿಯೇ ಸಾಂಸ್ಕೃತಿಕ ತಾಣಗಳು ಮತ್ತು ನೈಸರ್ಗಿಕ ತಾಣಗಳ ನಡುವೆ 3:1 ಅನುಪಾತವನ್ನು ಅನುಸರಿಸಲಾಗುತ್ತದೆ.



ಯುನೆಸ್ಕೊ ಮೌನವಾಗಿಯೇ ಇನ್ನಷ್ಟು ಅಂಶಗಳನ್ನು ಗಮನಿಸಿರುತ್ತದೆ. ಶಿಫಾರಸು ಮಾಡಿದ ತಾಣದ ಬಗ್ಗೆ ಜನರಿಗೆ ಎಷ್ಟರಮಟ್ಟಿಗೆ ಆಸಕ್ತಿ ಇದೆ, ಸರ್ಕಾರ ಮತ್ತು ಸಾರ್ವಜನಿಕರು ಇವುಗಳನ್ನು ರಕ್ಷಿಸುವಲ್ಲಿ ತೋರಿರುವ ಆಸಕ್ತಿ, ಅಂಥ ತಾಣಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆಯೇ, ವಿಶ್ವ ಪಾರಂಪರಿಕ ತಾಣದ ಪಟ್ಟಿಗೆ ಸೇರಿಸಿದರೆ ಸ್ಥಳೀಯ ಜನರ ಆರ್ಥಿಕ ಬದುಕು ಉತ್ತಮಗೊಳ್ಳುತ್ತದೆಯೇ- ಇವು ಕೂಡ ಮಾನದಂಡದಲ್ಲಿ ಪರಿಗಣಿಸುವ ಅಂಶಗಳು. ಪಾರಂಪರಿಕ ತಾಣದ ಪಟ್ಟಿಗೆ ಸೇರಿಸಿದರೆ ಏನು ಲಾಭ ಎಂಬ ಪ್ರಶ್ನೆ ಇಲ್ಲಿ ಬರಬಾರದು. ಅದು, ನಮ್ಮ ಮನೆಯಲ್ಲಿ ನಮ್ಮ ಹಿರಿಯರನ್ನು ಗೌರವಿಸಿದರೆ ಏನು ಲಾಭ ಎಂದಂತೆ.

ನಾಶ ಭೀತಿ ತಾಣಗಳನ್ನು ರಕ್ಷಿಸಲು ಸೂಕ್ತ ಮಾರ್ಗದರ್ಶನಗಳನ್ನು ಯುನೆಸ್ಕೊ ನೀಡುವುದುಂಟು. ಉದಾಹರಣೆಗೆ, ಅಫ್ಗಾನಿಸ್ತಾನದ ಬನಿಯಾ ಕಣಿವೆಯ ಆರನೇ ಶತಮಾನದ ಬುದ್ಧನ ಸ್ಮಾರಕಗಳನ್ನು 2001ರಲ್ಲಿ ತಾಲಿಬಾನೀಯರು ವಿಕೃತಗೊಳಿಸಿದಾಗ, ಆ ಚೂರುಗಳನ್ನೆಲ್ಲ ಸಂಗ್ರಹಿಸಿ, ಮೂಲರೂಪಕ್ಕೆ ತರಲು ವಿಶ್ವ ಸ್ಮಾರಕ ನಿಧಿಯ ನೆರವನ್ನು ಬಳಸಲಾಯಿತು.

ವಿಶ್ವ ಪಾರಂಪರಿಕ ತಾಣಗಳು ಇಡೀ ಮನುಕುಲದ ಆಸ್ತಿ. ಇಲ್ಲಿ ಯಾವ ಧರ್ಮ, ಯಾವ ದೇಶ ಎಂಬ ಪ್ರಶ್ನೆ ಏಳುವುದಿಲ್ಲ. ಮುಂದಿನ ತಲೆಮಾರಿನವರಿಗೆ ಚರಿತ್ರೆ ಹೇಳಲು ಇವೇ ನೇರವಾಗಿ ಒದಗಿಬರುವ ಪುರಾವೆಗಳು. ಇತಿಹಾಸದ ಪಠ್ಯವನ್ನು ವಿಕೃತಗೊಳಿಸಬಹುದು. ಆದರೆ ನಿಸರ್ಗ ಎಲ್ಲೋ ಅದರ ಚರಿತ್ರೆಯ ಜೊತೆಗೆ ನಮ್ಮ ಚರಿತ್ರೆ ಉಳಿಯಲೂ ಅವಕಾಶ ಮಾಡಿದೆ. ಕರ್ನಾಟಕದಲ್ಲೇ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರುವ ಅದೆಷ್ಟು ತಾಣಗಳಿಲ್ಲ? ಕಾವೇರಿ ನದಿ ಬಳುಕುತ್ತ, ಬಾಗುತ್ತ ತಲಕಾಡಿನಲ್ಲಿ ಕೊರೆದಿರುವ ಮರಳ ರಾಶಿಗೆ ಯಾವುದು ಸಾಟಿ ಇದೆ? ಉಡುಪಿ ಜಿಲ್ಲೆಯ ಮಲ್ಪೆಯಿಂದ ಕೆಲವೇ ಕಿಲೊಮೀಟರ್ ದೂರ ಸಮುದ್ರದಲ್ಲಿರುವ ಸ್ತಂಭಾಕೃತಿಯ ಶಿಲೆಗಳಿಗೆ ಪ್ರಕೃತಿಯೇ ಶಿಲ್ಪಿ. ಇದು ಆರೂವರೆ ಕೋಟಿ ವರ್ಷದ ಇತಿಹಾಸವನ್ನು ಸಾರುತ್ತದೆ.

ಇನ್ನೂ ಅಚ್ಚರಿ ಎಂದರೆ, ಬೇಲೂರು, ಹಳೆಬೀಡು, ಶ್ರೀರಂಗಪಟ್ಟಣ, ಬಾದಾಮಿ, ಶ್ರವಣಬೆಳಗೊಳದ ಗೊಮ್ಮಟ ಇನ್ನೂ ವಿಶ್ವ ಪಾರಂಪರಿಕ ತಾಣಕ್ಕೆ ಸೇರಬೇಕಾಗಿದೆ. ಹಂಪಿ ಮತ್ತು ಪಟ್ಟದಕಲ್ಲು– ಇವೆರಡಕ್ಕೆ ಮಾತ್ರ ವಿಶ್ವ ಪಾರಂಪರಿಕ ತಾಣದ ಪಟ್ಟಿಯಲ್ಲಿ ಸ್ಥಾನ ದೊರೆತಿದೆ. ಇದಕ್ಕೆ ಪ್ರಯತ್ನ ಯಾರಿಂದಾಗಬೇಕು? ಆರಂಭಕ್ಕೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಸಕ್ತಿ ತಳೆದು ರಾಜ್ಯ ಸರ್ಕಾರಕ್ಕೆ ವರದಿ ಕಳಿಸಬೇಕು. ಅಲ್ಲಿಂದ ಶಿಫಾರಸು ಆಗಿ ಕೇಂದ್ರಕ್ಕೆ ಹೋಗಬೇಕು. ಅಲ್ಲಿಂದ ವಿಶ್ವ ಪಾರಂಪರಿಕ ತಾಣದ ಕೇಂದ್ರ ಕಚೇರಿ ಇರುವ ಪ್ಯಾರಿಸ್‌ಗೆ ಹೋಗಬೇಕು.

ಇಷ್ಟೆಲ್ಲ ಆಸಕ್ತಿ ತಳೆದರೇನೇ ನಮ್ಮ ಸಂಸ್ಕೃತಿಯ ಪ್ರತಿಬಿಂಬ ಎನ್ನಿಸುವ ಸ್ಮಾರಕಗಳನ್ನು ವಿಶ್ವಕ್ಕೂ ಪರಿಚಯಿಸಬಹುದು. ಅಂದಹಾಗೆ, ಏ. 18 ವಿಶ್ವ ಪಾರಂಪರಿಕ ದಿನ.

ಚುರುಮುರಿ



ಜನಪ್ರತಿ'ನಿಧಿ'ಗಳು

• ನಾರಾಯಣ ರಾಯಚೂರ್

'ರೀ, ನೋಡಿದ್ರಾ ಈ ಸುದ್ದೀನ? ನೋಡೋಕೆ ಎರಡು ಕಣ್ಣು ಸಾಲದು, ಕೋಟಿ, ಕೋಟಿವಂತ ಕುಬೇರರು'. ಸಲೀಸಾಗಿ ಟಿಕೆಟ್ಟೂ ಸಿಕ್ಕು, ಸುಲಭವಾಗಿ ಬಿ ಫಾರ್ಮೂ ಕೈಗೆ ಬಂದ ಅಭ್ಯರ್ಥಿ ತರಹ ಸಂಭ್ರಮಿಸ್ತಾ ಹೇಳಿದಳು ಮಡದಿ.

'ಏನು? ಇವತ್ತು ನೀನೇ ಮೊದಲು ಪೇಪರ್ ಹಿಡ್ಕೊಂಡುಬಿಟ್ಟಿದ್ದೀಯಾ? ಗುಡ್, ನಿನಗೂ ಸುದ್ದಿ ಮೋಹ ಅಂಟಿಕೊಳ್ತಾ ಇದೆ ಅಂತಾಯ್ತು. ಹೌದು ಕಣೆ, ಅವರು ಕೋಟಿ, ಕೋಟಿವಂತ ಕುಬೇರರು, ನಾವು ಆಳಿಸಿಕೊಳ್ಳೋರು... ಕುಚೇಲರು'.

'ಅಲ್ಲಾರಿ, ಒಬ್ಬೊಬ್ಬರ ಹತ್ರ 1,000 ಕೋಟಿ, 900 ಕೋಟಿ, 800 ಕೋಟಿ, ಮತ್ತೆ ಟನ್‌ಗಟ್ಟಲೆ ಚಿನ್ನ, ಬೆಳ್ಳಿ, ಪತ್ನಿ ಹೆಸರಲ್ಲಿ? ಅಬ್ಬಬ್ಬಾ!'

'ಅವರ ಮನೆ ನಾಯಿಗಳ ಬೆಲೆ ಹಾಕಿಲ್ಲ. ಅದನ್ನ ಕೇಳಿದ್ರೆ ಬೆಚ್ಚಿಬೀಳ್ತಿದ್ದೆ ನೀನು. ಘಂಟಾಘೋಷವಾಗಿ ಘೋಷಿಸಿದ್ದೇ ಇಷ್ಟು ಅಂದ್ರೆ, ಇನ್ನು ಬೇನಾಮಿ ಎಷ್ಟಿರಬಹುದು?'

'ಎಲ್ಲ ಲೆಕ್ಕ ಹಾಕಿದರೆ ಅವರವರ ಕ್ಷೇತ್ರದ ಮತದಾರರೆಲ್ಲ ಹಾಯಾಗಿ ಜೀವನ ಮಾಡುವಷ್ಟು ಸಂಪತ್ತು ಒಬ್ಬೊಬ್ಬರ ಹತ್ರಾನೇ ಕೊಳೀತಾ ಇದೆಯಲ್ರೀ?'

'ಆ ಲೆಕ್ಕ, ಈ ಲೆಕ್ಕ ಅಂತ ಲೆಕ್ಕಕ್ಕೆ ಸಿಗದ ಅಘೋಷಿತ ಸಂಪತ್ತೂ ಸೇರಿಬಿಟ್ರೆ ಅಗಣಿತ ಧನ-ಗಣಿಗಳವರು'.

'ಅದಕ್ಕೇ... ಈಗ ಗೊತ್ತಾಯ್ತು, ಟಿಕೆಟ್ ಮಿಸ್ ಆದವರು ಯಾಕೆ ಕಣ್ಣೀರು ಸುರಿಸ್ತಾರೆ, ನೀರಿನಿಂದ ಆಚೆ ಬಿದ್ದ ಮೀನಿನ ಹಾಗೆ ಆಡ್ತಾರೆ ಅಂತ'.

'ಗೊತ್ತಾಗಬೇಕು ಅವ್ರಿಗೆ, ಒಂದ್ಹೊತ್ತಿನ ಊಟಕ್ಕೆ ಬಡವರು ಎಷ್ಟು ಕಣ್ಣೀರು ಸುರಿಸ್ತಾರೆ ಅಂತ'.

'ತಗ್ಗು ಇದ್ದ ಕಡೆನೇ ನೀರು ಅನ್ನೋ ಹಾಗೆ ದುಡ್ಡಿರೋರ ಹತ್ರಾನೇ ದುಡ್ಡು ಸೇರಿ, ಐದೈದು, ಆರಾರು ತಲೆಮಾರುಗಳಿಗಾಗೋವಷ್ಟು ಹಣ'.

'ಸಮಾಜವಾದ, ಸಮತಾವಾದ ಅಂತ ಇದ್ದವು, ಈಗ ಏನಿದ್ರೂ ಬಂಡವಾಳದಾರರದೇ ಬಾಯಿ, ಬಡಾಯಿ, ಆಟ, ಬೊಂಬಾಟ'.

'ಅಂತೂ ಚುನಾವಣಾ ಕಣದಲ್ಲಿ ಹಣ... ಹಣ...'

'ಅದಕ್ಕೇ ಮೇಡಂ...'ಹಣಾ'ಹಣಿ ಹೋರಾಟ ಅಂತ ಬಾಯಿಬಡ್ಕೊಳ್ಳೋದು'.

ಸಂಗತ

ಶಾಸಕ ಸರ್ವಾಧಿಕಾರಿ ಅಲ್ಲ

ಸರ್ಕಾರಿ ಅಧಿಕಾರಿಗಳು ಅನೇಕ ಕಡೆ ಶಾಸಕರ ಮರ್ಜಿಗೆ ಅನುಸಾರವಾಗಿ ಕೆಲಸ ಮಾಡುತ್ತಿರುವುದು ತರವಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ


ನನ್ನ ಸ್ನೇಹಿತರೊಬ್ಬರು ತಾವು ಖರೀದಿಸಿದ ನಿವೇಶನ ನೋಂದಣಿ ಮಾಡಿಸಲು ಉಪನೋಂದಣಿ ಕಚೇರಿಗೆ ಹೋಗಿದ್ದರು. ನಿವೇಶನ ಮಾರಾಟ ಮಾಡಿದವರೂ ಅವರೊಂದಿಗೆ ಇದ್ದರು. ಉಪನೋಂದಣಿ ಅಧಿಕಾರಿ, 'ಶಾಸಕರನ್ನು ಭೇಟಿ ಮಾಡಿ ನಿವೇಶನ ಖರೀದಿ ವಿಷಯ ತಿಳಿಸಿಬನ್ನಿ' ಎಂದರು. ನನ್ನ ಗೆಳೆಯನಿಗೆ ಅಪರಿಮಿತ ಸಿಟ್ಟು ಬಂತು. ಆದರೆ ಅದನ್ನು ತಡೆದುಕೊಂಡು, ಶಾಸಕರ ಗೃಹ ಕಚೇರಿಗೆ ತೆರಳಿದರು. ಅವರು ಬೆಂಗಳೂರಿಗೆ ಹೋಗಿರುವ ಮಾಹಿತಿ ದೊರೆಯಿತು. ಇದನ್ನು ಉಪನೋಂದಣಿ ಅಧಿಕಾರಿಗೆ ತಿಳಿಸಿದಾಗ, 'ಶಾಸಕರ ಪುತ್ರ ಊರಲ್ಲಿಯೇ ಇದ್ದಾರೆ, ಅವರನ್ನು ಭೇಟಿ ಮಾಡಿ' ಎಂದರು. ನನ್ನ ಸ್ನೇಹಿತ ಶಾಸಕರ ಪುತ್ರನ ಮುಂದೆ ಕೈಜೋಡಿಸಿ ನಿಂತು ವಿಷಯ ತಿಳಿಸಿದರು. ಅವರು ಸಬ್ ರಿಜಿಸ್ಟ್ರಾರ್ ಅವರೊಂದಿಗೆ ಮಾತನಾಡಿದ ಮೇಲೆ ನಿವೇಶನ ಖರೀದಿ ಪ್ರಕ್ರಿಯೆ ಮುಗಿಯಿತು.

ಉಪನೋಂದಣಿ ಅಧಿಕಾರಿಗಳು ನಿವೇಶನ, ಭೂಮಿ ನೋಂದಣಿ ಮಾಡುವಾಗ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಶಾಸಕರನ್ನು ಭೇಟಿ ಮಾಡುವ ಅವಶ್ಯಕತೆ ಇಲ್ಲ. ಆದರೆ ಅನೇಕ ಕಡೆ ನೋಂದಣಿ ಅಧಿಕಾರಿಗಳು ಶಾಸಕರ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವುದು ಕಾಣಿಸುತ್ತಿದೆ. ಇದು ಜನರಿಗೆ ಮಾಡುವ ಹಿಂಸೆ ಮತ್ತು ಅವಮಾನ. ಪೊಲೀಸ್ ಠಾಣೆಗಳಲ್ಲಿಯೂ ಜನರ ತಕರಾರು, ವ್ಯಾಜ್ಯಗಳನ್ನು ದಾಖಲು ಮಾಡಿಕೊಳ್ಳುವಾಗ ಶಾಸಕರ ಸೂಚನೆಯಂತೆ ನಡೆದುಕೊಳ್ಳಲಾಗುತ್ತದೆ ಎನ್ನುವ ಮಾತು ಕೇಳಿಬರುತ್ತದೆ.

ಸರ್ಕಾರಿ ವಿದ್ಯಾರ್ಥಿ ನಿಲಯ, ಶಾಲೆ– ಕಾಲೇಜುಗಳ ಪ್ರವೇಶಕ್ಕೆ ವಿದ್ಯಾರ್ಥಿಯ ಜಾತಿ, ಆದಾಯದ ಬಗ್ಗೆ ನಿಯಮಗಳನ್ನು ರೂಪಿಸಲಾಗಿದೆ. ಆದರೆ ಅವುಗಳ ಸಮರ್ಪಕ ಪಾಲನೆ ಆಗುವುದಿಲ್ಲ. ಶಾಸಕರು ಸೂಚಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯುತ್ತದೆ. ಪಂಚಾಯಿತಿ, ಪುರಸಭೆ, ಸಹಕಾರಿ ಸಂಸ್ಥೆಗಳ ನಿತ್ಯದ ಕೆಲಸಗಳಲ್ಲಿ ಶಾಸಕರ ಹಸ್ತಕ್ಷೇಪ ನಡೆಯುತ್ತದೆ. ಗ್ರಾಮ ಪಂಚಾಯಿತಿ, ಪುರಸಭೆಗಳ ಸದಸ್ಯರು, ಅಧ್ಯಕ್ಷರಿಗೆ ಸರ್ಕಾರವು ಅಧಿಕಾರ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಿದೆ. ಆದರೆ ತಮ್ಮ ವಿವೇಚನೆ ಬಳಸಿ ಕೆಲಸ ಮಾಡುವ ಅವಕಾಶ ಅವರಿಗೆ ಸಿಗುವುದೇ ಇಲ್ಲ. ಅವರು ಕೂಡ ಅನಿವಾರ್ಯವಾಗಿ ಶಾಸಕರ ಮರ್ಜಿ ಕಾಯ್ದುಕೊಂಡೇ ಕೆಲಸ ಮಾಡುತ್ತಾರೆ.

ಶಾಸಕರಾಗಿದ್ದ ಶಾಂತವೇರಿ ಗೋಪಾಲಗೌಡರ ಬಳಿ ಗ್ರಾಮಸ್ಥರು ಬಂದು ಗ್ರಾಮದ ಸಮಸ್ಯೆಗಳ ಪರಿಹಾರಕ್ಕೆ ಮನವಿ ಮಾಡಿದರು. ಅವರ ಮಾತು ಆಲಿಸಿದ ಗೋಪಾಲಗೌಡರು, 'ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಸದಸ್ಯರಿಗೆ ನಿಮ್ಮ ಸಮಸ್ಯೆಗಳನ್ನು ಹೇಳಿ, ಅವರು ಸರಿಪಡಿಸುತ್ತಾರೆ. ಶಾಸಕನಾಗಿ ನನ್ನ ಜವಾಬ್ದಾರಿಗಳು ಬೇರೆ ಇವೆ. ಜನರಿಗೆ ಅನುಕೂಲವಾಗುವ ಶಾಸನಗಳನ್ನು ರಚಿಸುವುದು, ಈಗಿರುವ ಶಾಸನಗಳಲ್ಲಿ ದೋಷಗಳಿದ್ದರೆ ಸರಿಪಡಿಸುವುದು, ಹೊಸ ಯೋಜನೆಗಳನ್ನು ರೂಪಿಸುವುದು, ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡುವುದು, ಸದನದ ಕಲಾಪದಲ್ಲಿ ಭಾಗವಹಿಸುವುದು ಶಾಸಕನ ಜವಾಬ್ದಾರಿ. ಇದರೊಂದಿಗೆ ಒಂದಿಷ್ಟು ಸಮಯ ಹೊಂದಿಸಿಕೊಂಡು ಓದುವ, ಹೊಸದನ್ನು ಅರಿತುಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ' ಎಂದು ಹೇಳಿದರು. ಈ ಮಾತು ಎಲ್ಲ ಶಾಸಕರಿಗೆ ನೀತಿ ಪಾಠದಂತೆ ಇದೆ.

ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುವ ಅಂಗನವಾಡಿ ಸಿಬ್ಬಂದಿ ನೇಮಕದ ಉಸ್ತುವಾರಿಯ ಹೊಣೆಯನ್ನೂ ಶಾಸಕರೇ ನಿರ್ವಹಿಸುತ್ತಾರೆ. ವರ್ಗಾವಣೆಗಳಲ್ಲಿ ಶಾಸಕರ ಹಸ್ತಕ್ಷೇಪ ಹೆಚ್ಚಿಗೇ ಇರುತ್ತದೆ. ತಮ್ಮ ಮತಕ್ಷೇತ್ರಕ್ಕೆ ಬೇಕಾದ ಅಧಿಕಾರಿಗಳನ್ನು ವರ್ಗ ಮಾಡಿಸಿಕೊಳ್ಳುತ್ತಾರೆ. ಅನೇಕ ಬಾರಿ ಅಧಿಕಾರಿ ಇವರ ಜಾತಿಯವರೇ ಆಗಿರುತ್ತಾರೆ. ಹೀಗಾಗಿ ಸುಸೂತ್ರ ಆಡಳಿತ ಮತ್ತು ಪ್ರಜಾಪ್ರಭುತ್ವ ಮಂಕಾಗುತ್ತವೆ. ಶಾಸಕರು ಮತಕ್ಷೇತ್ರದ ಸರ್ವಾಧಿಕಾರಿಯಂತೆ ಕೆಲಸ ಮಾಡುತ್ತಿರುವುದು ಢಾಳಾಗಿ ಕಾಣಿಸುತ್ತದೆ.



ಸಾಂಸ್ಕೃತಿಕ ವಲಯದಲ್ಲಿಯೂ ಶಾಸಕರ ಹಸ್ತಕ್ಷೇಪ ನಡೆಯುತ್ತಿರುವುದು ಆತಂಕದ ಸಂಗತಿ. ತಾಲ್ಲೂಕು ಮತ್ತು ಜಿಲ್ಲಾ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಆಯ್ಕೆಯು ಶಾಸಕರ ಸೂಚನೆಗೆ ಅನುಸಾರವಾಗಿ ನಡೆಯುವುದನ್ನು ಕಂಡಿದ್ದೇವೆ. ಯಾವ ಯಾವ ಗೋಷ್ಠಿಗಳನ್ನು ನಡೆಸಬೇಕು, ಯಾರಿಗೆ ಮಹತ್ವ ಕೊಡಬೇಕು ಎಂಬಂತಹ ಸಂಗತಿಗಳನ್ನು ಶಾಸಕರೇ ನಿರ್ಧರಿಸುತ್ತಾರೆ. ತಾಲ್ಲೂಕು ಮತ್ತು ಜಿಲ್ಲಾ ಸಾಹಿತ್ಯ ಪರಿಷತ್ ಘಟಕಗಳ ಅಧ್ಯಕ್ಷರು ನೇರವಾಗಿ ಶಾಸಕರ ಒಲವಿಗೆ ಅನುಸಾರವಾಗಿ ನಡೆದುಕೊಳ್ಳುತ್ತಾರೆ. ಸರ್ಕಾರಿ ಪ್ರಶಸ್ತಿ ಪುರಸ್ಕಾರಗಳು ಹಾಗೂ ಅಕಾಡೆಮಿಗಳ ಸದಸ್ಯತ್ವಕ್ಕೆ ಶಾಸಕರ ಶಿಫಾರಸು ಅನಿವಾರ್ಯ ಎನ್ನುವ ವಾತಾವರಣ ಸೃಷ್ಟಿಯಾಗಿದೆ.

ತಜ್ಞರು, ಕಲಾವಿದರು, ವಿಜ್ಞಾನಿಗಳು, ಚಿಂತಕರೊಂದಿಗೆ ಕುಳಿತು ಚರ್ಚಿಸಿ ಶಾಸಕರು ತಮ್ಮ ತಿಳಿವಳಿಕೆಯ ಕ್ಷಿತಿಜ ಹೆಚ್ಚಿಸಿಕೊಳ್ಳಬೇಕು. 'ವಿವೇಕವನ್ನಲ್ಲದೆ ಅಧಿಕಾರವನ್ನಷ್ಟೇ ಒಟ್ಟುಗೂಡಿಸುತ್ತಾ ನಡೆದರೆ ಖಂಡಿತವಾಗಿಯೂ ನಮ್ಮನ್ನು ನಾವು ನಾಶ ಮಾಡಿಕೊಳ್ಳುತ್ತೇವೆ' ಎಂದು ಮಹಾಕವಿ ರನ್ನ ತನ್ನ ದೊರೆಗೆ ಹೇಳಿದ ಮಾತು ಈ ಕಾಲಕ್ಕೂ ಅನ್ವಯವಾಗುತ್ತದೆ.

ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ನಿಂತಿದ್ದೇವೆ. ಆಯ್ಕೆಯಾಗಿ ಬರುವ ಶಾಸಕರು ಮತಕ್ಷೇತ್ರದ ಅಭಿವೃದ್ಧಿಯ ಸ್ಪಷ್ಟ ಚಿತ್ರಣವನ್ನು ಸಿದ್ಧಪಡಿಸಿ, ಸೇವೆ ಮಾಡುವುದಕ್ಕೆ ಇದೊಂದು ಒಳ್ಳೆಯ ಅವಕಾಶ ಎಂದು ಭಾವಿಸಿ ಕೆಲಸ ಮಾಡಬೇಕು, ವಿನಯ ಮತ್ತು ದಿಟ್ಟತನ ಜೊತೆಯಾಗಿರಬೇಕು.

ವಾಚಕರ ವಾಣಿ

ಉದ್ಧಟತನದ ಮಾತು ಸಲ್ಲದು

ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಆಗಿಲ್ಲ ಎನ್ನುವವರನ್ನು ಮಾನಸಿಕ ಆಸ್ಪತ್ರೆಗೆ ಸೇರಿಸುವುದಾಗಿ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ (ಪ್ರ.ವಾ., ಏ. 19). ಬಿಜೆಪಿಯಲ್ಲಿರುವ ಕೆಲವು ಸಜ್ಜನರಲ್ಲಿ ಕಾಗೇರಿಯವರೂ ಒಬ್ಬರು ಎಂಬ ಅಭಿಪ್ರಾಯ ಹಲವರಲ್ಲಿದೆ. ಆದ್ದರಿಂದ ಇಂಥ ಉದ್ಧಟತನದ ಮಾತುಗಳು ಅವರಿಂದ ಬರುತ್ತವೆ ಎಂದರೆ ಅದು ನಿರೀಕ್ಷಿತವಾದುದಲ್ಲ.

ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಆಗಿದ್ದಿದ್ದರೆ ಅದನ್ನು ಜನ ಹೇಳಬೇಕೇ ವಿನಾ ತಾವೇ ಹೇಳಿಕೊಳ್ಳುವಂತಹ ಮಟ್ಟಕ್ಕೆ ಕಾಗೇರಿಯವರು ಇಳಿಯಬಾರದಿತ್ತು. ಪ್ರಜಾಪ್ರಭುತ್ವದಲ್ಲಿ ಇನ್ನೊಬ್ಬರ ಬಗ್ಗೆ ಆರೋಗ್ಯಕರವಾದ ಟೀಕೆಗೆ ಎಲ್ಲರಿಗೂ ಅವಕಾಶ ಇದೆ. ಇದು ಸ್ಪೀಕರ್ ಹುದ್ದೆಯನ್ನು ನಿರ್ವಹಿಸಿರುವ ಕಾಗೇರಿಯವರಿಗೆ ಗೊತ್ತಿಲ್ಲವೇ?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಇದು ನಮ್ಮ ವಾದ

ಮಂಗನಿಂದ ಮಾನವ
ಇದು ಡಾರ್ವಿನ್ನನ ವಿಕಾಸವಾದ,
ಪಕ್ಷದಿಂದ ಪಕ್ಷಕ್ಕೆ ನೆಗೆಯುವ
ನಾಯಕರನ್ನು ನೋಡಿದರೆ
ಮಾನವನೇ ಮಂಗನಾದ
ಎಂಬುದು ನಮ್ಮ ವಾದ!

ಎನ್.ಎಂ.ರಾಯಬಾಗಿ
ಬೆಟಗೇರಿ, ಗದಗ

ಖರೀದಿ ಖಯಾಲಿಯ ಹುರಿಯಾಳುಗಳೇ ಹುಷಾರು...

ಪೇಟೆಯಲ್ಲಿರುವ ಜೆರಾಕ್ಸ್ ಅಂಗಡಿಯೊಂದರಲ್ಲಿ ಬಾಗಲಕೋಟೆ ಕಡೆಯ ಅರೆ ಕಲಿತ ರೈತನೊಬ್ಬ ಜೆರಾಕ್ಸ್ ಮಾಡಿಸಲು ಬಂದ. ಯಾರೋ ಕೇಳಿದರು, 'ನಿಮ್ಮ ಕಡೆ ಹ್ಯಾಂಗಪಾ? ಹ್ಯಾಂಗೈತಿ ಇಲೆಕ್ಷನ್?' ಆತ ಉತ್ಸಾಹಿತನಾಗಿ, 'ಭಾರೀ ಜೋರೈತ್ರಿ ಸಾಹೇಬ್ರ, ದಿನಾ ಏನೇನರ ಕೊಟ್ಟ ಹೊಕ್ಕಾರ್ರಿ, ಕುಕ್ಕರ್ರು, ಟೇಬಲ್‌ಫ್ಯಾನು, ಅಡುಗೆ ತವಾ, ಇಸ್ತ್ರಿಪೆಟ್ಟಿಗೆ... ಹಿಂಗೇ ಎಲ್ಲಾ ಪಕ್ಷದ ಉಮೇದುವಾರರ ಕಡೆಯವರು ಬಲು ಉಮೇದಿಯಿಂದ ಕೊಟ್ಟು, ಒಂದೊಂದು ದೇವರ ಮುಟ್ಟಿಸಿ, ಆಣೆ ಪ್ರಮಾಣ ಮಾಡಿಸ್ಕೋತಾರ್ರಿ' ಎಂದ. 'ಹಾಂಗಾದ್ರ ಫಜೀತಿ ಆತಲ್ಲಪಾ' ಎಂದರೆ, ಆ ಚಾಲಾಕಿ ರೈತ ಹೇಳಿದ್ದು, 'ಯಾರ್ ಏನ್ ಕೊಟ್ರೂ ತೊಗೊಂಡು, ಕೊನೆಗೆ ಒಬ್ಬರಿಗೆ ವೋಟು ಹಾಕೂದ್ರಿ. ಎಲ್ಲಾ ದೇವರ ಮ್ಯಾಲೂ ಆಣೆ ಮಾಡೀರ್ತೇವ್ರಿ, ಎಲ್ಲಾ ದೇವರೂ ಒಂದರಿ, ದೇವನೊಬ್ಬ ನಾಮ ಹಲವು'.

ಇದೀಗ ಮತದಾರನೂ ಧೂರ್ತನಾಗಿದ್ದಾನೆ. ರಂಗೋಲಿ ಕೆಳಗೂ ನುಸುಳಲು ಕಲಿತಿದ್ದಾನೆ. ಮತಗಳನ್ನು ಖರೀದಿಸುವ ಖಯಾಲಿಯ ಹುರಿಯಾಳುಗಳೇ, ಹುಷಾರು!

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಉನ್ನಾವೊ ಪ್ರಕರಣ: ಇದೆಂತಹ ಧೂರ್ತತನ?

ಉನ್ನಾವೊ ಅತ್ಯಾಚಾರ ಸಂತ್ರಸ್ತೆಯ ಶೆಡ್‌ಗೆ ಆರೋಪಿಗಳು ಬೆಂಕಿ ಹಚ್ಚಿರುವುದು ವರದಿಯಾಗಿದೆ (ಪ್ರ.ವಾ., ಏ. 19). ಒಬ್ಬ ಸಂತ್ರಸ್ತೆಗೆ ಸಹಾಯಹಸ್ತ ನೀಡದ ಸರ್ಕಾರ ಏತಕ್ಕೆ ಬೇಕು? ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯಗಳು ತ್ವರಿತಗತಿಯಲ್ಲಿ ತೀರ್ಮಾನ ಕೊಡಬೇಕು ಇಲ್ಲವೇ ಸರ್ಕಾರವು ಸಂತ್ರಸ್ತ ಮಹಿಳೆಗೆ ಸರಿಯಾದ ಪೊಲೀಸ್ ರಕ್ಷಣೆ ಒದಗಿಸಿ ಕಾಪಾಡಬೇಕು. ಉನ್ನಾವೊ ಪ್ರಕರಣದಲ್ಲಿ ಸಂತ್ರಸ್ತೆಯನ್ನು ಸರ್ಕಾರದ ಮಹಿಳಾ ವಸತಿಗೃಹದಲ್ಲಿ ಅಥವಾ ಬೇರೆಲ್ಲಿಯಾದರೂ ಸುರಕ್ಷಿತವಾದ ಜಾಗದಲ್ಲಿ ಇರಿಸಬಹುದಿತ್ತು.

ಈಗ ಅತ್ಯಾಚಾರದ ಆರೋಪಿಗಳು ಆಕೆಯ ಶೆಡ್‌ಗೆ ಬೆಂಕಿ ಹಚ್ಚಿದ್ದಲ್ಲದೆ ಎರಡು ಶಿಶುಗಳನ್ನು ಬೆಂಕಿಗೆ ಆಹುತಿ ಮಾಡಲು ಪ್ರಯತ್ನಿಸಿದ್ದಾರೆ. ಇದೆಂತಹ ಧೂರ್ತತನ? ಪ್ರಕರಣ ವಾಪಸು ಪಡೆಯಲು ಒತ್ತಾಯಿಸಿ ಇಂತಹ ಕೃತ್ಯಕ್ಕೆ ಕೈ ಹಾಕಿದವರು, ಮುಂದೆ ಇವರಿಗೆ ತಕ್ಕ ಶಿಕ್ಷೆ ಆಗದಿದ್ದಲ್ಲಿ ಇನ್ನೇನೇನು ಕೆಟ್ಟ ಕಾರ್ಯಗಳಿಗೆ ಮುಂದಾಗುವರೋ ತಿಳಿಯದು. ಇನ್ನಾದರೂ ಸರ್ಕಾರವು ಸಂತ್ರಸ್ತೆಗೆ ಸೂಕ್ತ ರಕ್ಷಣೆ ಒದಗಿಸಲಿ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಎಲ್ಲರೂ ಕೋಟಿವೀರರು!

ಪ್ರಜಾಪ್ರತಿನಿಧಿಯಾಗಿ ಆಯ್ಕೆಯಾಗಿ ಶಾಸನಸಭೆಗೆ ಹೋಗಲು ಇಚ್ಛಿಸುತ್ತಿರುವ ಅಭ್ಯರ್ಥಿಗಳ ಸ್ಥಿರಾಸ್ತಿ, ಚರಾಸ್ತಿಯ ಸ್ವ ಘೋಷಣೆಯ ವಿವರಗಳನ್ನು ನೋಡಿದಾಗ ಕಣ್ಣುಗಳು ಆನಂದದಿಂದ ಮಂಜಾದವು. ವಿಶ್ವದ ಬೃಹತ್ ಪ್ರಜಾಪ್ರಭುತ್ವ ಎಂಬ ಹೆಗ್ಗಳಿಕೆಯ ವ್ಯವಸ್ಥೆ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಮೂಡಿತು. ಕೆಲವೊಂದು ಅಪವಾದಗಳನ್ನು ಹೊರತುಪಡಿಸಿ, ಸಾವಿರ, ಲಕ್ಷಗಳಲ್ಲಿ ಬಿಡಿ, ಎಲ್ಲ ಅಭ್ಯರ್ಥಿಗಳೂ ಕೋಟಿವೀರರೆ. ಅಲ್ಲಿಗೆ, ಪ್ರಜಾತಂತ್ರ ವ್ಯವಸ್ಥೆ 'ಉಳ್ಳವರಿಗೆ' ಮಾತ್ರ ಎಂದು ಅರ್ಥೈಸಿಕೊಳ್ಳಬಹುದೇ? ಜೊತೆಗೆ, ಮತದಾರನಿಗೆ ಹಂಚುವ ಸಲುವಾಗಿ ಕೊಂಡೊಯ್ಯುತ್ತಿರುವಾಗ ನಗದು ಮತ್ತು ಇತರ ವಸ್ತುಗಳು ಚೆಕ್‌ಪೋಸ್ಟ್‌ಗಳಲ್ಲಿ ಸಿಕ್ಕಿಬೀಳುತ್ತಿವೆ. ಖಂಡಿತವಾಗಿಯೂ ಇದು ಆರೋಗ್ಯಕರ ಬೆಳವಣಿಗೆ ಅಲ್ಲ. ಈ ತರಹ ಕೋಟಿ ಕೋಟಿ ಮೌಲ್ಯದ ಆಸ್ತಿ ಹಾಗೂ ಅದರ ನಿರಂತರ ಹೆಚ್ಚಳಕ್ಕೆ ಮೂಲ ಯಾವುದು ಎಂದು ಆದಾಯ ತೆರಿಗೆ ಇಲಾಖೆ ಅಥವಾ ಜಾರಿ ನಿರ್ದೇಶನಾಲಯದಿಂದ ತನಿಖೆ ನಡೆಸಬೇಕು.

ವೆಂಕಟೇಶ್ ಮುದಗಲ್, ಕಲಬುರಗಿ

ಮಾನಸಿಕವಾಗಿ ಗಾಸಿಗೊಳಿಸುವ ಹುನ್ನಾರ

ಹಿಂದೂ ಹಾಗೂ ಭಾರತೀಯ ಮಹಿಳೆಯರು ಸಭ್ಯ ಉಡುಗೆ ಧರಿಸಬೇಕು ಎಂಬ ಬಿಜೆಪಿಯ ಮಧ್ಯಪ್ರದೇಶ ಮಹಿಳಾ ಮೋರ್ಚಾ ಮುಖ್ಯಸ್ಥೆ ಮಾಯಾ ನರೋಲಿಯ ಅವರ ಹೇಳಿಕೆ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿಯುವಂತಿದೆ. ಈ ಹಿಂದೆ ಕುಂಕುಮ, ಶೂರ್ಪನಖಿ ಆಯ್ತು ಈಗ ಸಭ್ಯ ಉಡುಗೆ! ಕೆಲವು ಬಿಜೆಪಿಗರು ಮಹಿಳೆಯರ ಮೇಲೆ ಸಂಸ್ಕೃತಿ, ಧರ್ಮ ಎಂದು ಹೇರುವುದನ್ನು ನೋಡಿದರೆ, ಮಹಿಳೆಯರಿಗಿರುವ ವೈಯಕ್ತಿಕ ಸ್ವಾತಂತ್ರ್ಯವನ್ನು ನಾಶ ಮಾಡುವ ಉದ್ದೇಶ ಅವರಿಗಿದೆ ಅನಿಸುತ್ತದೆ.

ಸ್ವಾತಂತ್ರ್ಯ ಬರುವ ಮೊದಲು ಮಹಿಳೆಯರು ಹಾಗೂ ದಲಿತರಿಗೆ ತಮಗೆ ಇಷ್ಟ ಬಂದ ರೀತಿ ಇರಲು ಸಾಧ್ಯವಾಗಿರಲಿಲ್ಲ. ಸಂವಿಧಾನದ ಮೂಲಕ ಸ್ವಾತಂತ್ರ್ಯದ ಹಕ್ಕು ದೊರಕಿದ್ದರೂ, ಅನುಭವಿಸಲು ಈ ರಾಜಕಾರಣಿಗಳು ಬಿಡುತ್ತಿಲ್ಲ. ಶೂರ್ಪನಖಿಯಂತೆ ಕಾಣುತ್ತಾರೆ, ಸಭ್ಯ ಉಡುಗೆ ಧರಿಸುತ್ತಿಲ್ಲ ಎನ್ನುವುದು ಮಾನಸಿಕವಾಗಿ ಗಾಸಿಗೊಳಿಸುವ ವಿಷಯ ಕೂಡ ಆಗಿದೆ. ಮಾಯಾ ಅವರು ಮಹಿಳೆಯರ ಉಡುಪಿನ ಬಗ್ಗೆ ಈ ರೀತಿಯ ಹೇಳಿಕೆ ನೀಡಿದ್ದು ಸಮಂಜಸವಲ್ಲ.

ಪ್ರದೀಪ್ ಶಾಕ್ಯ, ಮಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.


ಯುವ ಭಾರತ




ವಿಶ್ವಸಂಸ್ಥೆಯ ಜಾಗತಿಕ ಜನಸಂಖ್ಯೆಯ ಅಂದಾಜಿನ ಪ್ರಕಾರ, ವಿಶ್ವದ ಅತ್ಯಂತ ದೊಡ್ಡ ಯುವರಾಷ್ಟ್ರಗಳಲ್ಲಿ ಭಾರತವೂ ಒಂದು. ಭಾರತದ ಒಟ್ಟು ಜನಸಂಖ್ಯೆ ಶೇ 68ರಷ್ಟು ಮಂದಿ 15–64 ವರ್ಷ ವಯಸ್ಸಿನವರಾಗಿದ್ದಾರೆ. ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಈ ವಯಸ್ಸಿನ ಜನರನ್ನು 'ಉತ್ಪಾದಕ ಜನಸಂಖ್ಯೆ' ಎಂದು ಕರೆಯಲಾಗುತ್ತದೆ. ಉತ್ಪಾದಕ ಜನಸಂಖ್ಯೆಯು ಹೆಚ್ಚು ಇರುವ ದೇಶಗಳಲ್ಲಿ ಭಾರತವು ಎರಡನೇ ಸ್ಥಾನದಲ್ಲಿ ಇತ್ತು. ಈಗಲೂ ಅದೇ ಸ್ಥಾನ ಕಾಯ್ದುಕೊಂಡಿದೆ. ಆದರೆ ಮೊದಲ ಸ್ಥಾನದಲ್ಲಿ ಚೀನಾ ಇದ್ದು, ಚೀನಾ ಮತ್ತು ಭಾರತದ ಉತ್ಪಾದಕ ಜನಸಂಖ್ಯೆಯ ಅಂತರ ಒಂದು ಕೋಟಿ ಮಾತ್ರ. ವಿಶ್ವದ ಒಟ್ಟು ಜನಸಂಖ್ಯೆ ಮತ್ತು ವಿಶ್ವದ ಒಟ್ಟು ಉತ್ಪಾದಕ ಜನಸಂಖ್ಯೆಗೆ ಹೋಲಿಸಿದರೂ, ಭಾರತದ ಉತ್ಪಾದಕ ಜನಸಂಖ್ಯೆಯ ಪ್ರಮಾಣ ಹೆಚ್ಚೇ ಇದೆ. ಈ ಕಾರಣದಿಂದಲೇ ಭಾರತವನ್ನು ಯುವರಾಷ್ಟ್ರ ಎಂದು ಕರೆಯಲಾಗುತ್ತದೆ

ಉತ್ಪಾದಕ ಜನಸಂಖ್ಯೆ 97 ಕೋಟಿ

ಭಾರತದಲ್ಲಿ ಈಗ (2023ರಲ್ಲಿ) 15ರಿಂದ 64 ವರ್ಷ ವಯಸ್ಸಿನ 97 ಕೋಟಿಯಷ್ಟು ಜನರು ಇದ್ದಾರೆ ಎಂದು ವಿಶ್ವಸಂಸ್ಥೆಯು ಅಂದಾಜಿಸಿದೆ. ಇದು ವಿಶ್ವದಲ್ಲೇ ಹೆಚ್ಚು. ವಿಶ್ವಸಂಸ್ಥೆಯು ಎಲ್ಲಾ ದೇಶಗಳ ಜನಸಂಖ್ಯಾ ದತ್ತಾಂಶಗಳನ್ನು ಸಂಗ್ರಹಿಸಲು ಆರಂಭಿಸಿದ್ದು 1950ರಲ್ಲಿ. ಅಲ್ಲಿಂದ ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಜನಸಂಖ್ಯಾ ಅಂದಾಜನ್ನು ಬಿಡುಗಡೆ ಮಾಡುತ್ತದೆ. ಆನಂತರ ಆಯಾ ನೈಜ ಜನಸಂಖ್ಯೆಯ ದತ್ತಾಂಶಗಳಿಗೆ ತಾಳೆ ಮಾಡಿ, ನೈಜ ಜನಸಂಖ್ಯೆಯ ದತ್ತಾಂಶಗಳನ್ನು ವರದಿಗೆ ಸೇರಿಸುತ್ತದೆ. ಹೀಗೆ ವಿಶ್ವಸಂಸ್ಥೆಯು ಸಿದ್ಧಪಡಿಸಿರುವ ಭಾರತದ ಜನಸಂಖ್ಯಾ ವರದಿಯಲ್ಲಿ, 'ಭಾರತದ ಉತ್ಪಾದಕ ಜನಸಂಖ್ಯೆ'ಯ ದತ್ತಾಂಶಗಳೂ ಇವೆ. 1950ರಲ್ಲಿ ಭಾರತದಲ್ಲಿ ಈ ವಯಸ್ಸಿನ ಒಟ್ಟು 22 ಕೋಟಿ ಜನರಿದ್ದರು. 2023ರಲ್ಲಿ ಈ ಜನಸಂಖ್ಯೆಯು 97 ಕೋಟಿಗೆ ಏರಿಕೆಯಾಗಿದೆ. ಮುಂದಿನ ದಶಕಗಳಲ್ಲೂ ಈ ಸಂಖ್ಯೆ ಏರಿಕೆಯಾಗಲಿದೆ. 2050ರ ವೇಳೆಗೆ ಈ ವಯಸ್ಸಿನ ಜನರ ಸಂಖ್ಯೆ 113 ಕೋಟಿಗೆ ಏರಿಕೆಯಾಗಲಿದೆ ಎಂದು ವಿಶ್ವ ಸಂಸ್ಥೆ ಅಂದಾಜಿಸಿದೆ





ದುಡಿಯುವ ವಯಸ್ಸಿನವರ ಪಾಲೇ ಅಧಿಕ

ವಿಶ್ವದ ಜನಸಂಖ್ಯೆಯನ್ನು ವಿವಿಧ ವಯೋಮಾನಗಳಲ್ಲಿ ವರ್ಗೀಕರಿಸಲಾಗಿದೆ. ಜನಸಂಖ್ಯಾ ಅನುಪಾತವನ್ನು ಗಮನಿಸಿದರೆ, 15–64 ವರ್ಷದ ವಯೋಮಾನದ ಜನರು ಅಧಿಕ ಪ್ರಮಾಣದಲ್ಲಿ ಇದ್ದಾರೆ. ಅನುತ್ಪಾದಕ ವರ್ಗ ಎಂದು ಕರೆಯಲಾಗುವ 14 ವರ್ಷದೊಳಗಿನವರು (ಶೇ 25) ಹಾಗೂ 65 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನವರು (ಶೇ 10) ನಂತರದ ಸ್ಥಾನದಲ್ಲಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಈ ವಿವಿಧ ವರ್ಗದ ಜನರ ಹಂಚಿಕೆ ಭಿನ್ನವಾಗಿದೆ.


	ಒಟ್ಟು ಜನಸಂಖ್ಯೆಯಲ್ಲಿ 0–14 ವರ್ಷ ವಯಸ್ಸಿನವರ ಪ್ರಮಾಣ	ಒಟ್ಟು ಜನಸಂಖ್ಯೆಯಲ್ಲಿ 15–64 ವರ್ಷ ವಯಸ್ಸಿನವರ ಪ್ರಮಾಣ	ಒಟ್ಟು ಜನಸಂಖ್ಯೆಯಲ್ಲಿ 65+ ವರ್ಷ ವಯಸ್ಸಿನವರ ಪ್ರಮಾಣ
ವಿಶ್ವ	25% (201.1 ಕೋಟಿ)	65% (522.9 ಕೋಟಿ)	10% (80.45 ಕೋಟಿ)
ಭಾರತ	25% (35.7 ಕೋಟಿ)	68% (97 ಕೋಟಿ)	7% (10 ಕೋಟಿ)
ಚೀನಾ	17% (24.2 ಕೋಟಿ)	69% (98 ಕೋಟಿ)	14% (20 ಕೋಟಿ)
ಜಪಾನ್	11.1% (1.36 ಕೋಟಿ)	58.6% (7.22 ಕೋಟಿ)	30.3% (3.72 ಕೋಟಿ)

- 14 ವರ್ಷದೊಳಗಿನ ವಯೋಮಾನದವರ ಸಂಖ್ಯೆ ಜಗತ್ತಿನ ಜನಸಂಖ್ಯೆಯ ನಾಲ್ಕನೇ ಒಂದು ಭಾಗದಷ್ಟಿದೆ. ದುಡಿಯುವ ವಯಸ್ಸಿನ ಜನಸಂಖ್ಯೆಯ ನಂತರದ ಅತಿಹೆಚ್ಚಿನ ಜನಸಂಖ್ಯೆಯು ಈ ವಯೋಮಾನದವರದ್ದು
- ಈ ವಯೋಮಾನದವರನ್ನು ಅನುತ್ಪಾದಕ ವಲಯ ಎಂದು ಗುರುತಿಸಲಾಗುತ್ತದೆ; ಆರ್ಥಿಕ ಲೆಕ್ಕಾಚಾರದಲ್ಲಿ ಇದು ಹೊರೆ ಎನ್ನಲಾಗಿದೆ
- ಇನ್ನೂ ಶಾಲಾ ಶಿಕ್ಷಣದಲ್ಲಿ ಕಲಿಕೆಯ ಹಂತದಲ್ಲಿರುವ ಇವರು ತಕ್ಷಣಕ್ಕೆ ದೇಶದ ಆರ್ಥಿಕ ಬೆಳವಣಿಗೆಗೆ ನೆರವಾಗುವುದಿಲ್ಲ
- ಭಾರತದ ಜನಸಂಖ್ಯೆಯಲ್ಲೂ ಇವರ ಪ್ರಮಾಣ ಶೇ 25ರಷ್ಟಿದ್ದರೆ, ಚೀನಾದಲ್ಲಿ ಶೇ 17ರಷ್ಟು ಹಾಗೂ ಜಪಾನ್‌ನಲ್ಲಿ ಶೇ 11.1ರಷ್ಟಿದೆ

- ಜಾಗತಿಕವಾಗಿ, 15 ವರ್ಷದಿಂದ 64 ವರ್ಷ ವಯೋಮಾನದ ಒಳಗಿನ ದುಡಿಯುವ ವರ್ಗದವರೇ ಎಲ್ಲ ದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿದ್ದಾರೆ
- ಈ ವಯೋಮಾನದ ಜನರು ಭಾರತವೂ ಸೇರಿದಂತೆ ಎಲ್ಲ ದೇಶಗಳ ಆರ್ಥಿಕತೆಯನ್ನು ಮುನ್ನಡೆಸುವ ಚಾಲಕ ಶಕ್ತಿಯಾಗಿ ಕೆಲಸ ಮಾಡುತ್ತಾರೆ
- ಈ ವಯೋಮಾನದವರು ಜಗತ್ತಿನ ಇತರ ದೇಶಗಳಿಗೆ ಹೋಲಿಸಿದರೆ, ಚೀನಾ (ಶೇ 69) ಹಾಗೂ ಭಾರತದಲ್ಲಿ (ಶೇ 68) ಅತ್ಯಧಿಕವಾಗಿದ್ದಾರೆ
- ಒಂದು ದೇಶದಲ್ಲಿ ದುಡಿಯುವ ವರ್ಗದವರ ಸಂಖ್ಯೆ ಕಡಿಮೆಯಿದ್ದಲ್ಲಿ, ಅಲ್ಲಿ ಕಾರ್ಮಿಕರ ಲಭ್ಯತೆಯ ಕೊರತೆ, ಆರ್ಥಿಕ ಹಿನ್ನಡೆ ಮೊದಲಾದ ಸಮಸ್ಯೆಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ

- 65 ವರ್ಷಕ್ಕಿಂತ ಮೇಲ್ಪಟ್ಟವರು ಜಾಗತಿಕ ಜನಸಂಖ್ಯೆಯಲ್ಲಿ ಶೇ 10ರಷ್ಟು ಪಾಲು ಹೊಂದಿದ್ದಾರೆ. ಅನುತ್ಪಾದಕ ವಲಯ ಎಂದು ಗುರುತಿಸಲಾಗುವ ಈ ವಯೋಮಾನದವರ ಪ್ರಮಾಣವು ಉಳಿದೆಲ್ಲ ವಯೋಮಾನದ ಜನರಿಗೆ ಹೋಲಿಸಿದರೆ ಅತಿ ಕಡಿಮೆಯಿದೆ
- ಈ ವಯೋಮಾನದವರ ಪ್ರಮಾಣ ಭಾರತದಲ್ಲಿ ತೀರಾ (ಶೇ 7ರಷ್ಟು ಮಾತ್ರ) ಕಡಿಮೆಯಿದೆ
- 65 ವರ್ಷಕ್ಕಿಂತ ಮೇಲ್ಪಟ್ಟವರ ಪ್ರಮಾಣವು ಚೀನಾದಲ್ಲಿ ಭಾರತಕ್ಕಿಂತ ಒಂದು ಪಟ್ಟು (ಶೇ 14) ಹೆಚ್ಚಿದ್ದರೆ, ಇವರು ಜಪಾನ್ ಜನಸಂಖ್ಯೆಯ ಶೇ 30ರಷ್ಟು ಪಾಲು ಹೊಂದಿದ್ದಾರೆ

ಭಾರತೀಯರ ನಿರೀಕ್ಷಿತ ಜೀವಿತಾವಧಿ ಹೆಚ್ಚಳ



ಕಾಲದಿಂದ ಕಾಲಕ್ಕೆ ಜನರ ನಿರೀಕ್ಷಿತ ಜೀವಿತಾವಧಿಯು ಸಾಕಷ್ಟು ಸುಧಾರಿಸಿದೆ ಎಂದು ವಿಶ್ವಸಂಸ್ಥೆಯ ದತ್ತಾಂಶಗಳು ಹೇಳುತ್ತವೆ. ಆಧುನಿಕ ತಂತ್ರಜ್ಞಾನಗಳು ಬೆಳೆದಂತೆಲ್ಲಾ ಜನರ ಆಯಸ್ಸು ಹೆಚ್ಚಳವಾಗಿದೆ. ಜಾಗತಿಕವಾಗಿ, ಪುರುಷರಿಗೆ ಹೋಲಿಸಿದರೆ ಮಹಿಳೆಯ ನಿರೀಕ್ಷಿತ ಜೀವಿತಾವಧಿಯು ಎಲ್ಲ ಸಮಯದಲ್ಲೂ ಹೆಚ್ಚೇ ಇದೆ. ಈ ಪ್ರವೃತ್ತಿ ಈಗಲೂ ಮುಂದುವರಿದಿದೆ. ಜಪಾನ್ ದೇಶದ ಜನರು ಹೆಚ್ಚು ಆಯಸ್ಸು ಹೊಂದಿದ್ದಾರೆ. ಅವರಲ್ಲಿ ಮರಣ ಪ್ರಮಾಣ ದರ ಕಡಿಮೆಯಿದೆ. ಹೀಗಾಗಿ ದೇಶದ ಜನಸಂಖ್ಯೆಯಲ್ಲಿ 65 ವರ್ಷಕ್ಕಿಂತ ಮೇಲ್ಪಟ್ಟವರ ಪ್ರಮಾಣ ಶೇ 30ರಷ್ಟಿದೆ. ಬೇರೆಲ್ಲ ದೇಶಗಳಿಗೆ ಹೋಲಿಸಿದರೆ, ಈ ವಯೋಮಾನದ ಜನರು ಜಗತ್ತಿನಲ್ಲೇ ಅಧಿಕ ಪ್ರಮಾಣದಲ್ಲಿದ್ದಾರೆ. ಜಪಾನ್‌ನ ಪುರುಷ ಸರಾಸರಿ 82 ವರ್ಷ ಬದುಕಿದರೆ, ಮಹಿಳೆಯು ಸರಾಸರಿ 88 ವರ್ಷದವರೆಗೂ ಜೀವಿಸುತ್ತಾರೆ. ಜಾಗತಿಕ ಸರಾಸರಿ ಜೀವಿತಾವಧಿಗಿಂತ ಜಪಾನ್ ಜನರ ಜೀವಿತಾವಧಿ ಅತ್ಯಧಿಕವಾಗಿದೆ ಎಂದು ವಿಶ್ವಸಂಸ್ಥೆಯ ದತ್ತಾಂಶಗಳು ಹೇಳುತ್ತವೆ.


ಚೀನಾದಲ್ಲೂ ಪುರುಷರು ಸರಾಸರಿ 76 ವರ್ಷ ಹಾಗೂ ಮಹಿಳೆಯರು ಸರಾಸರಿ 82 ವರ್ಷದವರೆಗೂ ಬದುಕುತ್ತಾರೆ. ಜಪಾನ್, ಚೀನಾ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಜೀವಿತಾವಧಿ ಕಡಿಮೆಯಿದೆ. ಭಾರತದಲ್ಲಿ ಪುರುಷನೊಬ್ಬ ಸರಾಸರಿ 71 ವರ್ಷ ಆಯಸ್ಸು ಹೊಂದಿದ್ದರೆ, ಮಹಿಳೆಯು ಸರಾಸರಿ 74 ವರ್ಷ ಆಯಸ್ಸು ಹೊಂದಿದ್ದಾರೆ.

ಜನರ ಜೀವಿತಾವಧಿಯು ಭಾರತದಲ್ಲೂ ಸಾಕಷ್ಟು ಸುಧಾರಿಸಿದೆ. 2000ರಲ್ಲಿ ಪುರುಷನೊಬ್ಬನ ಸರಾಸರಿ ಆಯಸ್ಸು ಕೇವಲ 53 ವರ್ಷ ಇತ್ತು. ಆದರೆ, 2023ರ ಹೊತ್ತಿಗೆ ಈ ಅವಧಿಯು 71 ವರ್ಷಕ್ಕೆ ಜಿಗಿದಿದೆ. ಅಂದರೆ, ಈ 23 ವರ್ಷಗಳಲ್ಲಿ 18 ವರ್ಷದಷ್ಟು ಆಯಸ್ಸು ಹೆಚ್ಚಳವಾಗಿದೆ. 2000ರಲ್ಲಿ 62 ವರ್ಷ ಸರಾಸರಿ ಆಯಸ್ಸು ಹೊಂದಿದ್ದ ಮಹಿಳೆಯು 2023ರಲ್ಲಿ ಸರಾಸರಿ 74 ವರ್ಷ ಬದುಕುತ್ತಿದ್ದಾಳೆ ಎಂದು ದತ್ತಾಂಶಗಳು ಹೇಳುತ್ತವೆ. ಭಾರತದಲ್ಲಿ ಸುಮಾರು 20 ವರ್ಷಗಳ ಹಿಂದೆ ಪುರುಷ ಹಾಗೂ ಮಹಿಳೆಯ ಜೀವಿತಾವಧಿಯ ನಡುವೆ ಸುಮಾರು 10 ವರ್ಷಗಳ ಅಂತರವಿತ್ತು. ಆದರೆ, ಇದೀಗ ಅಂತರವು ಮೂರು ವರ್ಷಗಳಿಗೆ ಇಳಿಕೆಯಾಗಿದೆ. ಈ ಅವಧಿಯಲ್ಲಿ ಪುರುಷ ಮಹಿಳೆಯರ ಜೀವಿತಾವಧಿಯ ಹೆಚ್ಚಿರುವುದರ ಜೊತೆಗೆ, ಪುರುಷರ ಸರಾಸರಿ ಆಯಸ್ಸು ಸಾಕಷ್ಟು ಪ್ರಮಾಣದಲ್ಲಿ ಸುಧಾರಣೆ ಕಂಡಿದೆ. ಮಹಿಳೆಯರ ಸರಾಸರಿ ಜೀವಿತಾವಧಿಯ ಸನಿಹಕ್ಕೆ ಬಂದಿದೆ.



ಆಧಾರ: ವಿಶ್ವಸಂಸ್ಥೆಯ ಜಾಗತಿಕ ಜನಸಂಖ್ಯಾ ಅಂದಾಜು–2022 ವರದಿ, ವಿಶ್ವಸಂಸ್ಥೆಯ ವಿಶ್ವ ಜನಸಂಖ್ಯಾ ಡ್ಯಾಶ್‌ಬೋರ್ಡ್, ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

'ರೋಸಿ' ಶೀರ್ಷಿಕೆ ವಿವಾದ ಶಿವರಾಜ್‌ಕುಮಾರ್ ಅಂಗಳಕ್ಕೆ



ಇತ್ತೀಚೆಗಷ್ಟೇ ಘೋಷಣೆಯಾಗಿದ್ದ 'ಲೂಸ್ ಮಾದ' ಯೋಗಿ ಅಭಿನಯದ 50ನೇ ಚಿತ್ರದ ಶೀರ್ಷಿಕೆ ವಿವಾದ ಇದೀಗ ನಟ ಶಿವರಾಜ್‌ಕುಮಾರ್ ಅಂಗಳ ತಲುಪಿದೆ.

ಅರ್ಜುನ್ ಜನ್ಯ ನಿರ್ದೇಶನದ ಹೊಸ ಸಿನಿಮಾದಲ್ಲಿ ಶಿವರಾಜ್‌ಕುಮಾರ್ ನಟಿಸುತ್ತಿದ್ದು, ಈ ಚಿತ್ರದ ಶೀರ್ಷಿಕೆ ಮೊದಲು '45' ಎಂಬುದಾಗಿತ್ತು. ಇದನ್ನು ಚಿತ್ರತಂಡ 'ರೋಸಿ 45' ಎಂದು ಬದಲಿಸಿದೆ. ಏಪ್ರಿಲ್ 9ರಂದು ಯೋಗಿ ನಟನೆಯ ಹೊಸ ಸಿನಿಮಾ 'ರೋಸಿ' ಸೆಟ್ಟೇರಿತ್ತು.

ಇದರ ಬೆನ್ನಲ್ಲೇ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದ ನಿರ್ದೇಶಕ ಅರ್ಜುನ್ ಜನ್ಯ, 'ಸೂರಜ್ ಪ್ರೊಡಕ್ಷನ್ಸ್‌ಗೆ 'ರೋಸಿ 45' (Rosy 45) ಎಂಬ ಶೀರ್ಷಿಕೆ ಸೇರಿದೆ. ಇನ್ನು ಮುಂದೆ ಯಾರು ಕೂಡ 'ರೋಸಿ' ಎಂಬ ಶೀರ್ಷಿಕೆ ಬಳಸುವ ಹಾಗಿಲ್ಲ ಹಾಗೂ ಶೀರ್ಷಿಕೆ ಪಕ್ಕದಲ್ಲಿ ಬೇರೆ ಪದ ಹಾಗೂ ಸಂಖ್ಯೆಗಳನ್ನಾಗಲಿ ಬಳಸುವ ಹಾಗಿಲ್ಲ' ಎಂದು ತಿಳಿಸಿದ್ದರು. ಹೀಗಾಗಿ ಯೋಗಿ, ನಿರ್ದೇಶಕ ಶೂನ್ಯ ಹಾಗೂ ನಿರ್ಮಾಪಕರು ಶಿವರಾಜ್‌ಕುಮಾರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಯೋಗಿ, 'ಇದು ನನ್ನ 50ನೇ ಸಿನಿಮಾ. ಶೀರ್ಷಿಕೆಯನ್ನು ಬಿಟ್ಟುಕೊಟ್ಟರೆ ಸಹಾಯವಾಗುತ್ತದೆ. ಏಕೆಂದರೆ ನಾವು ಈಗಾಗಲೇ ಎಲ್ಲ ಕಡೆ ಶೀರ್ಷಿಕೆ ಘೋಷಿಸಿದ್ದೇವೆ. ಇದು ಜನರನ್ನೂ ತಲುಪಿದೆ ಎನ್ನುವ ಮಾಹಿತಿಯನ್ನು ನಾನು ಶಿವಣ್ಣ ಅವರಿಗೆ ತಿಳಿಸಿದೆ. ಒಂದು ಕ್ಷಣವೂ ಯೋಚಿಸದೆ ಶಿವರಾಜ್‌ಕುಮಾರ್ ಅವರು ಚಿತ್ರತಂಡದ ಜೊತೆ ಮಾತನಾಡುವುದಾಗಿ ತಿಳಿಸಿದ್ದಾರೆ. ಅವರ ಚಿತ್ರದ ಶೀರ್ಷಿಕೆ 'ರೋಸಿ 45' ಆಗಿದೆ ಎಂದಾಗ ಅವರೇ ಒಂದು ಕ್ಷಣ ಆಶ್ಚರ್ಯ ವ್ಯಕ್ತಪಡಿಸಿದರು. ಇದಾದ ಬಳಿಕ ಏನು ಬೆಳವಣಿಗೆ ಆಗಿದೆ ಎಂದು ತಿಳಿದಿಲ್ಲ. ನಮ್ಮ ಸಿನಿಮಾದ ಶೀರ್ಷಿಕೆ ರೋಸಿ ಎಂದೇ ಇರಲಿದೆ. ಚೇಂಬರ್‌ನಲ್ಲೂ ನಮಗೆ ಒಪ್ಪಿಗೆ ಸಿಕ್ಕಿದೆ. ಮೇ ಎರಡನೇ ವಾರದಿಂದ ಚಿತ್ರೀಕರಣ ಆರಂಭವಾಗಲಿದೆ. ಚಿತ್ರದಲ್ಲಿ ಹೀರೊಯಿನ್ ಇಲ್ಲ. ಬೆಂಗಳೂರಿನಲ್ಲೇ ಹೆಚ್ಚಿನ ಚಿತ್ರೀಕರಣ ನಡೆಯಲಿದೆ' ಎಂದು ಮಾಹಿತಿ ನೀಡಿದರು.



ಸುಘೋಷ್, ಅಭಿಲಾಷ್ ಹಾಗೂ ಅಭಿದಾಸ್

'ರಂಗು ರಗಳೆ' ಮಾಡಲು ಸಜ್ಜಾದ ಮಲ್ಟಿಸ್ಟಾರ್ಸ್


ಸ್ಯಾಂಡಲ್‌ವುಡ್‌ನಲ್ಲಿ ಹೊಸ ಪ್ರಯೋಗಗಳು ನಡೆಯುತ್ತಲೇ ಇವೆ. ಇಂಥ ಪ್ರಯತ್ನಕ್ಕೆ ಇದೀಗ ಹೊಸಬರ ತಂಡವೊಂದು ಅಡಿ ಇಟ್ಟಿದೆ. ಅದುವೇ 'ರಂಗು ರಗಳೆ'. ಜಾಕ್ ಎಂಬುವವರ ನಿರ್ದೇಶನದ ಚೊಚ್ಚಲ ಚಿತ್ರದ ಮುಹೂರ್ತ ಬೆಂಗಳೂರಿನ ಪಂಚಮುಖಿ ಗಣಪತಿ ದೇವಾಲಯದಲ್ಲಿ ಇತ್ತೀಚೆಗೆ ನಡೆಯಿತು.

ತಮಿಳು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ಜಾಕ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುವ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಬಡ್ತಿ ಪಡೆದಿದ್ದಾರೆ. ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಈ ಚಿತ್ರದಲ್ಲಿ 'ಲವ್ ಮಾಕ್ಟೇಲ್' ಖ್ಯಾತಿಯ ಅಭಿಲಾಷ್ ದಳಪತಿ, 'ಗಟ್ಟಿಮೇಳ' ಧಾರಾವಾಹಿ ಖ್ಯಾತಿಯ ಅಭಿದಾಸ್ ಹಾಗೂ 'ಮೆಟ್ರೋ ಸಾಗಾ' ಮೂಲಕ ಗಮನಸೆಳೆದಿರುವ ಸುಘೋಷ್ ನಾಯಕರಾಗಿ ನಟಿಸುತ್ತಿದ್ದಾರೆ.

'ಇದೊಂದು ಎಂಟರ್‌ಟೈನ್‌ಮೆಂಟ್ ಪ್ಯಾಕೇಜ್. ಜಾಕ್ ಹಾಗೂ ನನಗೆ 12 ವರ್ಷದ ಪರಿಚಯ. ನಿರ್ದೇಶಕರನ್ನು ನಂಬಿ ನಿರ್ಮಾಪಕರು ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 'ಲವ್ ಮಾಕ್ಟೇಲ್' ನನಗೆ ದೊಡ್ಡ ಯಶಸ್ಸು ತಂದುಕೊಟ್ಟಿದೆ. ಈ ಹೊಸ ಸಿನಿಮಾ ಮೂಲಕ ನಾಯಕನಾಗಿ ತೆರೆ ಮೇಲೆ ಬರುತ್ತಿದ್ದೇನೆ' ಎನ್ನುತ್ತಾರೆ ಅಭಿಲಾಷ್. ಮೇ ಮೊದಲ ವಾರದಲ್ಲೇ ಶೂಟಿಂಗ್ ಆರಂಭಿಸಲು ತಂಡ ಸಿದ್ಧವಾಗಿದೆ. ಶ್ರೀ ವಿಶ್ವಂ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಶಶಿಕಲಾ ಉಮೇಶ್ 'ರಂಗು ರಗಳೆ' ಸಿನಿಮಾಗೆ ಬಂಡವಾಳ ಹೂಡಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ವಿ ವೇ ಕ ದ ಪ್ರಯೋಗಗಳು

ಆತುಮದ ಸಂಸ್ಥಿತಿಗೆ ದೈಹಿಕ ಸಮಾಧಾನ |
ಭೌತವಿಜ್ಞಾನದಾ ರಾಷ್ಟ್ರಸಂಸ್ಥೆಗಳಾ ||
ನೂತನ ವಿವೇಕಪ್ರಯೋಗಗಳಿನಾದೀತು |
ಭೂತಿಸಂಪದ ಜಗಕೆ – ಮಂಕುತಿಮ್ಮ || **866** ||

ಪದ-ಅರ್ಥ: ಆತುಮದ = ಆತ್ಮದ, ಸಂಸ್ಥಿತಿಗೆ = ಸಮಸ್ಥಿತಿಗೆ, ವಿವೇಕ ಪ್ರಯೋಗಗಳಿನಾದೀತು = ವಿವೇಕ + ಪ್ರಯೋಗಗಳಿಂ + ಆದೀತು, ಭೂತಿಸಂಪದ = ಭೂತಿ(ಸಮೃದ್ಧಿ) + ಸಂಪದ(ಸಂಪತ್ತು).

ವಾಚ್ಯಾರ್ಥ: ಆತ್ಮದ ಸಮಸ್ಥಿತಿಗೆ ದೈಹಿಕ ಸಮಾಧಾನ ಬೇಕು. ಅದರಂತೆ ಭೌತವಿಜ್ಞಾನದ, ರಾಷ್ಟ್ರಸಂಸ್ಥೆಗಳ ವಿವೇಕಪೂರ್ಣವಾದ ಪ್ರಯೋಗಗಳಿಂದ ಜಗತ್ತಿಗೆ ಸಮೃದ್ಧಿ, ಸಂಪತ್ತು ದೊರಕೀತು.

ವಿವರಣೆ: ದೇಹ, ಆತ್ಮದ ಹೊದಿಕೆ. ಆತ್ಮವನ್ನು ಸಂಸ್ಥಿತಿಯಲ್ಲಿಡಲು ದೇಹ ಸುಸ್ಥಿತಿಯಲ್ಲಿರಬೇಕು. ದೇಹ ಸಂಪೂರ್ಣ ನಿರ್ಬಲವಾಗಿದ್ದರೆ, ಆತ್ಮಶಕ್ತಿ ಕೂಡ ಕುಂದುತ್ತದೆ. ದೇಹಶಕ್ತಿ ಬಲವಾಗಿರಬೇಕಾದರೆ ಪರಿಸರದ ಪ್ರಭಾವ ಹೆಚ್ಚು. ಒಳ್ಳೆಯ ಆಹಾರ, ಒಳ್ಳೆಯ ವಾತಾವರಣಗಳು ಮುಖ್ಯ. ನಮ್ಮ ವಿಜ್ಞಾನ, ಮನುಷ್ಯನ ಆರೋಗ್ಯ ರಕ್ಷಣೆಗೆ ಬಹುದೊಡ್ಡ ಕಾಣಿಕೆಗಳನ್ನು ಕೊಡುತ್ತದೆ. ಆರೋಗ್ಯ ತಪಾಸಣೆಯ ವಿಧಿ ವಿಧಾನಗಳು ಆರೋಗ್ಯ ಕೆಡುವುದಕ್ಕೆ ಮೊದಲೇ ವಿಶ್ಲೇಷಣಾತ್ಮಕ ಪರೀಕ್ಷೆ ((diagnostic test)) ಮುಂದಾಗಬಹುದಾದದ್ದನ್ನೂ ತಿಳಿಸಿ, ಪರಿಹಾರೋಪಾಯಗಳನ್ನು ನೀಡಿ, ಆಯುಸ್ಸನ್ನು ವೃದ್ಧಿಸುತ್ತದೆ. ದೇಹವನ್ನು ಸರಿಯಾಗಿ, ಆರೋಗ್ಯಕರವಾಗಿ ಇಡುವುದಕ್ಕೆ ಎಷ್ಟೆಷ್ಟು ತರಹದ ಬಟ್ಟೆಗಳು, ಮನೆಗಳು, ಉಪಕರಣಗಳನ್ನು ಮನುಷ್ಯ ಕಂಡುಹಿಡಿದಿದ್ದಾನೆ! ವಾಹನಗಳ ಅನ್ವೇಷಣೆ ಮನುಷ್ಯನ ಪ್ರವಾಸವನ್ನು ಹೆಚ್ಚಿಸುವುದರೊಂದಿಗೆ ಅದರ ಅವಧಿಯನ್ನು ಕಡಿಮೆ ಮಾಡಿದೆ. ತಿಂಗಳುಗಟ್ಟಲೇ ಪ್ರಯಾಸದ ಪ್ರವಾಸವನ್ನು ಮಾಡುವುದರ ಬದಲಾಗಿ ಕೆಲವೇ ಗಂಟೆಗಳಲ್ಲಿ ಗಮ್ಯಸ್ಥಳವನ್ನು ತಲುಪಿಸುವ ವಿಮಾನಗಳಿವೆ. ಇದರೊಂದಿಗೆ ವಿಶ್ವಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ, ರೆಡ್ ಕ್ರಾಸ್ ಸಂಸ್ಥೆಗಳಂತಹ ಯೋಜನೆಗಳು ಮನುಷ್ಯನ ಬದುಕು, ಕಲಹವಿಲ್ಲದೆ, ಆರೋಗ್ಯದಿಂದ ಇರುವಂತೆ ಪ್ರಯತ್ನಿಸುತ್ತಿವೆ. ಪ್ರತಿಯೊಂದು ರಾಷ್ಟ್ರ ತನ್ನದೇ ಆದ ಸಂವಿಧಾನವನ್ನು ಮಾಡಿಕೊಂಡು ತನ್ನ ಪ್ರಜೆಗಳ ಜೀವನ ವ್ಯವಸ್ಥಿತವಾಗಿರುವಂತೆ, ನೆಮ್ಮದಿಯಾಗುವಂತೆ ಮಾಡಲು ಶ್ರಮಿಸುತ್ತಿವೆ. ಹೀಗೆ ವ್ಯಕ್ತಿಗಳು, ಸಂಸ್ಥೆಗಳು, ರಾಷ್ಟ್ರಗಳು ಸತತವಾಗಿ ಬದುಕು ಸಮೃದ್ಧವಾಗುವಂತೆ ಯೋಜಿಸುತ್ತಿವೆ. ಕಗ್ಗದ ಆಶಯ ತುಂಬ ಸುಂದರವಾದದ್ದು. ಎಲ್ಲ ಹೊಸ ಅವಿಷ್ಕಾರಗಳು, ಪ್ರಯತ್ನಗಳು, ಯೋಜನೆಗಳು "ವಿವೇಕ ಪ್ರಯೋಗ" ಗಳಾಗಬೇಕು. ಎಲ್ಲ ಪ್ರಯೋಗಗಳಲ್ಲಿ ವಿವೇಕವಿರಬೇಕು. ವಿವೇಕವಿಲ್ಲದ ಯಾವುದೇ ಪ್ರಯತ್ನ ಅನಾಹುತಕ್ಕೆ ದಾರಿ. ಇತಿಹಾಸ, ಪುರಾಣಗಳು, ಈ ವಿವೇಕವಿಲ್ಲದ ನಡೆಗಳಿಂದ ಆದ ದುರ್ಭರ ಪ್ರಸಂಗಗಳಿಗೆ ಸಾಕ್ಷಿಯಾಗಿವೆ. ಮಹಾಯುದ್ಧಗಳು, ಕೋಮುಗಲಭೆಗಳು, ಉಗ್ರರ ಹಾವಳಿಗಳು ಏನನ್ನು ಸೂಚಿಸುತ್ತಿವೆ? ವಿವೇಕದಿಂದ ಯೋಜಿಸಿದ್ದರೆ ಇವುಗಳು ನಡೆಯುವ ಕಾರಣವಿಲ್ಲ. ಅದಕ್ಕೇ ಕಗ್ಗ ಒತ್ತು ಕೊಟ್ಟು ಹೇಳುತ್ತದೆ, ನಮ್ಮೆಲ್ಲ ಪ್ರಯೋಗಗಳು ವಿವೇಕದ ಆಧಾರದ ಮೇಲೆ ನಡೆದರೆ ಮಾತ್ರ ಪ್ರಪಂಚಕ್ಕೆ ಸಮೃದ್ಧಿ, ಸಂಪತ್ತು ಮತ್ತು ನೆಮ್ಮದಿ ದೊರಕುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ಅಮಾವಾಸ್ಯೆ ಗಂ. 09-43 ನಕ್ಷತ್ರ: ಅಶ್ವಿನಿ ಗಂ. 23-11 ಯೋಗ: ವಿಷ್ಕಂಭ ಗಂ. 13-00, ಕರಣ: ನಾಗವಾನ್ ಗಂ. 09-43, ಮೇಷ ಮಾಸದ 06 ನೇ ದಿನ, ಮಳೆನಕ್ಷತ್ರ: ಅಶ್ವಿನಿ 2 ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-18 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 28 ರಂಜಾನ್ ದಿನ ವಿಶೇಷ : ದೇವ ದಾಮೋದರರವರ ಪುಣ್ಯತಿಥಿ(ಅಸ್ಸಾಂ), ಸಂಪೂರ್ಣ ಸೂರ್ಯಗ್ರಹಣ (ಭಾರತದಲ್ಲಿಗೋಚರಿಸುವುದಿಲ್ಲ) ಅದೃಷ್ಟ ಸಂಖ್ಯೆ : 3, 9

ಮೇಷ: ತಾಯಿಯ ಮೂಲಕ ನಿಮಗೆ ಬರಬೇಕಾದ ಪಿತ್ರಾರ್ಜಿತ ಆಸ್ತಿಗೆ ಬಹಳ ಪ್ರಯತ್ನ ಬೇಕಾಗುತ್ತದೆ. ದ್ರವಾಹಾರದ ಸೇವನೆ ಕಡಿಮೆ ಆದುದರಿಂದಾಗಿ ಚರ್ಮದಲ್ಲಿಶುಷ್ಕತೆ ಉಂಟಾಗುವ ಸಾಧ್ಯತೆ ಇದೆ. ಎಚ್ಚರವಹಿಸಿ.

ವೃಷಭ: ಹತ್ತಿಯ ಕೆಲಸವನ್ನು ಮಾಡುವಂಥರಿಗೆ ಉಷ್ಣದ ಸಮಸ್ಯೆ ಕಾಡಬಹುದು. ರಕ್ಷಣೆಯನ್ನು ಬಯಸಿ ಬಂದ ಸ್ನೇಹಿತನಿಗೆ ಕೈಲಾದ ಸಹಾಯ ಮಾಡಿ. ಅಧಿಕ ಒತ್ತಡದಿಂದ ಬೆನ್ನು ಹಾಗೂ ಕುತ್ತಿಗೆನೋವು ಕಾಡಬಹುದು

ಮಿಥುನ: ಮನಸ್ಸನ್ನು ಮತ್ತೆ ನಿಮ್ಮ ಹಾದಿಗೆ ತಂದುಕೊಳ್ಳಲು ಕ್ರೀಡೆ ಆಡುವುದು ಅಥವಾ ವೀಕ್ಷಿಸುವುದನ್ನು ಮಾಡಬಹುದು. ಇಂದು ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಬೇಕಾದ ಕಾರಣ ಭೋಜನದ ಸಮಯ ಬದಲಾಗಬಹುದು.

ಕರ್ಕಾಟಕ: ನಿಮ್ಮ ಬಳಿ ಕೆಲಸವನ್ನು ಕಲಿತು ನಿಮಗಿಂತ ಹೆಚ್ಚು ದುಡಿಮೆ ಮಾಡುತ್ತಿರುವವರನ್ನು ಕಂಡು ಅಸೂಯೆ ಪಡುವಿರಿ. ವಸ್ತ್ರ ಹೊಸ ವಿನ್ಯಾಸಕ್ಕೆ ಬೇಡಿಕೆ ಬರುವುದು. ಮಗಳ ಆರೋಗ್ಯದ ಬಗ್ಗೆ ಗಮನ ಕೊಡಿ.

ಸಿಂಹ: ಹಲವು ದೇಹ ಬಾಧೆಗಳಿಂದ ಬಳಲುತ್ತಿರುವವರಿಗೆ ನಿಮ್ಮ ಅನಾರೋಗ್ಯದ ಮೇಲೆ ಬೇಸರ ಹುಟ್ಟಬಹುದು. ಯೋಗ ಪ್ರಾಣಾಯಾಮಗಳನ್ನು ಅಭ್ಯಾಸಮಾಡುವುದರಿಂದ ಆರೋಗ್ಯದಲ್ಲಿ ಚೇತರಿಕೆ ಕಾಣಬಹುದು.

ಕನ್ಯಾ: ಜನರ ನಿಂದನೆಗಳು ನಿಮ್ಮ ಕಿವಿಗೆ ಬಿದ್ದು ವಾಸ್ತವತೆಯ ಬಗ್ಗೆ ಅವರಿಗೆ ಪರಿಚಯಿಸುವ ಹಠ ನಿಮ್ಮಲ್ಲಿ ಮೂಡುತ್ತದೆ. ಜೊತೆಗಾರರ ಅಭಿರುಚಿಗಳು ನಿಮ್ಮ ಅಭಿರುಚಿಗಿಂತ ಬಹಳ ಭಿನ್ನವಾಗಿರುವುದರಿಂದ ಖುಷಿ ಎನ್ನಿಸುವುದಿಲ್ಲ.

ತುಲಾ: ಮಕ್ಕಳು ಮೊಬೈಲ್ ಬಳಕೆ ಮಾಡುವುದು ಯೋಚನೆಗೆ ಕಾರಣವಾಗುತ್ತದೆ. ಮನೆಯ ಜನರ ಜಗಳದಲ್ಲಿ ನಿಮ್ಮ ಮಾತಿನ ಅವಶ್ಯಕತೆ ಬಂದಾಗಲೂ ಮನಸ್ಸಿನಲ್ಲಿರುವ ಮಾತುಗಳನ್ನೆ ಹೇಳಲು ಸಾಧ್ಯವಾಗುವುದಿಲ್ಲ.

ವೃಶ್ಚಿಕ: ವಿವಿಧ ಕಾರಣಗಳಿಂದಾಗಿ ಮನೆಗೆ ಬಂದ ಅತಿಥಿಗಳನ್ನು ಸರಿಯಾಗಿ ಸತ್ಕರಿಸಲಾಗದೆ ದಿನದ ಕಡೆಯಲ್ಲಿ ಬೇಸರಪಡುವಿರಿ. ನಿಮ್ಮ ಜೀವನದ ಕೆಲವು ಪ್ರಮುಖ ಸಮಾರಂಭಕ್ಕೆ ಕ್ಷಣಗಣನೆ ಮಾಡುವಂತಹವರಾಗುವಿರಿ.

ಧನು: ಇಷ್ಟು ದಿನದವರೆಗು ತೋರಲಾಗದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಇಂದು ಉತ್ತಮ ಅಭ್ಯಾಸದ ಮೂಲಕ ಪ್ರದರ್ಶಿಸುವಿರಿ. ಬಿಟ್ಟುಹೋದ ಸಂಬಂಧ ಮತ್ತೆ ಬೆಳೆಸುವ ಬಗ್ಗೆ ನಿಮ್ಮ ಕುಟುಂಬದವರೊಂದಿಗೆ ಚರ್ಚಿಸುವಿರಿ.

ಮಕರ: ಸ್ನೇಹಿತನ ಸಹಾಯದಿಂದಾಗಿ ಹಲವಾರು ವಿಚಾರಗಳಲ್ಲಿ ಹೆಚ್ಚು ಪರಿಪೂರ್ಣತೆ ಹೊಂದಲು ಸಾಧ್ಯವಾಗುತ್ತದೆ. ಕುದುರೆ ಸಾಕುವುದರ ಜತೆಗೆ ಸವಾರಿ ಮಾಡುವವರಿಗೆ ಉತ್ತಮ ಅವಕಾಶ ದೊರೆಯಲಿದೆ.

ಕುಂಭ: ಸ್ಥಿರ ಆಸ್ತಿಯನ್ನು ಉಳಿಸಿಕೊಳ್ಳುವ ಕಾರಣದಿಂದಾಗಿ ಕೋರ್ಟು ಕಚೇರಿಯನ್ನು ಅಲೆಯುವಂತೆ ಆಗುತ್ತದೆ. ಮುತ್ತು ರತ್ನ ವ್ಯಾಪಾರರಿಗೆ ಲಾಭವಾಗಲಿದೆ. ಬರಬೇಕಾದ ಹಣವು ಪೂರ್ಣವಾಗಿ ಬರಲಿದೆ.

ಮೀನ: ನಿತ್ಯದ ದಿನಚರಿಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಮೊಬೈಲ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಅಭದ್ರತೆ ಕಾಡಬಹುದು. ನಿಮ್ಮದೆ ಸ್ವಂತ ಉದ್ಯಮದಲ್ಲಿ ಚೇತರಿಕೆ ಕಂಡುಬರುತ್ತದೆ.

ಪದಬಂಧ 5294


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪವಾಗಿ ರಾಗದೊಡಗೂಡಿರುವ ಪ್ರೀತಿ (4)
3.ಮಡುವಿನೊಳಗಿರುವ ಬೆಟ್ಟಗುಡ್ಡಗಳ ಪ್ರದೇಶ (4)
5.ಪ್ರವಾಸಿ ಇಲ್ಲಿದ್ದಾನೆ (3)
6.ಉಪಕಾರದ ವಿರುದ್ಧಪದ (4)
8.ಬರಿದಾದ ಕೈಯಿದು (4)
10.ತೂಕಡಿಕೆ ಬೇಸರವಾದಾಗ ಬಾಯಿ ತೆರೆದು ಮುಚ್ಚು! (4)
12.ಅಂತರವಿಟ್ಟುಕೊಂಡು ಮಾಡಿರುವ ಗದ್ದಲ (4)
13.ದಡಿ ಹಿಡಿದಿರುವ ದಾಂಡಿಗ (3)
16.ಮನಸ್ಸು ಬಿಚ್ಚಿ ಮಾತಾಡದಿರುವಿಕೆ (4)
17.ಶಿರವನ್ನು ವಿಕ್ರಯಿಸಿದಾಗ ಕಾಣಿಸಿದ ಪೀಳಿಗೆ (4)

ಮೇಲಿಂದ ಕೆಳಕ್ಕೆ

1.ಹಿರಿಯ ಸಹೋದರ (2)
2.ಸಮಯ ಸೂಚಕ ಯಂತ್ರ (4)
3.ಹೆಣ್ಣು ದುಂಬಿ ಇಲ್ಲಿದೆ (4)
4.ಒಂಟೆಯ ಬೆನ್ನು (2)
7.ಬಿರುದಾಗಿ ಕೊಡುವ ಬಿಲ್ಲೆ (3)
9.ಹರಿಹಾಯುತಲಿದ್ದಾಗ ಕಾಣಿಸಿದ ತೀಕ್ಷ್ಣತೆ (3)
11.ವಿಷ್ಣುವಿನ ಚಕ್ರಾಯುಧವಿದು (4)
12.ಕಬ್ಬಿಣವನ್ನು ಆಕರ್ಷಿಸುವ ಲೋಹ (4)
14.ಚಿನ್ನ ಬೆಳ್ಳಿ ಇತ್ಯಾದಿ ಲೋಹಗಳ ತಂತಿ (2)
15.ಹಸುವಿನ ಮರಿ (2)



5293ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾನಪ್ರಸ್ಥ 3.ನಳಪಾಕ 5.ವಿಧಾನಸೌಧ 7.ವಾಲಗ 8.ಲಾಭಬಡುಕ 11.ಅರಣ್ಯ 12.ಪಾಕಪ್ರವೀಣ 15.ತಪಸೀಲು 16.ಅವಸಾನ

ಮೇಲಿಂದ ಕೆಳಕ್ಕೆ:
1.ವಾಸ್ತವಿಕ 2.ಪ್ರಧಾನ 3.ನಗು 4.ಕರಗ 6.ಸೌರಭ 7.ವಾಹಕ 8.ಲಾವಣ್ಯ 9.ಡುರಕ 10.ಜಾಣತನ 11.ಅಹಿತ 14.ಹಾಲು

ಸುಡೊಕು 5680

	4					6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5679 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,660
ಇಂದಿನ ಅಂತ್ಯ	17,619
	41
ದಿನದ ಕನಿಷ್ಠ	17,574

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹408

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680(1680)
ಸೋಯಾ (ರಿಫೈನ್ಡ್)	₹1025(1025)
ಸೂರ್ಯಕಾಂತಿ (ರಿಫೈನ್ಡ್)	₹1060(1060)
ಪಾಮೋಲಿನ್	₹965(970)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-1000
ಸಣ್ಣ	₹300-700

ರಿವೈವಲ್ ಸಿಲ್ಕ್ ಸಾರೀಸ್ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಎಮ್‌ಕೆವಿ ಸಿಲ್ಕ್ಸ್ ಕಂಪನಿಯು 'ರಿವೈವಲ್ ಸಿಲ್ಕ್ ಸಾರೀಸ್ ಕಲೆಕ್ಷನ್' ಹೆಸರಿನ ಹೊಸ ಸಂಗ್ರಹವನ್ನು ಪರಿಚಯಿಸಿದೆ. ಈ ಸಂಗ್ರಹದಲ್ಲಿ ಸಿಗುವ ಸೀರೆಗಳಲ್ಲಿ ನೈಸರ್ಗಿಕ ಬಣ್ಣಗಳನ್ನು ಮಾತ್ರ ಬಳಕೆ ಮಾಡಲಾಗುತ್ತದೆ ಎಂದು ಕಂಪನಿ ಹೇಳಿದೆ.

ರಿವೈವಲ್ ಸಿಲ್ಕ್ ಸಾರೀಸ್ ಸಂಗ್ರಹದ ಎಲ್ಲ ಸೀರೆಗಳು ಪರಿಸರ ಸ್ನೇಹಿ ಕೂಡ ಹೌದು ಎಂದು ಪ್ರಕಟಣೆ ತಿಳಿಸಿದೆ. 'ಮದುವೆಯ ಸೀಸನ್ ಶುರುವಾಗಿದೆ. ಫ್ಯಾಷನ್ ಪ್ರಿಯರು ಪರಿಸರ ಸ್ನೇಹಿ ಆಯ್ಕೆಗಳನ್ನು ಅರಸುತ್ತಿದ್ದಾರೆ. ಇದಕ್ಕೆ ಸ್ಪಂದಿಸುವ ರೀತಿಯಲ್ಲಿ, ಆರ್‌ಎಂಕೆವಿ ಸಿಲ್ಕ್ಸ್ ಹೊಸ ಸಂಗ್ರಹವನ್ನು ಆರಂಭಿಸಿದೆ. ಇದರಲ್ಲಿ ಆಧುನಿಕತೆ ಹಾಗೂ ಸಾಂಪ್ರದಾಯಿಕತೆಯು ಬೆರೆತಿದೆ' ಎಂದು ಕಂಪನಿಯ ನಿರ್ದೇಶಕ ಶಂಕರ್ ಕುಮಾರಸ್ವಾಮಿ ಹೇಳಿದ್ದಾರೆ.

ಚಿನ್ನದ ದರ ₹510 ಇಳಿಕೆ

ನವದೆಹಲಿ (ಪಿಟಿಐ): ದೆಹಲಿ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹510 ಇಳಿಕೆ ಕಂಡು ₹ 59,940ರಂತೆ ಮಾರಾಟ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 920ರಷ್ಟು ಕಡಿಮೆಯಾಗಿ ₹ 74,680ರಂತೆ ಮಾರಾಟ ಆಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.35 ಗ್ರಾಂ) 1,986 ಡಾಲರ್ ಮತ್ತು ಬೆಳ್ಳಿ ಧಾರಣೆ ಕೆ.ಜಿಗೆ 24.79 ಡಾಲರ್‌ಗೆ ತಲುಪಿದೆ.

ಪ್ರಧಾನಿ ಭೇಟಿ ಮಾಡಿದ ಕುಕ್

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯ ಸಿಇಒ ಟಿಮ್ ಕುಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿ ಮಾಡಿದರು. ಆ್ಯಪಲ್ ಕಂಪನಿಯು ಭಾರತದಲ್ಲಿ ತನ್ನ ಮೊದಲ ರಿಟೇಲ್ ಮಳಿಗೆಯನ್ನು ಮಂಗಳವಾರ ಆರಂಭಿಸಿದೆ.

'ಬೆಚ್ಚನೆಯ ಸ್ವಾಗತಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಧನ್ಯವಾದಗಳು... ದೇಶದಾದ್ಯಂತ ಹೂಡಿಕೆ ಮಾಡಲು ನಾವು ಬದ್ಧರಾಗಿದ್ದೇವೆ' ಎಂದು ಕುಕ್ ಅವರು ಟ್ವೀಟ್ ಮೂಲಕ ಹೇಳಿದ್ದಾರೆ. ಟಿಮ್ ಕುಕ್ ಅವರನ್ನು ಭೇಟಿ ಮಾಡಿದ್ದರ ಬಗ್ಗೆ ಮೋದಿ ಅವರೂ ಟ್ವೀಟ್ ಮಾಡಿದ್ದಾರೆ.

ಕುಕ್ ಅವರು 2016ರಲ್ಲಿ ಭಾರತಕ್ಕೆ ಬಂದಿದ್ದಾಗ ಕೂಡ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ್ದರು.

'ತಮ್ಮ ಕಂಪನಿಯ ಅಗತ್ಯಗಳಿಗೆ ಅನುಗುಣವಾಗಿ ಭಾರತದ ಕೆಲಸಗಾರರಿಗೆ ತರಬೇತಿ ನೀಡಲು ನೆರವು ಬೇಕು ಎಂದು ಕುಕ್ ಅವರು ಕೇಳಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ. ಯಾವ ಬಗೆಯ ಕೌಶಲಗಳನ್ನು ಕಂಪನಿಯು ಬಯಸುತ್ತದೆ ಎಂಬುದನ್ನು ತಿಳಿಸುವಂತೆ ಸರ್ಕಾರವು ಸೂಚಿಸಿದೆ ಎಂದು ಗೊತ್ತಾಗಿದೆ.

ಆ್ಯಪಲ್ ಕಂಪನಿಯು ಭಾರತದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಶೇಕಡ 4ರಷ್ಟು ಪಾಲು ಹೊಂದಿದೆ. ಮಾರುಕಟ್ಟೆ ಪಾಲನ್ನು ಹೆಚ್ಚು ಮಾಡಿಕೊಳ್ಳುವುದರ ಜೊತೆ, ಭಾರತದಲ್ಲಿ ಆ್ಯಪಲ್ ಉತ್ಪನ್ನಗಳನ್ನು ತಯಾರಿಸುವ ಉದ್ದೇಶ ಕೂಡ ಕಂಪನಿಗೆ ಇದೆ.



ಆ್ಯಪಲ್ ಕಂಪನಿಯ ಸಿಇಒ ಟಿಮ್ ಕುಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ನವದೆಹಲಿಯಲ್ಲಿ ಭೇಟಿ ಮಾಡಿದರು –ಪಿಟಿಐ ಚಿತ್ರ

ಬಡ್ಡಿದರ ಹೆಚ್ಚಳ, ಹಣದುಬ್ಬರದ ಪರಿಣಾಮ

ನವೋದ್ಯಮ: ಬಂಡವಾಳ ಸಂಗ್ರಹ ಇನ್ನಷ್ಟು ಕಠಿಣ?

ಮುಂಬೈ (ರಾಯಿಟರ್ಸ್): ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಜನರ ಖರೀದಿ ಸಾಮರ್ಥ್ಯವು ಹೆಚ್ಚಾಗದೇ ಇರುವುದು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದ್ದು, ಭಾರತದ ನವೋದ್ಯಮಗಳ ಪಾಲಿಗೆ ಬಂಡವಾಳ ಸಂಗ್ರಹವು ಇನ್ನಷ್ಟು ಕಠಿಣವಾಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಂದಾಜಿಸಿದ್ದಾರೆ.

ಭಾರತದ ನವೋದ್ಯಮಗಳಿಗೆ ಬಂಡವಾಳ ಸಂಗ್ರಹಿಸುವುದು ಕಷ್ಟವಾಗುತ್ತಿರುವುದರಿಂದ ಅಲ್ಲಿ ಈಗಾಗಲೇ ಉದ್ಯೋಗ ಕಡಿತ ನಡೆದಿದೆ ಮತ್ತು ಕೆಲವು ನವೋದ್ಯಮಗಳು ಐಪಿಒ ಮೂಲಕ ಬಂಡವಾಳ ಮಾರುಕಟ್ಟೆ ಪ್ರವೇಶಿಸುವುದು ವಿಳಂಬ ಆಗುತ್ತಿದೆ.

2023ರ ಮೊದಲ ತ್ರೈಮಾಸಿಕದಲ್ಲಿ ಭಾರತದ ನವೋದ್ಯಮಗಳು ₹ 16,200 ಕೋಟಿ ಬಂಡವಾಳ ಸಂಗ್ರಹಿಸಿವೆ. 2022ರ ಮೊದಲ ತ್ರೈಮಾಸಿಕಕ್ಕೆ ಹೋಲಿಸಿದರೆ ಬಂಡವಾಳ ಸಂಗ್ರಹವು ಶೇಕಡ 75ರಷ್ಟು ಕುಸಿತ ಕಂಡಿದೆ ಎಂದು ಖಾಸಗಿ ಈಕ್ವಿಟಿ ಕಂಪನಿ ಸಿ.ಬಿ. ಇನ್‌ಸೈಟ್ಸ್ ಮಾಹಿತಿ ನೀಡಿದೆ.

ಮೊದಲ ತ್ರೈಮಾಸಿಕದಲ್ಲಿ ಸಂಗ್ರಹಿಸಿರುವ ಬಂಡವಾಳವನ್ನು ಗಮನಿಸಿದರೆ 2023ರಲ್ಲಿ ಒಟ್ಟಾರೆ ಬಂಡವಾಳ ಸಂಗ್ರಹವು ₹ 82 ಸಾವಿರ ಕೋಟಿಗಿಂತಲೂ ಕಡಿಮೆ ಆಗಲಿದೆ ಎಂಬ ಅಂದಾಜು ಇದೆ.

2021ರಲ್ಲಿ ಸಂಗ್ರಹ ಆಗಿದ್ದ ದಾಖಲೆಯ ₹ 2.46 ಲಕ್ಷ ಕೋಟಿಗೆ ಹೋಲಿಸಿದರೆ ಈ ಬಾರಿ ಬಂಡವಾಳ ಸಂಗ್ರಹವು ಭಾರಿ ಪ್ರಮಾಣದಲ್ಲಿ ಕಡಿಮೆ ಆಗಬಹುದು. 2022ರಲ್ಲಿ ₹ 1.60 ಲಕ್ಷ ಕೋಟಿ ಬಂಡವಾಳ ಸಂಗ್ರಹ ಆಗಿತ್ತು ಎಂದು ಅದು ಹೇಳಿದೆ.

2022ರ ಮೊದಲ ತ್ರೈಮಾಸಿಕದಲ್ಲಿ 561 ಕಂಪನಿಗಳು ಬಂಡವಾಳ ಸಂಗ್ರಹಿಸಿದ್ದವು. 2023ರ ಇದೇ ಅವಧಿಯಲ್ಲಿ 271 ಕಂಪನಿಗಳು ಮಾತ್ರವೇ ಬಂಡವಾಳ ಸಂಗ್ರಹಿಸಿವೆ.

ಬಂಡವಾಳ ಸಂಗ್ರಹ ಕಡಿಮೆ ಆಗುವುದರಿಂದ ಉದ್ಯೋಗ ಸೃಷ್ಟಿಗೆ ಹಿನ್ನಡೆ ಆಗಲಿದೆ. ಆ ಮೂಲಕ ದೇಶದ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಮಾರುಕಟ್ಟೆ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ಹಣದುಬ್ಬರದಂತಹ ಜಾಗತಿಕ ಅಂಶಗಳು ಭಾರತದಲ್ಲಿ ಮತ್ತು ಇತರ ಕಡೆಗಳಲ್ಲಿಯೂ ಹೂಡಿಕೆ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆ.

ಅಮೆರಿಕದಲ್ಲಿ 2023ರ ಮೊದಲ ತ್ರೈಮಾಸಿಕದಲ್ಲಿ ನವೋದ್ಯಮಗಳ ಬಂಡವಾಳ ಸಂಗ್ರಹ ₹ 2.66 ಲಕ್ಷ ಕೋಟಿಗೆ, ಅಂದರೆ ಅರ್ಧದಷ್ಟು, ಕಡಿಮೆ ಆಗಿದೆ. ಚೀನಾದಲ್ಲಿ ಶೇ 60ರಷ್ಟು ಕುಸಿತ ಕಂಡಿದೆ.

ಪೇಟಿಎಂ ಐಪಿಒ ನಂತರ ಸಮಸ್ಯೆ: 2021ರಲ್ಲಿ ಪೇಟಿಎಂ ಕಂಪನಿಯು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಿತು. ಅದರ ಷೇರುಗಳ ವಹಿವಾಟು ಮಾರುಕಟ್ಟೆಯಲ್ಲಿ ಆರಂಭವಾದ ನಂತರದಲ್ಲಿ, ಮೌಲ್ಯವು ಕುಸಿಯಿತು. ಇದಾದ ನಂತರದಲ್ಲಿ ಭಾರತದ ಮಾರುಕಟ್ಟೆಯಲ್ಲಿ ಅತೃಪ್ತಿ ಆರಂಭ ಆಯಿತು. ಹಲವು ನವೋದ್ಯಮಗಳ ಮಾರುಕಟ್ಟೆ ಮೌಲ್ಯವು ಅವಾಸ್ತವಿಕವೇ ಎನ್ನುವ ಪ್ರಶ್ನೆಯನ್ನು ಹೂಡಿಕೆದಾರರು ಮತ್ತು ನಿಯಂತ್ರಣ ಸಂಸ್ಥೆಗಳು ಎತ್ತತೊಡಗಿದವು. ಆ ಬಳಿಕ ನವೋದ್ಯಮಗಳ ಬಂಡವಾಳ ಸಂಗ್ರಹದ ಹಾದಿ ಇನ್ನಷ್ಟು ದುರ್ಗಮವಾಯಿತು.

ಅಮೆರಿಕದ ಹೂಡಿಕೆದಾರರ ಮಾಹಿತಿಯ ಪ್ರಕಾರ, ಈಚೆಗಷ್ಟೇ ಬ್ಲ್ಯಾಕ್‌ರಾಕ್ ಕಂಪನಿಯು ಬೈಜೂಸ್‌ನ ಮಾರುಕಟ್ಟೆ ಮೌಲ್ಯವನ್ನು 22 ಬಿಲಿಯನ್ ಡಾಲರ್‌ನಿಂದ 11.15 ಡಾಲರ್‌ಗೆ ಇಳಿಕೆ ಮಾಡಿದೆ. ಇನ್‌ವೆಸ್ಕೊ ಕಂಪನಿಯು ಸ್ವಿಗ್ಗಿಯ ಮಾರುಕಟ್ಟೆ ಮೌಲ್ಯವನ್ನು 8 ಬಿಲಿಯನ್ ಡಾಲರ್‌ಗೆ ತಗ್ಗಿಸಿದೆ ಸಿ.ಬಿ. ಇನ್‌ಸೈಟ್ಸ್ ತಿಳಿಸಿದೆ.

ಕನಿಷ್ಠ ಇನ್ನೊಂದು ದಶಕದವರೆಗೆ 2021ರಲ್ಲಿ ಆಗಿದ್ದಂತ ದಾಖಲೆ ಪ್ರಮಾಣದ ಬಂಡವಾಳ ಸಂಗ್ರಹ ಆಗಲಿದೆ ಎಂದು ನಾನು ಭಾವಿಸುವುದಿಲ್ಲ

ವಿ.ಟಿ. ಭಾರದ್ವಾಜ್, ಸಿಕ್ವೊಯ ಕ್ಯಾಪಿಟಲ್‌ನ ಭಾರತದ ಮಾಜಿ ವ್ಯವಸ್ಥಾಪಕ ನಿರ್ದೇಶಕ

ಬಂಡವಾಳ ಸಂಗ್ರಹ



ಮುಂಬೈ ಧಾರಣೆ

ಶೇಂಗಾ

19–4–2023

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690(1690)
ಒಂದು ವಾರದ ಡೆಲಿವರಿ	1685(1685)
ಸೋಯಾ ಕಚ್ಚಾ	925(920)
ಪಾಮ್ ವಾರದ ಡೆಲಿವರಿ	963(968)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,900 (60,275)
ಬೆಳ್ಳಿ ಕೆ.ಜಿ 74,800 (74,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಸ್‌ಐಪಿ: ಹೆಚ್ಚಿದ ಹೂಡಿಕೆ

ನವದೆಹಲಿ (ಪಿಟಿಐ): ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ 2022–23ರಲ್ಲಿ ಆಗಿರುವ ಹೂಡಿಕೆಯು ಶೇಕಡ 25ರಷ್ಟು ಹೆಚ್ಚಾಗಿ ₹ 1.56 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ (ಎಎಂಎಫ್‌ಐ) ಹೇಳಿದೆ.

2021–22ರಲ್ಲಿ ಎಸ್‌ಐಪಿ ಮೂಲಕ ₹ 1.24 ಲಕ್ಷ ಕೋಟಿ ಹೂಡಿಕೆ ಆಗಿತ್ತು. ಮ್ಯೂಚುವಲ್ ಫಂಡ್‌ಗಳಿಗೆ ಎಸ್‌ಐಪಿ ಹೂಡಿಕೆಯ ಕೊಡುಗೆಯು ಏಳು ವರ್ಷಗಳಲ್ಲಿ 3ಪಟ್ಟು ಹೆಚ್ಚಾಗಿದೆ. 2016–17ರಲ್ಲಿ ಹೂಡಿಕೆಯು ₹ 43,921 ಕೋಟಿಯಷ್ಟು ಇತ್ತು ಎಂದು ಹೇಳಿದೆ.

ಹೂಡಿಕೆದಾರರು ದೀರ್ಘಾವಧಿಯ ಬೆಳವಣಿಗೆಯಲ್ಲಿ ನಂಬಿಕೆ ಮುಂದುವರಿಸಲಿದ್ದು, ಎಸ್‌ಐಪಿ ಮತ್ತು ಲಂಪ್ ಸಮ್ ಮೂಲಕ ಹೂಡಿಕೆ ಮಾಡಲಿದ್ದಾರೆ ಎಂದು ಕೋಟಕ್ ಮಹೀಂದ್ರ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಯ ಮುಖ್ಯಸ್ಥ ಮನೀಷ್ ಮೆಹ್ತಾ ಹೇಳಿದ್ದಾರೆ.

ಎಸ್‌ಐಪಿ ನಿರ್ವಹಣಾ ಸಂಪತ್ತು ಮೌಲ್ಯವು 2023ರ ಮಾರ್ಚ್ ಅಂತ್ಯಕ್ಕೆ ಶೇ 18ರಷ್ಟು ಹೆಚ್ಚಾಗಿ ₹ 6.83 ಲಕ್ಷ ಕೋಟಿಗೆ ತಲುಪಿದೆ. 2022ರ ಮಾರ್ಚ್ ಅಂತ್ಯದಲ್ಲಿ ಇದು ₹ 5.76 ಲಕ್ಷ ಕೋಟಿಯಷ್ಟು ಇತ್ತು. ಸದ್ಯ ಮ್ಯೂಚುವಲ್ ಫಂಡ್ ಉದ್ಯಮದಲ್ಲಿ 6.36 ಕೋಟಿ ಎಸ್‌ಐಪಿ ಖಾತೆಗಳಿವೆ.

2023ರ ಮಾರ್ಚ್ 31ರ ಅಂತ್ಯಕ್ಕೆ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೂಲಕ ₹ 1.46 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಚಿಪ್ಪು	27090-31009	ರಾಶಿ	36669-48699
ಕೋಕ	12500-25000	ಕೋಕ	18890-29995	ಸರಕು	51110-83560
ಹೊಸತು	27500-38000	ಫ್ಯಾಕ್ಟರಿ	12099-20729	**ಶಿರಸಿ**	
ಹಳತು	48000-53000	ಹಳೆಚಾಲಿ	36929-39009	ಬೆಟ್ಟೆ	33368-41999
ಪುತ್ತೂರು		ಹೊಸಚಾಲಿ	33781-36009	ಬಿಳಿಗೋಟು	22699-33200
ಕೋಕ	11000-25000	**ಶಿವಮೊಗ್ಗ**		ಚಾಲಿ	34099-36801
ಹೊಸತು	32000-39000	ಬೆಟ್ಟೆ	47099-52699	ಕೆಂಪುಗೋಟು	26899-33311
ಕುಮಟಾ		ಗೊರಬಲು	18009-35119	ರಾಶಿ	40899-44909

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹8000
ಗರಿಷ್ಠ	₹9500
ಮಾದರಿ	₹8800
ಒಟ್ಟು ಆವಕ (ಚೀಲ)	2,329

ನ್ಯೂಯಾರ್ಕ್: ಕಪ್ಪು ಜನಾಂಗದ ರೋವನ್ ಮುಖ್ಯ ನ್ಯಾಯಮೂರ್ತಿ

ಅಲ್ಬನಿ, ನ್ಯೂಯಾರ್ಕ್ (ಎಪಿ): ರೋವನ್ ವಿಲ್ಸನ್ ಅವರನ್ನು ರಾಜ್ಯದ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಿಸುವ ಪ್ರಸ್ತಾವಕ್ಕೆ ನ್ಯೂಯಾರ್ಕ್‌ನ ಸೆನೆಟ್ ಮಂಗಳವಾರ ಒಪ್ಪಿಗೆ ಸೂಚಿಸಿದೆ. ಅವರು ಈ ಹುದ್ದೆಗೇರುತ್ತಿರುವ ಕಪ್ಪು ಜನಾಂಗದ ಮೊದಲ ವ್ಯಕ್ತಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

ಈ ವಿಚಾರದಲ್ಲಿ ಗವರ್ನರ್ ಕೇಟಿ ಹೊಚುಲ್‌ಗೆ ಹಿನ್ನಡೆಯಾಗಿದೆ. ಅವರು ಈ ಹುದ್ದೆಗೆ ಹೆಕ್ಟರ್ ಲಾಸಲ್ಲೆ ಅವರನ್ನು ನಾಮನಿರ್ದೇಶನ ಮಾಡಿದ್ದರು. ಹೆಕ್ಟರ್ ಹೆಸರನ್ನು ಸೆನೆಟ್ ತಿರಸ್ಕರಿಸಿದೆ.

62 ವರ್ಷದ ವಿಲ್ಸನ್ ಅವರು 2017ರಿಂದ ಕೋರ್ಟ್ ಆಫ್ ಅಪೀಲ್ಸ್‌ನ ಸಹಾಯಕ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ್ದರು. ಲಿಬರಲ್ ಪಕ್ಷದ ಸೆನೆಟರ್‌ಗಳ ವಿಶ್ವಾಸ ಗಳಿಸುವಲ್ಲಿಯೂ ಇವರು ಯಶಸ್ವಿಯಾಗಿದ್ದಾರೆ.

'ವಿಲ್ಸನ್ ಅವರು ತಾವೊಬ್ಬ ಅತ್ಯಂತ ಚಿಂತನಶೀಲ ಹಾಗೂ ದೇಶದ ದಕ್ಷ ನ್ಯಾಯಮೂರ್ತಿಗಳಲ್ಲಿ ಒಬ್ಬರು ಎಂಬುದನ್ನು ಸಾಬೀತುಪಡಿಸಿದ್ದಾರೆ. ಹೀಗಾಗಿ ಅವರನ್ನು ಈ ಹುದ್ದೆಗೆ ನೇಮಿಸಲು ನಿರ್ಧರಿಸಲಾಗಿದೆ' ಎಂದು ಸೆನೆಟ್‌ನ ನ್ಯಾಯಾಂಗ ಸಮಿತಿಯ ಮುಖ್ಯಸ್ಥ ಸೆನ್ ಬ್ರಾಡ್ ಹೊಯಲ್‌ಮನ್ ಸಿಗಾಲ್ ತಿಳಿಸಿದ್ದಾರೆ.

ಮಂಗಳವಾರ ಸೆನೆಟ್‌ನ ಗ್ಯಾಲರಿಯಲ್ಲಿ ಕುಳಿತಿದ್ದ ವಿಲ್ಸನ್ ಅವರು ಇಡೀ ಕಲಾಪವನ್ನು ಮೌನವಾಗಿಯೇ ವೀಕ್ಷಿಸಿದರು. ನ್ಯಾಯಮೂರ್ತಿ ಜನೆಟ್ ಡಿಫಿಯೊರೆ ಅವರು ಕಳೆದ ವರ್ಷದ ಆಗಸ್ಟ್‌ನಲ್ಲಿ ರಾಜೀನಾಮೆ ನೀಡಿದ್ದರು. ಅಂದಿನಿಂದ ಮುಖ್ಯ ನ್ಯಾಯಮೂರ್ತಿ ಹುದ್ದೆ ಖಾಲಿ ಇತ್ತು.

ತನಿಖೆಗೆ ಆದೇಶಿಸಿದ ಬೆನ್ನಲ್ಲೇ ಪತ್ನಿಯ ಷೇರು ಘೋಷಿಸಿದ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ವಿರುದ್ಧ ಕೇಳಿ ಬಂದಿರುವ ಸ್ವಹಿತಾಸಕ್ತಿಯ ಆರೋಪದ ಬಗ್ಗೆ ತನಿಖೆ ಆರಂಭವಾದ ಬೆನ್ನಲ್ಲೇ ತಮ್ಮ ಪತ್ನಿ ಅಕ್ಷತಾ ಮೂರ್ತಿ ಅವರ ಹೆಸರಿನಲ್ಲಿರುವ ಷೇರುಗಳು ಮತ್ತು ಉದ್ಯಮಗಳ ವಿವರ ಬಹಿರಂಗಪಡಿಸಿದ್ದಾರೆ.

'ಸಂಗಾತಿಯ ಪಾಲುದಾರಿಕೆ ಅಥವಾ ನಿಕಟ ಕುಟುಂಬ ಸದಸ್ಯರ ಸಂಬಂಧಿತ ಆಸಕ್ತಿಗಳು' ಎಂಬ ಶೀರ್ಷಿಕೆಯಡಿ ಆನ್‌ಲೈನ್‌ನಲ್ಲಿ ಕ್ಯಾಬಿನೆಟ್ ಕಚೇರಿ ಪ್ರಕಟಿಸಿರುವ 'ಮಿನಿಸ್ಟರ್ ಆಸಕ್ತಿಗಳು' ಪಟ್ಟಿಯಲ್ಲಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಅವರು ವೆಂಚರ್ ಕ್ಯಾಪಿಟಲ್ ಇನ್ವೆಸ್ಟರ್ ಆಗಿದ್ದಾರೆ. ಅವರು ವೆಂಚರ್ ಕ್ಯಾಪಿಟಲ್ ಇನ್ವೆಸ್ಟರ್ ಕಂಪನಿ ಕ್ಯಾಟಮರನ್ ವೆಂಚರ್ಸ್ ಯುಕೆ ಲಿಮಿಟೆಡ್ ಮಾಲೀಕತ್ವವನ್ನು ಹೊಂದಿದ್ದಾರೆ. ಹಲವಾರು ನೇರ ಷೇರುಗಳನ್ನು ಹೊಂದಿದ್ದಾರೆ' ಎಂಬ ಮಾಹಿತಿ ಇದೆ.



ರಿಷಿ ಸುನಕ್

ಅಕ್ಷತಾ ಮೂರ್ತಿ ಅವರು ಉಲ್ಲೇಖಿತ ಕೊರು ಕಿಡ್ಸ್ ಸಂಸ್ಥೆಯ ಷೇರುದಾರರು. ಈ ಸಂಸ್ಥೆಯು ಒಳಗೊಂಡಂತೆ ಇಂಗ್ಲೆಡ್‌ನ ಒಟ್ಟು ಆರು ಏಜೆನ್ಸಿಗಳ ಹೆಸರು, ವಿವರಗಳನ್ನು ಸರ್ಕಾರಿ ವೆಬ್‌ನಲ್ಲಿ ಪ್ರಕಟಿಸಲಾಗಿತ್ತು.

ಬಿಬಿಸಿ ವರದಿಯ ಪ್ರಕಾರ, ರಿಷಿ ಸುನಕ್ ಅವರ ಪತ್ನಿ ಅಕ್ಷತಾ ಮೂರ್ತಿ ಷೇರು ಹೊಂದಿರುವ ಚೈಲ್ಡ್‌ಕೇರ್ ಏಜೆನ್ಸಿಗೆ ನೆರವಾಗುವ ಉದ್ದೇಶವು ಸುನಕ್ ಅವರು ಕಳೆದ ತಿಂಗಳು ಪ್ರಕಟಿಸಿದ ಬಜೆಟ್‌ನಲ್ಲಿ ಇದೆ. ಬಜೆಟ್‌ನಲ್ಲಿ ಪ್ರಕಟಿಸಿದ ನೂತನ ಯೋಜನೆಯ ಲಾಭ ಈ ಸಂಸ್ಥೆಗೆ ಲಭಿಸಲಿದೆ ಎಂದು ಆರೋಪಿಸಲಾಗಿತ್ತು. ಬ್ರಿಟನ್‌ನ ಸಂಸದೀಯ ಸನ್ನಡತೆ ಆಯೋಗದ ಆಯುಕ್ತರು ಈ ಕುರಿತ ತನಿಖೆಗೆ ಆದೇಶಿಸಿದ್ದರು.

ನೇಪಾಳ ಅಧ್ಯಕ್ಷ ಏಮ್ಸ್‌ಗೆ ಏರ್‌ಲಿಫ್ಟ್

ಕಠ್ಮಂಡು (ಪಿಟಿಐ): ಉಸಿರಾಟದ ಸಮಸ್ಯೆಯಿಂದ ಬಳಲುತ್ತಿರುವ ನೇಪಾಳದ ಅಧ್ಯಕ್ಷ ರಾಮಚಂದ್ರ ಪೌಡೆಲ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬುಧವಾರ ಏರ್‌ಲಿಫ್ಟ್ ಮೂಲಕ ಭಾರತಕ್ಕೆ ಕರೆತರಲಾಗಿದ್ದು, ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಏಮ್ಸ್) ಚಿಕಿತ್ಸೆ ನೀಡಲಾಗುತ್ತಿದೆ.

ಉಸಿರಾಟದ ತೊಂದರೆಯ ಕಾರಣಕ್ಕೆ ಮಂಗಳವಾರ ಅವರನ್ನು ಕಠ್ಮಂಡುವಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪ್ರಾಥಮಿಕ ಪರಿಶೀಲನೆ ಬಳಿಕ ಶ್ವಾಸಕೋಶ ಸೋಂಕಿನಿಂದ ಬಳಲುತ್ತಿರುವುದು ತಿಳಿದುಬಂದಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಬುಧವಾರ ಭಾರತಕ್ಕೆ ಕಳುಹಿಸಲಾಗಿದೆ ಎಂದು ನೇಪಾಳ ಅಧ್ಯಕ್ಷರ ಕಚೇರಿ ತಿಳಿಸಿದೆ.

ಪೌಡೆಲ್ ಏಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರೊಂದಿಗೆ ಪುತ್ರ ಚಿಂತನ್ ಪೌಡೆಲ್ ಮತ್ತಿತರರು ಇದ್ದಾರೆ ಎಂದು ಮಾಧ್ಯಮ ಸಲಹೆಗಾರ ಕಿರಣ್ ಪೋಖರೆಲ್ ಅವರ ಮಾಹಿತಿ ನೀಡಿದ್ದಾರೆ.ಪ್ರಧಾನಿ ಪುಷ್ಪಕಮಲ್ ದಹಲ್ ಮತ್ತಿತರರು ಪೌಡೆಲ್ ಅವರನ್ನು ಮಂಗಳವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿದ್ದರು.

ಉದರ ಸಮಸ್ಯೆಯ ಕಾರಣಕ್ಕೆ ಕಳೆದ ವಾರ ಪೌಡೆಲ್ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಈ ತಿಂಗಳಲ್ಲಿ ಎರಡನೇ ಬಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಬ್ಯಾಂಕ್ ಖಾತೆ ಮೊತ್ತ ಆದಾಯದ ಅಳತೆಗೋಲಲ್ಲ: ಹೈಕೋರ್ಟ್

ಬೆಂಗಳೂರು: 'ಬ್ಯಾಂಕ್‌ನ ಪಾಸ್ ಬುಕ್‌ನಲ್ಲಿ ನಮೂದಾಗುವ ಮೊತ್ತವನ್ನೇ ಆಧಾರವಾಗಿಸಿಕೊಂಡು ಅದನ್ನೇ ವ್ಯಕ್ತಿಯೊಬ್ಬರ ಆದಾಯಕ್ಕೆ ಪರಿಗಣಿಸಲು ಆಗದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣವೊಂದರಲ್ಲಿ ಬ್ಯಾಂಕ್‌ನ ಪಾಸ್ ಬುಕ್‌ನಲ್ಲಿ ನಮೂದಾಗುವ ಅಂಕಿ ಅಂಶಗಳನ್ನು ಪರಿಗಣಿಸಿ ಪರಿಹಾರ ನೀಡುವುದಕ್ಕೆ ನಿರ್ದೇಶಿಸಿದ್ದ, 'ಮೋಟಾರು ವಾಹನಗಳ ಅಪಘಾತಗಳ ಪರಿಹಾರ ನ್ಯಾಯಮಂಡಳಿ' ಆದೇಶವನ್ನು ಪ್ರಶ್ನಿಸಿ ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪ್ರಭಾಕರ ಶಾಸ್ತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಪ್ರಕರಣದಲ್ಲಿ ಮೃತರು ಬಟ್ಟೆ ವ್ಯಾಪಾರ ಮಾಡುತ್ತಿದ್ದು ತಿಂಗಳಿಗೆ ₹ 50 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ಮೃತರ ಪತ್ನಿ ತಿಳಿಸಿದ್ದಾರೆ. ಆದರೆ, ಈ ವಾದವನ್ನು ಪುಷ್ಟೀಕರಿಸಲು ಯಾವುದೇ ಸೂಕ್ತ ದಾಖಲೆ ಸಲ್ಲಿಸಿಲ್ಲ. ಬದಲಿಗೆ, ಮೃತರಿಗೆ ಸಂಬಂಧಿಸಿದ ಎರಡು ಬ್ಯಾಂಕ್ ಪಾಸ್ ಬುಕ್‌ಗಳನ್ನಷ್ಟೇ ಸಲ್ಲಿಸಲಾಗಿದೆ. ಒಂದು ಮೃತರಿಗೆ ಸೇರಿದ್ದರೆ ಮತ್ತೊಂದು ಅವರ ಪತ್ನಿಯ ಜಂಟಿ ಖಾತೆಯಾಗಿದೆ. ಆದರೆ, ಎರಡೂ ಚಾಲ್ತಿ ಖಾತೆಗಳಲ್ಲ' ಎಂದು ನ್ಯಾಯಪೀಠ ಹೇಳಿದೆ. 'ತಿಂಗಳಿಗೆ 50 ಸಾವಿರ ಸಂಪಾದನೆ ಮಾಡುತ್ತಿದ್ದಾರೆ ಎಂಬುದನ್ನು ನಂಬಿದರೂ ಅದಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ. ಈ ಸಂಬಂಧ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಹೀಗಾಗಿ, ಬ್ಯಾಂಕ್ ಪಾಸ್ ಬುಕ್‌ನಲ್ಲಿ ನಮೂದಾಗುವ ಮೊತ್ತವನ್ನೇ ತಿಂಗಳ ಆದಾಯ ಎಂದು ಪರಿಗಣಿಸಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯದೊಂದಿಗೆ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ. ₹ 23.03 ಲಕ್ಷ ಪರಿಹಾರ ಪಾವತಿಸುವಂತೆ ನಿರ್ದೇಶಿಸಿದ್ದ ನ್ಯಾಯಮಂಡಳಿಯ ಆದೇಶವನ್ನು ಮಾರ್ಪಾಡು ಮಾಡಿ ₹ 21 ಲಕ್ಷ ಪಾವತಿಸಬೇಕು ಎಂದು ಆದೇಶಿಸಿದೆ.


ಆದೇಶ ಮರು ಪರಿಶೀಲಿಸಲು 'ಸುಪ್ರೀಂ'ಗೆ ಮನವಿ

ಇಸ್ಲಾಮಾಬಾದ್ (ಪಿಟಿಐ): ಪಂಜಾಬ್ ಪ್ರಾಂತ್ಯದ ವಿಧಾನಸಭೆ ಚುನಾವಣೆಯನ್ನು ಮೇ 14ರಂದು ನಡೆಸುವಂತೆ ನೀಡಿರುವ ತೀರ್ಪನ್ನು ಪುನರ್ ಪರಿಶೀಲಿಸಬೇಕು ಎಂದು ಅಧಿಕಾರಿಗಳು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ. ಭದ್ರತೆ ಮತ್ತು ಆರ್ಥಿಕ ಕಾರಣಗಳನ್ನು ಉಲ್ಲೇಖಿಸಿ ನ್ಯಾಯಾಲಯಕ್ಕೆ ಈ ಮನವಿ ಮಾಡಲಾಗಿದೆ.

ಮೇ 14ರಂದು ಚುನಾವಣೆ ನಡೆಸಬೇಕು ಎಂದು ಈ ತಿಂಗಳ 4ರಂದು ನ್ಯಾಯಾಲಯ ತೀರ್ಪು ನೀಡಿತ್ತು. ಅಲ್ಲದೆ ಚುನಾವಣೆ ನಡೆಸಲು ಅಗತ್ಯವಿರುವ ಹಣವನ್ನು ಚುನಾವಣಾ ಆಯೋಗಕ್ಕೆ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಸೂಚಿಸಿತ್ತು. ಆದರೆ, ಗಡುವು ಮೀರಿದರೂ ಸರ್ಕಾರ ಆಯೋಗಕ್ಕೆ ಹಣ ಬಿಡುಗಡೆ ಮಾಡಿಲ್ಲ. ಭದ್ರತೆ ಮತ್ತು ಆರ್ಥಿಕ ಕಾರಣಗಳನ್ನು ಮುಂದಿಟ್ಟಿರುವ ಸರ್ಕಾರವು ಸುಪ್ರೀಂ ಕೋರ್ಟ್ ತೀರ್ಪು ಪಾಲನೆಗೆ ನಿರಾಕರಿಸಿದೆ. ರಕ್ಷಣಾ ಸಚಿವಾಲಯವು ಮರುಪರಿಶೀಲಿಸುವಂತೆ ನ್ಯಾಯಾಲಯವನ್ನು ಕೋರಿದೆ ಎಂದು ಡಾನ್ ದಿನಪತ್ರಿಕೆ ವರದಿ ಮಾಡಿದೆ.

ಶ್ರೀಲಂಕಾ: ಸ್ಥಳೀಯ ಸಂಸ್ಥೆ ಚುನಾವಣೆ ಮತ್ತೆ ಮುಂದೂಡಿಕೆ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ತಿಂಗಳ 25ರಂದು ಶ್ರೀಲಂಕಾದಲ್ಲಿ ನಡೆಯಬೇಕಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ.



ಈ ಸಂಬಂಧ ಆಯಾ ಜಿಲ್ಲಾ ಚುನಾವಣಾ ಅಧಿಕಾರಿಗಳುಗೆ ಜೆಟ್ ಅಧಿಸೂಚನೆ ಹೊರಡಿಸಿದ್ದು, ಖಜಾನೆ ಇಲಾಖೆಯು ಅಗತ್ಯವಿರುವ ಹಣ ಬಿಡುಗಡೆ ಮಾಡದ ಕಾರಣ ಮಂಗಳವಾರ ಚುನಾವಣೆ ನಡೆಯುವುದಿಲ್ಲ. ಹಣ ಒದಗಿಸಿದ ನಂತರವೇ ಚುನಾವಣೆಯ ಮುಂದಿನ ದಿನಾಂಕ ಘೋಷಿಸಲಾಗುವುದು ಎಂದು ತಿಳಿಸಲಾಗಿದೆ.

ಇದಕ್ಕೂ ಮುನ್ನ ಮಾ.9ರಂದು ಚುನಾವಣೆಗೆ ದಿನಾಂಕ ನಿಗದಿಯಾಗಿತ್ತು. ನಂತರ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಏ.25ಕ್ಕೆ ಮುಂದೂಡಲಾಗಿತ್ತು.

ಚುನಾವಣೆಗೆ ಸಂಬಂಧಿಸಿದಂತೆ ಕನಿಷ್ಠ ಮೂರು ಪ್ರಕರಣಗಳ ವಿಚಾರಣೆಯು ಬಾಕಿ ಉಳಿದಿದ್ದು ಮೇ ಮಧ್ಯಭಾಗದಲ್ಲಿ ವಿಚಾರಣೆ ನಡೆಯಲಿದೆ.

ಕೋವಿಡ್ ಕೆಡುಕಿನ ಸ್ಥಿತಿಯಲ್ಲೇ ಇದೆ: ಡಬ್ಲ್ಯುಎಚ್‌ಒ ಎಚ್ಚರಿಕೆ

ಜಿನೀವಾ, ಸ್ವಿಟ್ಜರ್‌ಲೆಂಡ್ (ಎಎಫ್‌ಪಿ): ಕೋವಿಡ್ ಸಾಂಕ್ರಾಮಿಕವು ಇನ್ನೂ ಹೆಚ್ಚು ಕೆಡುಕು ಉಂಟು ಮಾಡುವ, ಊಹಿಸಲು ಅಸಾಧ್ಯವಾದ ಮತ್ತು ತ್ವರಿತ ರೂಪಾಂತರಿ ಸ್ಥಿತಿಯಲ್ಲೇ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಗುರುವಾರ ಎಚ್ಚರಿಕೆ ನೀಡಿದೆ.

ಕೋವಿಡ್‌ನಿಂದ ಕಳೆದ 28 ದಿನಗಳಲ್ಲಿ ವಿಶ್ವದಾದ್ಯಂತ 30 ಲಕ್ಷ ಹೊಸ ಪ್ರಕರಣಗಳು ವರದಿಯಾಗಿವೆ. 23 ಸಾವಿರ ಜನರು ಸಾವನ್ನಪ್ಪಿದ್ದಾರೆ. ಕೋವಿಡ್ ಪರೀಕ್ಷೆಯನ್ನು ತಗ್ಗಿಸಿರುವಾಗ ಇಷ್ಟೊಂದು ಪ್ರಕರಣಗಳು ದಾಖಲಾಗಿರುವುದು ಮತ್ತು ಸಾವುಗಳು ಸಂಭವಿಸಿರುವುದು ಗಮನಾರ್ಹ ಆಗಿದೆ.

ಸೋಂಕಿನ ಪ್ರಕರಣಗಳ ಸಂಖ್ಯೆ ಒಟ್ಟಾರೆ ತಗ್ಗುತ್ತಿರುವಾಗ, ಸಾವುಗಳು ಸಂಭವಿಸುತ್ತಿರುವುದು ಮತ್ತು ಬಹಳಷ್ಟು ಜನರು ಅನಾರೋಗ್ಯಕ್ಕೆ ಇನ್ನೂ ತುತ್ತಾಗುತ್ತಿರುವುದು ಮುಂದುವರಿದಿದೆ ಎಂದು ಡಬ್ಲ್ಯುಎಚ್‌ಒ ತುರ್ತು ವಿಭಾಗಗಳ ನಿರ್ದೇಶಕ ಮಿಖಾಯಿಲ್ ರಿಯಾನ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೋವಿಡ್ -19 ಕುರಿತು ಡಬ್ಲ್ಯುಎಚ್‌ಒದ ತುರ್ತು ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತಿದೆ. ಮೇ ಆರಂಭದಲ್ಲಿ ಮತ್ತೆ ಸಭೆ ಸೇರಲಿದೆ. ಈ ಸಭೆಯಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಪಥ ಮತ್ತು ಅಸ್ತಿತ್ವದ ಮೌಲ್ಯಮಾಪನದ ಬಗ್ಗೆ ಡಬ್ಲ್ಯುಎಚ್‌ಒ ಮುಖ್ಯಸ್ಥ ಡಾ. ಟೆಡ್ರೊಸ್ ಅಧಾನೊಮ್ ಘೆಬ್ರಿಯೆಸಿಸ್ ಅವರಿಗೆ ಮತ್ತಷ್ಟು ಸಕಾರಾತ್ಮಕ ಸಲಹೆ ನೀಡಲಾಗುತ್ತದೆ ಎಂದು ರಿಯಾನ್ ಹೇಳಿದರು.

ಸದ್ಯದ ಸ್ಥಿತಿಯಲ್ಲಿ ಕೋವಿಡ್ 19 ಅನ್ನು ಸಾಂಕ್ರಾಮಿಕ ರೋಗಗಳ ಪಟ್ಟಿಯಿಂದ ಕೈಬಿಡಲಾಗದು ಎಂದು ರಿಯಾನ್ ಹೇಳಿದ್ದಾರೆ.

ಐವರು ಸದಸ್ಯರಿರುವ ಸಾಂವಿಧಾನಿಕ ಪೀಠಕ್ಕೆ ಅರ್ಜಿದಾರರ ಪರ ವಕೀಲರ ಮನವಿ

‘ಸಲಿಂಗ ಮದುವೆ: ಸಂಪೂರ್ಣ ಅಧಿಕಾರ ಬಳಸಿ’



ನವದೆಹಲಿ (ಪಿಟಿಐ): ಸಲಿಂಗ ಮದುವೆಯನ್ನು ಸಮಾಜ ಒಪ್ಪಿಕೊಳ್ಳುವಂತಾಗಬೇಕು. ಸಮಾಜ ಸ್ವೀಕರಿಸಿದಾಗ ಮಾತ್ರ ಲೈಂಗಿಕ ಅಲ್ಪಸಂಖ್ಯಾತರು (ಎಲ್‌ಜಿಬಿಟಿಕ್ಯೂಐಎ) ಕೂಡ ಇತರರಂತೆ ಗೌರವದಿಂದ ಬಾಳಲು ಸಾಧ್ಯ. ಸಮಾಜವು ಸಲಿಂಗಿಗಳ ಮದುವೆಯನ್ನು ಒಪ್ಪಿಕೊಳ್ಳುವಂತೆ ಮಾಡಲು ಸುಪ್ರೀಂಕೋರ್ಟ್ ತನ್ನ ಸಂಪೂರ್ಣ ಅಧಿಕಾರವನ್ನು ಬಳಸಬೇಕು ಎಂದು ಅರ್ಜಿದಾರರು ಒತ್ತಾಯಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಾಂವಿಧಾನಿಕ ಪೀಠದ ಮುಂದೆ, ಅರ್ಜಿದಾರರೊಬ್ಬರ ಪರ ವಕೀಲ ಮುಕುಲ್ ರೋಹ್ಟಗಿ ಈ ವಿಚಾರ ಮಂಡಿಸಿದರು.

ಸಲಿಂಗ ಮದುವೆಗೆ ಮಾನ್ಯತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ಬುಧವಾರವೂ ಮುಂದುವರಿಯಿತು.

‘ಸರ್ಕಾರವೇ ಮುಂದೆ ಬಂದು, ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು’ ಎಂದು ವಕೀಲ ರೋಹ್ಟಗಿ ಹೇಳಿದರು. ವಿಧವೆಯರ ಮರುವಿವಾಹ ಕಾಯ್ದೆಯನ್ನು ಪ್ರಸ್ತಾಪಿಸಿದ ಅವರು, ‘ಬಹು ಹಿಂದೆ, ವಿಧವೆಯರು ಮರು ಮದುವೆಯಾಗುವುದನ್ನು ಸಮಾಜ ಸ್ವೀಕರಿಸಿತು.ನಂತರದ ದಿನಗಳಲ್ಲಿ ತ್ವರಿತವಾಗಿ ಕಾಯ್ದೆಯನ್ನು ರೂಪಿಸಿ ಜಾರಿಗೆ ತಂದಾಗ ಸಮಾಜ ಅದನ್ನು ಸ್ವೀಕರಿಸಿತು’ ಎಂದರು.

‘ಇಂಥ ಕ್ರಮ ಕೈಗೊಳ್ಳುವುದಕ್ಕಾಗಿ ಸುಪ್ರೀಂಕೋರ್ಟ್‌ಗೆ ಸಂವಿಧಾನದ 142ನೇ ವಿಧಿ ಅಡಿ ಸಂಪೂರ್ಣ ಅಧಿಕಾರ ಇದ್ದು, ಉನ್ನತ ನ್ಯಾಯಾಲಯದ ಬಗ್ಗೆ ಜನರು ವಿಶ್ವಾಸವನ್ನೂ ಹೊಂದಿದ್ದಾರೆ. ಹೀಗಾಗಿ, ನಮ್ಮ ಹಕ್ಕು ನಮಗೆ ದೊರೆಯಲಿದೆ ಎಂಬುದನ್ನು ಸುಪ್ರೀಂಕೋರ್ಟ್ ಖಾತರಿಪಡಿಸುತ್ತದೆ ಎಂಬ ವಿಶ್ವಾಸ ಅರ್ಜಿದಾರರದು’ ಎಂದು ರೋಹ್ಟಗಿ ಹೇಳಿದರು.

ಕೇಂದ್ರದ ಪರವಾಗಿ ಹೊಸದಾಗಿ ಅರ್ಜಿ ಸಲ್ಲಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಈ ವಿಷಯದಲ್ಲಿ ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳನ್ನು ಕಕ್ಷಿದಾರರನ್ನಾಗಿ ಮಾಡಬೇಕು’ ಎಂದು ಕೋರಿದರು.

‘ಈ ವಿಷಯ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಎಲ್ಲ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಏ. 18ರಂದು ಪತ್ರ ಬರೆಯಲಾಗಿದೆ’ ಎಂದು ಕೇಂದ್ರ ಸರ್ಕಾರ ಸಲ್ಲಿಸಿದ ಅಫಿಡವಿಟ್‌ನಲ್ಲಿ ವಿವರಿಸಲಾಗಿದೆ.

ರೋಹ್ಟಗಿ ಅವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ವಿಶೇಷ ವಿವಾಹ ಕಾಯ್ದೆಯನ್ನು ಪ್ರಶ್ನಿಸಿ ಹೊಸದಾಗಿ ಅರ್ಜಿ ಸಲ್ಲಿಸಿದ್ದನ್ನು ವಿರೋಧಿಸಿದರು. ‘ಸಲಿಂಗ ವಿವಾಹ ವಿಷಯವು ಸಂವಿಧಾನದ ಸಹವರ್ತಿ ಪಟ್ಟಿಯಲ್ಲಿದೆ ಎಂಬ ಮಾತ್ರಕ್ಕೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ನೀಡುವುದು ಸರಿಯಲ್ಲ’ ಎಂದು ಹೇಳಿದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಈ ಆಕ್ಷೇಪವನ್ನು ತಳ್ಳಿಹಾಕಿದರು. ವಿಚಾರಣೆ ಮುಂದುವರಿಯಲಿದೆ.

‘ಕೇಂದ್ರದ ವಾದ ಪುಷ್ಟೀಕರಿಸುವ ದತ್ತಾಂಶಗಳಿಲ್ಲ’

ನವದೆಹಲಿ (ಪ್ರಜಾವಾಣಿ ವಾರ್ತೆ) ‘ಸಲಿಂಗ ಮದುವೆಗೆ ಮಾನ್ಯತೆ ನೀಡಬೇಕು ಎಂಬುದು ನಗರಗಳಲ್ಲಿ ನೆಲೆಸಿರುವ ಒಂದು ವರ್ಗದ ಜನರ ಮನಃಸ್ಥಿತಿಯಾಗಿದೆ’ ಎಂಬ ಕೇಂದ್ರದ ವಾದವನ್ನು ಸುಪ್ರೀಂಕೋರ್ಟ್ ತಳ್ಳಿ ಹಾಕಿದೆ.

‘ಕೇಂದ್ರದ ಈ ವಾದವನ್ನು ಪುಷ್ಟೀಕರಿಸುವಂತಹ ಯಾವುದೇ ದತ್ತಾಂಶಗಳು ಇಲ್ಲ’ ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಾಂವಿಧಾನಿಕ ಪೀಠ ಹೇಳಿದೆ.

‘ತನ್ನ ಗುಣಲಕ್ಷಣವೊಂದರ ಮೇಲೆ ವ್ಯಕ್ತಿ ನಿಯಂತ್ರಣ ಹೊಂದಿರುವುದಿಲ್ಲ. ಅಂತಹ ಗುಣಲಕ್ಷಣದ ಆಧಾರವನ್ನಾಗಿಟ್ಟುಕೊಂಡು ಆತನ ವಿರುದ್ಧ ಸರ್ಕಾರ ತಾರತಮ್ಯ ಮಾಡಬಾರದು’ ಎಂದು ಪೀಠವು ಸ್ಪಷ್ಟಪಡಿಸಿತು.

ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ‘ಈ ವಿಷಯವಾಗಿ ಕೇಂದ್ರ ಸರ್ಕಾರ ತನ್ನ ವಾದವನ್ನು ಸಮರ್ಥಿಸಲು ನೀಡಿರುವ ಪ್ರತಿಯೊಂದು ಪ್ರತಿಪಾದನೆಗೂ ಯಾವುದೇ ಸಮೀಕ್ಷೆ, ದತ್ತಾಂಶದ ಆಧಾರವೇ ಇಲ್ಲ’ ಎಂದರು.

ಅರ್ಜಿದಾರ ಸುಪ್ರಿಯೊ ಎಂಬುವವರ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹ್ಟಗಿ, ‘ಎಲ್‌ಜಿಬಿಟಿಕ್ಯೂಐಎ ಸಮುದಾಯವನ್ನು ಒಳಗೊಳ್ಳುವ ರೀತಿಯಲ್ಲಿ ವಿಶೇಷ ವಿವಾಹ ಕಾಯ್ದೆ,1954ರ ನಿಯಮಗಳನ್ನು ವ್ಯಾಖ್ಯಾನಿಸಬೇಕು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ಬಿಲ್ಕಿಸ್ ಬಾನು ಪ್ರಕರಣ– ಕೈದಿಗಳ ಬಿಡುಗಡೆಯ ಕಾರಣ ತಿಳಿಸಿ’

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಪ್ರಕರಣದ 11 ಅಪರಾಧಿಗಳ ಅವಧಿಪೂರ್ವ ಬಿಡುಗಡೆ ನಿರ್ಧಾರವನ್ನು ಯಾವ ಆಧಾರದ ಮೇಲೆ ತೆಗೆದುಕೊಳ್ಳಲಾಗಿತ್ತು ಎಂಬುದು ಬಹಿರಂಗವಾಗಬೇಕು ಎಂದು ಕಾಂಗ್ರೆಸ್ ಬುಧವಾರ ಆಗ್ರಹಿಸಿದೆ.

ಈ ಪ್ರಕರಣದ ಅಪರಾಧಿಗಳನ್ನು ಅವಧಿಗೂ ಮುನ್ನವೇ ಬಿಡುಗಡೆ ಮಾಡಿದ್ದರ ಕುರಿತು ಗುಜರಾತ್ ಸರ್ಕಾರವನ್ನು ಸುಪ್ರೀಂಕೋರ್ಟ್ ಪ್ರಶ್ನಿಸಿತ್ತು. ಇಂಥ ನಿರ್ಧಾರ ಕೈಗೊಳ್ಳುವುದಕ್ಕೂ ಮುನ್ನ ಅಪರಾಧದ ಗಂಭೀರತೆಯನ್ನು ಪರಿಗಣಿಸಬೇಕಿತ್ತು ಎಂದು ಅಭಿಪ್ರಾಯಪಟ್ಟಿತ್ತು.

ಇದರ ಬೆನ್ನಲ್ಲೇ, ಕಾಂಗ್ರೆಸ್ ಪಕ್ಷ ಗುಜರಾತ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪಕ್ಷದ ವಕ್ತಾರೆ ಸುಪ್ರಿಯಾ ಶ್ರೀನೇತ್, ‘ಇದು ಸಾಮಾನ್ಯ ಅಪರಾಧ ಕೃತ್ಯವಲ್ಲ. ಸಾಮೂಹಿಕ ಅತ್ಯಾಚಾರ ನಡೆಸಿ, ಆಕೆಯ ಮಗುವನ್ನು ಕೊಲ್ಲಲಾಗಿತ್ತು. ಆಕೆಯನ್ನು ಎಂಥ ಸಂಕಷ್ಟಕ್ಕೆ ದೂಡಲಾಗಿತ್ತು ಎಂಬ ಕಲ್ಪನೆ ನಿಮಗಿದೆಯೇ’ ಎಂದು ಪ್ರಶ್ನಿಸಿದರು.

‘ಆದಾಗ್ಯೂ, ಅಪರಾಧಿಗಳ ಅವಧಿಪೂರ್ವ ಬಿಡುಗಡೆಗೆ ಸಂಬಂಧಿಸಿದ ಕಡತಗಳ ಮೇಲೆ ತಮಗೆ ವಿಶೇಷ ಅಧಿಕಾರ ಇದೆ ಎಂಬುದಾಗಿ ಕೇಂದ್ರ ಹಾಗೂ ಗುಜರಾತ್ ಸರ್ಕಾರಗಳು ಹೇಳುತ್ತಿವೆ’ ಎಂದು ಟೀಕಿಸಿದರು.

‘ಅದು ಎಂಥ ವಿಶೇಷ ಅಧಿಕಾರ? ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯವೆ’ ಎಂದು ಪ್ರಶ್ನಿಸಿದ ಅವರು, ‘ಇದು ಮಹಿಳೆಯೊಬ್ಬಳ ಹಕ್ಕಿಗೆ ಸಂಬಂಧಿಸಿದ್ದು’ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

8.92 ಲಕ್ಷ ವಿವಿಪ್ಯಾಟ್ ತಯಾರಿಗೆ ಮುಂದಾದ ಆಯೋಗ

ನವದೆಹಲಿ (ಪಿಟಿಐ): ‘ಮುಂದಿನ ವರ್ಷ ನಡೆಯಲಿರುವ ಲೋಕಸಭೆ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ಕೈಗೊಂಡಿರುವ ಕೇಂದ್ರ ಚುನಾವಣಾ ಆಯೋಗವು ಹೊಸದಾಗಿ 8.92 ಲಕ್ಷ ವಿವಿಪ್ಯಾಟ್‌ಗಳನ್ನು ತಯಾರಿಸಲು ಮುಂದಾಗಿದೆ’ ಎಂದು ಮೂಲಗಳು ಬುಧವಾರ ತಿಳಿಸಿವೆ.

‘ಎಂ–2 ಮಾದರಿಯ ಒಟ್ಟು 2.71 ಲಕ್ಷ ವಿವಿಪ್ಯಾಟ್ ಯಂತ್ರಗಳನ್ನು ಬಳಸದಿರಲು ನಿರ್ಧರಿಸಿರುವ ಆಯೋಗವು ನಿರ್ವಹಣೆ ಕಾರ್ಯಕ್ಕಾಗಿ 3.43 ಲಕ್ಷ ವಿವಿಪ್ಯಾಟ್‌ಗಳನ್ನು ಗುರುತಿಸಿದೆ. 2.43 ವಿವಿಪ್ಯಾಟ್‌ಗಳನ್ನು ಮೇಲ್ದರ್ಜೆಗೇರಿಸಲೂ ಮುಂದಾಗಿದೆ’ ಎಂದು ಹೇಳಿವೆ.

‘ಚುನಾವಣೆಗೂ ಮುನ್ನ ಪ್ರತಿ ರಾಜ್ಯದಲ್ಲೂ ಇವಿಎಂ ಹಾಗೂ ವಿವಿಪ್ಯಾಟ್‌ಗಳನ್ನು ಪರೀಕ್ಷಿಸುವ ಪ್ರಕ್ರಿಯೆಯನ್ನೂ ಆಯೋಗ ಕೈಗೊಳ್ಳಲಿದೆ’ ಎಂದು ತಿಳಿಸಿವೆ.

ಸಾಯಿಬಾಬಾ ಖುಲಾಸೆ ತೀರ್ಪು ‘ಸುಪ್ರೀಂ’ನಲ್ಲಿ ವಜಾ

ನವದೆಹಲಿ: ನಕ್ಸಲ್ ಸಂಪರ್ಕ ಪ್ರಕರಣದಲ್ಲಿ ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಅವರನ್ನು ಖುಲಾಸೆಗೊಳಿಸಿದ್ದ ಬಾಂಬೆ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ಹೈಕೋರ್ಟ್ ತೀರ್ಪು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಆಲಿಸಿದ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು, ಶಿಕ್ಷೆ ವಿಧಿಸುವುದು ಸೇರಿ ಎಲ್ಲ ವಾದಗಳನ್ನು ಮುಕ್ತವಾಗಿರಿಸಿದ್ದು, ಪ್ರಕರಣವನ್ನು ಹೊಸದಾಗಿ ವಿಚಾರಣೆಗೆ ಪರಿಗಣಿಸುವಂತೆ ಮಹಾರಾಷ್ಟ್ರ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಹೈಕೋರ್ಟ್‌ಗೆ ವಾಪಸ್ ಕಳುಹಿಸಿದೆ.

ನರೋದಾ ಗಾಂವ್ ಹತ್ಯಾಕಾಂಡ ಪ್ರಕರಣ: ತೀರ್ಪು ಇಂದು?

ಅಹಮದಾಬಾದ್ (ಪಿಟಿಐ): ಹನ್ನೊಂದು ಮಂದಿ ಮುಸ್ಲಿಮರ ಸಾವಿಗೆ ಕಾರಣವಾದ 2002ರ ನರೋದಾ ಗಾಂವ್ ಹತ್ಯಾಕಾಂಡ ಪ್ರಕರಣದ ತೀರ್ಪನ್ನು ಇಲ್ಲಿಯ ವಿಶೇಷ ನ್ಯಾಯಾಲಯವು ಗುರುವಾರ ಪ್ರಕಟಿಸುವ ಸಾಧ್ಯತೆ ಇದೆ.

ಗುಜರಾತ್‌ನ ಮಾಜಿ ಸಚಿವೆ ಮಾಯಾ ಕೊಡ್ನಾನಿ, ಬಜರಂಗ ದಳದ ಮುಖಂಡ ಬಾಬು ಬಜರಂಗಿ ಅವರು ಪ್ರಮುಖ ಆರೋಪಿಗಳು

ಅಣ್ಣಾಮಲೈಗೆ ನೋಟಿಸ್ ನೀಡಿದ ಉದಯನಿಧಿ

ಚೆನ್ನೈ: ತಮಿಳುನಾಡು ಕ್ರೀಡಾ ಸಚಿವ ಮತ್ತು ಡಿಎಂಕೆ ಯುವ ಘಟಕದ ಕಾರ್ಯದರ್ಶಿ ಉದಯನಿಧಿ ಸ್ಟಾಲಿನ್ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಅವರಿಗೆ ಬುಧವಾರ ಲೀಗಲ್ ನೋಟಿಸ್ ಕಳುಹಿಸಿದ್ದಾರೆ.

‘ನಮ್ಮ ವಿರುದ್ಧ ಮಾಡಿರುವ ಮಾನಹಾನಿಕರ ಆರೋಪಗಳಿಗಳಿಗೆ ಸಂಬಂಧಿಸಿದಂತೆ 48 ಗಂಟೆಗಳಲ್ಲಿ ಸಾರ್ವಜನಿಕವಾಗಿ ಬೇಷರತ್ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ನಿಮ್ಮ ವಿರುದ್ಧ ಸೂಕ್ತ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು’ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಡಿಎಂಕೆ ಫೈಲ್ಸ್' ಬಿಡುಗಡೆಯ ಸಂದರ್ಭದಲ್ಲಿ ಅಣ್ಣಾಮಲೈ ಅವರು ಉದಯನಿಧಿ ವಿರುದ್ಧ ಮಾನಹಾನಿಕರ ಆರೋಪಗಳನ್ನು ಮಾಡಿದ್ದಾರೆ ಎಂದು ಡಿಎಂಕೆ ಸಂಸದ ಮತ್ತು ಹಿರಿಯ ವಕೀಲ ಪಿ. ವಿಲ್ಸನ್ ಕಳುಹಿಸಿರುವ ಲೀಗಲ್ ನೋಟಿಸ್‌ನಲ್ಲಿ ಆರೋಪಿಸಲಾಗಿದೆ.

ಕೋವಿಡ್: 38 ಮಂದಿ ಸಾವು

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸದಾಗಿ 10,542 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 63,562ಕ್ಕೆ ಏರಿಕೆಯಾಗಿದೆ. 38 ಮಂದಿ ಮೃತಪಟ್ಟಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಅತೀಕ್–ಅಶ್ರಫ್ ಹತ್ಯೆ ಪ್ರಕರಣ • ಕರ್ತವ್ಯ ಲೋಪದ ಆರೋಪ

ಐವರು ಪೊಲೀಸ್ ಸಿಬ್ಬಂದಿ ಅಮಾನತು

ಪ್ರಯಾಗ್‌ರಾಜ್ (ಉತ್ತರ ಪ್ರದೇಶ) (ಪಿಟಿಐ): ‘ಪಾತಕಿ, ಮಾಜಿ ಸಂಸದ ಅತೀಕ್ ಅಹಮದ್ ಹಾಗೂ ಆತನ ತಮ್ಮ ಅಶ್ರಫ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಆರೋಪದಡಿ ಐವರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ’ ಎಂದು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಬುಧವಾರ ಹೇಳಿದ್ದಾರೆ.

ಶಹಾಗಂಜ್ ಪೊಲೀಸ್ ಠಾಣೆಯ ಉಸ್ತುವಾರಿ ಅಶ್ವನಿಕುಮಾರ್ ಸಿಂಗ್, ಒಬ್ಬರು ಸಬ್ ಇನ್‌ಸ್ಪೆಕ್ಟರ್ ಹಾಗೂ ಮೂವರು ಕಾನ್‌ಸ್ಟೆಬಲ್‌ಗಳು ಅಮಾನತುಗೊಂಡಿದ್ದಾರೆ.

‘ಐವರು ಸಿಬ್ಬಂದಿ ಕರ್ತವ್ಯ ಲೋಪ ಎಸಗಿರುವುದು ಎಸ್‌ಐಟಿ ತನಿಖೆಯಿಂದ ಗೊತ್ತಾಗಿದೆ. ಹೀಗಾಗಿ ಇವರನ್ನು ಅಮಾನತು ಮಾಡಿದ್ದೇವೆ’ ಎಂದು ಉನ್ನತ ಅಧಿಕಾರಿ ತಿಳಿಸಿದ್ದಾರೆ.

ಹಂತಕರು ಪೊಲೀಸರ ವಶಕ್ಕೆ: ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಅತೀಕ್ ಹಾಗೂ ಅಶ್ರಫ್ ಹತ್ಯೆ ಪ್ರಕರಣದ ಮೂವರು ಆರೋಪಿಗಳನ್ನು ನಾಲ್ಕು ದಿನಗಳವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿದೆ.

ಆರೋಪಿಗಳಾದ ಲವ್ಲೇಶ್ ತಿವಾರಿ, ಮೋಹಿತ್ ಹಾಗೂ ಅರುಣ್‌ಕುಮಾರ್ ಮೌರ್ಯ ಅವರನ್ನು ಭಾರಿ ಬಿಗಿ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಕರೆದೊಯ್ದು ನ್ಯಾಯಾಧೀಶರ ಎದುರು ಹಾಜರು ಪಡಿಸಿದ ಪೊಲೀಸರು, ಮೂವರನ್ನೂ 7 ದಿನಗಳ ಕಾಲ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದ್ದರು. ‘ನ್ಯಾಯಾಲಯವು ಬುಧವಾರ ಮಧ್ಯಾಹ್ನ 2 ಗಂಟೆಯಿಂದ ಇದೇ 23ರ ಸಂಜೆ 5 ಗಂಟೆವರೆಗೂ ಆರೋಪಿಗಳನ್ನು ಪೊಲೀಸರ ಸುಪರ್ದಿಗೆ ಒಪ್ಪಿಸಿದೆ’ ಎಂದು ಸರ್ಕಾರಿ ವಕೀಲ ಗುಲಾಬ್ ಚಂದ್ರ ಅಗ್ರಹಾರಿ ಹೇಳಿದ್ದಾರೆ.

‘ಮುಖ್ಯಮಂತ್ರಿ ಯೋಗಿ ಅವರನ್ನೂ ಆರೋಪಿಯನ್ನಾಗಿಸಿ’

ಬರೇಲಿ (ಉತ್ತರಪ್ರದೇಶ) (ಪಿಟಿಐ): ‘ಅತೀಕ್ ಮತ್ತು ಅಶ್ರಫ್ ಹತ್ಯೆ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ತನಿಖೆಗೆ ಒಳಪಡಿಸಬೇಕು. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನೂ ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಬೇಕು’ ಎಂದು ಬರೇಲ್ವಿಯ ಮೌಲ್ವಿ ಹಾಗೂ ಇತ್ತಿಹಾದ್–ಇ–ಮಿಲ್ಲತ್ ಕೌನ್ಸಿಲ್‌ನ ಅಧ್ಯಕ್ಷ ಮೌಲಾನಾ ತೌಕಿರ್ ರಾಜಾ ಖಾನ್ ಒತ್ತಾಯಿಸಿದ್ದಾರೆ.

ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.

‘ಸಹೋದರರ ಹತ್ಯೆ ಖಂಡಿಸಿ ಪ್ರತಿಭಟನೆ ಮಾಡುತ್ತೇನೆ ಎಂಬ ಕಾರಣಕ್ಕೆ ನನ್ನನ್ನು ಗೃಹ ಬಂಧನದಲ್ಲಿ ಇರಿಸಲಾಗಿತ್ತು. ಪೊಲೀಸರು ಅತೀಕ್ ಹಾಗೂ ಅಶ್ರಫ್ ಅವರನ್ನು ರಕ್ಷಿಸುವಲ್ಲಿ ವಿಫಲರಾಗಿದ್ದಾರೆ’ ಎಂದು ಆರೋಪಿಸಿದ್ದಾರೆ.



ಹುತಾತ್ಮರಿಗೆ ಗೌರವ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರಿಗೆ ಗೌರವ ಸಲ್ಲಿಸುವ ಸಲುವಾಗಿ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ವತಿಯಿಂದ ತಿರುವನಂತಪುರದಲ್ಲಿ ಬುಧವಾರ ಮೇಣದ ಬತ್ತಿ ಹಿಡಿದು ಮೆರವಣಿಗೆ ನಡೆಸಲಾಯಿತು. ಕೆಪಿಸಿಸಿ ಅಧ್ಯಕ್ಷ ಕೆ.ಸುಧಾಕರನ್, ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಹಾಗೂ ಇತರ ನಾಯಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ವಿರುದ್ಧ ಲೈಂಗಿಕ ಕಿರುಕುಳ ಆರೋಪ

ಪ್ರಜಾವಾಣಿ ವಾರ್ತೆ

ಗುವಾಹಟಿ: ಭಾರತೀಯ ಯುವ ಕಾಂಗ್ರೆಸ್‌ನ (ಐವೈಸಿ) ರಾಷ್ಟ್ರೀಯ ಅಧ್ಯಕ್ಷ, ಶಿವಮೊಗ್ಗದವರಾದ ಶ್ರೀನಿವಾಸ್ ಬಿ.ವಿ. ಅವರ ವಿರುದ್ಧ ಅಸ್ಸಾಂ ಯುವ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಅಂಗ್‌ಕಿತಾ ದತ್ತಾ ಅವರು ಲೈಂಗಿಕ ಕಿರುಕುಳ ಆರೋಪ ಮಾಡಿದ್ದಾರೆ. ಜೊತೆಗೆ ತಮ್ಮ ವಿರುದ್ಧ ಲಿಂಗಾಧಾರಿತ ತಾರತಮ್ಯವನ್ನೂ ಶ್ರೀನಿವಾಸ್ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್‌ಗಳನ್ನು ಮಾಡಿರುವ ಅವರು, ಕಳೆದ 6 ತಿಂಗಳಿನಿಂದ ಶ್ರೀನಿವಾಸ್ ತಮಗೆ ಮಾನಸಿಕ ಹಿಂಸೆ ನೀಡುತ್ತಿರುವುದಾಗಿ ಮತ್ತು ಭಾರತ್ ಜೋಡೊ ಯಾತ್ರೆ ವೇಳೆ ಈ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ದೂರು ನೀಡಿದ್ದಾಗಿ ಹೇಳಿದ್ದಾರೆ. ರಾಹುಲ್ ಗಾಂಧಿ ಸೇರಿ ಹೈಕಮಾಂಡ್‌ನ ಯಾರೊಬ್ಬರೂ ತಮ್ಮ ದೂರನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆರೋಪಿಸಿದ್ದಾರೆ.

‘ಸ್ತ್ರೀವಿರೋಧಿ ಮತ್ತು ಪುರುಷ ಅಹಂಕಾರ ಹೊಂದಿರುವ ಐವೈಸಿಯ ನಾಯಕನೊಬ್ಬ ಪ್ರತಿಬಾರಿ ಮಹಿಳೆಯೊಬ್ಬಳಿಗೆ ಕಿರುಕುಳ ನೀಡಲು ಮತ್ತು ಅವಮಾನಿಸಲು ಹೇಗೆ ಸಾಧ್ಯ’ ಎಂದು ಅವರು ಮತ್ತೊಂದು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಅಂಗ್‌ಕಿತಾಗೆ ನ್ಯಾಯಾಂಗ ನೋಟಿಸ್: ಅಂಗ್‌ಕಿತಾ ಅವರ ಆರೋಪವನ್ನು ಐವೈಸಿ ತಳ್ಳಿಹಾಕಿದೆ. ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲಿ ಶ್ರೀನಿವಾಸ್ ಅವರಿಗೆ ಕ್ಷಮೆ ಕೋರಬೇಕು ಎಂದು ಆಗ್ರಹಿಸಿ ಅವರಿಗೆ ನ್ಯಾಯಾಂಗ ನೋಟಿಸ್ ನೀಡಿದೆ. ಕ್ಷಮೆ ಯಾಚಿಸದಿದ್ದರೆ ಶ್ರೀನಿವಾಸ್ ಪರವಾಗಿ ಮಾನನಷ್ಟ ಮೊಕದ್ದಮೆ ಹೂಡುವುದಾಗಿಯೂ ಹೇಳಿದೆ. ಅಂಗ್‌ಕಿತಾ ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲಿಲ್ಲ. ಬದಲಾಗಿ ಶ್ರೀನಿವಾಸ್ ಅವರ ವಿರುದ್ಧ ಆರೋಪ ಮಾಡಿದ್ದಾರೆ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.

ಸಿನಿಮಾಟೊಗ್ರಾಫ್ ಮಸೂದೆಗೆ ಸಂಪುಟ ಅಸ್ತು

ನವದೆಹಲಿ (ಪಿಟಿಐ): ‘ಕೇಂದ್ರ ಸಚಿವ ಸಂಪುಟವು ಸಿನಿಮಾಟೊಗ್ರಾಫ್(ತಿದ್ದುಪಡಿ) ಮಸೂದೆ–2023ಕ್ಕೆ ಬುಧವಾರ ಅನುಮೋದನೆ ನೀಡಿದೆ. ಚಲನಚಿತ್ರಗಳ ಪೈರಸಿ ಹಾಗೂ ಆ ಚಿತ್ರಗಳ ತುಣುಕುಗಳನ್ನು ಅಂತರ್ಜಾಲದಲ್ಲಿ ಪ್ರಸಾರ ಮಾಡುವುದಕ್ಕೆ ಕಡಿವಾಣ ಹಾಕಲು ಅಗತ್ಯವಿರುವ ನಿಬಂಧನೆ ಗಳನ್ನು ಈ ಮಸೂದೆ ಒಳಗೊಂಡಿದೆ’ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಮಾಧ್ಯಮದವರೊಂದಿಗೆ ಬುಧವಾರ ಮಾತನಾಡಿದ ಅವರು, ‘ಮುಂಬರುವ ಸಂಸತ್ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗುತ್ತದೆ’ ಎಂದಿದ್ದಾರೆ.

‘ಸಿನಿಮಾಗಳಿಗೆ ‘ಯು’, ‘ಎ’ ಹಾಗೂ ‘ಯುಎ’ ಪ್ರಮಾಣ ಪತ್ರಗಳನ್ನು ನೀಡುವ ಪದ್ಧತಿ ಸದ್ಯ ಚಾಲ್ತಿಯಲ್ಲಿದೆ. ಇದರ ಬದಲು ವಯೋಮಾನದ ಆಧಾರದಲ್ಲಿ ಸಿನಿಮಾಗಳನ್ನು ವರ್ಗೀಕರಿಸುವ ಪದ್ಧತಿಯನ್ನು ಈ ಮಸೂದೆಯಲ್ಲಿ ಸೇರ್ಪಡೆ ಮಾಡಲಾಗಿದೆ. ಸಿನಿಮಾ ಉದ್ಯಮದ ಅಗತ್ಯತೆಗಳಿಗೆ ಅನುಗುಣವಾಗಿ ಈ ಮಸೂದೆ ರೂಪಿಸಲಾಗಿದೆ. ಇದಕ್ಕೂ ಮುನ್ನ ಎಲ್ಲಾ ವರ್ಗದವರ ಅಭಿಪ್ರಾಯಗಳನ್ನೂ ಆಲಿಸಲಾಗಿದೆ’ ಎಂದು ಹೇಳಿದ್ದಾರೆ. ‘ಈ ಮಸೂದೆಯನ್ನು ಎಲ್ಲರೂ ಸ್ವಾಗತಿಸಲಿದ್ದಾರೆ. ಇದು ಯಾವ ಬಗೆಯ ವಿವಾದಕ್ಕೂ ದಾರಿ ಮಾಡಿಕೊಡುವುದಿಲ್ಲ ಎಂಬ ನಂಬಿಕೆ ಇದೆ’ ಎಂದು ತಿಳಿಸಿದ್ದಾರೆ.

ಲಾಡ್, ಆಯನೂರ್‌ಗೆ ಜೆಡಿಎಸ್ ಟಿಕೆಟ್

ಒಂದನೇ ಪುಟದಿಂದ..

ಬೀದರ್ ಕ್ಷೇತ್ರದಲ್ಲಿ ರಮೇಶ್ ಪಾಟೀಲ್ ಸೋಲಾಪುರ ಬದಲಿಗೆ ಸೂರ್ಯಕಾಂತ ನಾಗಮಾರಪಲ್ಲಿ ಅವರಿಗೆ ಟಿಕೆಟ್ ಘೋಷಿಸಲಾಗಿದೆ. ಚಿತ್ರದುರ್ಗದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ರಘು ಆಚಾರ್ ಮತ್ತು ಅರಸೀಕೆರೆಯಲ್ಲಿ ಬಿಜೆಪಿ ತೊರೆದು ಬಂದಿರುವ ಎನ್.ಆರ್. ಸಂತೋಷ್ ಅವರನ್ನು ಕಣಕ್ಕಿಳಿಸಲಾಗಿದೆ.

ಏಳು ಕ್ಷೇತ್ರಗಳಲ್ಲಿ ಬೆಂಬಲ: ನಂಜನಗೂಡು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಆರ್. ಧ್ರುವನಾರಾಯಣ ಅವರ ಮಗ ದರ್ಶನ್ ಧ್ರುವನಾರಾಯಣ ಅವರಿಗೆ ಜೆಡಿಎಸ್ ಬೆಂಬಲ ಘೋಷಿಸಿದೆ.

ಕಲಬುರಗಿ ಗ್ರಾಮಾಂತರ, ಬಾಗೇಪಲ್ಲಿ, ಕೆ.ಆರ್.ಪುರ ಕ್ಷೇತ್ರಗಳಲ್ಲಿ ಸಿಪಿಎಂ ಅಭ್ಯರ್ಥಿಗಳಿಗೆ ಹಾಗೂ ಸಿ.ವಿ. ರಾಮನ್ ನಗರ, ವಿಜಯನಗರ ಮತ್ತು ಮಹದೇವಪುರ ಕ್ಷೇತ್ರಗಳಲ್ಲಿ ಆರ್‌ಪಿಐ ಅಭ್ಯರ್ಥಿಗಳಿಗೆ ಬೆಂಬಲ ಪ್ರಕಟಿಸಿದೆ.

ಗಡಿ: ಚೀನಿ ಭಾಷೆ ಕಲಿಯಲಿರುವ ದೇಶದ ಯೋಧರು

ಪ್ರಜಾವಾಣಿ ವಾರ್ತೆ

ಗುವಾಹಟಿ: ಚೀನಾಕ್ಕೆ ಹೊಂದಿಕೊಂಡಿರುವ ಗಡಿಯಲ್ಲಿ ನಿಯೋಜನೆಗೊಂಡಿರುವ ಸೇನೆಯ ಅಧಿಕಾರಿಗಳು ಹಾಗೂ ಸೈನಿಕರು ಚೀನಿ ಭಾಷೆಯನ್ನು ಕಲಿಯಲಿದ್ದಾರೆ.

ಚೀನಾ ಯೋಧರೊಂದಿಗೆ ಸಮರ್ಪಕ ಸಂವಹನ ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸೇನೆಯು ಬುಧವಾರ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಸಂಬಂಧ, ತೇಜ್‌ಪುರ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎಸ್.ಎನ್.ಸಿಂಗ್ ಸಮ್ಮುಖದಲ್ಲಿ ತೇಜ್‌ಪುರದಲ್ಲಿರುವ ಸೇನೆಯ ತುಕಡಿಗಳ ಮುಖ್ಯಸ್ಥರು ಹಾಗೂ ವಿಶ್ವವಿದ್ಯಾಲಯದ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

‘ಚೀನಿ ಭಾಷೆ ಕಲಿಸುವ ಈ ಕೋರ್ಸ್ 16 ವಾರಗಳ ಅವಧಿಯದ್ದು. ಚೀನಾ ಯೋಧರೊಂದಿಗಿನ ಸಂವಹನ ಉತ್ತಮಗೊಳಿಸಲು ಹಾಗೂ ಕಮಾಂಡರ್‌ಗಳ ಮಟ್ಟದ ಸಭೆಗಳು, ಜಂಟಿ ತಾಲೀಮುಗಳು ನಡೆದ ಸಂದರ್ಭದಲ್ಲಿ ಇದು ನೆರವಾಗಲಿದೆ’ ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿಲ್ಲು–ಬಾಣ ಹಿಡಿದ ರಾಮನ ವಿಗ್ರಹ ಪ್ರತಿಷ್ಠಾಪನೆ

ಅಯೋಧ್ಯೆ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರದಲ್ಲಿ ಬಿಲ್ಲು–ಬಾಣ ಹಿಡಿದು ನಿಂತಿರುವ ರಾಮನ ಐದು ಅಡಿ ಎತ್ತರದ ವಿಗ್ರಹ ಪ್ರತಿಷ್ಠಾಪಿಸಲು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಬುಧವಾರ ತೀರ್ಮಾನಿಸಿದೆ.

ಮೈಸೂರಿನ ಪ್ರಸಿದ್ಧ ಶಿಲ್ಪಿ ಅರುಣ್ ಯೋಗಿರಾಜ್ ಅವರು ರಾಮನು ಐದು ವರ್ಷದ ಬಾಲಕನಾಗಿದ್ದಾಗ ಹೊಂದಿದ್ದ ರೂಪದ ಮೂರ್ತಿಯನ್ನು ಕೆತ್ತಲಿದ್ದಾರೆ. ಕರ್ನಾಟಕದಿಂದ ತರಲಾಗಿರುವ ಕೃಷ್ಣ ಶಿಲೆಯಲ್ಲಿ ಇದನ್ನು ರೂಪಿಸಲಾಗುತ್ತದೆ.

‘ಕರ್ನಾಟಕದ ಕಾರ್ಕಳ ಮತ್ತು ಹೆಗ್ಗಡೆ ದೇವನ ಕೋಟೆಯಿಂದ ಕೃಷ್ಣ ಶಿಲೆಗಳನ್ನು ತರಲಾಗಿದೆ. ಇವುಗಳಲ್ಲಿ ವಿಗ್ರಹ ಕೆತ್ತಲು ಯಾವ ಶಿಲೆ ಬಳಸಬೇಕು ಎಂಬುದನ್ನು ಶಿಲ್ಪಿಯೇ ನಿರ್ಧರಿಸಲಿದ್ದಾರೆ’ ಎಂದು ಟ್ರಸ್ಟ್‌ನ ಸದಸ್ಯ ಸ್ವಾಮಿ ತೀರ್ಥ ಪ್ರಸನ್ನಾಚಾರ್ಯ ಅವರು ತಿಳಿಸಿದ್ದಾರೆ.

‘ಸಂತರು, ಭೂ ವಿಜ್ಞಾನಿಗಳು, ಶಿಲ್ಪಿಗಳು, ಹಿಂದೂ ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿರುವ ಪಂಡಿತರು ಹಾಗೂ ಟ್ರಸ್ಟ್‌ನ ಪದಾಧಿಕಾರಿಗಳ ಅಭಿಪ್ರಾಯ ಆಲಿಸಿದ ಬಳಿಕವೇ ವಿಗ್ರಹ ಕೆತ್ತಲು ಕೃಷ್ಣ ಶಿಲೆ ಅಂತಿಮಗೊಳಿಸಲಾಗಿದೆ. ಮುಂದಿನ ವರ್ಷದ ಮಕರ ಸಂಕ್ರಾಂತಿ ವೇಳೆಗೆ ವಿಗ್ರಹ ಪ್ರತಿಷ್ಠಾಪಿಸಲಾಗುತ್ತದೆ. ಈ ಮೂರ್ತಿ ಹೇಗಿರಬಹುದು ಎಂಬ ಕುತೂಹಲ ಭಕ್ತರಲ್ಲಿ ಮನೆಮಾಡಿದೆ’ ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರು ಮಾಹಿತಿ ನೀಡಿದ್ದಾರೆ.

15 ದಿನದೊಳಗೆ 2 ರಾಜಕೀಯ ‘ಸ್ಫೋಟ’: ಸುಪ್ರಿಯಾ ಸುಳೆ ಸುಳಿವು

ಪುಣೆ (ಪಿಟಿಐ): ‘ಮುಂದಿನ 15 ದಿನಗಳಲ್ಲಿ ಮಹಾರಾಷ್ಟ್ರ ಹಾಗೂ ದೆಹಲಿಯ ರಾಜಕಾರಣದಲ್ಲಿ ಎರಡು ರಾಜಕೀಯ ಸ್ಫೋಟಗಳು (ಮಹತ್ವದ ಬೆಳವಣಿಗೆ) ನಡೆಯಲಿವೆ’ ಎಂದು ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಮಂಗಳವಾರ ಸುಳಿವು ನೀಡಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಅವರು ತಮ್ಮ ಬೆಂಬಲಿಗ ಶಾಸಕರೊಂದಿಗೆ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂಬ ಮಾತುಗಳು ಕೇಳಿಬಂದಿದ್ದವು. ಈ ಸುದ್ದಿಯನ್ನು ಅಲ್ಲಗಳೆದಿದ್ದ ಅಜಿತ್ ಅವರು ತಮ್ಮ ಜೀವ ಇರುವವರೆಗೂ ಎನ್‌ಸಿಪಿ ಪರ ಕೆಲಸ ಮಾಡುವುದಾಗಿ ಸ್ಪಷ್ಟಪಡಿಸಿದ್ದರು.

ಅಜಿತ್ ಪವಾರ್ ಅವರ ರಾಜಕೀಯ ನಡೆ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ‘ಎಲ್ಲಾ ಬೆಳವಣಿಗೆಗಳಿಗೂ ನನ್ನ ಅಣ್ಣನನ್ನೇ (ಅಜಿತ್) ಹೊಣೆಗಾರನನ್ನಾಗಿ ಮಾಡಲಾಗುತ್ತಿದೆ. ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ನಾಣ್ಯದ ಕುರಿತೇ ಎಲ್ಲರೂ ಮಾತನಾಡುತ್ತಾರೆ’ ಎಂದು ಸುಪ್ರಿಯಾ ಉತ್ತರಿಸಿದ್ದಾರೆ.

ಕೆಲ ಶಾಸಕರು ಸಂಪರ್ಕಕ್ಕೆ ಸಿಗುತ್ತಿಲ್ಲವಲ್ಲ ಎಂಬ ಪ್ರಶ್ನೆಗೆ, ‘ಅವರು ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದ ಮಾತ್ರಕ್ಕೆ ನಮ್ಮ ಸಂಪರ್ಕದಲ್ಲಿ ಇಲ್ಲ ಎಂದರ್ಥವಲ್ಲ. ಶರದ್ ಪವಾರ್, ಅಜಿತ್ ಪವಾರ್ ಹಾಗೂ ಜಯಂತ್ ಪಾಟೀಲ್ ಅವರು ಎಲ್ಲರೊಂದಿಗೂ ಸಂಪರ್ಕದಲ್ಲಿದ್ದಾರೆ. ನಾನೂ ಎಲ್ಲಾ ಶಾಸಕರೊಂದಿಗೆ ಮಾತನಾಡುತ್ತೇನೆ’ ಎಂದಿದ್ದಾರೆ.

‘ಎನ್‌ಸಿಪಿ ಸರ್ಕಾರದ ಭಾಗವಾದರೆ, ನಾವು ಮೈತ್ರಿ ತೊರೆಯುತ್ತೇವೆ’

ಮುಂಬೈ: ‘ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಬಣವು ಬಿಜೆಪಿ– ಶಿವಸೇನಾ ನೇತೃತ್ವದ ಮೈತ್ರಿ ಸರ್ಕಾರದ ಭಾಗವಾಗುವುದಾದರೆ ನಾವು ಸರ್ಕಾರದಿಂದ ಹೊರ ನಡೆಯುತ್ತೇವೆ’ ಎಂದು ಬಿಜೆಪಿಗೆ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಸಂದೇಶ ರವಾನಿಸಿದೆ.

ಬಿಜೆಪಿ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ನೇತೃತ್ವದ ಬಣದ ನಡುವೆ ಮಾತುಕತೆ ನಡೆಯುತ್ತದೆ ಎಂಬ ಊಹಾಪೋಹದ ಬೆನ್ನಲ್ಲೇ ಶಿಂದೆ ಆಪ್ತ, ಶಾಸಕ ಸಂಜಯ್ ಶಿರ್ಸಾಟ್ ಹೀಗೆ ಹೇಳಿದ್ದಾರೆ.

‘ಬಿಜೆಪಿಯ ಜೊತೆ ಅಜಿತ್ ಪವಾರ್ ಮಾತುಕತೆ ನಡೆಸಿರುವ ಕುರಿತು ನಮಗೆ ವಿರೋಧವಿಲ್ಲ. ಆದರೆ ಅವರ ಬಣ ಸರ್ಕಾರದ ಭಾಗವಾದರೆ ನಾವು ಸರ್ಕಾರದಿಂದ ಹೊರಹೋಗುತ್ತೇವೆ’ ಎಂದು ಸಂಜಯ್ ಹೇಳಿದ್ದಾರೆ.

‘ಎನ್‌ಸಿಪಿ, ಕಾಂಗ್ರೆಸ್ ಕಾರಣಕ್ಕಾಗಿಯೇ ನಾವು ಮಹಾ ವಿಕಾಸ ಅಘಾಡಿ ಮೈತ್ರಿಕೂಟದಿಂದ ಹೊರಬಂದು ಬಿಜೆಪಿ ಜೊತೆ ಸರ್ಕಾರ ರಚಿಸಿದೆವು. ಈ ಸರ್ಕಾರದೊಳಗೆ ಎನ್‌ಸಿಪಿಯನ್ನೂ ತೆಗೆದುಕೊಂಡರೆ ಅದನ್ನು ಮಹಾರಾಷ್ಟ್ರ ಎಂದಿಗೂ ಒಪ್ಪುವುದಿಲ್ಲ’ ಎಂದು ಅವರು ಹೇಳಿದರು.

ಜಾತಿ ಗಣತಿ: ಕಾಂಗ್ರೆಸ್ ಸರ್ಕಾರದ ನಿಲುವನ್ನೇ ಅಸ್ತ್ರವಾಗಿಸಿದ ಬಿಜೆಪಿ

ನವದೆಹಲಿ (ಪಿಟಿಐ): ಜಾತಿ ಗಣತಿ ನಡೆಸಬೇಕು ಎಂದು ಆಗ್ರಹಿಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ, ಇದೇ ವಿಷಯವಾಗಿ ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರ ತಳೆದಿದ್ದ ನಿಲುವನ್ನು ನೆನಪಿಸುವ ಮೂಲಕ ಬಿಜೆಪಿ ಬುಧವಾರ ತಿರುಗೇಟು ನೀಡಿದೆ.

ಜಾತಿ ಗಣತಿ ನಡೆಸುವಂತೆ ಆಗ್ರಹಿಸಿರುವುದು ರಾಹುಲ್ ಗಾಂಧಿ ಅವರ ಬೂಟಾಟಿಕೆಯನ್ನು ಬಹಿರಂಗಪಡಿಸಿದೆ ಎಂದೂ ಬಿಜೆಪಿ ಟೀಕಿಸಿದೆ.

‘ಜಾತಿ ಗಣತಿ ಕುರಿತು ಆಗಿನ ಕೇಂದ್ರ ಸಚಿವ ಹಾಗೂ ಕಾಂಗ್ರೆಸ್ ಮುಖಂಡ ಅಜಯ್ ಮಾಕನ್ ಅವರು 2010ರಲ್ಲಿ ರಾಜ್ಯಸಭಾ ಸಂಸದ ಅಲಿ ಅನ್ವರ್ ಅವರಿಗೆ ಪತ್ರ ಬರೆದಿದ್ದರು. ಜಾತಿ ಆಧಾರದ ಮೇಲೆ ಸಮುದಾಯದಲ್ಲಿ ಭೇದ–ಭಾವ ಹುಟ್ಟುಹಾಕುವುದನ್ನು ಉತ್ತೇಜಿಸಬಾರದು ಎಂಬ ನಿರ್ಧಾರ ಕೈಗೊಳ್ಳಲಾಗಿದೆ. ಭಾರತದ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವಂತೆ ಜಾತ್ಯತೀತ ರಾಷ್ಟ್ರ ಆಶಯವನ್ನು ಗಮನದಲ್ಲಿಟ್ಟುಕೊಂಡು ಇಂಥ ಕ್ರಮ ಕೈಗೊಳ್ಳಲಾಗಿದೆ ಎಂಬುದಾಗಿ ಪತ್ರದಲ್ಲಿ ಬರೆಯಲಾಗಿತ್ತು’ ಎಂದು ಬಿಜೆಪಿ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಜಾತಿ ಗಣತಿ ಮಾಡಲಾಗಿತ್ತು. 2018ರಲ್ಲಿ ನಡೆದ ವಿಧಾನಸಭೆ ಚುನಾವಣೆಗೂ ಮುನ್ನ ಅವರು ಗಣತಿಯ ವರದಿ ಬಹಿರಂಗಪಡಿಸಿರಲಿಲ್ಲ ಎಂದೂ ಬಿಜೆಪಿ ಮುಖಂಡರು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

‘ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕು ಎಂದು ಮಂಡಲ ಆಯೋಗವು ಶಿಫಾರಸು ಮಾಡಿತ್ತು. ಆಯೋಗದ ಈ ವರದಿಯ ಅನುಷ್ಠಾನಕ್ಕೆ ಸಂಬಂಧಿಸಿ 1990ರಲ್ಲಿ ಸಂಸತ್‌ನಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ ಅಂದಿನ ಪ್ರಧಾನಿ ವಿ.ಪಿ. ಸಿಂಗ್ ನೇತೃತ್ವ ಸರ್ಕಾರದ ವಿರುದ್ಧ ರಾಜೀವ್ ಗಾಂಧಿ ವಾಗ್ದಾಳಿ ನಡೆಸಿದ್ದರು’.

‘ಇದು ದೇಶವನ್ನು ಜಾತಿಗಳ ಆಧಾರದ ಮೇಲೆ ಒಡೆಯುವ ಪ್ರಯತ್ನವಾಗಿದೆ ಎಂದು ಅಭಿಪ್ರಾಯಪಟ್ಟಿದ್ದ ರಾಜೀವ್ ಗಾಂಧಿ ಅವರು, ಬ್ರಿಟಿಷರು ಮಾಡಿದ್ದಕ್ಕಿಂತ ಈ ನಡೆ ಭಿನ್ನವೇನೂ ಇಲ್ಲ ಎಂದು ಆರೋಪಿಸಿದ್ದರು’ ಎಂಬುದಾಗಿ ಬಿಜೆಪಿ ಹೇಳಿದೆ ಎಂದು ಮೂಲಗಳು ತಿಳಿಸಿವೆ.

‘2010ರಲ್ಲಿ, ಜಾತಿ ಗಣತಿ ನಡೆಸುವುದಕ್ಕೆ ಕಾಂಗ್ರೆಸ್‌ನ ಹಲವು ಹಿರಿಯ ನಾಯಕರು ವಿರೋಧ ವ್ಯಕ್ತಪಡಿಸಿದ್ದರು. ಹೀಗಾಗಿ, ಪ್ರಣವ್ ಮುಖರ್ಜಿ ನೇತೃತ್ವದ ಸಚಿವರ ಗುಂಪು ಈ ವಿಷಯವಾಗಿ ಆಗ ಯಾವುದೇ ನಿರ್ಣಯ ಕೈಗೊಂಡಿರಲಿಲ್ಲ’ ಎನ್ನುವ ಮೂಲಕ ಬಿಜೆಪಿ ಮುಖಂಡರು ಕಾಂಗ್ರೆಸ್‌ಗೆ ತಿರುಗೇಟು ನೀಡಿದ್ದಾರೆ ಎಂದು ಇವೇ ಮೂಲಗಳು ಹೇಳಿವೆ.

ಕೈಲ್ ಮೇಯರ್ಸ್ ಅರ್ಧಶತಕ; ಆವೇಶ್ ಖಾನ್, ಸ್ಟೊಯಿನಿಸ್ ಪರಿಣಾಮಕಾರಿ ಬೌಲಿಂಗ್

ಸೂಪರ್ ಜೈಂಟ್ಸ್‌ಗೆ ಮಣಿದ ರಾಯಲ್ಸ್



ಲಖನೌ ಸೂಪರ್ ಜೈಂಟ್ಸ್ ತಂಡದ ಆವೇಶ್ ಖಾನ್ (ಎಡ) ಹಾಗೂ ಸಹ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಜೈಪುರ (ಪಿಟಿಐ): ಬೌಲರ್‌ಗಳು ಮೇಲುಗೈ ಸಾಧಿಸಿದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡ, ರಾಜಸ್ಥಾನ ರಾಯಲ್ಸ್ ತಂಡವನ್ನು 10 ರನ್‌ಗಳಿಂದ ಮಣಿಸಿತು.

ಇಲ್ಲಿಯ ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಲಖನೌ, ನಿಗದಿತ ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 154 ರನ್ ಗಳಿಸಿತು. ಆ ಬಳಿಕ ಶಿಸ್ತುಬದ್ಧ ದಾಳಿ ನಡೆಸಿ ರಾಜಸ್ಥಾನ ತಂಡವನ್ನು 6 ವಿಕೆಟ್‌ಗಳಿಗೆ 144 ರನ್‌ಗಳಿಗೆ ನಿಯಂತ್ರಿಸಿತು.

ನಾಲ್ಕು ವರ್ಷಗಳ ನಂತರ ತವರಿನ ಕ್ರೀಡಾಂಗಣದಲ್ಲಿ ಆಡಲು ಇಳಿದ ಸಂಜು ಸ್ಯಾಮ್ಸನ್ ಬಳಗ ಬೌಲಿಂಗ್‌ನಲ್ಲಿ ಪರಿಣಾಮಕಾರಿ ಎನಿಸಿದರೂ, ಬ್ಯಾಟರ್‌ಗಳು ನಿರಾಸೆ ಉಂಟುಮಾಡಿದರು.

ಸಾಧಾರಣ ಗುರಿ ಬೆನ್ನಟ್ಟಿದ ರಾಯಲ್ಸ್ ತಂಡಕ್ಕೆ ಯಶಸ್ವಿ ಜೈಸ್ವಾಲ್ (44) ಮತ್ತು ಜೋಸ್ ಬಟ್ಲರ್ (40) ಮೊದಲ ವಿಕೆಟ್‌ಗೆ 87 ರನ್ ಸೇರಿಸಿ ಗೆಲುವಿನ ಭರವಸೆ ಮೂಡಿಸಿದ್ದರು. ಆ ಬಳಿಕ ಲಖನೌ ಬೌಲರ್‌ಗಳು ಅಮೋಘ ರೀತಿಯಲ್ಲಿ ಮರುಹೋರಾಟ ನಡೆಸಿದರು.

ಆವೇಶ್ ಖಾನ್ (25ಕ್ಕೆ 3) ಮತ್ತು ಮಾರ್ಕಸ್ ಸ್ಟೊಯಿನಿಸ್ (28ಕ್ಕೆ 2) ಪರಿಣಾಮಕಾರಿ ದಾಳಿ ನಡೆಸಿದರೆ, ನವೀನ್ ಉಲ್ ಹಕ್ ಹಾಗೂ ರವಿ ಬಿಷ್ಣೋಯಿ ಅವರು ವಿಕೆಟ್ ಪಡೆಯದಿದ್ದರೂ ರನ್ ನಿಯಂತ್ರಿಸಿದರು.

ಸ್ಟೊಯಿನಿಸ್ ಅವರು ಆರಂಭಿಕ ಬ್ಯಾಟರ್‌ಗಳನ್ನು ಪೆವಿಲಿಯನ್‌ಗಟ್ಟಿದರು. ಸಂಜು ರನೌಟ್ ಆದರೆ, ಶಿಮ್ರೊನ್ ಹೆಟ್ಮೆಯರ್ ವಿಕೆಟ್‌ಅನ್ನು ಆವೇಶ್ ಪಡೆದರು. ದೇವದತ್ತ ಪಡಿಕ್ಕಲ್ ಮತ್ತು ರಿಯಾನ್ ಪರಾಗ್ ಗೆಲುವಿಗೆ ನಡೆಸಿದ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ.

ಗೆಲುವಿಗೆ ಕೊನೆಯ ಎರಡು ಓವರ್‌ಗಳಲ್ಲಿ 29 ರನ್‌ಗಳು ಬೇಕಿದ್ದವು. ನವೀನ್ ಉಲ್ ಹಕ್ 19ನೇ ಓವರ್‌ನಲ್ಲಿ 10 ರನ್ ಮಾತ್ರ ಬಿಟ್ಟುಕೊಟ್ಟರು. ಆವೇಶ್ ಬೌಲ್ ಮಾಡಿದ ಕೊನೆಯ ಓವರ್‌ನ ಮೊದಲ ಎಸೆತವನ್ನು ರಿಯಾನ್ ಪರಾಗ್ ಬೌಂಡರಿಗಟ್ಟಿದರೆ, ಎರಡನೇ ಎಸೆತದಲ್ಲಿ ಒಂದು ರನ್ ಬಂತು. ಮುಂದಿನ ಎರಡು ಎಸೆತಗಳಲ್ಲಿ ಪಡಿಕ್ಕಲ್ ಮತ್ತು ಧ್ರುವ ಜುರೆಲ್ ಔಟಾಗುವುದರೊಂದಿಗೆ ಗೆಲುವಿನ ಆಸೆ ಕಮರಿತು.

ಮೇಯರ್ಸ್ ಅರ್ಧಶತಕ: ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಲಖನೌ ತಂಡದ ಪರ ಕೈಲ್ ಮೇಯರ್ಸ್ (51, 42 ಎಸೆತ) ಮತ್ತು ನಾಯಕ ಕೆ.ಎಲ್. ರಾಹುಲ್ (39, 32 ಎ) ಮೊದಲ ವಿಕೆಟ್‌ಗೆ 82 ರನ್ ಕಲೆಹಾಕಿದರು. ಮಧ್ಯಮ ಕ್ರಮಾಂಕ ವಿಫಲವಾದರೂ, ಮಾರ್ಕಸ್ ಸ್ಟೊಯಿನಿಸ್ (21) ಮತ್ತು ನಿಕೋಲಸ್ ಪೂರನ್ (29, 20ಎ) ತಂಡದ ಮೊತ್ತ 150 ದಾಟಲು ನೆರವಾದರು.

ಟ್ರೆಂಟ್ ಬೌಲ್ಟ್ ಬಿಗು ದಾಳಿ ಸಂಘಟಿಸಿ ನಾಲ್ಕು ಓವರುಗಳಲ್ಲಿ ಬರೇ 16 ರನ್ನಿತ್ತು ಒಂದು ವಿಕೆಟ್ ಪಡೆದರು. ರವಿಚಂದ್ರನ್ ಅಶ್ವಿನ್ ಕೂಡ ಪರಿಣಾಮಕಾರಿ ದಾಳಿ ನಡೆಸಿ 23 ರನ್ನಿಗೆ 2 ವಿಕೆಟ್ ಗಳಿಸಿ ಎದುರಾಳಿಗಳ ರನ್ ಗಳಿಕೆಗೆ ಕಡಿವಾಣ ಹಾಕಿದರು.

ರಾಹುಲ್ ಕೇವಲ ಆರು ರನ್ ಗಳಿಸಿದ್ದಾಗ, ಸಂದೀಪ್ ಶರ್ಮಾ ಎಸೆತದಲ್ಲಿ ಯಶಸ್ವಿ ಜೈಸ್ವಾಲ್ ಕ್ಯಾಚ್ ಕೈಚೆಲ್ಲಿದ್ದರು. 11ನೇ ಓವರ್‌ನಲ್ಲಿ ರಾಹುಲ್ ವಿಕೆಟ್ ಕಬಳಿಸಿದ ಜೇಸನ್ ಹೋಲ್ಡರ್ ಮೊದಲ ವಿಕೆಟ್ ಜೊತೆಯಾಟ ಮುರಿದರು.

ಆಯುಷ್ ಬಡೋನಿ ಹಾಗೂ ದೀಪಕ್ ಹೂಡಾ ಎರಡಂಕಿ ಮೊತ್ತ ದಾಟಲಿಲ್ಲ. ಆಯುಷ್ ಅವರು ಬೌಲ್ಟ್ (16ಕ್ಕೆ 1) ಬೌಲಿಂಗ್‌ನಲ್ಲಿ ಬೌಲ್ಡ್ ಆದರೆ, ಹೂಡಾ ಅವರ ವಿಕೆಟ್ ಅಶ್ವಿನ್ ಪಾಲಾಯಿತು.

ಆರ್‌ಸಿಬಿಗೆ ಪಂಜಾಬ್ ಸವಾಲು

ಮೊಹಾಲಿಯಲ್ಲಿ ಇಂದು ಪಂದ್ಯ; ಧವನ್ ಅನುಮಾನ



ಆರ್‌ಸಿಬಿ ತಂಡದ ಗ್ಲೆನ್ ಮ್ಯಾಕ್ಸ್‌ವೆಲ್

ಮೊಹಾಲಿ (ಪಿಟಿಐ): ಕಳೆದ ಪಂದ್ಯದಲ್ಲಿ ಗೆಲುವಿನ ದಡದಲ್ಲಿ ಎಡವಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದವರು ಐಪಿಎಲ್ ಪಂದ್ಯದಲ್ಲಿ ಗುರುವಾರ ಪಂಜಾಬ್ ಕಿಂಗ್ಸ್ ತಂಡದ ಸವಾಲು ಎದುರಿಸಲಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರ ನಡೆದಿದ್ದ ಪಂದ್ಯದಲ್ಲಿ ಫಫ್ ಡುಪ್ಲೆಸಿ ಬಳಗ ಎಂಟು ರನ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಎದುರು ಸೋತಿತ್ತು. ಗೆಲುವಿಗೆ 227 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ಆರ್‌ಸಿಬಿ, 8 ವಿಕೆಟ್‌ಗಳಿಗೆ 218 ರನ್ ಗಳಿಸಲಷ್ಟೇ ಶಕ್ತವಾಗಿತ್ತು.

ಈ ಪಂದ್ಯದಲ್ಲೂ ಬೆಂಗಳೂರಿನ ತಂಡದ ನಿರೀಕ್ಷೆಯ ಭಾರ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಮೇಲೆ ಇದೆ. ವಿರಾಟ್ ಕೊಹ್ಲಿ, ಫಫ್ ಡುಪ್ಲೆಸಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಅಬ್ಬರಿಸಿದರೆ ಮಾತ್ರ ಗೆಲುವು ಸಾಧ್ಯ ಎಂಬಂಥ ಪರಿಸ್ಥಿತಿ ಇದೆ.

ಚೆನ್ನೈ ಎದುರಿನ ಪಂದ್ಯದಲ್ಲಿ ಕೊಹ್ಲಿ (6) ಮತ್ತು ಮಹಿಪಾಲ್ ಲೊಮ್ರೊರ್ (0) ವಿಫಲರಾಗಿದ್ದರು. ಇದರಿಂದ ಇನಿಂಗ್ಸ್‌ಗೆ ಬಲ ತುಂಬುವ ಒತ್ತಡ ಡುಪ್ಲೆಸಿ ಮತ್ತು ಮ್ಯಾಕ್ಸ್‌ವೆಲ್ ಮೇಲೆ ಬಿದ್ದಿತ್ತು. ಅವರಿಬ್ಬರು ಅಬ್ಬರದ ಆಟವಾಡಿ ತಂಡವನ್ನು ಗೆಲುವಿನ ಸನಿಹ ತಂದು ನಿಲ್ಲಿಸಿದ್ದರು. ಬಳಿಕದ ಬ್ಯಾಟರ್‌ಗಳು ಒತ್ತಡಕ್ಕೆ ಒಳಗಾದ್ದರಿಂದ ತಂಡಕ್ಕೆ ಜಯ ದಕ್ಕಿರಲಿಲ್ಲ.

ದಿನೇಶ್ ಕಾರ್ತಿಕ್, ಶಹಬಾಜ್ ಅಹ್ಮದ್ ಮತ್ತು ಸುಯಶ್ ಪ್ರಭುದೇಸಾಯಿ ಅವರಿಂದ ಜವಾಬ್ದಾರಿಯುತ ಆಟ ಬರಬೇಕಿದೆ.

ಪಂಜಾಬ್ ಕಿಂಗ್ಸ್‌ಗೆ ಹೋಲಿಸಿದರೆ ಆರ್‌ಸಿಬಿಯ ಬೌಲಿಂಗ್ ವಿಭಾಗ ಸ್ವಲ್ಪ 'ದುರ್ಬಲ' ಎನಿಸಿದೆ. ಆದರೂ ಮೊಹಮ್ಮದ್ ಸಿರಾಜ್, ಹರ್ಷಲ್ ಪಟೇಲ್ ಮತ್ತು ವೇಯ್ನ್ ಪಾರ್ನೆಲ್ ಅವರು ಎದುರಾಳಿ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸಾಮರ್ಥ್ಯ ಹೊಂದಿದ್ದಾರೆ. ಅದರಲ್ಲೂ ಸಿರಾಜ್ ಎಲ್ಲ ಪಂದ್ಯಗಳಲ್ಲೂ ಪರಿಣಾಮಕಾರಿ ಎನಿಸಿದ್ದಾರೆ.

ಐದು ಪಂದ್ಯಗಳನ್ನು ಆಡಿರುವ ಆರ್‌ಸಿಬಿ ನಾಲ್ಕು ಪಾಯಿಂಟ್ಸ್‌ಗಳೊಂದಿಗೆ ಎಂಟನೇ ಸ್ಥಾನದಲ್ಲಿದೆ. ಪಾಯಿಂಟ್ಸ್ ಪಟ್ಟಿಯಲ್ಲಿ ಮೇಲಕ್ಕೇರಬೇಕಾದರೆ 2–3 ಪಂದ್ಯಗಳಲ್ಲಿ ಸತತ ಗೆಲುವು ಅನಿವಾರ್ಯ ಎನಿಸಿದೆ. ಪಂಜಾಬ್ ವಿರುದ್ಧದ ಪಂದ್ಯದೊಂದಿಗೆ ಗೆಲುವಿನ ಹಾದಿಗೆ ಮರಳುವ ವಿಶ್ವಾಸವನ್ನು ತಂಡ ಹೊಂದಿದೆ.

ಶಿಖರ್ ಅನುಮಾನ: ನಾಯಕ ಶಿಖರ್ ಧವನ್ ಅವರು ಗಾಯಗೊಂಡಿರುವುದು ಪಂಜಾಬ್ ಕಿಂಗ್ಸ್ ತಂಡಕ್ಕೆ ಹಿನ್ನಡೆ ಉಂಟುಮಾಡಿದೆ. ಭುಜದ ನೋವಿನಿಂದ ಬಳಲುತ್ತಿರುವ ಅವರು ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಕಳೆದ ಪಂದ್ಯದಲ್ಲಿ ಆಡಿರಲಿಲ್ಲ. ಈ ಆರಂಭಿಕ ಬ್ಯಾಟರ್ ಗುರುವಾರ ಕಣಕ್ಕಿಳಿಯುವರೇ ಎಂಬುದು ಖಾತರಿಯಿಲ್ಲ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊಸಿನೆಮಾ ಆ್ಯಪ್

ಡೆಲ್ಲಿಗೆ ಮಾಡು–ಮಡಿ ಪಂದ್ಯ

ನವದೆಹಲಿ (ಪಿಟಿಐ): ಈ ಬಾರಿಯ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಜಯದ ನಿರೀಕ್ಷೆಯಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಗುರುವಾರ ಕೋಲ್ಕತ್ತ ನೈಟ್ ರೈಡರ್ಸ್ ಸವಾಲು ಎದುರಿಸಲಿದೆ.

ಡೇವಿಡ್ ವಾರ್ನರ್ ನಾಯಕತ್ವದ ಡೆಲ್ಲಿ ತಂಡವು ಆಡಿದ ಎಲ್ಲ ಐದೂ ಪಂದ್ಯಗಳಲ್ಲಿ ನಿರಾಸೆ ಅನುಭವಿಸಿದೆ. ಈ ಪಂದ್ಯದಲ್ಲೂ ಸೋತರೆ ಆ ತಂಡದ ಪ್ಲೇ ಆಫ್ ಪ್ರವೇಶದ ಬಾಗಿಲು ಬಹುತೇಕ ಮುಚ್ಚಿದಂತೆ. ಹೀಗಾಗಿ ಡೆಲ್ಲಿ ತಂಡಕ್ಕೆ 'ಮಾಡು ಇಲ್ಲವೇ ಮಡಿ' ಹಣಾಹಣಿ.

ಫಿರೋಜ್ ಶಾ ಕೋಟ್ಲಾ ಅಂಗಣದಲ್ಲಿ ಕೋಲ್ಕತ್ತ ಬೌಲರ್‌ಗಳ ಎದುರು ಅಗ್ರಕ್ರಮಾಂಕದ ಬ್ಯಾಟಿಂಗ್ ಪುನಶ್ಚೇತನಗೊಳ್ಳುವ ವಿಶ್ವಾಸ ಡೆಲ್ಲಿಗೆ ಇದೆ.

ಪೃಥ್ವಿ ಬ್ಯಾಟಿಂಗ್ ಚಿಂತೆ: ಪ್ರತಿಭಾನ್ವಿತ ಆರಂಭಿಕ ಬ್ಯಾಟರ್, 23 ವರ್ಷದ ಪೃಥ್ವಿ ಶಾ ಅವರು ರನ್ ಬರ ಎದುರಿಸುತ್ತಿರುವುದು ಡೆಲ್ಲಿ ತಂಡದ ಕಳವಳಕ್ಕೆ ಕಾರಣವಾಗಿದೆ. ಐದು ಪಂದ್ಯಗಳಲ್ಲಿ ಅವರ ಗಳಿಕೆ ಕೇವಲ 34 ರನ್. ಆಡುವ 11ರ ಬಳಗದಲ್ಲಿ ಅವರ ಸ್ಥಾನ ಅಲುಗಾಡುವಂತಾಗಿದೆ.

ಹೀಗಾಗಿ ವಿಕೆಟ್ ಕೀಪರ್ ಬ್ಯಾಟರ್ ಸರ್ಫರಾಜ್ ಖಾನ್ ಅವರನ್ನು ಆರಂಭಿಕರಾಗಿ ಕಣಕ್ಕಿಳಿಸಬಹುದು.

ಐದು ಪಂದ್ಯಗಳಲ್ಲಿ ಕೋಲ್ಕತ್ತ ಎರಡು ಗೆದ್ದು, ಮೂರರಲ್ಲಿ ಸೋತಿದೆ. ನಾಯಕ ನಿತೀಶ್ ರಾಣಾ, ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್, ವೆಸ್ಟ್ ಇಂಡೀಸ್‌ನ ಆ್ಯಂಡ್ರೆ ರಸೆಲ್ ಅವರು, ಎನ್ರಿಚ್ ನಾಕಿಯಾ ಹಾಗೂ ಮುಸ್ತಫಿಜುರ್ ನೇತೃತ್ವದ ಡೆಲ್ಲಿ ಬೌಲಿಂಗ್ ಪಡೆಯ ದಾಳಿಯನ್ನು ಪುಡಿಗಟ್ಟುವ ಸಾಮರ್ಥ್ಯವುಳ್ಳವರು.

ಪಂದ್ಯ ಆರಂಭ: ರಾತ್ರಿ 7.30

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	6	4	2	0	8	1.043
ಲಖನೌ	6	4	2	0	8	0.709
ಚೆನ್ನೈ	5	3	2	0	6	0.265
ಗುಜರಾತ್	5	3	2	0	6	0.192
ಪಂಜಾಬ್	5	3	2	0	6	-0.109
ಮುಂಬೈ	5	3	2	0	6	-0.164
ಕೋಲ್ಕತ್ತ	5	2	3	0	4	0.320
ಬೆಂಗಳೂರು	5	2	3	0	4	-0.318
ಹೈದರಾಬಾದ್	5	2	3	0	4	-0.798
ಡೆಲ್ಲಿ	5	0	5	0	0	-1.488

* ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	259

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಮಾರ್ಕ್ ವುಡ್	ಲಖನೌ	11

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್ 7ಕ್ಕೆ 154 (20 ಓವರ್)

ರಾಹುಲ್ ಸಿ ಬಟ್ಲರ್ ಬಿ ಹೋಲ್ಡರ್ 39 (32ಎ, 4X4, 6X1)
ಮೇಯರ್ಸ್ ಬಿ ಅಶ್ವಿನ್ 51 (42ಎ, 4X4, 6X3)
ಆಯುಷ್ ಬಿ ಬೌಲ್ಟ್ 1 (4ಎ)
ಹೂಡಾ ಸಿ ಹೆಟ್ಮೆಯರ್ ಬಿ ಅಶ್ವಿನ್ 2 (4ಎ)
ಸ್ಟೊಯಿನಿಸ್ ಸಿ ಸ್ಯಾಮ್ಸನ್ ಬಿ ಸಂದೀಪ್ 21 (16ಎ, 4X2)
ಪೂರನ್ ರನೌಟ್ (ಸ್ಯಾಮ್ಸನ್) 29 (20ಎ, 4X2, 6X1)
ಕೃಣಾಲ್ ಔಟಾಗದೆ 4 (2ಎ, 4X1)
ಯುದ್ಧವೀರ್ ರನೌಟ್ (ಹೆಟ್ಮೆಯರ್/ಸ್ಯಾಮ್ಸನ್) 1 (1ಎ)
ಇತರೆ: 6 (ಲೆಗ್‌ಬೈ 4, ನೋಬಾಲ್ 1, ವೈಡ್ 1)
ವಿಕೆಟ್ ಪತನ: 1-82 (ಕೆ.ಎಲ್. ರಾಹುಲ್, 10.4), 2-85 (ಆಯುಷ್ ಬಡೋನಿ, 11.4), 3-99 (ದೀಪಕ್ ಹೂಡಾ, 13.2), 4-104 (ಕೈಲ್ ಮೇಯರ್ಸ್, 13.5), 5–149 (ಮಾರ್ಕಸ್ ಸ್ಟೊಯಿನಿಸ್, 19.3), 6–153 (ನಿಕೊಲಸ್ ಪೂರನ್, 19.5), 7–154 (ಯುದ್ಧವೀರ್ ಸಿಂಗ್, 19.6)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–1–16–1, ಸಂದೀಪ್ ಶರ್ಮಾ 4–0–32–1, ಆರ್. ಅಶ್ವಿನ್ 4–0–23–2, ಯುಜುವೇಂದ್ರ ಚಾಹಲ್ 4–0–41–0, ಜೇಸನ್ ಹೋಲ್ಡರ್ 4–0–38–1

ರಾಜಸ್ಥಾನ ರಾಯಲ್ಸ್ 6ಕ್ಕೆ 144 (20 ಓವರ್)

ಯಶಸ್ವಿ ಸಿ ಆವೇಶ್ ಬಿ ಸ್ಟೊಯಿನಿಸ್ 44 (35ಎ, 4X4, 6X2)
ಬಟ್ಲರ್ ಸಿ ರವಿ ಬಿ ಸ್ಟೊಯಿನಿಸ್ 40 (41ಎ, 4X4, 6X1)
ಸ್ಯಾಮ್ಸನ್ ರನೌಟ್ (ಮಿಶ್ರಾ/ಪೂರನ್) 2 (4ಎ)
ದೇವದತ್ತ ಸಿ ಪೂರನ್ ಬಿ ಆವೇಶ್ 26 (21ಎ, 4X4)
ಹೆಟ್ಮೆಯರ್ ಸಿ ರಾಹುಲ್ ಬಿ ಆವೇಶ್ 2 (5ಎ)
ಪರಾಗ್ ಔಟಾಗದೆ 15 (12ಎ, 4X1, 6X1)
ಧ್ರುವ ಸಿ ಹೂಡಾ ಬಿ ಆವೇಶ್ 0 (1ಎ)
ಅಶ್ವಿನ್ ಔಟಾಗದೆ 3 (2ಎ)
ಇತರೆ: 12 (ಬೈ 1, ಲೆಗ್‌ಬೈ 4, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-87 (ಯಶಸ್ವಿ ಜೈಸ್ವಾಲ್, 11.3), 2-93 (ಸಂಜು ಸ್ಯಾಮ್ಸನ್, 12.4), 3-97 (ಜೋಸ್ ಬಟ್ಲರ್, 13.3), 4-104 (ಶಿಮ್ರೊನ್ ಹೆಟ್ಮೆಯರ್, 15.1), 5-141 (ದೇವದತ್ತ ಪಡಿಕ್ಕಲ್, 19.3), 6-141 (ಧ್ರುವ ಜುರೆಲ್, 19.4)
ಬೌಲಿಂಗ್: ನವೀನ್ ಉಲ್ ಹಕ್ 4–0–19–0, ಯುದ್ಧವೀರ್ ಸಿಂಗ್ 2–0–27–0, ಆವೇಶ್ ಖಾನ್ 4–0–25–3, ಮಾರ್ಕಸ್ ಸ್ಟೊಯಿನಿಸ್ 4–0–28–2, ರವಿ ಬಿಷ್ಣೋಯಿ 4–0–25–0, ಅಮಿತ್ ಮಿಶ್ರಾ 2–0–15–0

ಫಲಿತಾಂಶ: ಸೂಪರ್ ಜೈಂಟ್ಸ್‌ಗೆ 10 ರನ್‌ಗಳ ಜಯ

ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿ

ಭಾರತ ತಂಡದಲ್ಲಿ ಸಿಂಧು, ಪ್ರಣಯ್



ಪಿ.ವಿ.ಸಿಂಧು

ನವದೆಹಲಿ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಹಾಗೂ ವಿಶ್ವದ 9ನೇ ಕ್ರಮಾಂಕದ ಆಟಗಾರ ಎಚ್.ಎಸ್. ಪ್ರಣಯ್ ಅವರು ಸುದೀರ್‌ಮನ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಚೀನಾದ ಸುಜೋನಲ್ಲಿ ಮೇ 14ರಿಂದ 21ರವರೆಗೆ ಟೂರ್ನಿ ನಡೆಯಲಿದೆ.

ಸುದೀರ್‌ಮನ್ ಕಪ್ ಮಿಶ್ರ ತಂಡ ಚಾಂಪಿಯನ್‌ಷಿಪ್ ಆಗಿದ್ದು, ಮೊದಲ ಬಾರಿ ಚಿನ್ನದ ಪದಕ ಗೆಲ್ಲುವ ಗುರಿಯಿಟ್ಟುಕೊಂಡು ರಾಷ್ಟ್ರೀಯ ಆಯ್ಕೆ ಸಮಿತಿಯು 'ಸಮತೋಲಿತ ತಂಡ'ವನ್ನು ಆಯ್ಕೆ ಮಾಡಿದೆ.

ಭಾರತ ತಂಡವು ಕಳೆದ ವರ್ಷ ಪ್ರತಿಷ್ಠಿತ ಥಾಮಸ್ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತ್ತು. ಈ ವರ್ಷದ ಆರಂಭದಲ್ಲಿ ಏಷ್ಯನ್ ಮಿಶ್ರ ತಂಡ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ತನ್ನದಾಗಿಸಿಕೊಂಡಿತ್ತು. ಅದೇ ರೀತಿಯ ಸಾಮರ್ಥ್ಯ ತೋರುವ ವಿಶ್ವಾಸ ಹೊಂದಿದೆ.

ಸುಧೀರ್‌ಮನ್ ಕಪ್ ಟೂರ್ನಿಯಲ್ಲಿ ಭಾರತ ತಂಡವು 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದೆ. ಚೀನಾ ತೈಪೆ, ಆಸ್ಟ್ರೇಲಿಯಾ ಮತ್ತು ಮಲೇಷ್ಯಾ ತಂಡಗಳು ಇದೇ ಗುಂಪಿನಲ್ಲಿವೆ.

ಭಾರತ ತಂಡ: ಪುರುಷರ ಸಿಂಗಲ್ಸ್: ಎಚ್.ಎಸ್. ಪ್ರಣಯ್, ಕಿದಂಬಿ ಶ್ರೀಕಾಂತ್ (ಕಾಯ್ದಿರಿಸಿದ ಆಟಗಾರ: ಲಕ್ಷ್ಯ ಸೇನ್). ಮಹಿಳಾ ಸಿಂಗಲ್ಸ್: ಪಿ.ವಿ. ಸಿಂಧು, ಅನುಪಮಾ ಉಪಾಧ್ಯಾಯ (ಕಾಯ್ದಿರಿಸಿದ ಆಟಗಾರ್ತಿ: ಆಕರ್ಷಿ ಕಶ್ಯಪ್). ಪುರುಷರ ಡಬಲ್ಸ್: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಎಂ.ಆರ್.ಅರ್ಜುನ್–ಧ್ರುವ ಕಪಿಲ. ಮಹಿಳಾ ಡಬಲ್ಸ್: ಗಾಯತ್ರಿ ಗೋಪಿಚಂದ್–ತ್ರಿಶಾ ಜೋಲಿ, ಅಶ್ವಿನಿ ಪೊನ್ನಪ್ಪ–ತನಿಶಾ ಕ್ರಾಸ್ಟೊ. ಮಿಶ್ರ ಡಬಲ್ಸ್: ತನಿಶಾ–ಸಾಯಿ ಪ್ರತೀಕ್.

ಬುಕ್ಕಿ ಸಂಪರ್ಕ: ಎಸಿಯುಗೆ ಸಿರಾಜ್ ದೂರು



ಸಿರಾಜ್

ನವದೆಹಲಿ (ಪಿಟಿಐ): ತಂಡದ 'ಆಂತರಿಕ ಮಾಹಿತಿ' ತಿಳಿಸುವಂತೆ ಕೋರಿ ವ್ಯಕ್ತಿಯೊಬ್ಬ ತಮ್ಮನ್ನು ಸಂಪರ್ಕಿಸಿದ್ದ ಎಂದು ಭಾರತ ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರು ಬಿಸಿಸಿಐನ ಭ್ರಷ್ಟಾಚಾರ ನಿಗ್ರಹ ಘಟಕಕ್ಕೆ (ಎಸಿಯು) ದೂರು ನೀಡಿದ್ದ ವಿಷಯ ತಡವಾಗಿ ಗೊತ್ತಾಗಿದೆ.

ಈ ವರ್ಷದ ಫೆಬ್ರುವರಿಯಲ್ಲಿ ಆಸ್ಟ್ರೇಲಿಯಾ ತಂಡವು ಭಾರತ ಪ್ರವಾಸ ಕೈಗೊಂಡಿತ್ತು. ಅದಕ್ಕೂ ಮೊದಲು ಅಪರಿಚಿತ ವ್ಯಕ್ತಿ ತಮ್ಮನ್ನು ಸಂಪರ್ಕಿಸಿದ್ದ ಎಂದು ಸಿರಾಜ್ ದೂರಿನಲ್ಲಿ ತಿಳಿಸಿದ್ದಾರೆ.

ಸಿರಾಜ್ ಸದ್ಯ ಐಪಿಎಲ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪರ ಆಡುತ್ತಿದ್ದಾರೆ.

'ಭಾರತ ಆಡುವ ಪಂದ್ಯಗಳಿಗೆ ಹಣ ಹೂಡಿ ಸಾಕಷ್ಟು ದುಡ್ಡು ಕಳೆದುಕೊಂಡಿದ್ದ ಈ ವ್ಯಕ್ತಿ ತೀವ್ರ ಹತಾಶೆಯಲ್ಲಿ ಸಿರಾಜ್ ಅವರನ್ನು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿದ್ದಾನೆ. ಈತ ಬುಕ್ಕಿ ಅಲ್ಲ; ಬೆಟ್ಟಿಂಗ್ ವ್ಯಸನ ಹೊಂದಿದ್ದ ಹೈದರಾಬಾದ್‌ನ ಒಬ್ಬ ಡ್ರೈವರ್' ಎಂದು ಬಿಸಿಸಿಐನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಿರಾಜ್ ಅವರು ಈ ಕುರಿತು ತಕ್ಷಣ ದೂರು ನೀಡಿದ್ದರು. ಆಂಧ್ರ ಪೊಲೀಸರು ಆ ವ್ಯಕ್ತಿಯನ್ನು ಬಂಧಿಸಿದ್ದಾರೆ' ಎಂದು ಅಧಿಕಾರಿ ಹೇಳಿದ್ದಾರೆ.

ಆಸ್ಟ್ರೇಲಿಯಾ ತಂಡದಲ್ಲಿ ವಾರ್ನರ್‌ಗೆ ಸ್ಥಾನ

ಅಡಿಲೇಡ್ (ಎಎಫ್‌ಪಿ): ರಾಷ್ಟ್ರೀಯ ತಂಡದಲ್ಲಿ ಸ್ಥಾನ ಕಳೆದುಕೊಳ್ಳುವ ಭೀತಿಯ ತೂಗುಗತ್ತಿಯಿಂದ ಆರಂಭ ಆಟಗಾರ ಡೇವಿಡ್ ವಾರ್ನರ್ ಪಾರಾಗಿದ್ದಾರೆ. ಭಾರತ ವಿರುದ್ಧ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಮತ್ತು ಆ್ಯಷಸ್ ಸರಣಿಯ ಮೊದಲ ಎರಡು ಟೆಸ್ಟ್‌ಗೆ ಬುಧವಾರ ಪ್ರಕಟಗೊಂಡ ಆಸ್ಟ್ರೇಲಿಯಾ ತಂಡದಲ್ಲಿ ಅನುಭವಿ ವಾರ್ನರ್ ಸ್ಥಾನ ಪಡೆದಿದ್ದಾರೆ.

ಇದೇ ವೇಳೆ, ಆಲ್‌ರೌಂಡರ್ ಮಿಚೆಲ್ ಮಾರ್ಷ್ ತಂಡಕ್ಕೆ ಪುನರಾಗಮನ ಮಾಡಿದ್ದಾರೆ.

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಸ್ಕಾಟ್ ಬೋಲ್ಯಾಂಡ್, ಅಲೆಕ್ಸ್ ಕ್ಯಾರಿ, ಕ್ಯಾಮರಾನ್ ಗ್ರೀನ್, ಮಾರ್ಕಸ್ ಹ್ಯಾರಿಸ್, ಜೋಶ್ ಹ್ಯಾಜಲ್‌ವುಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಉಸ್ಮಾನ್ ಖ್ವಾಜಾ, ಮಾರ್ನಸ್ ಲಾಬುಷೇನ್, ನೇಥನ್ ಲಯನ್, ಮಿಚೆಲ್ ಮಾರ್ಷ್, ಟಾಡ್ ಮರ್ಫಿ, ಮ್ಯಾಥ್ಯೂ ರೆನ್‌ಷಾ, ಸ್ಟೀವ್ ಸ್ಮಿತ್, ಮಿಚೆಲ್ ಸ್ಟಾರ್ಕ್ ಮತ್ತು ಡೇವಿಡ್ ವಾರ್ನರ್.

ಟಿ20 ರ‍್ಯಾಂಕಿಂಗ್: 'ಸೂರ್ಯ' ಅಗ್ರಸ್ಥಾನ ಅಬಾಧಿತ



ಸೂರ್ಯ

ದುಬೈ (ಪಿಟಿಐ): ಬಿರುಸಿನ ಹೊಡೆತಗಳ ಆಟಗಾರ ಸೂರ್ಯಕುಮಾರ್ ಯಾದವ್, ಬುಧವಾರ ಪ್ರಕಟವಾಗಿರುವ ಐಸಿಸಿ ಪುರುಷರ ಟಿ–20 ಕ್ರಿಕೆಟ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಲಯ ಕಂಡುಕೊಳ್ಳಲು ಪರದಾಡುತ್ತಿರುವ ಸೂರ್ಯಕುಮಾರ್, 906 ರೇಟಿಂಗ್ ಪಾಯಿಂಟ್ಸ್ ಹೊಂದಿದ್ದು, 1ನೇ ಸ್ಥಾನದಲ್ಲಿರುವ ಪಾಕಿಸ್ತಾನದ ಮೊಹಮದ್ ರಿಜ್ವಾನ್ (798 ಪಾಯಿಂಟ್ಸ್) ಅವರಿಗಿಂತ ನೂರು ಪಾಯಿಂಟ್ಸ್‌ಗೂ ಹೆಚ್ಚು ಮುಂದಿದ್ದಾರೆ.

'ಟಾಪ್ 10'ರಲ್ಲಿರುವ ಭಾರತದ ಏಕಮಾತ್ರ ಆಟಗಾರ ಸೂರ್ಯಕುಮಾರ್ 2022ರಲ್ಲಿ ಚುಟುಕು ಕ್ರಿಕೆಟ್ ಮಾದರಿಯಲ್ಲಿ ರನ್‌ಹೊಳೆ ಹರಿಸಿದ್ದರು. ಈ ವರ್ಷ ನ್ಯೂಜಿಲೆಂಡ್ ಮತ್ತು ಶ್ರೀಲಂಕಾ ವಿರುದ್ಧದ ಸರಣಿಗಳಲ್ಲೂ ಅದೇ ಲಹರಿಯಲ್ಲಿ ಆಡಿದ್ದರು.

ಮಾಜಿ ಕ್ಯಾಪ್ಟನ್ ವಿರಾಟ್ ಕೊಹ್ಲಿ ಅವರು 15ನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ.

ಭಾರತದ ಬೌಲರ್‌ಗಳ ಪೈಕಿ ಅರ್ಷದೀಪ್ ಸಿಂಗ್ ಸಾಧನೆ ಉತ್ತಮವಾಗಿದ್ದು 14ನೇ ಸ್ಥಾನದಲ್ಲಿದ್ದಾರೆ. ಅನುಭವಿ ಭುವನೇಶ್ವರ್ ಕುಮಾರ್, ಪಟ್ಟಿಯಿಂದ ಒಂದು ಸ್ಥಾನ ಕೆಳಗಿಳಿದಿದ್ದು, 19ನೇ ಸ್ಥಾನದಲ್ಲಿ ಇದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಹಾರ್ದಿಕ್ ಪಾಂಡ್ಯ ಎರಡನೇ ಸ್ಥಾನದಲ್ಲಿದ್ದಾರೆ. ಮೊದಲ ಸ್ಥಾನದಲ್ಲಿ ಬಾಂಗ್ಲಾದೇಶದ ಅನುಭವಿ ಶಕೀಬ್ ಅಲ್ ಹಸನ್ ಇದ್ದಾರೆ.

ಬೆಂಗಳೂರು ವಿಶ್ವ 10ಕೆ: 90ರ ರಘುನಾಥ್ ಸ್ಪರ್ಧೆ

ಬೆಂಗಳೂರು: 15ನೇ ಆವೃತ್ತಿಯ ಬೆಂಗಳೂರು ವಿಶ್ವ 10ಕೆ ಮೇ 21ರಂದು ನಿಗದಿಯಾಗಿದೆ. 90 ವರ್ಷ ವಯಸ್ಸಿನ ರಘುನಾಥ್ ಬೈಲಹಳ್ಳಿ ಜನಾರ್ದನ್ ಇಲ್ಲಿ ಸ್ಪರ್ಧಿಸಲಿರುವ ಹಿರಿಯ ಅಥ್ಲೀಟ್‌ಗಳಲ್ಲಿ ಒಬ್ಬರೆನಿಸಿಕೊಳ್ಳಲಿದ್ದಾರೆ.

ರೈಲ್ವೆ ಉದ್ಯೋಗಿಯಾಗಿದ್ದ ರಘುನಾಥ್ 30 ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಸಿಡ್ನಿ, ದುಬೈ ಸೇರಿದಂತೆ ವಿಶ್ವಮಟ್ಟದ ಮ್ಯಾರಥಾನ್‌ಗಳಲ್ಲಿ ಸ್ಪರ್ಧಿಸಿದ ಅನುಭವ ಅವರದು. ಈ ಹಿಂದೆ ಸೈಕ್ಲಿಸ್ಟ್ ಕೂಡ ಆಗಿದ್ದರು.

30 ವರ್ಷದ ಹಿಂದೆ ರಘುನಾಥ್ ಅವರನ್ನು ಮೂರ್ಛೆರೋಗ ಕಾಡಿತ್ತು. ಅದನ್ನು ಮೀರಿದ ಅವರು, ಉತ್ಸಾಹ ಕಳೆದುಕೊಳ್ಳದೆ ಮುನ್ನುಗ್ಗಿದ್ದಾರೆ.

65 ವರ್ಷದ ಕೋದಂಡಪಾಣಿ ಹಾಗೂ ಮಹಿಳೆಯರ ಸ್ಪರ್ಧೆಯಲ್ಲಿ 70 ವರ್ಷದ ಶಾರದಾ ವೆಂಕಟರಾಮನ್ ಕೂಡ ಕಾಣಿಸಿಕೊಳ್ಳಲಿದ್ದಾರೆ ಎಂದು ಆಯೋಜಕ ಸಂಸ್ಥೆ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಸೈಕ್ಲಿಂಗ್ ಫೆಡರೇಷನ್‌ಗೆ ಪಂಕಜ್ ಅಧ್ಯಕ್ಷ

ನವದೆಹಲಿ (ಪಿಟಿಐ): ನೊಯ್ಡಾದ ಬಿಜೆಪಿ ಶಾಸಕ ಪಂಕಜ್ ಸಿಂಗ್ ಅವರು ಭಾರತ ಸೈಕ್ಲಿಂಗ್ ಫೆಡರೇಷನ್ (ಸಿಎಫ್‌ಐ) ಅಧ್ಯಕ್ಷರಾಗಲಿದ್ದಾರೆ.

ಉತ್ತರಾಖಂಡದ ನೈನಿತಾಲ್‌ನಲ್ಲಿ ಶನಿವಾರ ಚುನಾವಣೆ ಕುರಿತ ಸಭೆ ನಡೆಯಲಿದೆ. ಅಧ್ಯಕ್ಷ ಹುದ್ದೆಗೆ ಪಂಕಜ್ ಒಬ್ಬರೇ ಸ್ಪರ್ಧಿಸಿದ್ದಾರೆ. ಹೀಗಾಗಿ ಅವರು ಮತ್ತು 24 ಸದಸ್ಯರ ಕಾರ್ಯಕಾರಿ ಸಮಿತಿ ಅವಿರೋಧವಾಗಿ ಆಯ್ಕೆಯಾಗುವುದು ಖಚಿತವಾಗಿದೆ.

ಈ ಮೊದಲು ಪಂಜಾಬ್‌ನ ಮಾಜಿ ಸಚಿವ ಪರಮಿಂದರ್ ಸಿಂಗ್ ಧಿಂಡ್ಸಾ ಅವರು ಸಿಎಫ್‌ಐ ಅಧ್ಯಕ್ಷರಾಗಿದ್ದರು. ಅವರು ಸತತ ಮೂರು ಅವಧಿಗೆ (12 ವರ್ಷ) ಅಧಿಕಾರ ನಡೆಸಿದ್ದರಿಂದ ನಿಯಮದ ಪ್ರಕಾರ ಈ ಬಾರಿ ಸ್ಪರ್ಧೆಗೆ ಅರ್ಹರಾಗಿಲ್ಲ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪುತ್ರ ಪಂಕಜ್, ಈ ಹಿಂದೆ ಭಾರತ ಫೆನ್ಸಿಂಗ್ ಸಂಸ್ಥೆಯ ಅಧ್ಯಕ್ಷ ಹುದ್ದೆಯಲ್ಲಿದ್ದರು.

ಪವನ್‌ದೀಪ್ ಭರ್ಜರಿ ಶತಕ

ಬೆಂಗಳೂರು: ಪವನ್‌ದೀಪ್ ಬಿ. (188 ರನ್, 37 ಬೌಂಡರಿ, 7 ಸಿಕ್ಸರ್) ಬಾರಿಸಿದ ಭರ್ಜರಿ ಶತಕದ ನೆರವಿನಿಂದ ಪ್ಲೇ ಸ್ಮಾರ್ಟ್ ಕ್ರಿಕೆಟ್ ಅಕಾಡೆಮಿ ತಂಡ, ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಮೈದಾನದಲ್ಲಿ ಬುಧವಾರ ನಡೆದ ಟೈಗರ್ ಕಪ್ (12 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಮೈಸೂರಿನ ಆರ್‌ಸಿಎ ತಂಡದ ಮೇಲೆ 328 ರನ್‌ಗಳ ಭಾರಿ ಜಯ ದಾಖಲಿಸಿತು.

ಸ್ಕೋರುಗಳು: ಪ್ಲೇ ಸ್ಮಾರ್ಟ್ ಕ್ರಿಕೆಟ್ ಅಕಾಡೆಮಿ: 30 ಓವರುಗಳಲ್ಲಿ5 ವಿಕೆಟ್‌ಗೆ 447 (ಪವನ್‌ದೀಪ್ 188, ಜೈಪ್ರೀತ್ 52, ಸೋಹಮ್ ಜೋಶಿ 48); ಆರ್‌ಸಿಎ, ಮೈಸೂರು: 30 ಓವರುಗಳಲ್ಲಿ 8 ವಿಕೆಟ್‌ಗೆ 119.

ಕೆಸಿಸಿ ಗುರುಕುಲ್: 30 ಓವರುಗಳಲ್ಲಿ 2 ವಿಕೆಟ್‌ಗೆ 260 (ನೀರಜ್ 106, ವಿನೀತ್ ಪಾಟೀಲ್ 59, ದೀಪ್ 49, ಅಲೋಕ್ ಜಪಣ್ಣವರ 46ಕ್ಕೆ2); ತೇಜಲ್ ಶಿರಗುಪ್ಪಿ ಕ್ರಿಕೆಟ್ ಅಕಾಡೆಮಿ: 30 ಓವರುಗಳಲ್ಲಿ 5 ವಿಕೆಟ್‌ಗೆ 141 (ಅಕ್ಷನ್ 40, ಸಾಮ್ರಾಟ್ ಆದಿತ್ಯ 26; ಮಿತೀಶ್ 16ಕ್ಕೆ2). ಕೆಸಿಸಿಗೆ 119 ರನ್ ಜಯ. ಸೌತ್ ಕ್ರಿಕೆಟರ್ಸ್: 30 ಓವರುಗಳಲ್ಲಿ 3 ವಿಕೆಟ್‌ಗೆ 242 (ಜೇಸನ್ 84, ಅಖಿಲೇಶ್ ಪ್ರಧಾನ್ 67, ಕೆ. ಅರುಣ್ 35, ಪ್ರಣವ್ 26ಕ್ಕೆ2); ಅಕ್ಷಯ್ ಸ್ಪೋರ್ಟ್ಸ್: 29.4 ಓವರುಗಳಲ್ಲಿ 179 (ಸಶಾಂಗ್ 42, ಕರಣ್ ವೀರ್ 33).

ಟೆನಿಸ್: ಅಲ್ಕರಾಜ್ ಶುಭಾರಂಭ

ಬಾರ್ಸಿಲೋನಾ (ಎಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ಬಾರ್ಸಿಲೋನಾ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಮಂಗಳವಾರ ನಡೆದ ಪಂದ್ಯದಲ್ಲಿ ಸ್ಪೇನ್‌ನ ಆಟಗಾರ 6–3, 6–1 ರಲ್ಲಿ ಪೋರ್ಚುಗಲ್‌ನ ನುನೊ ಬೋರ್ಗೆಸ್ ಅವರನ್ನು ಮಣಿಸಿದರು. ಇಲ್ಲಿ ಅಗ್ರಶ್ರೇಯಾಂಕ ಹೊಂದಿರುವ ಅಲ್ಕರಾಜ್ ತಮಗೆ ಲಭಿಸಿದ ಏಳು ಬ್ರೇಕ್ ಪಾಯಿಂಟ್ಸ್ ಅವಕಾಶಗಳಲ್ಲಿ ಐದರಲ್ಲೂ ಯಶ ಕಂಡರು.